ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತ ಶುಭಾಭಿಷೇಕ

ನಾಗ್ಪುರದಲ್ಲಿ ಬುಧವಾರ ನ್ಯೂಜಿಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ ಭಾರತ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ 48 ರನ್‌ಗಳಿಂದ ಜಯಗಳಿಸಿದೆ. ಕೇವಲ 35 ಎಸೆತಗಳನ್ನು ಎದುರಿಸಿದ ಶರ್ಮಾ 8 ಸಿಕ್ಸರ್, 4 ಬೌಂಡರಿ ಸಹಿತ 84 ರನ್ ಸಿಡಿಸಿದ್ದಾರೆ.

ಜನಶಕ್ತಿ ವಿಶ್ವಸ್ಥ ಮಂಡಳಿ

ಲೋಕಧ್ವನಿ

ಸಾಮಾನ್ಯರ ಧ್ವನಿ

ನಮ್ಮ ಹೆಮ್ಮೆಯ ಸಾಧಕರು

ಪ್ರಶಸ್ತಿ ಪ್ರದಾನ ಸಮಾರಂಭ

ಪ್ರಶಸ್ತಿ ಪ್ರದಾನ

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ

ಅಧ್ಯಕ್ಷತೆ

ಶ್ರೀ ಬಸವರಾಜ ಹೊರಟ್ಟಿ
ಮಾನ್ಯ ಸಭಾಪತಿಗಳು
ಕರ್ನಾಟಕ ವಿಧಾನ ಪರಿಷತ್

ಮುಖ್ಯ ಅತಿಥಿಗಳು

ಶ್ರೀ ಶಿವರಾಜ ತಂಗಡಗಿ
ಮಾನ್ಯ ಸಚಿವರು
ಕನ್ನಡ ಮತ್ತು ಸಂಸ್ಕೃತಿ, ಹಿಂದುಳಿದ ವರ್ಗಗಳ ಇಲಾಖೆ

ಶ್ರೀ ಮಂಕಾಳ ಎಸ್ ವೈದ್ಯ
ಮಾನ್ಯ ಸಚಿವರು
ಮೀನುಗಾರಿಕೆ, ಬಂದರು, ಒಳನಾಡು ಜಲ ಸಾರಿಗೆ ಇಲಾಖೆ

ಶ್ರೀ ಪ್ರವೀಣ್ ಶೆಟ್ಟಿ
ಹೋಟೆಲ್ ಉದ್ಯಮಿಗಳು
ದುಬೈ

ನಮ್ಮೊಂದಿಗೆ...

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ – ಮಾನ್ಯ ಲೋಕಸಭಾ ಸದಸ್ಯರು
ಶ್ರೀ ಆರ್.ವಿ. ದೇಶಪಾಂಡೆ – ಮಾನ್ಯ ಶಾಸಕರು, ಹಳಿಯಾಳ
ಶ್ರೀ ಶಿವರಾಮ ಹೆಬ್ಬಾರ – ಮಾನ್ಯ ಶಾಸಕರು, ಯಲ್ಲಾಪುರ
ಶ್ರೀ ಭೀಮಣ್ಣ ನಾಯಕ – ಮಾನ್ಯ ಶಾಸಕರು, ಶಿರಸಿ-ಸಿದ್ದಾಪುರ
ಶ್ರೀ ಸತೀಶ ಸೈಲ್ – ಮಾನ್ಯ ಶಾಸಕರು, ಕಾರವಾರ
ಶ್ರೀ ದಿನಕರ ಶೆಟ್ಟಿ – ಮಾನ್ಯ ಶಾಸಕರು, ಕುಮಟಾ

ಶ್ರೀ ಶಾಂತಾರಾಮ ಸಿದ್ದಿ – ಮಾನ್ಯ ವಿಧಾನ ಪರಿಷತ್ ಸದಸ್ಯರು
ಶ್ರೀ ಎಸ್.ವಿ.ಸಂಕನೂರು – ಮಾನ್ಯ ವಿಧಾನ ಪರಿಷತ್ ಸದಸ್ಯರು
ಶ್ರೀ ಗಣಪತಿ ಉಳ್ವೇಕರ – ಮಾನ್ಯ ವಿಧಾನ ಪರಿಷತ್ ಸದಸ್ಯರು

ಕೆ. ಪ್ರಕಾಶ್ ಶೆಟ್ಟಿ – ಸಂಸ್ಥಾಪಕರು, ಎಂ.ಆರ್.ಜಿ ಗ್ರೂಪ್ಸ್
ಡಾ. ಶ್ರೀನಿವಾಸಮೂರ್ತಿ – ಎಂ.ಡಿ. ವ್ಯಾಲ್ಯೂ ಪ್ರೊಡಕ್ಟ್ಸ್ ಪ್ರೈ.ಲಿ, ಶಿವಮೊಗ್ಗ
ಕೆ. ನಾಗರಾಜ ಅಡಿಗ – ಸಂಸ್ಥಾಪಕರು, ಅಡಿಗಾಸ್ ಯಾತ್ರಾ
ಶ್ರೀ ಎಚ್.ಪಿ.ನೀಲೇಶ್ – ಎಂ.ಡಿ. ಪರ್ವ ಗ್ರೂಪ್, ದುಬೈ-ಬೆಂಗಳೂರು
ಶ್ರೀ ಹೆಚ್.ವೈ ದೇಸಾಯಿ – ಅಧ್ಯಕ್ಷರು, ಕಾರ್ಪೋರೇಟ್ ಕಮ್ಯುನಿಕೇಷನ್, ಬಲ್ಡೋಟ

ವಿಶ್ವೇಶ್ವರ ಭಟ್
ಧರ್ಮದರ್ಶಿ,
ಜನಶಕ್ತಿ ವಿಶ್ವಸ್ಥ ಮಂಡಳಿ

ದಿನಾಂಕ
ಗುರುವಾರ, 22 ಜನವರಿ 2026
ಸಂಜೆ: 5 ಗಂಟೆ

ರಾಡಿಸನ್ ಬ್ಲೂ ಹೋಟೆಲ್
ಪ್ಯಾಲೇಸ್ ರೋಡ್, ಬೆಂಗಳೂರು

ತಮಗೆ ಆದರದ ಸ್ವಾಗತ

ಸವಿತಾ ಭಟ್
ಧರ್ಮದರ್ಶಿ,
ಜನಶಕ್ತಿ ವಿಶ್ವಸ್ಥ ಮಂಡಳಿ

ಸಮಾಚಾರ ಸಣ್ಣದಲ್ಲ

ಕುಡಿದು ಗಲಾಟೆ ಪತಿ ಕೊಂದ ಪತ್ನಿ

ಬೆಂಗಳೂರು: ಮದ್ಯ ಕುಡಿದ ಬಳಿಕ ಮನೆಗೆ ಬಂದು ಗಲಾಟೆ ಮಾಡುತ್ತಿದ್ದ ಪತಿಯನ್ನು ಕೊಲೆ ಮಾಡಿದ ಪತ್ನಿಯನ್ನು ಬೊಮ್ಮನಹಳ್ಳಿ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ. ಲಕ್ಷ್ಮಿ (42) ಬಂಧಿತ ಮಹಿಳೆ. ಬೊಮ್ಮನಹಳ್ಳಿಯ ಹೊಂಗಸಂದ್ರದಲ್ಲಿ ಮಂಗಳವಾರ ರಾತ್ರಿ ಈ ಕೃತ್ಯ ನಡೆದಿದೆ. ಪತಿ ಮುರುಗೇಶ್ (50) ಅವರ ಎದೆಗೆ ಲಕ್ಷ್ಮಿ ಅವರು ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ. ಮರುಗೇಶ್-ಲಕ್ಷ್ಮಿ ದಂಪತಿಗೆ ಮೂವರು ಹೆಣ್ಣು ಮಕ್ಕಳು. ಮೂವರನ್ನೂ ಮದುವೆ ಮಾಡಿಕೊಡಲಾಗಿದೆ. ಕೂಲಿ ಕೆಲಸ ಮಾಡುತ್ತಿದ್ದ ಮುರುಗೇಶ್ ಅವರಿಗೆ ಮದ್ಯ ಸೇವಿಸುವ ಅಭ್ಯಾಸವಿತ್ತು. ಪ್ರತಿನಿತ್ಯ ಪಾನಮತ್ತರಾಗಿ ಮನೆಗೆ ಬಂದು ಪತ್ನಿಯ ಜತೆಗೆ ಜಗಳವಾಡುತ್ತಿದ್ದರು. ಅದೇ ರೀತಿ ಮಂಗಳವಾರ ರಾತ್ರಿ ಸಹ ಮದ್ಯ ಸೇವಿಸಿ, ಬಂದು ಜಗಳವಾಡಿ ಹಲ್ಲೆ ನಡೆಸಿದ್ದರು. ಇದರಿಂದ ಕೆರಳಿದ ಲಕ್ಷ್ಮಿ ಅವರು ಕೋಪದಲ್ಲಿ ಪತಿಯ ಎದೆಗೆ ಚಾಕು ಇರಿದಿದ್ದಾರೆ. ಪರಿಣಾಮ ತೀವ್ರ ರಕ್ತಸ್ರಾವವಾಗಿ ಮುರುಗೇಶ್, ಸ್ಥಳದಲ್ಲೆ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಳ ಉಡುಪು ಕದ್ದ ವಿಕೃತ ಕಾಮಿ ಬಂಧನ

ಬೆಂಗಳೂರು: ಮಹಿಳೆಯರ ಒಳ ಉಡುಪುಗಳನ್ನು ಕದಿಯುತ್ತಿದ್ದ ವಿಕೃತ ಕಾಮಿಯನ್ನು ಹೆಬ್ಬಗೋಡಿಯ ವಿದ್ಯಾನಗರದಲ್ಲಿ ಪೊಲೀಸರು ಬಂಧಿಸಿರುವ ಘಟನೆ ನಡೆದಿದೆ.ಕೇರಳ ಮೂಲದ ಅಮಲ್ (23) ಬಂಧಿತ ಆರೋಪಿ. ಈತ ಮನೆ ಮಹಡಿ, ಹಾಗೂ ಆಚೆ ಒಣಹಾಕಿದ್ದ ಮಹಿಳೆಯರ ಒಳ ಉಡುಪುಗಳನ್ನು ಕದಿಯುತ್ತಿದ್ದ. ಹೊರಗಡೆ ಸುತ್ತಾಡಿ ಮನೆಗಳನ್ನು ದೂರದಿಂದಲೇ ಪರಿಶೀಲನೆ ಮಾಡುತ್ತಿದ್ದ. ನಂತರ ಯಾರು ಇಲ್ಲದ ವೇಳೆ ನುಗ್ಗಿ ಒಳ ಉಡುಪುಗಳನ್ನ ಕದ್ದೊಯ್ಯುತ್ತಿದ್ದ. ಬಳಿಕ ಅವುಗಳನ್ನು ತಾನು ಧರಿಸಿಕೊಂಡು ಫೋಟೋ ತೆಗೆದುಕೊಂಡು ವಿಕೃತ ಆನಂದ ಪಡುತ್ತಿದ್ದ ಎಂದು ತಿಳಿದುಬಂದಿದೆ. ಹೆಬ್ಬಗೋಡಿ ಠಾಣಾ ವ್ಯಾಪ್ತಿಯ ವಿದ್ಯಾನಗರದಲ್ಲಿ ವಿಕೃತ ಕಾಮಿ ಅಮಲ್ ನನ್ನ ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದ್ದು, ಕದ್ದ ಒಳ ಉಡುಪುಗಳನ್ನು ಧರಿಸಿಕೊಂಡು ಫೋಟೋ ಕ್ಲಿಕ್ಕಿಸಿಕೊಂಡಿರುವುದು ಮೊಬೈಲ್‌ನಲ್ಲಿ ಪತ್ತೆಯಾಗಿವೆ. ಹಾಗೇ ಅಮಲ್ ವಾಸವಿದ್ದ ಮನೆಯಲ್ಲಿಯೂ ಸಹ ಮಹಿಳೆಯರ ಒಳ ಉಡುಪುಗಳನ್ನು ಸಂಗ್ರಹಿಸಿ ಇಟ್ಟುಕೊಂಡಿರುವುದು ಕಂಡುಬಂದಿದೆ. ಹೆಬ್ಬಗೋಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಕಾಂಗ್ರೆಸ್, ಬಿಜೆಪಿಯ ಕೆಲವರಿಂದ ಆಕ್ಷೇಪ | ಬ್ಯಾಲೆಟ್ ಬಳಕೆಗೆ ಸಿದ್ಧವೆಂದ ಆಯೋಗ

ಜಿಬಿಎ ಚುನಾವಣೆಗೆ ಬ್ಯಾಲೆಟ್‌ಪೇಪರ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಮತಪತ್ರದ ಮೂಲಕ ನಡೆಸುವ ರಾಜ್ಯ ಚುನಾವಣಾ ಆಯೋಗದ ತೀರ್ಮಾನಕ್ಕೆ ಆಡಳಿತರೂಢ ಕಾಂಗ್ರೆಸ್‌ನಲ್ಲಿಯೇ ವಿರೋಧ ವ್ಯಕ್ತವಾಗಿದ್ದರೂ, ರಾಜ್ಯ ಚುನಾವಣಾ ಆಯೋಗ ಮತಪತ್ರದ ಮೂಲಕವೇ ಚುನಾವಣೆ ನಡೆಸುವುದಾಗಿ ಮತ್ತೊಮ್ಮೆ ಸ್ಪಷ್ಟಪಡಿಸಿದೆ.

ಡಿಸಿಎಂ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್ ಸೇರಿದಂತೆ ಕೆಲ ಕಾಂಗ್ರೆಸಿಗರು ಹಾಗೂ ಬಿಜೆಪಿ ನಾಯಕರು ಮತಪತ್ರಕ್ಕೆ ವಿರೋಧಿಸಿದ್ದರು. ಆದರೆ ಈ ಬಗ್ಗೆ ಸ್ಪಷ್ಟನೆ ನೀಡಿರುವ ರಾಜ್ಯ ಚುನಾವಣಾ ಆಯೋಗದ ಆಯುಕ್ತ ಸಂಗ್ರೇಶಿ ಅವರು, ಮತಪತ್ರದಲ್ಲಿ ಚುನಾವಣೆ ನಡೆಸಲು ಕಾನೂನಿನಲ್ಲಿ ಅವಕಾಶವಿದೆ. ಆದ್ದರಿಂದ ಮತಪತ್ರದ ಮೂಲಕವೇ ಚುನಾವಣೆ ನಡೆಸಲಾಗುವುದು. ಇದು ಯಾರ ಒತ್ತಡಕ್ಕೂ ತಗೆದಿಕೊಂಡಿರುವ ತೀರ್ಮಾನವಲ್ಲ ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್ ಸಂಗ್ರೇಶಿ ಸ್ಪಷ್ಟಪಡಿಸಿದ್ದಾರೆ. ಎಲ್ಲಾ ಅಂಶಗಳನ್ನು ಅಳೆದು ಸಮತೋಲನ ಕಾಯ್ದುಕೊಂಡು, ಮತಪತ್ರಗಳನ್ನು ಬಳಸಲು ನಿರ್ಧರಿಸಲಾಗಿದೆ. ಈಗ ಮತ ಚಲಾಯಿಸುವ ಅನೇಕ ಜನರು ಮತ್ತು ಈ ಪೀಳಿಗೆಯವರು ಮತಪತ್ರಗಳನ್ನು ಮತ್ತು ಈ ರೀತಿಯ ಮತದಾನವನ್ನು ನೋಡಿಲ್ಲ. ಜಿಬಿಎ ಚುನಾವಣಾ ಅಧಿಕಾರಿಗಳು, ಸಿಬ್ಬಂದಿಗೆ ಮತಪತ್ರಗಳನ್ನು ಬಳಸುವ ಬಗ್ಗೆ ಸಂಪೂರ್ಣ ತರಬೇತಿಯ ಅಗತ್ಯವಿದೆ. ಮತಪತ್ರಗಳನ್ನು ಪರಿಶೀಲಿಸಲು ಹೆಚ್ಚುವರಿ ಸಿಬ್ಬಂದಿ ಅಗತ್ಯವಿದೆ ಎಂದು ತಿಳಿಸಿದರು.

ರಾಜ್ಯ ಚುನಾವಣಾ ಆಯೋಗ ಮತ್ತು ಜಿಬಿಎ ಮತ ಎಣಿಕೆಗಾಗಿ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸುವ ಬಗ್ಗೆಯೂ ಯೋಚಿಸುತ್ತಿವೆ. ಇವಿಎಂಗಳಿಗಿಂತ ಭಿನ್ನವಾಗಿ, ಎಣಿಕೆಯ ಸಮಯದಲ್ಲಿ ಮತಪತ್ರಗಳನ್ನು ಎರಡು ಬಾರಿ ಪರಿಶೀಲಿಸಲು ಹೆಚ್ಚುವರಿ ಸಿಬ್ಬಂದಿ ಅಗತ್ಯವಿದೆ. ಪ್ರಕ್ರಿಯೆ ಮೇಲ್ವಿಚಾರಣೆ ಮಾಡಲು ಹೆಚ್ಚುವರಿ ಮೇಲ್ವಿಚಾರಕರು ಸಹ ಅಗತ್ಯವಿದೆ. ರಾಜಕೀಯ ಪಕ್ಷದ ಕಾರ್ಯಕರ್ತರು ಎಣಿಕೆ ಕೇಂದ್ರಗಳಲ್ಲಿ ಇರುವುದರಿಂದ, ಅವರ ನಡವಳಿಕೆಯನ್ನು ಮೇಲ್ವಿಚಾರಣೆ ಮಾಡಲು ಹೆಚ್ಚುವರಿ ಸಿಬ್ಬಂದಿ ಅಗತ್ಯವಿದೆ. ಸಂಪೂರ್ಣ ಎಣಿಕೆ ಪ್ರಕ್ರಿಯೆಯು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಇದು ನಿಗಮಕ್ಕೆ ದೊಡ್ಡ ಸವಾಲಾಗಿರುತ್ತದೆ ಎಂದು ಜಿಬಿಎ ಅಧಿಕಾರಿಗಳು ಹೇಳಿದರು.

ಸರಕಾರಿ ಸಿಬ್ಬಂದಿ, ಶಿಕ್ಷಕರು ಮತ್ತು ಚುನಾವಣಾ ಕರ್ತವ್ಯಕ್ಕೆ ನೇಮಕಗೊಳ್ಳುವ ಇತರ ಎಲ್ಲರಿಗೂ ವಿಶೇಷ ಸಂಭಾವನೆ ಮತ್ತು ಗೌರವಧನವನ್ನು ಒದಗಿಸುವ ಬಗ್ಗೆ ರಾಜ್ಯ ಚುನಾವಣಾ ಆಯೋಗ ಕೆಲಸ ಮಾಡುತ್ತಿದೆ. ಮತದಾನಕ್ಕಾಗಿ ಸುಮಾರು ಒಂದು ಕೋಟಿ ಕ್ರೀಮ್-ವೋವ್ ಕಾಗದದ ಮತಪತ್ರಗಳನ್ನು ಖರೀದಿಸುವ ಸವಾಲನ್ನು ಜಿಬಿಎ ಪರಿಶೀಲಿಸುತ್ತಿದೆ. ಅಲ್ಲದೆ, ಮತಪತ್ರಗಳನ್ನು ದ್ವಿಭಾಷೆಗಳಲ್ಲಿ (ಕನ್ನಡ ಮತ್ತು ಇಂಗ್ಲಿಷ್) ಮುದ್ರಿಸಬೇಕಾಗಿದೆ. ಪ್ರತಿ ಹಾಳೆಯಲ್ಲಿ ಅಭ್ಯರ್ಥಿಗಳ ಹೆಸರುಗಳು, ಅವರ ಛಾಯಾಚಿತ್ರಗಳು ಮತ್ತು ರಾಜಕೀಯ ಪಕ್ಷಗಳನ್ನು ಸೇರಿಸಬೇಕಾಗಿದೆ. ಸ್ಟಾಂಪ್ ಹಾಕಲು ಸ್ಥಳಾವಕಾಶವನ್ನು ಒದಗಿಸಬೇಕಾಗುತ್ತದೆ. ಒಂದು ಹಾಳೆಯಲ್ಲಿ 7-8 ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಬಹುದು. ಅಭ್ಯರ್ಥಿಗಳ ಸಂಖ್ಯೆ ಹೆಚ್ಚಿದ್ದರೆ, ಹೆಚ್ಚುವರಿ ಹಾಳೆಗಳು ಬೇಕಾಗುತ್ತವೆ ಎಂದು ಜಿಬಿಎ ಅಧಿಕಾರಿಗಳು ವಿವರಿಸಿದ್ದಾರೆ.

- ಮತಪತ್ರಕ್ಕೆ ವಿರೋಧಿಸಿದ್ದ ಡಿ.ಕೆ.ಸುರೇಶ್,ಕೆಲ ಕಾಂಗ್ರೆಸಿಗರು, ಬಿಜೆಪಿ ನಾಯಕರು
- ಯಾರ ಒತ್ತಡಕ್ಕೂ ಮಣಿದಿಲ್ಲ, ಕಾನೂನು ಬದ್ಧವಾಗಿಯೇ ಮತಪತ್ರ ಬಳಕೆ: ಸಂಗ್ರೇಶಿ
- ಮತಪತ್ರದಲ್ಲಿ ಚುನಾವಣೆಗೆ ಅವಕಾಶವಿದೆ: ಆಯೋಗದ ಆಯುಕ್ತ ಸಂಗ್ರೇಶಿ

ತಹಸೀಲ್ದಾರ್, ಗ್ರಾಪಂ ಸದಸ್ಯರಿಗೆ ತರಬೇತಿ

ಇದರೊಂದಿಗೆ ಜಿಬಿಎ ಚುನಾವಣೆಗೆ ಬ್ಯಾಲೆಟ್ ಪೇಪರ್ ಬಳಕೆಗೆ ತೀರ್ಮಾನಿಸಿರುವುದರಿಂದ ಜಿಬಿಎ ಸಿಬ್ಬಂದಿಗೆ ತಹಸೀಲ್ದಾರ್‌ಗಳು ಮತ್ತು ಗ್ರಾಮ ಪಂಚಾಯತ್ ಸದಸ್ಯರಿಂದ ತರಬೇತಿ ನೀಡಲಾಗುವುದು. ಚುನಾವಣೆಗಳಿಗೆ ಮತಪತ್ರಗಳನ್ನು ಬಳಸುವುದು ಹೇಗೆ ಎಂಬುದು ಪಂಚಾಯತ್ ಸಿಬ್ಬಂದಿಗೆ ಅರಿವಿರುವುದರಿಂದ ಜಿಬಿಎ ಚುನಾವಣೆಯಲ್ಲಿ ಮೇಲ್ವಿಚಾರಣೆ ಮಾಡುವವರಿಗೆ ತರಬೇತಿ ನೀಡಲು ಗ್ರಾಮ ಪಂಚಾಯತ್ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗುವುದು ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್ ಸಂಗ್ರೇಶಿ ತಿಳಿಸಿದರು.

25 ವರ್ಷಗಳ ಹಿಂದೆ ಬ್ಯಾಲೆಟ್ ಪೇಪರ್ ಬಳಕೆ

ಬೆಂಗಳೂರಿನಲ್ಲಿ 20-25ವರ್ಷಗಳ ಹಿಂದೆ 2001ರಲ್ಲಿ ಬ್ಯಾಲೆಟ್ ಪೇಪರ್ ಬಳಸಿ ಮತ ಚಲಾಯಿಸಲಾಗಿದ್ದು, ನ್ಯಾಯಾಲಯಗಳು, ಚುನಾವಣಾ ಆಯೋಗವು ಮತ ಪತ್ರವನ್ನು ನಿಷೇಧಿಸಿಲ್ಲ. ಬದಲಾಗಿ ಇನ್ನೂ ಬಳಕೆಗೆ ಅವಕಾಶ ನೀಡಿದೆ. ಈ ವ್ಯವಸ್ಥೆಗೆ ಈಗ ಕೆಲವು ತರಬೇತಿ ಅಗತ್ಯವಿರುತ್ತದೆ. ಹೀಗಾಗಿ ಈ ಬಾರಿ ಸ್ವಲ್ಪ ಹೆಚ್ಚು ಗಮನ ನೀಡಲಾಗುವುದು.

ರೌಡಿಶೀಟರ್ ಕೊಲೆ ಪ್ರಕರಣ ಎಂಟು ಆರೋಪಿಗಳು ಸೆರೆ

ಬೆಂಗಳೂರು: ಬಂಡೆಪಾಳ್ಯ ಠಾಣಾ ವ್ಯಾಪ್ತಿಯ ಮಂಗಮ್ಮನಪಾಳ್ಯದಲ್ಲಿ ಹಳೇ ದ್ವೇಷದ ಹಿನ್ನೆಲೆ ನಟೋರಿಯಸ್ ರೌಡಿಶೀಟರ್ ಮೊಹಮ್ಮದ್ ಶಬ್ಬೀರ್‌ನ ವೈರಿಗಳು ಅಟ್ಟಾಡಿಸಿ ಕೊಚ್ಚಿ ಕೊಲೆ ಮಾಡಿದ್ದ ಪ್ರಕರಣ ಸಂಬಂಧ ಬರೋಬ್ಬರಿ 8 ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿಗಳು

ಕೋರಮಂಗಲ ಠಾಣಾ ವ್ಯಾಪ್ತಿಯ ರೌಡಿ ಶೀಟರ್ ಆಗಿರುವ ಮಂಗಮ್ಮನಪಾಳ್ಯ ನಿವಾಸಿ ಮೊಹಮ್ಮದ್ ಶಬ್ಬೀರ್ ಮತ್ತು ಐವರು ರಾತ್ರಿ ತಮ್ಮ ಸ್ನೇಹಿತನ್ನ ಮಾತಾಡಿಸಿ ಆಟೋದಲ್ಲಿ ವಾಪಸ್ ಆಗುತ್ತಿದ್ದ ಸಂದರ್ಭ ದಾಳಿ ನಡೆಸಿದ್ದ ಆರೋಪಿಗಳು ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿದ್ದರು.

ಶಬ್ಬೀರ್ ಕಾಟ ತಾಳಲಾರದೆ ಕೊಲೆ: ಹೊಸ ರೋಡ್ ನಿವಾಸಿಯಾಗಿದ್ದ ಶಬ್ಬೀರ್ (29) ಹತ್ಯೆಯಾಗಿದ್ದ ರೌಡಿಶೀಟರ್. ಮಂಗಮ್ಮನಪಾಳ್ಯ ನಿವಾಸಿಗಳಾದ ನೂರುಲ್ಲಾ (33), ನದೀಮ್ (34), ಸಲ್ಮಾನ್ ಖಾನ್ (27),

ಮೊಹಮ್ಮದ್ ಅಲಿ (29), ಸೈಯದ್ ಇಸ್ಮಾಯಿಲ್ (30), ಮೊಹಮ್ಮದ್ ಸಿದ್ದಿಕ್ (30), ಸೈಯದ್ ಕಲೀಮ್ (32) ಹಾಗೂ ಉಮೇಜ್ ರೆಹಮಾನ್ (26) ಬಂಧಿತರು. ಹಳೆ ವೈಷಮ್ಯ ಮತ್ತು ಹವಾ ಸೃಷ್ಟಿ ಮಾಡುವ ವಿಚಾರಕ್ಕೆ ಶಬ್ಬೀರನನ್ನ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದಾರೆ.

ಮೊದಲೇ ರೌಡಿ ಶೀಟರ್ ಆಗಿದ್ದ ಶಬ್ಬೀರ್ ಹಾವಳಿ ಏರಿಯಾದಲ್ಲಿ ಹೆಚ್ಚಾಗಿತ್ತು. ಇಡೀ ಏರಿಯಾದಲ್ಲಿ ಯಾರೂ ಶಬ್ಬೀರ್‌ನ ಮಾತು ಮೀರುವಂತಿರಲಿಲ್ಲ. ಯಾರೇ ರೌಡಿಸಂ ಮಾಡಿದರೂ ಮೊದಲು ಶಬ್ಬೀರ್‌ಗೆ ವಿಚಾರ ಹೇಳಬೇಕಿತ್ತು. ಆತನ ಬಿಟ್ಟು ಯಾವುದೇ ವ್ಯವಹಾರ ಮಾಡುವಂತಿರಲಿಲ್ಲ. ಯಾರಾದರೂ ತಾನು ಮಾಡುತ್ತಿದ್ದ ವ್ಯವಹಾರ ಮಾಡಿದರೆ, ಹಫ್ತಾ ವಸೂಲಿ, ಸೆಟ್ಲಮೆಂಟ್ ಮಾಡಿದರೆ ಗರಂ ಆಗುತ್ತಿದ್ದ. ಕೂಡಲೇ ಅವರನ್ನು ಕರೆಸಿ ಬೆದರಿಕೆ ಹಾಕಿ ಹಲ್ಲೆ ಮಾಡುತ್ತಿದ್ದ.

ಇಂತಹುದ್ದೇ ಕಾರಣದಿಂದ ಸುಮಾರು 10 ರಿಂದ 15 ಜನ ಶಬ್ಬೀರ್‌ನಿಂದ ಹಲ್ಲೆಗೊಳಗಾಗಿದ್ದರು. ಹೀಗಾಗಿ ಶಬ್ಬೀರ್ ಇದ್ದರೆ ನಮ್ಮ ವ್ಯವಹಾರಗಳು ನಡೆಯಲ್ಲ, ನಮ್ಮ ಜೀವಕ್ಕೆ ಅಪಾಯ ಎಂದು ಎಲ್ಲ ಸೇರಿ ಆತನ ಕತೆಯನ್ನೇ ಮುಗಿಸಿದ್ದಾರೆ ಎಂಬುದು ತನಿಖೆ ವೇಳೆ ಗೊತ್ತಾಗಿದೆ.

ಎರಡು ಬಾರಿ ವಿಫಲವಾಗಿದ್ದ ಆರೋಪಿಗಳ ಸಂಚು: ಆರೋಪಿಗಳು ಈ ಹಿಂದೆಯೂ ಎರಡೆರಡು ಬಾರಿ ಶಬ್ಬೀರ್‌ನ ಮುಗಿಸಲೇ ಬೇಕು ಎಂದು ಹೊಂಚು ಹಾಕಿದ್ದರು. ಆದರೆ ಆತನ ಮೇಲಿನ ಭಯ ಇವರನ್ನು ಕೃತ್ಯದಿಂದ ಹಿಂದೆ ಸರಿಯುವಂತೆ ಮಾಡಿತ್ತು. ಅದಾದ ಬಳಿಕ ಮತ್ತೆ ಮೂರನೇ ಬಾರಿಗೆ ಸಂಚು ಹೂಡಿದ್ದ ಗ್ಯಾಂಗ್, ಜ.12ರಂದು ಪಕ್ಕಾ ಪ್ಲ್ಯಾನ್ ಮಾಡಿ ಆಟೋದಲ್ಲಿ ಬರುತ್ತಿದ್ದ ಶಬ್ಬೀರ್ ಅಡ್ಡಗಟ್ಟಿ ಮನಸೋ ಇಚ್ಛೆ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿತ್ತು. ಪ್ರಕರಣ ಸಂಬಂಧ ಈಗಾಗಲೇ ಹಲವರನ್ನು ಪೊಲೀಸರು, ಇನ್ನೂ ಕೆಲವರಿಗೆ ಹುಡುಕಾಟ ನಡೆಸುತ್ತಿದ್ದಾರೆ.

ಮಾ.10ಕ್ಕೆ ಡಿಕೆ ಅರ್ಜಿ ವಿಚಾರಣೆ

ಬೆಂಗಳೂರು: ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ತಮ್ಮ ವಿರುದ್ಧ ಜಾರಿ ನಿರ್ದೇಶನಾಲಯ ನಡೆಸುತ್ತಿರುವ ತನಿಖೆಯನ್ನು ಪ್ರಶ್ನಿಸಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಮಾ.10ರಂದು ನಡೆಸುವುದಾಗಿ ದೆಹಲಿ ಹೈಕೋರ್ಟ್ ಮಂಗಳವಾರ ತಿಳಿಸಿದೆ.

ಡಿ.ಕೆ.ಶಿವಕುಮಾರ್ ಅವರ ಪರ ಹಿರಿಯ ವಕೀಲರು ವಿಚಾರಣೆಯನ್ನು ಮುಂದೂಡುವಂತೆ ಮನವಿ ಮಾಡಿಕೊಂಡು ಹಿನ್ನೆಲೆಯಲ್ಲಿ ಕೋರ್ಟ್ ಮಾ.10ಕ್ಕೆ ವಿಚಾರಣೆಯನ್ನು ಮುಂದೂಡಿತು. 2018ರಲ್ಲಿ ದಾಖಲಾದ ಹಿಂದಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ತನಿಖೆ ಮಾಡಲಾಗಿದೆ. ಆದರೆ ಅದೇ ಅಪರಾಧವನ್ನು ಇ.ಡಿ ಮತ್ತೆ ಮರು ತನಿಖೆ ಮಾಡುತ್ತಿದೆ ಎಂಬುದು ಶಿವಕುಮಾರ್ ಅವರ ವಾದವಾಗಿದೆ. ಶಿವಕುಮಾರ್ ವಾದಿಸುತ್ತಿರುವ ಮೊದಲ ಪ್ರಕರಣದಲ್ಲಿ ಶಿವಕುಮಾರ್ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳುವುದಿಲ್ಲ ಎಂಬ ನಿಲುವಿಗೆ ಇ.ಡಿ. ಬದ್ಧವಾಗಿರಬೇಕು ಎಂದು 2023ರಲ್ಲಿ ಹೈಕೋರ್ಟ್ ಆದೇಶಿಸಿತ್ತು. ಮರು ತನಿಖೆಯ ಪ್ರತಿಪಾದನೆಯನ್ನು ವಿರೋಧಿಸಿರುವ ಇ.ಡಿ., ಅರ್ಜಿದಾರರ ವಿರುದ್ಧದ 2 ಇಸಿಐಆರ್‌ಗಳಲ್ಲಿ ವಿಭಿನ್ನ ಅಂಶಗಳನ್ನು ಆಧರಿಸಿವೆ ಮತ್ತು ಎರಡೂ ಪ್ರಕರಣಗಳಲ್ಲಿನ ನಿಗದಿತ ಅಪರಾಧಗಳು, ಅಪರಾಧದ ಮೊತ್ತವೂ ವಿಭಿನ್ನವಾಗಿದೆ ಎಂದು ತನ್ನ ಅಫಿಡವಿಟ್‌ನಲ್ಲಿ ತಿಳಿಸಿದೆ. ಮೊದಲ ಇಸಿಐಆರ್ ಪ್ರಕಾರ, ನಿಗದಿತ ಅಪರಾಧವು ಐಪಿಸಿ ಸೆಕ್ಷನ್ 120ಬಿ ಗೆ ಸಂಬಂಧಿಸಿದೆ ಮತ್ತು ಅಪರಾಧದ ಮೊತ್ತ 8.59 ಕೋಟಿ ರು., ಆದರೆ, ಪ್ರಸ್ತುತ ಇಸಿಐಆರ್ 74.93 ಕೋಟಿ ರು.ಗಳ ಅಕ್ರಮ ಆಸ್ತಿಗೆ ಸಂಬಂಧಿಸಿದ್ದಾಗಿದ್ದು, ಅಕ್ಟೋಬರ್ 3, 2020 ರಂದು ಬೆಂಗಳೂರಿನಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಸಿಬಿಐ ದಾಖಲಿಸಿದ ಬೇರೆಯದೇ ಎಫ್‌ಐಆರ್‌ನಿಂದ ಸಂಬಂಧಿಸಿದ ಪ್ರಕರಣವಾಗಿದೆ ಎಂದಿದೆ.

ಮಾನಹಾನಿ ಸುದ್ದಿ ಪ್ರಕಟಿಸದಂತೆ ನಿರ್ಬಂಧ ವಿಧಿಸಿದ ನ್ಯಾಯಾಲಯ

ರಾಮಚಂದ್ರ ರಾವ್ ವಿರುದ್ಧದ ಸುದ್ದಿಗೆ ತಡೆ

ಬೆಂಗಳೂರು: ಅಶ್ಲೀಲ ವಿಡಿಯೊ ಬಹಿರಂಗ ಪ್ರಕರಣಕ್ಕೆ ಸಂಬಂಧಿಸಿದಂತೆ ಐಪಿಎಸ್ ಅಧಿಕಾರಿ ಕೆ.ರಾಮಚಂದ್ರ ರಾವ್ ವಿರುದ್ಧ ಯಾವುದೇ ಮಾನಹಾನಿಕರ ಹೇಳಿಕೆ ಅಥವಾ ಸುದ್ದಿಗಳನ್ನು ಬಿತ್ತರಿಸದಂತೆ ಮಾಧ್ಯಮಗಳಿಗೆ ಬೆಂಗಳೂರಿನ ಸತ್ರ ನ್ಯಾಯಾಲಯ ಏಕಪಕ್ಷೀಯ ತಾತ್ಕಾಲಿಕ ಪ್ರತಿಬಂಧಕಾದೇಶ ವಿಧಿಸಿದೆ.

ಜತೆಗೆ, ವೆಬ್‌ಸೈಟ್‌ಗಳು, ಡಿಜಿಟಲ್ ಫ್ಲಾಟ್ ಫಾರ್ಮ್‌ಗಳು ಮತ್ತು ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿನ ರಾಮಚಂದ್ರ ರಾವ್ ಅವರಿಗೆ ಸಂಬಂಧಿಸಿದ ಎಲ್ಲ ಮಾನಹಾನಿಕರ ವಿಡಿಯೊಗಳು, ಆಡಿಯೊ ಕ್ಲಿಪ್‌ಗಳು, ಕರೆ ರೆಕಾರ್ಡಿಂಗ್‌ಗಳು, ದೃಶ್ಯಗಳು ಮತ್ತು ಪತ್ರಿಕಾ ವರದಿಗಳನ್ನು ತಕ್ಷಣವೇ ತೆಗೆದುಹಾಕಲು ಮಾಧ್ಯಮ ಸಂಸ್ಥೆಗಳಿಗೆ ನಿರ್ದೇಶಿಸಿದೆ. ಕಚೇರಿಯಲ್ಲಿ ಮಹಿಳೆಯೊಂದಿಗೆ ಅಸಭ್ಯ ರೀತಿಯಲ್ಲಿ ವರ್ತಿಸಿದ ಆರೋಪದಲ್ಲಿ ಸದ್ಯ ಸೇವೆ ಯಿಂದ ಅಮಾನತುಗೊಂಡಿರುವ ಡಿಜಿಪಿ ರಾಮಚಂದ್ರ ರಾವ್ ಸಲ್ಲಿಸಿದ್ದ ಮೂಲ ದಾವೆಯ ವಿಚಾರಣೆ ನಡೆಸಿದ ಬೆಂಗಳೂರಿನ 25ನೇ ಹೆಚ್ಚುವರಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶ ಗೋಪಾಲ ಕೃಷ್ಣ ರೈ ಅವರು ಈ ಆದೇಶ ಮಾಡಿದ್ದಾರೆ.

ವಾಟ್ಸಾಪ್, ಫೇಸ್‌ಬುಕ್ ಹಂಚಿಕೆಗೂ ತಡೆ

ಪ್ರತಿವಾದಿ ಮಾಧ್ಯಮ ಸಂಸ್ಥೆಗಳು, ಅವುಗಳ ವರದಿಗಾರರು, ನಿರೂಪಕರು ಅಥವಾ ಅವುಗಳ ಪರವಾಗಿ ಹಕ್ಕು ಸಾಧಿಸುವ ಯಾವುದೇ ವ್ಯಕ್ತಿಗಳು ಪ್ರಕರಣದ ಮುಂದಿನ ವಿಚಾರಣೆಯವರೆಗೆ ಮುದ್ರಣ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ, ದೂರದರ್ಶನ ವಾಹಿನಿಗಳು, ವೆಬ್‌ಸೈಟ್‌ಗಳು, ಫೇಸ್‌ಬುಕ್, ಟ್ವಿಟರ್, ಇನ್ಸ್ಟಾಗ್ರಾಮ್, ಟೆಲಿಗ್ರಾಮ್, ವಾಟ್ಸಾಪ್, ಯೂಟ್ಯೂಬ್ ಮುಂತಾದವುಗಳಲ್ಲಿ ರಾಮಚಂದ್ರ ರಾವ್ ವಿರುದ್ಧ ಯಾವುದೇ ಮಾನಹಾನಿಕರ ಸುದ್ದಿ, ಕಾಮೆಂಟ್‌ಗಳು, ಹೇಳಿಕೆಗಳು ಅಥವಾ ಕರೆ ರೆಕಾರ್ಡಿಂಗ್‌ಗಳನ್ನು ಪ್ರಕಟಿಸುವುದು, ಬಿತ್ತರಿಸುವುದು, ಅಪ್‌ಲೋಡ್ ಮಾಡುವುದು ಅಥವಾ ಪ್ರಸಾರ ಮಾಡದಂತೆ ಏಕಪಕ್ಷೀಯ ಪ್ರತಿಬಂಧಕಾದೇಶದ ಮೂಲಕ ನಿರ್ಬಂಧಿಸಲಾಗಿದೆ ಎಂದು ನ್ಯಾಯಾಲಯ ಆದೇಶದಲ್ಲಿ ಹೇಳಿದೆ.

ಪ್ರಕರಣದ ಹಿನ್ನೆಲೆ: ರಾಜ್ಯದ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಡಿಜಿಪಿ ಆಗಿದ್ದ ಹಿರಿಯ ಐಪಿಎಸ್ ಅಧಿಕಾರಿ ಡಾ. ಕೆ.ರಾಮಚಂದ್ರ ರಾವ್ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಕೆಲ ಅಶ್ಲೀಲ ವಿಡಿಯೊಗಳು ಮತ್ತು ಆಡಿಯೋ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಸುದ್ದಿವಾಹಿನಿಗಳಲ್ಲಿ ವ್ಯಾಪಕವಾಗಿ ಪ್ರಸಾರಗೊಂಡಿದ್ದವು. ಇದರ ಬೆನ್ನಲ್ಲೇ ರಾಮಚಂದ್ರ ರಾವ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ರಾಜ್ಯ ಸರಕಾರ ಆದೇಶಿಸಿತ್ತು. ಇದರಿಂದ, ನ್ಯಾಯಾಲಯದ ಮೊರೆ ಹೋಗಿರುವ ರಾಮಚಂದ್ರ ರಾವ್, ತಮಗೆ ಸಂಬಂಧಿಸಿದ್ದು ಎನ್ನಲಾದ ಅಶ್ಲೀಲ ವಿಡಿಯೊ ಮತ್ತು ಆಡಿಯೋ ತುಣುಕುಗಳ ಆಧಾರದ ಮೇಲೆ ಹಲವಾರು ಕನ್ನಡ ಹಾಗೂ ರಾಷ್ಟ್ರೀಯ ಸುದ್ದಿವಾಹಿನಿಗಳು ದುರುದ್ದೇಶಪೂರಿತ, ಪರಿಶೀಲಿಸದ ಮತ್ತು ಸುಳ್ಳು ಹೇಳಿಕೆಗಳನ್ನು ಪ್ರಸಾರ ಮಾಡುತ್ತಿವೆ. ಆದ್ದರಿಂದ, ತಮ್ಮ ವಿರುದ್ಧ ಯಾವುದೇ ಮಾನಹಾನಿಕರ ಸುದ್ದಿಗಳನ್ನು ಬಿತ್ತರಿಸದಂತೆ ಪ್ರತಿಬಂಧಕಾದೇಶ ವಿಧಿಸಬೇಕು ಹಾಗೂ ಈಗಾಗಲೇ ಪ್ರಕಟಿಸಲಾಗಿರುವ ಸುದ್ದಿಗಳು, ವಿಡಿಯೊ ಹಾಗೂ ಆಡಿಯೊ ತುಣುಕುಗಳನ್ನು ಅಳಿಸಿಹಾಕಲು ಸಂಬಂಧಪಟ್ಟ ಮಾಧ್ಯಮಗಳಿಗೆ ನಿರ್ದೇಶಿಸಬೇಕು ಎಂದು ಕೋರಿದ್ದರು.

ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा
Bank of Baroda

ಪ್ರಾದೇಶಿಕ ಕಚೇರಿ, ಬೆಂಗಳೂರು ದಕ್ಷಿಣ : 4ನೇ ಮಹಡಿ, 41/2, ಎಂ.ಜಿ ರಸ್ತೆ, ಟ್ರಿನಿಟಿ ವೃತ್ತ, ಬೆಂಗಳೂರು-560001.

ಭೋಗ್ಯ/ ಬಾಡಿಗೆ ಆಧಾರದ ಮೇಲೆ ಎಟಿಎಂಗಾಗಿ ಸ್ಥಳಾವಕಾಶ ಬೇಕಾಗಿದೆ

ಬ್ಯಾಂಕ್ ಆಫ್ ಬರೋಡ, ಇವರು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಬೆಂಗಳೂರು ಆಫ್‌ಸೈಟ್ ಎಟಿಎಂಗಾಗಿ 100 ಚದರ ಅಡಿಗಳ ಕಾರ್ಪೆಟ್ ಪ್ರದೇಶದ ನೆಲ/ಮೇಲಿನ ನೆಲ ಮಹಡಿಯಲ್ಲಿರುವ ವಿದ್ಯುಚ್ಛಕ್ತಿ ಸೇರಿ, ಎಲ್ಲ ಸೌಲಭ್ಯಗಳಿರುವ ಆವರಣವನ್ನು ಹೊಂದಲು ನಿರ್ಮಾಣ ಮಾಡಿರುವ ಆಸ್ತಿಯ ಮೇಲೆ ಸ್ಪಷ್ಟ ಮತ್ತು ಮಾರುಕಟ್ಟೆ ಹಕ್ಕುಗಳನ್ನು ಹೊಂದಿರುವ ಮಾಲೀಕರಿಂದ ಮೊಹರು ಮಾಡಿದ ಆಫರ್ ಗಳನ್ನು ಆಹ್ವಾನಿಸುತ್ತದೆ. ಉದ್ದೇಶಿತ ಆಫರ್ ದಾರರು ತಮ್ಮ ಆಫರ್ ಗಳನ್ನು ಎರಡು ಪ್ರತ್ಯೇಕ ಮೊಹರು ಮಾಡಿದ ಕವರ್ ಗಳಲ್ಲಿ "ತಾಂತ್ರಿಕ ಬಿಡ್" ಮತ್ತು " ಆರ್ಥಿಕ ಬಿಡ್" ಎಂದು ನಮೂದಿಸಿ ದಿನಾಂಕ 12.02.2026 ರ ಮಧ್ಯಾಹ್ನ 3.00 ಗಂಟೆಯೊಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸುವುದು: ಪ್ರಾದೇಶಿಕ ಪ್ರಬಂಧಕರು, ಬ್ಯಾಂಕ್ ಆಫ್ ಬರೋಡ, 5ನೇ ಮಹಡಿ, ಪ್ರಾದೇಶಿಕ ಕಚೇರಿ ಬೆಂಗಳೂರು ದಕ್ಷಿಣ, ವಿಜಯ ಟವರ್ಸ್, ಟ್ರಿನಿಟಿ ವೃತ್ತ, ಎಂ.ಜಿ.ರಸ್ತೆ, ಬೆಂಗಳೂರು-560001. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ http://www.bankofbaroda.comನ ಟೆಂಡರ್ ವಿಭಾಗಕ್ಕೆ ಲಾಗ್ ಇನ್ ಆಗಿ.

ದಿನಾಂಕ: 22.01.2026
ಸ್ಥಳ: ಬೆಂಗಳೂರು

ಸಹಿ/- ಪ್ರಾದೇಶಿಕ ಮುಖ್ಯಸ್ಥರು,
ಬ್ಯಾಂಕ್ ಆಫ್ ಬರೋಡ, ಬೆಂಗಳೂರು ದಕ್ಷಿಣ

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 10.02.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಹೇಗಿದೆಯೋ ಹಾಗೆ", "ಏನಿದೆಯೊ ಹಾಗೆ", ಏನೇ ಇದ್ದರೂ",** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 1,24,19,642.88 (ರೂಪಾಯಿ ಒಂದು ಕೋಟಿ ಇಪ್ಪತ್ತನಾಲ್ಕು ಲಕ್ಷದ ಹತ್ತೊಂಭತ್ತು ಸಾವಿರದ ಆರುನೂರ ನಲವತ್ತೆರಡು ಮತ್ತು ಎಂಭತ್ತೆಂಟು ಪೈಸೆ ಮಾತ್ರ) ಜೊತೆಗೆ ದಿನಾಂಕ: 16.01.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಶ್ರೀ.ಅಬ್ರರುಲ್ ಹಕ್** ಬಿನ್ ನಸೀಮುಲ್ ಘನಿ, ನಂ.25, 2ನೇ ಮಹಡಿ, 2ನೇ ಎ ಕ್ರಾಸ್, ಕನಕನಗರ, ಬೆಂಗಳೂರು-560032 **(2) ಶ್ರೀ ರಿಜ್ವಾನ್ ಖಾನ್** C/o ರಫೀಕ್ ಖಾನ್, ನಂ.25, 2ನೇ ಮಹಡಿ, 2ನೇ ಎ ಕ್ರಾಸ್, ಕನಕನಗರ, ಬೆಂಗಳೂರು-560032. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 09.02.2026 ರ ಸಂಜೆ 4.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	**ಐಟಂ ನಂ.1:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡೊರಿವ ಸ್ಥಿರಾಸ್ತಿಯ ಅಭಿವೃದ್ಧಿಯಾಗದ ವಾಸಯೋಗ್ಯ ಪರಿವರ್ತಿತ ಭೂಮಿಯ ಸರ್ವೆ ನಂ.136/3, ವಿಸ್ತೀರ್ಣ 32 ಗುಂಟೆಗಳಲ್ಲಿ 26 ಗುಂಟೆಗಳು, ಖಾತಾ ನಂ.ಫಾರ್ಮ್ (11) 8452 & ಫಾರ್ಮ್ (9) 8300 ಮತ್ತು ಭೂಮಿ ಸರ್ವೆ ನಂ.136/4, ವಿಸ್ತೀರ್ಣ 25 ಗುಂಟೆಗಳು ಖಾತಾ ನಂ. ಫಾರ್ಮ್ (11) 8453 ಮತ್ತು ಫಾರ್ಮ್ (9)8301, ಒಟ್ಟು ವಿಸ್ತೀರ್ಣ 1 ಎಕರೆ ಮತ್ತು 11 ಗುಂಟೆಗಳು ಮತ್ತು ದಿನಾಂಕ 03/01/2014 ರಂದು ಜಿಲ್ಲಾಧಿಕಾರಿ ಬೆಂಗಳೂರು ಅವರು ಅಂಗೀಕರಿಸಿರುವ ಆದೇಶ ನಂ. ALN(A)(A)SR:142/2013-14 ರ ಪ್ರಕಾರ ಇದನ್ನು ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ, BMRDA ಅನುಮೋದಿಸಿದ ಕಟ್ಟಡ ನಿರ್ಮಾಣ ಯೋಜನೆಯ ಅನುಮೋದನೆ ಸಂಖ್ಯೆ.APA/CC/655/2014-15, ಈ ಆಸ್ತಿಯು ಕಮ್ಮಸಂದ್ರ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಪೂಜಾರಪ್ಪರವರ ಭೂಮಿ, ಪಶ್ಚಿಮಕ್ಕೆ: ರಾಮಸ್ವಾಮಿ (ಪ್ರಸ್ತುತ M/s S2 ಹೋಮ್ಸ್‌ಗೆ ಸೇರಿದೆ) ರವರ ಭೂಮಿ ಮತ್ತು ರಸ್ತೆ, ಉತ್ತರಕ್ಕೆ: ಎಸ್ ರಾಮ ರೆಡ್ಡಿಗೆ ಸೇರಿದ ಸರ್ವೆ ನಂ.136/3ರ ಉಳಿಕೆಯ ಭಾಗದ ವಿಸ್ತೀರ್ಣ 6 ಗುಂಟೆಗಳು ಮತ್ತು ನಂತರ 20 ಅಡಿ ರಸ್ತೆ, ದಕ್ಷಿಣಕ್ಕೆ: ರಾಮಯ್ಯರವರ ಭೂಮಿ. **ಐಟಂ ನಂ.2:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ಅಭಿವೃದ್ಧಿಯಾಗದ ವಾಸಯೋಗ್ಯ ಪರಿವರ್ತಿತ ಭೂಮಿಯ ಸರ್ವೆ ನಂ.136/1, ವಿಸ್ತೀರ್ಣ 10 ಗುಂಟೆಗಳು ಅಂದರೆ 10,890 ಚದರ ಅಡಿ ಮತ್ತು ದಿನಾಂಕ 05/03/2012 ರಂದು ಜಿಲ್ಲಾಧಿಕಾರಿ ಬೆಂಗಳೂರು ಅವರು ಅಂಗೀಕರಿಸಿರುವ ಆದೇಶ ನಂ. ALN(A)(A)SR:252/2011-12 ರ ಪ್ರಕಾರ ಇದನ್ನು ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ, BMRDA ಅನುಮೋದಿಸಿದ ಕಟ್ಟಡ ನಿರ್ಮಾಣ ಯೋಜನೆಯ ಅನುಮೋದನೆ ಸಂಖ್ಯೆ. APA/CC/655/2014-15, ಈ ಆಸ್ತಿಯು ಕಮ್ಮಸಂದ್ರ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ರಾಮ ರೆಡ್ಡಿಗೆ ಸೇರಿದ ಸರ್ವೆ ನಂ.136ರ ಉಳಿಕೆ ಭಾಗ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಶ್ರೀ ಚಂದ್ರಶೇಖರ್‌ರವರಿಗೆ ಸೇರಿದ ಸರ್ವೆ ನಂ.136/1ರ ಉಳಿಕೆ ಭಾಗ, ದಕ್ಷಿಣಕ್ಕೆ: ಲಕ್ಷ್ಮಿ ಮತ್ತು ರಾಮಸ್ವಾಮಿರವರಿಗೆ ಸೇರಿದ ಸರ್ವೆ ನಂ.136ರ ಉಳಿಕೆ ಭಾಗ. **ಷೆಡ್ಯೂಲ್ 'ಬಿ' ಆಸ್ತಿ :** ಷೆಡ್ಯೂಲ್ 'ಎ' ಆಸ್ತಿಯಲ್ಲಿ ವಿವರಿಸಿರುವಂತೆ 493 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ, ಹಿತಾಸಕ್ತಿಯನ್ನೊಳಗೊಂಡಿರುವ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ. ಎಫ್‌ಎಫ್-10, ಸಿಎಂಸಿ ಖಾತಾ ನಂ. 10673/5382/8300/8301/136/1,3,4/ಡಿ/4ನೇ ಎಫ್-ಎಫ್‌ಎಫ್10, ವಿಸ್ತೀರ್ಣ ಸೂಪರ್ ಬಿಲ್ಟ್ ಅಪ್ ಪ್ರದೇಶ 2031 ಚದರ ಅಡಿ, ಸಿ ಬ್ಲಾಕ್, ನಾಲ್ಕನೇ ಮಹಡಿ, "ಎಸ್2 ಹೋಮ್ಸ್-ದಿ ವಾಟರ್‌ಗ್ರೋವ್" ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್ ಕಟ್ಟಡವು 2 ಬೆಡ್‌ರೂಂಗಳು ಒಳಗೊಂಡಿರುವ ಅಪಾರ್ಟ್‌ಮೆಂಟ್ ಕಟ್ಟಡವಾಗಿರುತ್ತದೆ. ಚಕ್ಕುಬಂದಿ : ಪೂರ್ವಕ್ಕೆ : ಕಾರಿಡಾರ್, ಪಶ್ಚಿಮಕ್ಕೆ : ತೆರೆದ ಜಾಗ, ಉತ್ತರಕ್ಕೆ : ಫ್ಲಾಟ್ ನಂ. ಎಫ್‌ಎಫ್-11, ದಕ್ಷಿಣಕ್ಕೆ : ಫ್ಲಾಟ್ ನಂ. ಎಫ್‌ಎಫ್.9.	ರೂ. 55,00,000/-	ರೂ. 5,50,000/-	ರೂ. 1,00,000/-	30.01.2026 ಬೆಳಿಗ್ಗೆ 11.00 ರಿಂದ ಸಂಜೆ 4.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮತ್ತು **ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **6301683293 ಮತ್ತು 9483544116, e-mail: cb2366@canarabank.com** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 17.01.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಚೆಕ್-ಇನ್‌ಗಾಗಿ ನಿಗದಿತ ವೇಳೆಗಿಂತ ಮೊದಲೇ ನಿಲ್ದಾಣದಲ್ಲಿರಲು ಸೂಚನೆ

ಗಣರಾಜ್ಯೋತ್ಸವ: ವಿಮಾನ ನಿಲ್ದಾಣದಲ್ಲಿ ಕಟ್ಟೆಚ್ಚರ

ಬೆಂಗಳೂರು: ಬೆಂಗಳೂರು ಏರ್‌ಪೋರ್ಟ್ ಗಣರಾಜ್ಯೋತ್ಸವ ಹಾಗೂ ಸುದೀರ್ಘ ವಾರಾಂತ್ಯದ ಹಿನ್ನೆಲೆ ನಿಲ್ದಾಣಕ್ಕೆ ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಆಗಮಿಸುವಂತೆ ಮನವಿ ಮಾಡಿದೆ.

ಬೆಂಗಳೂರು ಏರ್‌ಪೋರ್ಟ್‌ನಲ್ಲಿ ಪ್ರಯಾಣಿಕರು ಹೆಚ್ಚುವರಿ ಭದ್ರತಾ ಕ್ರಮಗಳು ಮತ್ತು ಪ್ರಯಾಣಿಕರ ದಟ್ಟಣೆ ನಿರೀಕ್ಷೆ ಹಿನ್ನೆಲೆ , ವಿಮಾನ ನಿಲ್ದಾಣಕ್ಕೆ ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಆಗಮಿಸುವಂತೆ ಮನವಿ ಮಾಡಿದ್ದು, ಚೆಕ್-ಇನ್ ಮತ್ತು ಭದ್ರತಾ ತಪಾಸಣೆಗಳಿಗೆ ಹೆಚ್ಚಿನ ಸಮಯ ಮೀಸಲಿಡಿ, ವಿಳಂಬ ತಪ್ಪಿಸಲು ಸಹಕರಿಸಿ ಎಂದು ಏರ್‌ಪೋರ್ಟ್ ಆಡಳಿತ ಮಂಡಳಿ ತಿಳಿಸಿದೆ.

ಗಣರಾಜ್ಯೋತ್ಸವ ಹಿನ್ನೆಲೆ ಬೆಂಗಳೂರು ಏರ್‌ಪೋರ್ಟ್‌ಗೆ ಆಗಮಿಸುವ ಪ್ರಯಾಣಿಕರ ಮೇಲೆ ಹದ್ದಿನ ಕಣ್ಣಿಡಲಾಗಿದ್ದು, ಸ್ಕ್ರೀನಿಂಗ್, ಲಗೇಜ್‌ಚೆಕಿಂಗ್, ಚೆಕ್ ಇನ್‌ನಲ್ಲಿ ಭದ್ರತೆ ಹೆಚ್ಚಿಸಲಾಗಿದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಸಿಐಎಸ್‌ಎಫ್ ಸಿಬ್ಬಂದಿ ಕೈಗೊಂಡಿದ್ದು, ಪ್ರಯಾಣಿಕರು ನಿಗದಿತ ಸಮಯಕ್ಕಿಂತ ಬೇಗ ಬರುವಂತೆ ಏರ್‌ಪೋರ್ಟ್ ಆಡಳಿತ ಮಂಡಳಿ ಸೂಚನೆ ನೀಡಿದ್ದು, ದೀರ್ಘ ವಾರಾಂತ್ಯದ ಹಿನ್ನೆಲೆ ಪ್ರಯಾಣಿಕರ ಭಾರೀ ಆಗಮನ ನಿರೀಕ್ಷೆಯಿರುವುದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಸೂಚನೆ ನೀಡಿದೆ.

ಹೆಚ್ಚುವರಿ ಭದ್ರತಾ ಕ್ರಮಗಳ ಕಾರಣ ಪ್ರವೇಶ ದ್ವಾರಗಳು ಹಾಗೂ ಭದ್ರತಾ ತಪಾಸಣೆಯಲ್ಲಿ ಸಮಯ ಹೆಚ್ಚು ತೆಗೆದುಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಕೊನೆ ಕ್ಷಣದ ವಿಳಂಬ ಅಥವಾ ವಿಮಾನ ತಪ್ಪುವ ಪರಿಸ್ಥಿತಿಯಿಂದ ದೂರ ಉಳಿಯಲು ತುಸು ಮೊದಲೇ ಆಗಮಿಸುವಂತೆ ಪ್ರಯಾಣಿಕರಿಗೆ ಅಧಿಕಾರಿಗಳು ಮನವಿ ಮಾಡಿದ್ದು, ಅಲ್ಲದೆ, ಚೆಕ್-ಇನ್ ಸಮಯ ಮತ್ತು ಬೋರ್ಡಿಂಗ್ ವಿವರಗಳು ಸೇರಿದಂತೆ ವಿಮಾನಕ್ಕೆ ಸಂಬಂಧಿಸಿದ ಮಾಹಿತಿಗಾಗಿ ತಮ್ಮ ತಮ್ಮ ವಿಮಾನಯಾನ ಸಂಸ್ಥೆಗಳೊಂದಿಗೆ ನೇರವಾಗಿ ಸಂಪರ್ಕಿಸುವಂತೆ ಪ್ರಯಾಣಿಕರಿಗೆ ಸೂಚಿಸಲಾಗಿದೆ.

ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳಿಗೆ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಚಾಲನೆ

ರಾಜಧಾನಿಯಲ್ಲಿ ಡಬಲ್ ಡೆಕ್ಕರ್ ಬಸ್ ಸೇವೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಸಲುವಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಅಂಬಾರಿ ಡಬಲ್ ಡೆಕ್ಕರ್ ಬಸ್ ಸಂಚಾರವನ್ನು ಆರಂಭಿಸಿದ್ದು, ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಚಾಲನೆ ನೀಡಿದರು.

ವಿದ್ಯುತ್ ಚಾಲಿತ ಅವತಾರದೊಂದಿಗೆ ಮತ್ತೆ ಸೇವೆಯನ್ನು ಆರಂಭಿಸಲಾಗಿದ್ದು, ಈ ಮೂಲಕ ಮುಂಬೈ ಹೊರತುಪಡಿಸಿದರೆ ಎಲೆಕ್ಟ್ರಿಕ್ ಡಬಲ್ ಡೆಕ್ಕರ್ ಬಸ್ ಸಂಚಾರ ನಡೆಸಲಿರುವ ಎರಡನೇ ಮಹಾನಗರ ಎಂಬ ಹೆಗ್ಗಳಿಕೆಗೆ ಬೆಂಗಳೂರು ಪಾತ್ರವಾಗಲಿದೆ. ಮತ್ತೊಂದು ವಿಶೇಷ ಎಂದರೆ, ಸಾಂಸ್ಕೃತಿಕ ನಗರ ಮೈಸೂರು ಬಳಿಕ ಬೆಂಗಳೂರಿನ ರಸ್ತೆಗಳಲ್ಲಿ ಡಬಲ್ ಡೆಕ್ಕರ್ ಬಸ್‌ಗಳು ಸಂಚಾರದ ಆರಂಭವಾಗಿದ್ದು, ಈ ಬಸ್‌ಗಳ ತೆರೆದ ಮೇಲ್ಛಾವಣಿ ಹೊಂದಿದ್ದು, ನಗರದ ಪ್ರಮುಖ ಸ್ಥಳಗಳ ಮೂಲಕ ಸಂಚರಿಸಲಿವೆ. ಪ್ರಯಾಣಿಕರು ಕೆಎಸ್‌ಟಿಡಿಸಿ ವೆಬ್‌ಸೈಟ್ ಮೂಲಕ ಟಿಕೆಟ್ ಕಾಯ್ದಿರಿಸಬಹುದಾಗಿದೆ. ತೆರೆದ ಮೇಲ್ಛಾವಣಿ ಇರುವುದರಿಂದ ಪ್ರಯಾಣಿಕರು ಬೆಂಗಳೂರಿನ ಸೌಂದರ್ಯವನ್ನು ಸಂಪೂರ್ಣವಾಗಿ ಆನಂದಿಸಬಹುದಾಗಿದೆ. ಈ ಮೂಲಕ ನಗರಕ್ಕೆ ಬರುವ ಪ್ರವಾಸಿಗರಿಗೆ ಮತ್ತು ಸ್ಥಳೀಯರಿಗೆ ನಗರದ ಪ್ರಮುಖ ತಾಣಗಳನ್ನು ಆನಂದಿಸುವ ಅವಕಾಶ ನೀಡಲಿದೆ. ಅಂಬಾರಿ ಡಬಲ್ ಡೆಕ್ಕರ್ ಬಸ್‌ನೊಳಗೆ 20+20 ಆಸನಗಳನ್ನು ಹೊಂದಿದೆ. ಕೆಳಭಾಗದಲ್ಲಿ 20 ಮತ್ತು ಮೇಲ್ಭಾಗದಲ್ಲಿ 20 ಆಸನಗಳಿವೆ. ಕೆಳಭಾಗ ಸಂಪೂರ್ಣ ಹವಾನಿಯಂತ್ರಿತವಾಗಿದೆ.

ಈ ಹಿಂದೆ ಮೈಸೂರಿನಲ್ಲಿ ಆರು ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳಿಗೆ ಚಾಲನೆ ನೀಡಲಾಗಿತ್ತು. ಇದೀಗ ಆರರಲ್ಲಿ ಮೂರು ಬಸ್‌ಗಳನ್ನು ರಾಜಧಾನಿ ಬೆಂಗಳೂರಿಗೆ ತೆಗೆದುಕೊಂಡು ಬರಲಾಗಿದೆ. ಈ ಮೊದಲು ದಿನನಿತ್ಯದ ಒಡಾಟಕ್ಕಾಗಿಯೇ ಬೆಂಗಳೂರು ಡಬಲ್ ಡೆಕ್ಕರ್ ಬಸ್‌ಗಳನ್ನೊಳಗೊಂಡಿತ್ತು. ಆದರೆ ಆರ್ಥಿಕ ನಷ್ಟದ ಹಿನ್ನೆಲೆ ಡಬಲ್ ಡೆಕ್ಕರ್ ಬಸ್ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು.

ನೂತನ ಡಬಲ್ ಡೆಕ್ಕರ್ ಬಸ್‌ಗಳಿಗೆ ರವೀಂದ್ರಕಲಾ ಕ್ಷೇತ್ರರದಲ್ಲಿ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಬುಧವಾರ ಹಸಿರು ನಿಶಾನೆ ತೋರಿಸಿದರು.

ಸೇವೆಯ ಸಮಯ

ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ನಿತ್ಯ ಓಡಾಡಲಿದೆ. ಪ್ರತಿ ಪ್ರಯಾಣಿಕರಿಗೆ ಟಿಕೆಟ್ ದರ 180 ರುಪಾಯಿ. ಒಂದು ಗಂಟೆಯ ಓಡಾಟಕ್ಕೆ ಈ ದರ ಅನ್ವಯವಾಗುತ್ತದೆ. ಈ ಬೆಲೆಯಲ್ಲಿ ನಗರದ ಅನೇಕ ಆಕರ್ಷಣೆಗಳನ್ನು ನೋಡಬಹುದು. ಎಸಿ ಡಬಲ್ ಡೆಕ್ಕರ್ ಬಸ್‌ಗಳ ಬ್ಯಾಟರಿ ಒಮ್ಮೆ ಚಾರ್ಜ್ ಮಾಡಿದರೆ 250 ಕಿ. ಮೀ. ದೂರ ಸಾಗಲಿದೆ. ಬಸ್ ನಲ್ಲಿ ಮುಂದೆ ಹಾಗೂ ಹಿಂದೆ ಎರಡೂ ಕಡೆ ಬಾಗಿಲು ಇರಲಿದೆ. ಮೇಲ್ಮಹಡಿ ಹತ್ತಲು 2 ಕಡೆ ಮೆಟ್ಟಿಲುಗಳು ಇರಲಿವೆ. ಜತೆಗೆ ಒಂದು ತುರ್ತು ನಿರ್ಗಮನ ದ್ವಾರವೂ ಇರಲಿದೆ. ಒಟ್ಟು 65 ಪ್ರಯಾಣಿಕರಿಗೆ ಸೀಟಿನ ವ್ಯವಸ್ಥೆ ಇದೆ.

ಬಸ್‌ನಲ್ಲಿ ಲ್ಯಾಪ್‌ಟಾಪ್ ಟೇಬಲ್, ಮೊಬೈಲ್ ಚಾರ್ಜರ್ ಸೌಲಭ್ಯ

ಟ್ರಾಫಿಕ್ ದಟ್ಟಣೆ ಹೆಚ್ಚಿರುವ ಪ್ರದೇಶಗಳಲ್ಲಿ ಮತ್ತು ನಗರದ ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಪ್ರಯಾಣ ಇದ್ದಾಗ ಉದ್ಯೋಗಿಗಳು ಕೆಲಸ ನಿರ್ವಹಿಸುತ್ತಾ ಕಚೇರಿಗೆ ತಲುಪಲು ಸ್ವಂತ ಕಾರ್, ಕ್ಯಾಬ್ ಕಾರ್‌ಗಳನ್ನು ಅವಲಂಬಿಸುತ್ತಾರೆ. ಅಂತಹ ಉದ್ಯೋಗಿಗಳಿಗೆ ಅನುಕೂಲವಾಗುವಂತೆ ಬಸ್‌ನಲ್ಲಿ ಲ್ಯಾಪ್ ಟ್ಯಾಪ್ ಇಟ್ಟುಕೊಳ್ಳುವ ಟೇಬಲ್, ಚಾರ್ಜರ್ ಸೌಲಭ್ಯ ಸಿಗಲಿದೆ. ಈ ಸೌಲಭ್ಯದಿಂದ ಐಟಿ ಉದ್ಯೋಗಿಗಳ ಸಾರಿಗೆ ಬಸ್‌ಗಳ ಅವಲಂಬನೆ ಹೆಚ್ಚುವ ಸಾಧ್ಯತೆಗಳಿವೆ.

ಬಸ್ ಮಾರ್ಗ

ರವೀಂದ್ರ ಕಲಾಕ್ಷೇತ್ರ, ವಿಧಾನಸೌಧ, ಕಂಠೀರವ ಸ್ಟೇಡಿಯಂ, ಹೈಕೋರ್ಟ್, ಜನರಲ್ ಪೋಸ್ಟ್ ಆಫೀಸ್, ಹಡ್ಸನ್ ಸರ್ಕಲ್, ವಿಶ್ವೇಶ್ವರಯ್ಯ ಮ್ಯೂಸಿಯಂ ಸೇರಿದಂತೆ ಸೇರಿದಂತೆ ನಗರದ ನಗರದ ಹಲವು ಐತಿಹಾಸಿಕ ಮತ್ತು ಪ್ರಮುಖ ತಾಣಗಳು ಸೇರಿವೆ. ಇದು ಹಾಪ್-ಆನ್ ಹಾಪ್-ಆಫ್ ಸೇವೆಯಾಗಿದ್ದು, ಪ್ರಯಾಣಿಕರು ಇಚ್ಛೆ ಬಂದ ತಾಣದಲ್ಲಿ ಇಳಿದು ಮತ್ತೆ ಏರಬಹುದು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮತ್ತೆ ರೋಡಿಗಿಳಿದ ಡಬಲ್ ಡೆಕ್ಕರ್

ಬೆಂಗಳೂರು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಸಲುವಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಅಂಬಾರಿ ಡಬಲ್ ಡೆಕ್ಕರ್ ಬಸ್ ಸಂಚಾರವನ್ನು ಆರಂಭಿಸಿದ್ದು, ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಬುಧವಾರ ವಿದ್ಯುತ್ ಚಾಲಿತ ಬಸ್‌ಗಳಿಗೆ ಚಾಲನೆ ನೀಡಿದರು. ತೆರೆದ ಮೇಲ್ಛಾವಣಿ ಹೊಂದಿರುವ ಬಸ್‌ಗಳು ನಗರದ ಪ್ರಮುಖ ಸ್ಥಳಗಳ ಮೂಲಕ ಸಂಚರಿಸಲಿವೆ. ಪ್ರಯಾಣಿಕರು ಕೆಎಸ್‌ಟಿಡಿಸಿ ವೆಬ್‌ಸೈಟ್ ಮೂಲಕ ಟಿಕೆಟ್ ಕಾಯ್ದಿರಿಸಬಹುದು.

ಸೊಂಪಾದ ಪುಟಗಳು

17 ವರ್ಷಗಳ ದ್ವೇಷ ಮತ್ತು ಸ್ನೇಹದ ಮರುಜನ್ಮ
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ಭಾರತ-ಅಮೆರಿಕ ಸಂಬಂಧ ಹಳಿಗೆ ಏರಿಸುವರೇ ಹೊಸ ರಾಯಭಾರಿ?
ಸಂಗತ
ಡಾ.ವಿಜಯ್ ದರಡಾ 6

ದಾರಿದೀಪೋಕ್ತಿ

ಜಗತ್ತು ನಿಮ್ಮನ್ನು ಹೇಗೆ ನೋಡುತ್ತದೆ ಎನ್ನುವುದಕ್ಕಿಂತ, ನೀವು ನಿಮ್ಮನ್ನು ಹೇಗೆ ನೋಡುತ್ತೀರಿ ಎಂಬುದು ಮುಖ್ಯ. ಸಣ್ಣ ಸಣ್ಣ ಹೆಜ್ಜೆಗಳೇ ಮುಂದೆ ಒಂದು ದಿನ ದೊಡ್ಡ ಯಶಸ್ಸಿನ ಹಾದಿಯನ್ನು ನಿರ್ಮಿಸುತ್ತವೆ. ನಿಮ್ಮ ಯಶಸ್ಸು ನಿಮ್ಮ ವಿರುದ್ಧದ ಟೀಕೆಗಳಿಗೆ ಉತ್ತರ ನೀಡುತ್ತದೆ.

ವಕ್ರತುಂಡೋಕ್ತಿ

ಸಾಲ ಕೊಟ್ಟವನು ಮರೆತರೂ ಪರವಾಗಿಲ್ಲ, ಆದರೆ ಸಾಲ ತಗೊಂಡವನು ಮರೆತರೆ ಮಾತ್ರ ಅದು ನಿಜವಾದ ಶಾಂತಿ.

ತರಬೇತಿ ವಿಮಾನ ಪತನ: ಇಬ್ಬರು ಪೈಲಟ್ ಪಾರು

ಲಕ್ನೋ: ಇಲ್ಲಿನ ಪ್ರಯಾಗ್‌ರಾಜ್‌ನಲ್ಲಿ ಭಾರತೀಯ ವಾಯುಪಡೆಯ ತರಬೇತಿ ವಿಮಾನ ಪತನಗೊಂಡಿದ್ದು, ಇಬ್ಬರು ಪೈಲಟ್‌ನ್ನು ರಕ್ಷಣೆ ಮಾಡಲಾಗಿದೆ. ಬುಧವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಈ ಅವಘಡ ಸಂಭವಿಸಿದೆ. ಪ್ರಯಾಗ್‌ರಾಜ್‌ನ ಸಂಗಮದಿಂದ 2 ಕಿ.ಮೀ ದೂರದಲ್ಲಿರುವ ಕೆರೆಯಲ್ಲಿ ಮೈಕ್ರೋಲೈಟ್ ವಿಮಾನ ಪತನಗೊಂಡಿದೆ. ಘಟನಾ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ತಕ್ಷಣ ಆರಂಭವಾದ ಕಾರಣ ತರಬೇತಿ ವಿಮಾನದಲ್ಲಿದ್ದ ಇಬ್ಬರು ಪೈಲಟ್‌ನ್ನು ರಕ್ಷಿಸಲಾಗಿದೆ. ಸಣ್ಣಪುಟ್ಟ ಗಾಯಗಳಾಗಿದ್ದರೂ ಕೂಡ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

27 ವರ್ಷಗಳ ನಾಸಾ ಸೇವೆಗೆ ಬಾಹ್ಯಾಕಾಶ ಯಾನದಲ್ಲಿ ದಾಖಲೆ ಮಾಡಿದ್ದ ಸುನೀತಾ ವಿಲಿಯಮ್ಸ್ ನಿವೃತ್ತಿ



ಸರಕಾರದ ಸಿದ್ಧ ಭಾಷಣ ಬದಲಾಯಿಸಲು ಆಗ್ರಹಿಸಿದ ಗೆಹ್ಲೋಥ್ ತಮಿಳುನಾಡು, ಕೇರಳದ ಬಳಿಕ ಕರ್ನಾಟಕದಲ್ಲಿಯೂ ಜಟಾಪಟಿ

ರಾಜ್ಯಪಾಲರ ಕೊಸರಾಟ

11 ಪ್ಯಾರಾ ಕೈಬಿಡಲು ಸರಕಾರಕ್ಕೆ ಸೂಚನೆ ನೀಡಿದ ರಾಜ್ಯಪಾಲರು ಭಾಷಣ ಮಾಡುವುದು ರಾಜ್ಯಪಾಲರ ಕರ್ತವ್ಯವೆಂದ ರಾಜ್ಯ ಸರಕಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಕ್ಷಿಣ ಭಾರತದಲ್ಲಿ ಲೋಕಭವನ ಹಾಗೂ ರಾಜ್ಯ ಸರಕಾರದ ನಡುವೆ ಶುರುವಾಗಿರುವ ತಿಕ್ಕಾಟ ಇದೀಗ, ಕರ್ನಾಟಕಕ್ಕೂ ವಿಸ್ತರಣೆಯಾಗಿದೆ. ಜಂಟಿ ಅಧಿವೇಶನವನ್ನು ಉದ್ದೇಶಿಸಿ ಗುರುವಾರ ಭಾಷಣ ಮಾಡಲು ರಾಜ್ಯಪಾಲರು 'ಕೊಸರಾಟ' ಮಾಡಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಕೆಲ ದಿನಗಳ ಹಿಂದಷ್ಟೇ ಕೇರಳ ಸರಕಾರ ಸಿದ್ಧಪಡಿಸಿದ್ದ ಕೆಲ ಅಂಶಗಳನ್ನು ಅಲ್ಲಿನ ರಾಜ್ಯಪಾಲರು ಕೈಬಿಟ್ಟು ಓದಿದ್ದು ವಿವಾದಕ್ಕೆ ಕಾರಣವಾಗಿತ್ತು. ತಮಿಳುನಾಡಿನಲ್ಲಿ ರಾಷ್ಟ್ರಗೀತೆ ಮೊಳಗಿಸಿಲ್ಲವೆಂದು ರಾಜ್ಯಪಾಲರು ಭಾಷಣ ಮಾಡದೇ ಹೋಗಿದ್ದರು. ರಾಜ್ಯಪಾಲರು ಹಾಗೂ ಸರಕಾರದ ನಡುವಿನ ಈ ಗಲಾಟೆ ಇತರೆ ರಾಜ್ಯಗಳಲ್ಲಿ ಸಾಮಾನ್ಯವಾಗಿದ್ದರೂ ಸರಕಾರದ ಮಟ್ಟಿಗೆ ಇದು ಹೊಸ ವಿವಾದವಾಗಿದೆ.

ಕೇಂದ್ರ ಸರಕಾರದ ವಿಬಿ ರಾಮ್ ಜಿ ಕಾಯಿದೆ ವಿರೋಧಿಸಿ ನಿರ್ಣಯ ಕೈಗೊಳ್ಳಲು ಮುಂದಾಗಿರುವ ರಾಜ್ಯ ಸರಕಾರ, ರಾಜ್ಯಪಾಲರ ಭಾಷಣದಲ್ಲಿಯೂ ಈ ಅಂಶವನ್ನು ಸೇರ್ಪಡೆ ಮಾಡಿತ್ತು. ಈ ಕಾರಣಕ್ಕೆ ಈ ಅಂಶಗಳಿದ್ದರೆ ಭಾಷಣ ಮಾಡಲು ಗುರುವಾರ ಬರುವುದಿಲ್ಲ ಎಂದಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಥ್ ಬಳಿಕ ಒಲ್ಲದ ಮನಸ್ಸಿನಿಂದಲೇ 'ಬರುವುದಾಗಿ' ಹೇಳಿದರೂ, ಯಾವುದೇ ಕಾರಣಕ್ಕೂ ಕೇಂದ್ರದ ವಿರುದ್ಧ ಇರುವ ಅಂಶಗಳನ್ನು ಓದುವುದಿಲ್ಲ ಎಂದಿದ್ದಾರೆ. ಆದರೆ ಮೂಲಗಳ ಪ್ರಕಾರ, ಈ ಇಡೀ ಗೊಂದಲದಿಂದ ತಪ್ಪಿಸಿಕೊಳ್ಳಲು ಜಂಟಿ ಅಧಿವೇಶನದಿಂದಲೇ ದೂರು ಉಳಿಯುವ ಆಲೋಚನೆಯಲ್ಲಿ ರಾಜ್ಯಪಾಲರಿದ್ದಾರೆ. ಒಂದು ವೇಳೆ ಬಂದರೂ, ಆಡಳಿತ ಪಕ್ಷದಿಂದ ಎಷ್ಟೇ ವಿರೋಧ ವ್ಯಕ್ತವಾದರೂ ಕೇಂದ್ರ ಸರಕಾರ ವಿರುದ್ಧವಿರುವ ಅಂಶಗಳನ್ನು ಕೈಬಿಟ್ಟು ಓದುವ ಸಾಧ್ಯತೆಯಿದೆ.



ಲೋಕಭವನದ ವಾದವೇನು?

- ಅನಗತ್ಯವಾಗಿ ಕೇಂದ್ರದ ವಿರುದ್ಧ ಮಾಡುವ ಆರೋಪ ಓದಲಾಗುವುದಿಲ್ಲ
- ರಾಜ್ಯಪಾಲರಿಗೆ ಒಪ್ಪಿತವಿಲ್ಲದ ಅಂಶ ಕೈಬಿಡಲು ಕಾನೂನಿನಲ್ಲಿ ಅವಕಾಶವಿದೆ
- ಕಲಾಪಕ್ಕೆ ಬಂದು ವಿವಾದ ಸೃಷ್ಟಿಸುವುದಕ್ಕಿಂತ, ದೂರವಿರುವುದು ಸೂಕ್ತ

ಸರಕಾರದ ವಾದವೇನು?

- ರಾಜ್ಯಪಾಲರ ಬಾಯಲ್ಲಿ ವಾಸ್ತವಾಂಶ ತಿಳಿಸುವುದು ಸರಕಾರದ ಕರ್ತವ್ಯ
- ನಿಯಮದ ಪ್ರಕಾರ ರಾಜ್ಯ ಸರಕಾರ ಸಿದ್ಧಪಡಿಸಿರುವ ಭಾಷಣವನ್ನು ರಾಜ್ಯಪಾಲರು ಓದಲೇಬೇಕು
- ರಾಜ್ಯ ಸರಕಾರ ಮಾಡಿರುವ ಸಾಧನೆಯನ್ನು ರಾಜ್ಯಪಾಲರೇ ಹೇಳಬೇಕು

ಭಾಷಣಕ್ಕೆ ವಿರೋಧಿಸುತ್ತಿರುವುದು ಏಕೆ?

ರಾಜ್ಯಪಾಲರ ಭಾಷಣದಲ್ಲಿ ನರೇಗಾ ಯೋಜನೆಯನ್ನು ಮರುಸ್ಥಾಪಿಸುವಂತೆ ಹಾಗೂ ವಿಬಿ ರಾಮ್ ಕಾಯಿದೆಯನ್ನು ವಿರೋಧಿಸುವ ಅಂಶವನ್ನು ಸೇರಿಸಲಾಗಿತ್ತು. ಇದರೊಂದಿಗೆ ಅನುದಾನ ತಾರತಮ್ಯ, ಬಾಕಿ ಹಣ ವಾಪಸಿಗೆ ಆಗ್ರಹಿಸುವ ಕೆಲವೊಂದಷ್ಟು ಅಂಶಗಳಿದ್ದವು. ಆದ್ದರಿಂದ ಈ ಅಂಶಗಳನ್ನು ತೆಗೆಯುವಂತೆ ಆಗ್ರಹಿಸಲಾಗಿದೆ. ಈಗಾಗಲೇ ಕೇರಳ ಹಾಗೂ ತಮಿಳುನಾಡಿನಲ್ಲಿ ನಡೆದಿದ್ದ ಸಂಘರ್ಷವನ್ನು ಗಮನದಲ್ಲಿರಿಸಿ ಕೊಂಡು ಈ ಜಂಟಿ ಅಧಿವೇಶನದಿಂದ ದೂರ ಉಳಿಯುವ ಆಲೋಚನೆ ರಾಜ್ಯಪಾಲರು ಮಾಡಿದ್ದಾರೆ ಎನ್ನಲಾಗಿದೆ. → 4

> ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಸರಕಾರದ ವಿರುದ್ಧದ ಅಂಶಗಳನ್ನು ಅಳವಡಿಕೆ ಮಾಡದೆ ಆರೋಗ್ಯಕರ ಪ್ರಜಾಪ್ರಭುತ್ವ, ಸಕಾರಾತ್ಮಕ ಒಕ್ಕೂಟ ವ್ಯವಸ್ಥೆಯಡಿ ವಿಧಾನ ಮಂಡಲದ ಉಭಯ ಸದನಗಳ ಅಧಿವೇಶನಕ್ಕೆ ಸರಕಾರ ಅನುವು ಮಾಡಿಕೊಡಬೇಕು. ರಾಜ್ಯಪಾಲರು ಭಾಷಣ ಮಾಡಲು ಎಲ್ಲಿಯೂ ವಿರೋಧಿಸಿಲ್ಲ. ಆದರೆ ಸುಳ್ಳು, ಮಾಹಿತಿಯನ್ನು ಹರಡುವುದಕ್ಕೆ ಮತ್ತು ಜನಸಾಮಾನ್ಯರನ್ನು ಕೇಂದ್ರ ಸರಕಾರದ ವಿರುದ್ಧ ಅಪಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವುದನ್ನು ಮಾತ್ರ ವಿರೋಧಿಸಿದ್ದಾರೆ.
> -ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

> ರಾಜ್ಯಪಾಲರು ಮಾಡುವ ಭಾಷಣವನ್ನು ಸಚಿವ ಸಂಪುಟ ಸಭೆ ಸಿದ್ಧಪಡಿಸಬೇಕು ಎಂದು ಸಂವಿಧಾನದಲ್ಲಿ ಸ್ಪಷ್ಟವಾಗಿದೆ. ಸರಕಾರದ ಸಾಧನೆ, ಕೇಂದ್ರದಿಂದ ರಾಜ್ಯಕ್ಕೆ ಆಗಿರುವ ಆರ್ಥಿಕ ನಷ್ಟದ ವಿಷಯಗಳನ್ನು 10ರಿಂದ 12 ಪ್ಯಾರಾಗಳಲ್ಲಿ ಸೂಚ್ಯವಾಗಿ ಬರೆದಿದ್ದೇವೆ. ರಾಜ್ಯಪಾಲರಿಗೆ ಕೆಲ ಅಂಶಗಳ ಬಗ್ಗೆ ಅಕ್ಷೇಪಗಳಿವೆ. ಮಾರ್ಪಾಡಿಗೆ ಚರ್ಚಿಸುತ್ತೇವೆ ಹೊರತು ಪ್ಯಾರಾ ಕೈಬಿಟ್ಟರೆ ಸರಕಾರದ ತೀರ್ಮಾನಕ್ಕೆ ವಿರೋಧವಾಗುತ್ತದೆ. ಪ್ಯಾರಾ ಕೈಬಿಡುವುದು ಸರಿಯಲ್ಲ ಎನ್ನುವುದು ನಮ್ಮ ಮಾತಾಗಿದೆ.
> -ಎಚ್.ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

22 ವರ್ಷಗಳಲ್ಲಿ ಒಮ್ಮೆಯೂ ನಡೆಯದ ವಿಚಾರಣೆ: ಮಹಾರಾಷ್ಟ್ರಕ್ಕೆ ಮತ್ತೆ ನಿರಾಶೆ

ಬೆಳಗಾವಿ ಗಡಿ ತರ್ಕ ವಿಚಾರಣೆ ಮುಂದಕ್ಕೆ

ಬೆಳಗಾವಿ: ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್‌ನಲ್ಲಿ ಬುಧವಾರ ನಡೆಯಬೇಕಿದ್ದ ವಿಚಾರಣೆ ಮತ್ತೆ ಮುಂದಕ್ಕೆ ಹೋಗಿದೆ. ಇದರೊಂದಿಗೆ ಮಹಾಜನ್ ವರದಿ ಕುರಿತ ವಿಚಾರಣೆ ಮೇಲೆ ಕಣ್ಣಿಟ್ಟಿದ್ದ ಮಹಾರಾಷ್ಟ್ರಕ್ಕೆ ಮತ್ತೆ ನಿರಾಸೆಯಾಗಿದೆ.

ಜ.21ರಂದು ನ್ಯಾಯಮೂರ್ತಿಗಳಾದ ಸಂಜಯಕುಮಾರ್ ಮತ್ತು ಅಲೋಕ ಆರಾಧ್ಯ ನೇತೃತ್ವದ ದ್ವಿಸದಸ್ಯ ಪೀಠದ ಎದುರು ಗಡಿ ವಿವಾದ ಕುರಿತು ವಿಚಾರಣೆ ನಡೆಸಲು ಕಳೆದ ವರ್ಷದ ಅಕ್ಟೋಬರ್ ತಿಂಗಳಲ್ಲಿಯೇ ದಿನಾಂಕ ನಿಗದಿ ಆಗಿತ್ತು. ಆದರೆ ಇಬ್ಬರೂ ನ್ಯಾಯಮೂರ್ತಿಗಳು ಬೇರೆ ಬೇರೆ ಪೀಠಗಳಲ್ಲಿ ಮಹತ್ವದ ಪ್ರಕರಣಗಳ ವಿಚಾರಣೆ ನಡೆಸಲು ನಿಯುಕ್ತಿಯಾಗಿದ್ದಾರೆ. ಆ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಗಡಿವಿವಾದ ಪ್ರಕರಣದ ವಿಚಾರಣೆ ಬುಧವಾರ ನಡೆದಿಲ್ಲ.

ಕರ್ನಾಟಕಕ್ಕೆ ಸೇರಿದ ಬೆಳಗಾವಿ, ನಿಪ್ಪಾಣಿ, ಕಾರವಾರ, ಬೀದರ್, ಭಾಲ್ಕಿ ಸೇರಿದಂತೆ 865 ಗ್ರಾಮಗಳು ತನಗೆ ಸೇರಬೇಕು ಎಂದು ಮಹಾರಾಷ್ಟ್ರ 2004ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದೆ. 2004 ರಲ್ಲಿ ಮಹಾರಾಷ್ಟ್ರ ಸರ್ಕಾರ ದಾಖಲಿಸಿದ್ದ ಈ ದಾವೆಯಲ್ಲಿ ಕೇಂದ್ರ ಸರಕಾರ ಮೊದಲ ಹಾಗೂ ಕರ್ನಾಟಕ ಎರಡನೇ ಪ್ರತಿವಾದಿಯಾಗಿದೆ. ಅದಾದ ಬಳಿಕ ಒಮ್ಮೆಯೂ ಕೋರ್ಟ್‌ನಲ್ಲಿ ವಿಚಾರಣೆಗೆ ಬಂದಿಲ್ಲ. ಪದೇ ಪದೇ ವಿಚಾರಣೆ ಮುಂದೆ ಹೋಗುತ್ತಲೇ ಬಂದಿದೆ. ಈ ಸಲವೂ ಅದೇ ರೀತಿ ಆಗಿರುವುದು ಮಹಾರಾಷ್ಟ್ರ ಮತ್ತು ಎಂಇಎಸ್ ಮುಖಂಡರಲ್ಲಿ ನಿರಾಸೆ ಮೂಡಿಸಿದೆ.

ವಿಚಾರಣೆ ನಡೆದಿದ್ದರೆ ವಾದ ಮಂಡಿಸಲು ಕರ್ನಾಟಕದ ಕಾನೂನು ತಂಡವು ಸರ್ವ ಸಿದ್ಧತೆ ಮಾಡಿಕೊಂಡಿತ್ತು. ಹಿರಿಯ ನ್ಯಾಯವಾದಿ ನಿಶಾಂತ ಪಾಟೀಲ್ ಅವರನ್ನು ಅಡ್ವೋಕೇಟ್ ಆನ್ ರೆಕಾರ್ಡ್ ಎಂದು ರಾಜ್ಯ ಸರಕಾರ ಮಂಗಳವಾರವಷ್ಟೇ ನೇಮಕ ಮಾಡಿತ್ತು. ಹಿರಿಯ ನ್ಯಾಯವಾದಿ ಮುಕುಲ್ ರೋಹಟಗಿ ಸೇರಿದಂತೆ ಕಾನೂನು ತಜ್ಞರ ತಂಡ ಕರ್ನಾಟಕದ ಪರ ವಾದ ಮಂಡಿಸಲು ಸಜ್ಜಾಗಿದ್ದರು.

ಕೇಂದ್ರದ ನಿಲುವು ಅಸ್ಪಷ್ಟ

ಈ ಹಿಂದೆ ಮಹಾರಾಷ್ಟ್ರ ರಾಜ್ಯದವರೇ ಆದ ಶಿವರಾಜ ಪಾಟೀಲ ಅವರು ಕೇಂದ್ರದಲ್ಲಿ ಗೃಹ ಸಚಿವರಾಗಿದ್ದಾಗ ಸುಪ್ರೀಂ ಕೋರ್ಟ್‌ಗೆ ಒಂದು ಅಫಿಡವಿಟ್ ಸಲ್ಲಿಸಿ ಗಡಿ ವಿವಾದ ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿ ಮಹಾರಾಷ್ಟ್ರದ ವಿರುದ್ಧ ನಿಲುವು ತಾಳಿದ್ದರು. ಆಗ ಮಹಾರಾಷ್ಟ್ರದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಬಳಿಕ ಕೇಂದ್ರ ಸರಕಾರ ಈ ಅಫಿಡವಿಟ್ ವಾಪಸ್ ಪಡೆದಿತ್ತು. ಹಾಗಾಗಿ ಕೇಂದ್ರ ಸರಕಾರವು ಸುಪ್ರೀಂಕೋರ್ಟ್ ಮುಂದೆ ತನ್ನ ಸ್ಪಷ್ಟ ನಿರ್ಧಾರವನ್ನು ತಿಳಿಸಬೇಕಿದೆ.

ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಸದಸ್ಯರು ಮತ್ತು ಹಿರಿಯ ಕನ್ನಡ ಪರ ಹೋರಾಟಗಾರರಾದ ಅಶೋಕ ಚಂದರಗಿ ಮಾತನಾಡಿ, ಕೇಂದ್ರ ಸರಕಾರ 1956ರಲ್ಲಿ ಫಜಲ್ ಅಲಿ ಆಯೋಗ, 1966ರಲ್ಲಿ ಮಹಾಜನ್ ಆಯೋಗವನ್ನು ರಚನೆ ಮಾಡಿತ್ತು. ಈ ಎರಡೂ ಆಯೋಗಗಳು ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ವರದಿ ಕೊಟ್ಟಿವೆ. ಗಡಿ ವಿವಾದದಲ್ಲಿ ಕೇಂದ್ರ ಸರಕಾರ ಮೊದಲ ಹಾಗೂ ಕರ್ನಾಟಕ ಎರಡನೇ ಪ್ರತಿವಾದಿಯಾಗಿದೆ. ಈ ವಿಚಾರದಲ್ಲಿ ಕೇಂದ್ರವು ಯಾವ ನಿಲುವು ತೆಗೆದುಕೊಳ್ಳುತ್ತದೆ ಎಂಬುದು ತುಂಬಾ ಮಹತ್ವದ್ದು ಎಂದರು.

ನೂರಾರು ಖಾಸಗಿ ಬಸ್ ವಶಕ್ಕೆ

ಬೆಂಗಳೂರು: ನಗರದಲ್ಲಿ ಖಾಸಗಿ ವಾಹನಗಳ ಮಾಲೀಕರು ಸಾರಿಗೆ ಇಲಾಖೆಗೆ ಲಕ್ಷಾಂತರ ಮೊತ್ತದ ತೆರಿಗೆ ವಂಚಿಸುತ್ತಿರುವುದು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆಯು ಐಷಾರಾಮಿ ಬಸ್‌ಗಳು ಸೇರಿದಂತೆ ನೂರಾರು ವಾಹನಗಳನ್ನು ವಶಕ್ಕೆ ಪಡೆದಿದೆ.

ನಗರದಲ್ಲಿ ಖಾಸಗಿ ಬಸ್ ಹಾಗೂ ಇತರೆ ವಾಹನಗಳು ಕ್ರಮಬದ್ಧವಾಗಿ ತೆರಿಗೆ ಪಾವತಿಸುತ್ತಿಲ್ಲ. ಇದರಿಂದ ಸಾರಿಗೆ ಇಲಾಖೆಗೆ ಕೋಟ್ಯಂತರ ರುಪಾಯಿ ನಷ್ಟವಾಗುತ್ತಿದ್ದು, ಸಾರಿಗೆ ಇಲಾಖೆ ಅಪರ ಆಯುಕ್ತ ಎಂ.ಪಿ ಓಂಕಾರೇಶ್ವರಿ ನೇತೃತ್ವದ ತಂಡವು ತೆರಿಗೆ ವಂಚಕರ ವಿರುದ್ಧ ಕಾರ್ಯಾಚರಣೆಗೆ ಮುಂದಾಗಿದ್ದು. ತೆರಿಗೆ ಬಸ್ ಸೇರಿದಂತೆ ನೂರಾರು ವಾಹನಗಳನ್ನು ವಶಕ್ಕೆ ಪಡೆಯುತ್ತಿದ್ದಾರೆ. → 4

ಸಿದ್ಧಗಂಗಾ ಮಠದಲ್ಲಿ ಆಯೋಜಿಸಿದ್ದ ಶ್ರೀ ಶಿವಕುಮಾರ ಸ್ವಾಮೀಜಿ 7ನೇ ಪುಣ್ಯ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಸಿದ್ಧಲಿಂಗ ಸ್ವಾಮೀಜಿ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಥ್, ಕೇಂದ್ರ ಸಚಿವ ವಿ. ಸೋಮಣ್ಣ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಭಾಗವಹಿಸಿದ್ದರು.

4 ದಿನ ಬ್ಯಾಂಕ್ ಇಲ್ಲ



ದೆಹಲಿ: ವಾರದಲ್ಲಿ 5 ದಿನ ಕೆಲಸ ನಿಗದಿಪಡಿಸಬೇಕೆಂದು ಆಗ್ರಹಿಸಿ ಬ್ಯಾಂಕ್ ಸಿಬ್ಬಂದಿ ಜ.27ರಂದು ರಾಷ್ಟ್ರಮಟ್ಟದಲ್ಲಿ ಮುಷ್ಕರ ನಡೆಸಲು ಮುಂದಾಗಿದ್ದಾರೆ. ಈ ಕಾರಣದಿಂದಾಗಿ ಜ.24ರಿಂದ ನಾಲ್ಕು ದಿನಗಳ ಕಾಲ ಬ್ಯಾಂಕ್ ಬಂದ್ ಆಗಿರಲಿವೆ. ವಾರಕ್ಕೆ 2 ದಿನ ರಜೆ ಹಾಗೂ 5 ದಿನ ಕೆಲಸ ನಿಗದಿಪಡಿಸಬೇಕೆಂದು ಆಗ್ರಹಿಸಿ ಬ್ಯಾಂಕ್ ಸಿಬ್ಬಂದಿ ಜ.27ರಂದು ರಾಷ್ಟ್ರಮಟ್ಟದಲ್ಲಿ ಮುಷ್ಕರ ನಡೆಸಲು ಮುಂದಾಗಿದ್ದಾರೆ. ಈ ಮುಷ್ಕರದಿಂದಾಗಿ ಒಟ್ಟು ನಾಲ್ಕು ದಿನಗಳ ಕಾಲ ಬ್ಯಾಂಕ್ ಬಂದ್ ಆಗಿರಲಿವೆ. ಜನವರಿ 24 (ನಾಲ್ಕನೇ ಶನಿವಾರ), ಜ.25 (ಭಾನುವಾರ), ಜ.26 (ಗಣರಾಜ್ಯೋತ್ಸವ ಸರಕಾರಿ ರಜೆ) ಹಾಗೂ ಜ.27ರಂದು ಬ್ಯಾಂಕ್ ಮುಷ್ಕರ ಇರಲಿದೆ

ಗಣರಾಜ್ಯೋತ್ಸವ ದಿನ ಖಲಿಸ್ತಾನ್ ಉಗ್ರರ ಜತೆ ದಾಳಿಗೆ ಪಾಕ್ ಸಂಚು

ಉಗ್ರರ ಬೆದರಿಕೆ: ದೇಶಾದ್ಯಂತ ಕಟ್ಟೆಚ್ಚರ

ಹೊಸದಿಲ್ಲಿ: ಗಣರಾಜ್ಯೋತ್ಸವದಂದು ಅಥವಾ ಅದಕ್ಕೂ ಮೊದಲು ಸಂಘಟಿತ ಭಯೋತ್ಪಾದಕ ದಾಳಿ ನಡೆಯುವ ಸಾಧ್ಯತೆ ಬಗ್ಗೆ ಗುಪ್ತಚರ ಇಲಾಖೆ ಎಚ್ಚರಿಕೆ ನೀಡಿರುವ ಹಿನ್ನೆಲೆಯಲ್ಲಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಭಯೋತ್ಪಾದಕರು ಅಯೋಧ್ಯೆಯ ರಾಮ ಮಂದಿರ ಮತ್ತು ಜಮ್ಮುವಿನ ರಘುನಾಥ ದೇವಾಲಯ ಹಾಗೂ ದೇಶದ ಇತರ ದೇವಾಲಯಗಳು ಮತ್ತು ನಗರಗಳನ್ನು ಗುರಿಯಾಗಿಸಬಹುದು ಎಂದು ಗುಪ್ತಚರ ಇಲಾಖೆ ಎಚ್ಚರಿಕೆ ನೀಡಿದೆ. ಈ ಹಿನ್ನೆಲೆಯಲ್ಲಿ ರಾಮ ಮಂದಿರವೂ ಸೇರಿದಂತೆ ಪ್ರಮುಖ ಸ್ಥಳಗಳಿಗೆ ಭದ್ರತೆ ಹೆಚ್ಚಿಸಲಾಗಿದೆ. ಭದ್ರತಾ ಪಡೆಗಳನ್ನು ಹೈ ಅಲರ್ಟ್ ಸ್ಥಿತಿಯಲ್ಲಿ ಇರಿಸಲಾಗಿದೆ.

ಪಾಕಿಸ್ತಾನದ ಮಿಲಿಟರಿ ಗುಪ್ತಚರ ಸಂಸ್ಥೆಯಾದ ಇಂಟರ್ ಸರ್ವೀಸಸ್ ಇಂಟೆಲಿಜೆನ್ಸ್ (ಐಎಸ್‌ಐ), ಜೈಶೆ ಮೊಹಮ್ಮದ್ ಮತ್ತು ಪಂಜಾಬ್ ಮೂಲದ ದರೋಡೆಕೋರರ ಸಹಾಯದಿಂದ ಈ ದಾಳಿಯನ್ನು ಯೋಜಿಸುತ್ತಿದೆ ಎಂದು ಗುಪ್ತಚರ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕಳೆದ ನವೆಂಬರ್ 15ರಂದು ದೆಹಲಿಯ ಕೆಂಪು ಕೋಟೆ ಕಾರು ಬಾಂಬ್ ಸ್ಫೋಟ ಹೊಣೆಯನ್ನು ಜೈಶೆ ಮೊಹಮ್ಮದ್ ಸಂಘಟನೆ ಹೊತ್ತುಕೊಂಡಿತ್ತು.

ದೆಹಲಿಯಲ್ಲಿ ಜ.26ರಂದು ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅಲ್ಲದೆ ಈ ಬಾರಿಯ ಗಣರಾಜ್ಯೋತ್ಸವ ಅತಿಥಿಗಳಾಗಿರುವ ಯುರೋಪಿಯನ್ ಯೂನಿಯನ್ ನಾಯಕರು ಭಾಗವಹಿಸಲಿದ್ದಾರೆ.

ಗುಪ್ತಚರ ಸಂಸ್ಥೆಗಳ ವರದಿ ಹಿನ್ನೆಲೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ವಿಶೇಷವಾಗಿ ಬಸ್ ಮತ್ತು ರೈಲು ನಿಲ್ದಾಣಗಳ ಪ್ರವೇಶ/ನಿರ್ಗಮನ ಸ್ಥಳಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಪೊಲೀಸರಿಗೆ ಬೇಕಾಗಿರುವ ವ್ಯಕ್ತಿಗಳ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ. ಗಣರಾಜ್ಯೋತ್ಸವದ ಪೂರ್ವಸಿದ್ಧತಾ ಕಾರ್ಯದಲ್ಲಿ ಪ್ರತಿ ವರ್ಷದ ಶಿಷ್ಟಾಚಾರದಂತೆ, ಭದ್ರತಾ ಪಡೆಗಳು ಈಗಾಗಲೇ ಹೆಚ್ಚಿನ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿವೆ. ಖಲಿಸ್ತಾನಿ ಭಯೋತ್ಪಾದಕ ಸಂಘಟನೆಗಳ ದಾಳಿಯ ಬಗ್ಗೆ ಗುಪ್ತಚರ ಎಚ್ಚರಿಕೆ ನೀಡಿದ ನಂತರ, ಭದ್ರತಾ ಮೇಲ್ವಿಚಾರಣೆಯನ್ನು ಮತ್ತಷ್ಟು ಹೆಚ್ಚಿಸಲಾಗಿದೆ.

ಲಷ್ಕರೆ ತಯ್ಬಾ ಕುಮ್ಮಕ್ಕು

ಕಾಶ್ಮೀರ ಮೂಲದ ರೆಸಿಸ್ಟೆನ್ಸ್ ಫ್ರಂಟ್‌ಗೆ ಸಂಬಂಧಿಸಿದ ಭಯೋತ್ಪಾದಕ ಘಟಕವಾದ 'ಫಾಲ್ಕನ್ ಸ್ಕ್ವಾಡ್' ಗಣರಾಜ್ಯೋತ್ಸವ ದಿನ ದೆಹಲಿಯಲ್ಲಿ ಉಗ್ರ ದಾಳಿಗಳನ್ನು ನಡೆಸುವ ಕುರಿತು ಪರೋಕ್ಷ ಎಚ್ಚರಿಕೆ ನೀಡಿತ್ತು. ಪಾಕಿಸ್ತಾನದ ಉಗ್ರ ಸಂಘಟನೆಯಾಗಿರುವ ಲಷ್ಕರೆ ತಯ್ಬಾದ ಹಿರಿಯ ಕಮಾಂಡರ್ ಅಬು ಮೂಸಾ ಕಳೆದ ವಾರ, ಜಮ್ಮು ಮತ್ತು ಕಾಶ್ಮೀರದಲ್ಲಿ ಹಿಂಸಾಚಾರಕ್ಕೆ ತನ್ನ ಬದ್ಧತೆಯನ್ನು ಪುನರುಚ್ಚರಿಸಿದ್ದು ಕಾಶ್ಮೀರಿ ಹಿಂದೂ ಸಮುದಾಯದ ವಿರುದ್ಧ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ್ದಾನೆ.

ವಿಬಿ ಜಿ ರಾಮ್‌ಜಿ ಸಮರ್ಥನೆಗೆ ಕೇಂದ್ರ ಸಚಿವರ ಸಾಥ್

ಬಿಜೆಪಿ ಶಾಸಕರಿಗೆ ಚೌಹಾಣ್ ಪಾಠ

ಬೆಂಗಳೂರು: ವಿಧಾನಮಂಡಲದ ಉಭಯ ಸದನದಲ್ಲಿ ಕೈಗೊಳ್ಳಬೇಕಾದ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲು ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಮುಂದಾಳತ್ವದಲ್ಲಿ ಗುರುವಾರ ಸಂಜೆ ನಡೆಯಲಿದ್ದು ಶಾಸಕರು, ವಿಧಾನಪರಿಷತ್ ಸದಸ್ಯರು ಕಡ್ಡಾಯವಾಗಿ ಹಾಜರಿರಲು ಸೂಚಿಸಲಾಗಿದೆ.

ಶಾಸಕಾಂಗ ಸಭೆಯಲ್ಲಿ ಮುಖ್ಯವಾಗಿ ಕಾಯ್ದೆ ತಿದ್ದುಪಡಿಯನ್ನು ಸದನದಲ್ಲಿ ಹೇಗೆ ಸಮರ್ಥನೆ ಮಾಡಿಕೊಳ್ಳಬೇಕು? ಪ್ರತಿಪಕ್ಷಗಳ ಆರೋಪಕ್ಕೆ ಪ್ರತ್ಯುತ್ತರ ನೀಡುವ ಕುರಿತು ಶಿವರಾಜ್ ಸಿಂಗ್ ಚವ್ಹಾಣ್ ಶಾಸಕರಿಗೆ ಮತ್ತು ವಿಧಾನಪರಿಷತ್ ಸದಸ್ಯರಿಗೆ ಸಲಹೆ ನೀಡಲಿದ್ದಾರೆ. ಮಾಜಿ ಪ್ರಧಾನಿ ದಿ.ಮನಮೋಹನ್ ಸಿಂಗ್ ಅವರ ನೇತೃತ್ವದಲ್ಲಿ ಜಾರಿಗೆ ತಂದಿದ್ದ ನರೇಗಾ ಯೋಜನೆಯಲ್ಲಿ ಯಾವ ರೀತಿ ದುರುಪಯೋಗವಾಗಿತ್ತು. ಎಷ್ಟು ಅಕ್ರಮಗಳು ನಡೆದಿತ್ತು? ಯಾವ ಉದ್ದೇಶಕ್ಕಾಗಿ ತಿದ್ದುಪಡಿ ಮಾಡಲಾಗಿತ್ತು ಎಂಬುದರ ಬಗ್ಗೆ ಸದನದಲ್ಲಿ ಸವಿಸ್ತಾರವಾಗಿ ವಿವರಿಸಬೇಕೆಂದು ಸೂಚನೆ ನೀಡಲಿದ್ದಾರೆ.

ವಿಬಿ ಜಿ ರಾಮ್ ಜಿ ಯೋಜನೆಯಲ್ಲಿ ತನ್ನ ಪಾಲಿನ ಅನುದಾನ ನೀಡಬೇಕಲ್ಲ ಎಂಬ ಚಿಂತೆ ಕಾಂಗ್ರೆಸ್ ಸರಕಾರಕ್ಕೆ ಕಾಡುತ್ತಿದೆ. ಆದ್ದರಿಂದಲೇ ಈ ಯೋಜನೆ ವಿರೋಧ ಮಾಡಲಾಗುತ್ತಿದೆ. ಇದಕ್ಕೆ ತಕ್ಕ ಉತ್ತರ ನೀಡಬೇಕೆಂದು ಸೂಚಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರಕ್ಕೆ 18 ವರ್ಷದಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಾದ ದೋಷಗಳನ್ನು ಸರಿ ಮಾಡಲು ಹಾಗೂ ಭ್ರಷ್ಟಾಚಾರ ತಡೆಗಟ್ಟಲು ವಿಬಿ ಜಿ ರಾಮ್ ಜಿ ಯೋಜನೆ ಜಾರಿ ಮಾಡಿದೆ. ವಿಕಸಿತ ಭಾರತ ಹೆಸರಿನ ಬಗ್ಗೆ ಕಾಂಗ್ರೆಸ್ ಆಕ್ಷೇಪ ಮಾಡುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಬಡವರಿಗೆ ಪಾರದರ್ಶಕವಾಗಿ ಉದ್ಯೋಗ ಖಾತರಿ ನೀಡಲು ಈ ಯೋಜನೆ ತರಲಾಗಿದೆ. ಆದರೆ ತಾವು ನಿರುದ್ಯೋಗಿಗಳಾಗುತ್ತೇವೆ ಎಂಬ ಭಯ ಕಾಂಗ್ರೆಸಿಗರಿಗಿದೆ. ವೋಟ್ ಚೋರಿ ಎಂದು ಹೇಳುವ ಇವರು ಕೂಲಿ ಚೋರಿ ಮಾಡುತ್ತಿದ್ದರು. ಜೆಸಿಬಿ ಮೊದಲಾದ ಯಂತ್ರ ಬಳಸಿ ಕೆಲಸ ಮಾಡಿಸುತ್ತಿದ್ದರು. ಸತ್ತವರ ಹೆಸರಲ್ಲಿ ಹಣ ಬಿಡುಗಡೆಯಾಗುತ್ತಿತ್ತು. ಇದರಲ್ಲಿ ಕಾಂಗ್ರೆಸ್ ಕಾರ್ಯಕರ್ತರೇ ಇರುತ್ತಿದ್ದರು ಎಂದು ದಾಖಲೆಗಳ ಸಮೇತ ತಿರುಗೇಟು ನೀಡಲು ಸೂಚನೆ ನೀಡಲಿದ್ದಾರೆ.

ಬಯೋಮೆಟ್ರಿಕ್ ಹಾಜರಾತಿ ಇರುವುದರಿಂದ ನಕಲಿ ಹೆಸರು ಸೇರಿಸಲು ಸಾಧ್ಯವಿಲ್ಲ. ನಕಲಿ ಜಾಬ್‌ಕಾರ್ಡ್‌ಗಳು ರದ್ದಾಗಲಿದೆ. ಆಡಳಿತಾತಕ ವೆಚ್ಚವನ್ನು ಕೇಂದ್ರ ಸರಕಾರ ಶೇ.9ಕ್ಕೆ ಏರಿಸಿದೆ. ವೇತನ ಪಾವತಿಗೂ ಕಾಲಮಿತಿ ನಿಗದಿಪಡಿಸಲಾಗಿದೆ. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಎರಡೂವರೆ ಲಕ್ಷ ಕೋಟಿ ರೂ. ನೀಡಿದ್ದರೆ, ಪ್ರಧಾನಿ ಮೋದಿಯವರ ಅವಧಿಯಲ್ಲಿ 8 ಲಕ್ಷ ಕೋಟಿ ರು. ಬಂದಿದೆ. ರಾಜ್ಯ ಸರಕಾರ ನೀಡುವ ಪಾಲು ಕೂಡ ಉದ್ಯೋಗ ಮಾಡುವ ಬಡವರಿಗೆ ತಲುಪಲಿದೆ. ರಾಜ್ಯ ಸರಕಾರಕ್ಕೆ ಕೇಂದ್ರದಿಂದ 17,000 ಕೋಟಿ ರು. ಬರಲಿದೆ. ಕೇಂದ್ರ ಮತ್ತು ರಾಜ್ಯದ ಪಾಲು ಸೇರಿ ಒಟ್ಟು 27,000 ಕೋಟಿ ರೂ. ಸಿಗಲಿದೆ. ತಾವು 10,000 ಕೋಟಿ ರೂ. ಕೊಡಬೇಕಿದೆ. ಹಿಂದೆ 100 ದಿನಗಳಿದ್ದರೆ, ಈಗ 125 ದಿನಗಳಿವೆ. ರೈತರಿಗೆ ಕೃಷಿ ಕರ್ಮಿಕರು ಸಿಗಲಿ ಎಂಬ ಕಾರಣಕ್ಕೆ 60 ದಿನಗಳ ಅಂತರ ನೀಡಲಾಗಿದೆ. ಇದರಿಂದ ಕಾಂಗ್ರೆಸ್ ಕಾರ್ಯಕರ್ತರಿಗೆ ಗುತ್ತಿಗೆ ಪಡೆಯಲು ಅಥವಾ ಅಕ್ರಮ ಮಾಡಲು ಸಾಧ್ಯವಿಲ್ಲ. ಹೊಸ ಯೋಜನೆಯಿಂದ ನಿಜವಾದ ಫಲಾನುಭವಿಗಳಿಗೆ ಲಾಭ ದೊರೆಯಲಿದೆ ಎಂಬ ಬಗ್ಗೆ ಸಚಿವರು ಮಾಹಿತಿ ನೀಡಲಿದ್ದಾರೆ.

> ರಾಷ್ಟ್ರೀಯ ಮುಖಂಡ ಶಿವರಾಜ್ ಚೌಹಾಣ್ ಅವರು ಗುರುವಾರ ಬರಲಿದ್ದಾರೆ. ಎರಡೂ ಸದನಗಳ ಸದಸ್ಯರ ಜೊತೆ ಚರ್ಚೆ ಮಾಡಲಿದ್ದಾರೆ. ಎನ್‌ಡಿಎ ಸಹಪಕ್ಷಗಳಾದ ನಮ್ಮ ಪಕ್ಷ ಮತ್ತು ಜೆಡಿಎಸ್ ಸದಸ್ಯರು, ಮುಖಂಡರ ಜೊತೆ ಚರ್ಚೆ ಮಾಡುತ್ತಾರೆ.
> -ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ವಿಪಕ್ಷ ನಾಯಕ

ಭಾರತೀಯ ಮೂಲದ ಗಗನಯಾತ್ರಿಯ ಅಪೂರ್ವ ಬಾಹ್ಯಾಕಾಶ ಪಯಣಕ್ಕೆ ತೆರೆ

27 ವರ್ಷಗಳ ನಾಸಾ ಯಾನಕ್ಕೆ ಸುನಿತಾ ವಿದಾಯ

ಕೇಪ್ ಕೆನವೆರಲ್: ಭಾರತೀಯ ಮೂಲದ ಅಮೆರಿಕನ್ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅಮೆರಿಕ ಬಾಹ್ಯಾಕಾಶ ಸಂಸ್ಥೆ (ನಾಸಾ)ಯ 27 ವರ್ಷಗಳ ಸುದೀರ್ಘ ಸೇವೆಯಿಂದ ನಿವೃತ್ತರಾಗಿದ್ದಾರೆ. ನಾಸಾ ಈ ಸುದ್ದಿಯನ್ನು ಅಧಿಕೃತವಾಗಿ ಪ್ರಕಟಿಸಿದ್ದು, ಸುನಿತಾ ಅವರ ನಿವೃತ್ತಿ ಡಿಸೆಂಬರ್ ಅಂತ್ಯದಲ್ಲಿ ಜಾರಿಗೆ ಬಂದಿದೆ ಎಂದು ಹೇಳಿದೆ.

ಅಮೆರಿಕ ನೌಕಾಪಡೆಯ ಮಾಜಿ ಕ್ಯಾಪ್ಟನ್ ವಿಲಿಯಮ್ಸ್ ಅವರಿಗೆ ಈಗ 60 ವರ್ಷ. ಬಾಹ್ಯಾಕಾಶ ಸಂಶೋಧನೆಯ ಭಾಗವಾಗಿ ನಾಸಾದಲ್ಲಿ 27 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ ಹೆಗ್ಗಳಿಕೆ ಇವರದ್ದು.

27 ವರ್ಷಗಳಲ್ಲಿ 3 ಬಾಹ್ಯಾಕಾಶ ಯಾತ್ರೆಗಳು

ನಾಸಾ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಡಿಸೆಂಬರ್ 9, 2006 ರಂದು ಎಸ್‌ಟಿಎಸ್ -116 ಸಿಬ್ಬಂದಿಯೊಂದಿಗೆ ಡಿಸ್ಕವರಿ ಬಾಹ್ಯಾಕಾಶ ನೌಕೆಯಲ್ಲಿ ತಮ್ಮ ಮೊದಲ ಬಾಹ್ಯಾಕಾಶ ಹಾರಾಟ ನಡೆಸಿದ್ದರು. ಎಕ್ಸ್‌ಪೆಡಿಶನ್ 14/15 ರ ಸದಸ್ಯರಾಗಿ, ವಿಲಿಯಮ್ಸ್ ಫ್ಲೈಟ್ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿದ್ದರು. ಒಟ್ಟು 29 ಗಂಟೆ 17 ನಿಮಿಷಗಳ ಕಾಲ ನಾಲ್ಕು ಬಾಹ್ಯಾಕಾಶ ನಡಿಗೆಗಳನ್ನು ಮಾಡುವ ಮೂಲಕ ಆಗ ವಿಶ್ವದಾಖಲೆಯನ್ನು ಬರೆದಿದ್ದರು.

ಆರು ವರ್ಷಗಳ ಬಳಿಕ ನಡೆದ ಅವರ ಎರಡನೇ ಮಿಷನ್ 2012 ಜುಲೈ 14ರಂದು ಆರಂಭವಾಯಿತು. ಈ ವೇಳೆ ಸುನಿತಾ ವಿಲಿಯಮ್ಸ್ ಅವರು ಕಜಕಿಸ್ತಾನದಲ್ಲಿನ ಬೈಕೋನೂರ್ ಕಾಸ್ಮೋಡ್ರೋಮ್‌ನಿಂದ ಎಕ್ಸ್‌ಪಿಡಿಷನ್ 32/33 ತಂಡದ ಸದಸ್ಯೆಯಾಗಿ 127 ದಿನಗಳ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಈ ಮಿಷನ್ ವೇಳೆ ವಿಲಿಯಮ್ಸ್ ಅವರು ಮೂರು ಬಾರಿ ಅಂತರಿಕ್ಷ ನಡಿಗೆ ನಡೆಸಿ, ಅಂತರಿಕ್ಷ ನಿಲ್ದಾಣದ ರೇಡಿಯೇಟರ್‌ನಲ್ಲಿ ಉಂಟಾಗಿದ್ದ ಅಮೋನಿಯಾ ಸೋರಿಕೆಯನ್ನು ದುರಸ್ತಿ ಮಾಡಿದರು. ಜೊತೆಗೆ, ನಿಲ್ದಾಣದ ಸೌರ ಫಲಕಗಳಿಂದ ಅದರ ವ್ಯವಸ್ಥೆಗಳಿಗೆ ವಿದ್ಯುತ್ ಪೂರೈಸುವ ಘಟಕವೊಂದನ್ನು ಬದಲಾಯಿಸುವ ಕಾರ್ಯವನ್ನೂ ಯಶಸ್ವಿಯಾಗಿ ನೆರವೇರಿಸಿದ್ದರು.

ಅತ್ಯಂತ ದೀರ್ಘವಾದ ಅವರ ಮೂರನೇ ಮಿಷನ್ 2024ರ ಜೂನ್‌ನಲ್ಲಿ ಆರಂಭವಾಯಿತು. ನಾಸಾದ ಬೋಯಿಂಗ್ ಕ್ರ್ಯೂ ಫ್ಲೈಟ್ ಟೆಸ್ಟ್ ಮಿಷನ್‌ನ ಭಾಗವಾಗಿ ವಿಲಿಯಮ್ಸ್ ಮತ್ತು ವಿಲ್ಮೋರ್ ಸ್ಟಾರ್‌ಲೈನರ್ ಕ್ಯಾಪ್ಸುಲ್‌ನಲ್ಲಿ ಬಾಹ್ಯಾಕಾಶಕ್ಕೆ ಪಯಣ ಬೆಳೆಸಿದ್ದರು. ಆದರೆ ಗಗನ ನೌಕೆಯಲ್ಲಿ ದೋಷ ಕಂಡು ಬಂದ ಹಿನ್ನೆಲೆಯಲ್ಲಿ 286 ದಿನ ಬಾಹ್ಯಾಕಾಶದಲ್ಲಿಯೇ ಕಳೆದಿದ್ದರು. ಈ ವೇಳೆ ಒಟ್ಟು 62 ಗಂಟೆ 6 ನಿಮಿಷಗಳ ಕಾಲ ಬಾಹ್ಯಾಕಾಶ ನಡಿಗೆ ಪೂರೈಸಿ ದಾಖಲೆ ಬರೆದಿದ್ದರು. ವಿಲಿಯಮ್ಸ್ ಮತ್ತು ವಿಲ್ಮೋರ್ ತಮ್ಮ ಕಾರ್ಯಾಚರಣೆಯ ಸಮಯದಲ್ಲಿ 12,13,47,491 ಮೈಲುಗಳನ್ನು ಪ್ರಯಾಣಿಸಿ ದ್ದರು. ಇಬ್ಬರು ಗಗನಯಾತ್ರಿಗಳು ಆತಂಕದ ಕ್ಷಣಗಳನ್ನು ಸಮರ್ಥವಾಗಿ ಎದುರಿಸಿ ಮಾರ್ಚ್ 2025 ರಲ್ಲಿ ಸುರಕ್ಷಿತವಾಗಿ ಭೂಮಿಗೆ ಮರಳಿದ್ದರು.

ನಾಸಾ ಶುಭಾಶಯ: ಸುನಿತಾ ಅವರ ಸಾಧನೆಗಳನ್ನು ಶ್ಲಾಘಿಸಿರುವ ನಾಸಾದ ಆಡಳಿತಾಧಿಕಾರಿ ಜಾರೆಡ್ ಐಸಾಕ್‌ಮ್ಯಾನ್, ಸುನೀತಾ ಅವರ ಕೊಡುಗೆಗಳು ಮುಂದಿನ ಪೀಳಿಗೆಗೆ ಪ್ರೇರಣೆಯಾಗಿವೆ. ನಾಸಾ ಮತ್ತು ನಮ್ಮ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದ ಅವರಿಗೆ ಧನ್ಯವಾದಗಳು ಎಂದಿದ್ದಾರೆ. ಬೋಯಿಂಗ್‌ನ ಮುಂದಿನ ಸ್ಟಾರ್‌ಲೈನರ್ ಕಾರ್ಯಾಚರಣೆಯು ಗಗನಯಾನಿ ಬದಲು ಸರಕುಗಳನ್ನು ಬಾಹ್ಯಾಕಾಶ ನಿಲ್ದಾಣಕ್ಕೆ ಸಾಗಿಸುತ್ತದೆ. ಯಾರನ್ನಾದರೂ ವಿಮಾನದಲ್ಲಿ ಸೇರಿಸುವ ಮೊದಲು ಕ್ಯಾಪ್ಸುಲ್‌ನ ಎಲ್ಲಾ ಥ್ರಸ್ಟರ್ ಮತ್ತು ಇತರ ಸಮಸ್ಯೆಗಳನ್ನು ಪರಿಹರಿಸಲಾಗಿದೆಯೆ ಎಂದು ಖಚಿತಪಡಿಸಿ ಕೊಳ್ಳಲು ನಾಸಾ ಬಯಸುತ್ತದೆ. ಈ ವರ್ಷದ ಕೊನೆಯಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆಯಲಿದೆ ಎಂದು ಮೂಲಗಳು ತಿಳಿಸಿದೆ.

ಸುನಿತಾ ಸಾಧನೆ

- 27 ವರ್ಷಗಳಲ್ಲಿ 3 ಬಾಹ್ಯಾಕಾಶ ಯಾತ್ರೆಗಳು
- 608 ದಿನಗಳ ಕಾಲ ಬಾಹ್ಯಾಕಾಶದಲ್ಲಿ ವಾಸ
- 62 ಗಂಟೆ 6 ನಿಮಿಷಗಳ ಬಾಹ್ಯಾಕಾಶ ನಡಿಗೆ ದಾಖಲೆ
- ನಾಸಾ ಪರ ಬಾಹ್ಯಾಕಾಶ ಯಾನ ಕೈಗೊಂಡ 2ನೇ ಭಾರತೀಯ ಮಹಿಳೆ

ಭಾರತದ ಹೆಮ್ಮೆ

ಸುನಿತಾ ವಿಲಿಯಮ್ಸ್ ತಂದೆ ಗುಜರಾತ್ ಮೂಲದವರು. ಮೆಹ್ಸಾನಾ ಜಿಲ್ಲೆಯ ಜುಲಾಸನ್‌ನಲ್ಲಿ ಜನಿಸಿದ ಅವರ ತಂದೆ ದೀಪಕ್ ಪಾಂಡ್ಯ ನರಶಸ್ತ್ರಚಿಕಿತ್ಸಕರಾಗಿದ್ದರು. ಅಮೆರಿಕಕ್ಕೆ ವಲಸೆ ಹೋದ ಬಳಿಕ ಸ್ಲೋವೇನಿಯಾ ಮೂಲದ ಉರ್ಸುಲಿನ್ ಬೋನಿ ಅವರನ್ನು ವಿವಾಹವಾಗಿದ್ದರು. 1965ರ ಸೆಪ್ಟೆಂಬರ್ 19ರಂದು ಓಹಿಯೋದ ಯೂಕ್ಲಿಡ್‌ನಲ್ಲಿ ಜನಿಸಿದ ಸುನೀತಾ, ಮ್ಯಾಸಚೂಸೆಟ್ಸ್‌ನ ನೀಧಮ್ ಅನ್ನು ತಮ್ಮ ತವರು ಎಂದು ಪರಿಗಣಿಸುತ್ತಾರೆ. ವಿಲಿಯಮ್ಸ್ ಮತ್ತು ಅವರ ಪತಿ ಮೈಕೆಲ್ ತಮ್ಮ ನಾಯಿಗಳೊಂದಿಗೆ ಸುತ್ತಾಡುವುದು, ವ್ಯಾಯಾಮ ಮಾಡುವುದು, ಮನೆ, ಕಾರುಗಳು-ವಿಮಾನಗಳಲ್ಲಿ ಕೆಲಸ ಮಾಡುವುದು, ಪಾದಯಾತ್ರೆ ಮತ್ತು ಕ್ಯಾಂಪಿಂಗ್ ಮಾಡುವುದನ್ನು ಆನಂದಿಸುತ್ತಾರೆ.

ರಾಜ್ಯದಲ್ಲಿ ಜೈವಿಕ ಇಂಧನ ವಲಯ ಅಭಿವೃದ್ಧಿ: ಸಚಿವ ಪ್ರಿಯಾಂಕ್ ಖರ್ಗೆ

ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಸದಸ್ಯ ಮತ್ತು ಪ್ರಮುಖ ಪಾಲುದಾರರೊಂದಿಗೆ ಬುಧವಾರ ಸಭೆ ಆಯೋಜಿಸಲಾಗಿತ್ತು. ಈ ವೇಳೆ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್ ನಾಯಕ್ ಸೇರಿ ಮತ್ತಿರರು.

ಬೆಂಗಳೂರು: ಗ್ರಾಮೀಣ ಭಾಗಗಳ ಪರ್ಯಾಯ ಇಂಧನಕ್ಕಾಗಿ ಜೈವಿಕ ಇಂಧನ ನೀತಿ ಶೀಘ್ರದಲ್ಲೆ ಜಾರಿ ತರಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಈ ಕುರಿತು ಬುಧವಾರ ಆಯೋಜಿಸಿದ್ದ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಸದಸ್ಯ ಮತ್ತು ಪ್ರಮುಖ ಪಾಲುದಾರರೊಂದಿಗೆ ಸಭೆಯಲ್ಲಿ ಮಾತನಾಡಿದ ಅವರು, ಜೈವಿಕ ಇಂಧನಗಳು, ತ್ಯಾಜ್ಯದಿಂದ ಶಕ್ತಿ ಉತ್ಪಾದನೆ, ಹಸಿರು ರಾಸಾಯನಿಕಗಳ ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ನವೋದ್ಯಮ ನೇತೃತ್ವದ ಪರಿಹಾರಗಳನ್ನು ಬೆಂಬಲಿಸಲು ಜೈವಿಕ ಇಂಧನ ಇನ್ನೋವೇಶನ್ ಲ್ಯಾಬ್‌ಗಳನ್ನು ಸ್ಥಾಪಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕರ್ನಾಟಕದ ಮುಂಬರುವ ಜೈವಿಕ ಇಂಧನ ನೀತಿಯನ್ನು ಸಹ ಪರಿಶೀಲಿಸಿದ್ದು, ಸರಕಾರ ಜೈವಿಕ ಇಂಧನ ನೀತಿಯನ್ನು ತರಲು ಬದ್ಧವಾಗಿದೆ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಪರ್ಯಾಯ ಇಂಧನ ಬಳಸಿಕೊಳ್ಳಲು ಅನುಕೂಲವಾಗಲಿದೆ ಎಂದರು.

ರಾಜ್ಯಾದ್ಯಂತ ಪ್ರಾದೇಶಿಕ ಜೈವಿಕ ಇಂಧನ ವಲಯಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ನಾವು ಚರ್ಚಿಸಿದ್ದೇವೆ. ಇದರಿಂದಾಗಿ ಪೂರೈಕೆ ಸರಪಳಿಗಳು, ಸಂಸ್ಕರಣಾ ಘಟಕಗಳು ಮತ್ತು ಅಂತಿಮ ಬಳಕೆದಾರರು ಸಹ-ಸ್ಥಳೀಯ ಮತ್ತು ಆರ್ಥಿಕವಾಗಿ ಪ್ರಯೋಜನ ಪಡೆಯುತ್ತಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಈ ವೇಳೆ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್ ನಾಯಕ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಇ-ಸ್ವತ್ತು ಸಮಸ್ಯೆ ಬಗೆಹರಿಸಿ: ಕೇಂದ್ರಕ್ಕೆ ಪತ್ರ

ಎನ್‌ಐಸಿ ತಂಡದ ವಿಫಲತೆಯಿಂದಾಗಿ ಇ-ಸ್ವತ್ತು ಮೇಲೆ ಪ್ರತಿಕೂಲ ಪರಿಣಾಮ ಮಧ್ಯ ಪ್ರವೇಶಿಸಲು ಸಚಿವ ಪ್ರಿಯಾಂಕ್ ಖರ್ಗೆ ಅವರು ಬುಧವಾರ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಪತ್ರ ಸಲ್ಲಿಸಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಜನರಿಗೆ ಸೌಲಭ್ಯ ನೀಡುವ ಸಲುವಾಗಿ ಅನುಷ್ಠಾನಗೊಳಿಸಿರುವ ಇ-ಸ್ವತ್ತು, ಕೇಂದ್ರ ಸರಕಾರ ಎನ್.ಐ.ಸಿ ತಂಡದ ವಿಫಲತೆಯಿಂದಾಗಿ ಪ್ರತಿಕೂಲ ಪರಿಣಾಮ ಬೀರಿದ್ದು, ಫಲಿತಾಂಶಗಳನ್ನು ಸಾಧಿಸಲಾಗುತ್ತಿಲ್ಲ. ರಾಜ್ಯದಲ್ಲಿ ಇ-ಸ್ವತ್ತು ಅರ್ಜಿ ಸಂಬಂಧದಲ್ಲಿ ಆಗಿರುವ ತೊಡಕುಗಳನ್ನು ನಿವಾರಿಸಲು ತಕ್ಷಣದ ಕ್ರಮ ಕೈಗೊಳ್ಳಬೇಕು, ಇ-ಸ್ವತ್ತು ಆಪ್ಟಿಮೈಸೇಶನ್ ಮತ್ತು ಸ್ಥಿರೀಕರಣವನ್ನು ಖಚಿತಪಡಿಸಿಕೊಳ್ಳಲು ಮಧ್ಯ ಪ್ರವೇಶ ಮಾಡಬೇಕೆಂದು ಸಚಿವ ಪ್ರಿಯಾಂಕ್ ಕೇಂದ್ರ ಸಚಿವರಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

...ನೂರಾರು ಖಾಸಗಿ ಬಸ್ ವಶಕ್ಕೆ

← ಮೊದಲಪುಟದಿಂದ

ಕಳೆದ ಐದಾರು ತಿಂಗಳಲ್ಲಿ 2 ಕೋಟಿಯಷ್ಟು ತೆರಿಗೆ ಹಣವನ್ನು ವಸೂಲಿ ಮಾಡಲಾಗಿದೆ. ದೀರ್ಘ ಕಾಲದಿಂದ ತೆರಿಗೆ ಕಟ್ಟದೆ ಕಾರ್ಯಾಚರಣೆ ಮಾಡುತ್ತಿದ್ದ ಬಸ್‌ಗಳನ್ನು ಸೀಜ್ ಮಾಡಲಾಗಿದೆ. ಜಪ್ತಿ ಮಾಡಿದ ಕೆಲ ಬಸ್‌ಗಳನ್ನು ಆರ್‌ಟಿಒ ಕಚೇರಿ, ಪೊಲೀಸ್ ಠಾಣೆಗಳ ಆವರಣದಲ್ಲಿ ಪಾರ್ಕ್ ಮಾಡಲಾಗಿದೆ. ಮುಟ್ಟುಗೋಲು ಹಾಕಿಕೊಂಡ ನೂರಾರು ವಾಹನಗಳನ್ನು ನಿಲ್ಲಿಸಲು ದೇವನಹಳ್ಳಿ ಸಮೀಪ ಇಲಾಖೆಯಿಂದ ಸೀಜರ್ ಯಾರ್ಡ್ ಎಂಬ ಪ್ರತ್ಯೇಕ ವ್ಯವಸ್ಥೆಯನ್ನೇ ಮಾಡಲಾಗಿದೆ. ವಶಪಡಿಸಿಕೊಂಡ ವಾಹನಗಳನ್ನು ನಿಲ್ಲಿಸಲು ಸಾರಿಗೆ ಇಲಾಖೆಗೆ ಜಾಗದ ಕೊರತೆ ಇತ್ತು. ಹೀಗಾಗಿ ಎರಡು ಸೀಜರ್ ಯಾರ್ಡ್ ಸ್ಥಳಗಳನ್ನು ಮಾಡಿಕೊಳ್ಳಲಾಗಿದೆ. ಇಲ್ಲಿ ನೂರಾರು ಬಸ್, ಇತರೆ ವಾಹನಗಳನ್ನು ನಿಲ್ಲಿಸಬಹುದು. ತೆರಿಗೆ ವಂಚನೆ ಮಾಡಿ ಕಾರ್ಯಾಚರಣೆ ನಡೆಸುತ್ತಿದ್ದ ವಾಹನಗಳ ಮಾಲೀಕರಿಗೆ ಸಾರಿಗೆ ಇಲಾಖೆ ಬಿಸಿ ಮುಟ್ಟಿಸಿದ್ದು, ಕೆಲ ಮಾಲೀಕರು ತೆರಿಗೆ ಪಾವತಿಸಲು ಮುಂದೆ ಬರುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯಪಾಲರ ಕೊಸರಾಟ

← ಮೊದಲಪುಟದಿಂದ

ಕರ್ನಾಟಕದಲಿ ಬಹುಪಾಲು ಸಮಯದಲ್ಲಿ ಜಂಟಿ ಅಧಿವೇಶನದಲ್ಲಿ ಸರಕಾರ ಸಿದ್ಧಪಡಿಸಿಕೊಟ್ಟ ಭಾಷಣವನ್ನು ಯಥಾವತ್ತಾಗಿ ಓದಿದ್ದಾರೆ. ಇದುವರೆಗೂ ಯಾವುದೇ ಸಂಘರ್ಷಕ್ಕೆ ರಾಜ್ಯಪಾಲರ ಭಾಷಣದ ಅಂಶಗಳು ಎಡೆ ಮಾಡಿಕೊಟ್ಟಿಲ್ಲ. ಆದರೆ ಈ ಬಾರಿ ವಿಬಿಜಿ ರಾಮ್ ಜಿ ಕಾಯಿದೆ ವಿರೋಧಿಸುವ ಅಂಶಗಳನ್ನು ಸೇರಿಸಿರುವುದು ವಿವಾದಕ್ಕೆ ಕಾರಣವಾಗಿದೆ. ಆದರೆ ಕಾನೂನಿನಲ್ಲಿ ರಾಜ್ಯಪಾಲರು ಸರಕಾರ ಸಿದ್ಧಪಡಿಸಿದ ಭಾಷಣವನ್ನು ಯಥಾವತ್ತಾಗಿ ಓದಬೇಕು ಎಂಬ ನಿಯಮ ವೇನೂ ಇಲ್ಲ. ಭಾಷಣದ ಯಾವ ಅಂಶವನ್ನು ಓದಬೇಕು, ಯಾವ ಅಂಶವನ್ನು ಓದಬಾರದು ಎಂಬುದು ರಾಜ್ಯಪಾಲರ ವಿವೇಚನೆಗೆ ಬಿಟ್ಟ ವಿಚಾರ. ಭಾಷಣವನ್ನು ಯಥಾವತ್ತಾಗಿ ಓದಬೇಕು ಎಂದು ರಾಜ್ಯ ಸರಕಾರ ಒತ್ತಡ ಹೇರುವಂತೆಯೂ ಇಲ್ಲ ಎನ್ನುವ ಮಾತನ್ನು ಲೋಕಭವನದ ಕಾನೂನು ತಜ್ಞರು ಹೇಳಿದ್ದರೆ, ಯಥಾವತ್ತಾಗಿ ಓದಬೇಕು ಎಂದು ಎಚ್.ಕೆ. ಪಾಟೀಲ್ ಅವರು ಆಗ್ರಹಿಸಿರುವುದು ಸರಕಾರ ಹಾಗೂ ಲೋಕಭವನದ ನಡುವೆ ತಿಕ್ಕಾಟಕ್ಕೆ ಕಾರಣವಾಗಿದೆ.

ಲೋಕಭವನದಲ್ಲಿ ಎಚ್‌ಕೆಪಿ ನೇತೃತ್ವದಲ್ಲಿ ಸಂಧಾನ: ಈ ನಡುವೆ ರಾಜ್ಯಪಾಲರು ಭಾಷಣಕ್ಕೆ ಆಗಮಿಸುವುದಿಲ್ಲ ಎನ್ನುವ ಸಂದೇಶ ಸಿಗುತ್ತಿದ್ದಂತೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಅವರು, ಲೋಕಭವನಕ್ಕೆ ತೆರಳಿ ಥಾವರ್ ಚಂದ್ ಗೆಹ್ಲೋಥ್ ಅವರೊಂದಿಗೆ ಚರ್ಚಿಸಿದರು. ಈ ವೇಳೆ ನರೇಗಾ ಹಾಗೂ ವಿಬಿ ರಾಮ್ ಜಿ ಕಾಯಿದೆಗೆ ಸಂಬಂಧಿಸಿದ ಅಂಶವನ್ನು ಓದಲು ಆಗುವುದಿಲ್ಲ ಎನ್ನುವುದನ್ನು ಸ್ಪಷ್ಟ ಮಾತಿನಲ್ಲಿ ಹೇಳಿದರು. ಆದ್ದರಿಂದ 11ನೇ ಪ್ಯಾರಾದಲ್ಲಿರುವ ಅಂಶವನ್ನು ಕೈಬಿಟ್ಟರೆ, ಭಾಷಣ ಮಾಡುವುದಾಗಿ ಸ್ಪಷ್ಟಪಡಿಸಿದ್ದಾರೆ ಎಂದು ತಿಳಿದುಬಂದಿದೆ. ಆದರೆ ಸರಕಾರ ಸಿದ್ಧಪಡಿಸಿರುವ ಯಾವುದೇ ಅಂಶವನ್ನು ಕೈಬಿಡಲು ಸಾಧ್ಯವಿಲ್ಲ. ಸರಕಾರ ಸಿದ್ಧಪಡಿಸಿರುವ ಭಾಷಣವನ್ನು ಮಾಡಲೇಬೇಕು. ಸರಕಾರದ ಸಾಧನೆಯನ್ನು ರಾಜ್ಯಪಾಲರೇ ತಿಳಿಸಬೇಕು ಎನ್ನುವ ಪಟ್ಟನ್ನು ಎಚ್‌ಕೆಪಿ ನಿಯೋಗ ಮುಂದಿಟ್ಟಿದೆ. ಈ ವೇಳೆ ಭಾಷಣ ಓದುವ ಬಗ್ಗೆ ಯಾವುದೇ ಸ್ಪಷ್ಟನೆ ನೀಡದಿದ್ದರೂ, 'ಭಾಗವಹಿಸುತ್ತೇನೆ' ಎಂದಷ್ಟೇ ಹೇಳಿ ಕಳುಹಿಸಿದ್ದಾರೆ ಎಂದು ತಿಳಿದುಬಂದಿದೆ.

ರಾಜ್ಯಪಾಲರು ಬಾರದಿದ್ದರೆ ಮುಂದೇನು?: ಈಗಾಗಲೇ ತಮಿಳುನಾಡು ಹಾಗೂ ಕೇರಳದಲ್ಲಿ ರಾಜ್ಯಪಾಲರು ಸರಕಾರದ ನಡುವಿನ ಕಿತ್ತಾಟವನ್ನು ಗಮನಿಸಿದ್ದ ರಾಜ್ಯಪಾಲರು ತಾವು ಭಾಗವಹಿಸುವುದಿಲ್ಲ ಎಂದಿದ್ದರು. ಸದ್ಯಕ್ಕೆ ಬರುವುದಾಗಿ ಹೇಳಿದ್ದರೂ, ಕೊನೆಕ್ಷಣದಲ್ಲಿ ಏನಾಗುತ್ತದೆ ಎನ್ನುವ ಸ್ಪಷ್ಟನೆ ಇಲ್ಲ. ಒಂದು ವೇಳೆ ಗೆಹ್ಲೋಥ್ ಅವರು ಭಾಷಣಕ್ಕೆ ಆಗಮಿಸದಿದ್ದರೆ ಮುಂದೇನು ಎನ್ನುವ ಪ್ರಶ್ನೆ ಅನೇಕರ ಮುಂದಿದೆ. ಆದರೆ ಕಾನೂನು ಪಂಡಿತರ ಪ್ರಕಾರ, ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡದೇ ಹೋದರೆ, ಉಭಯ ಸದನದ ಸಭಾಧ್ಯಕ್ಷರು 'ಟೇಬಲ್' ಮಾಡಿ ಬಳಿಕ ಅದರ ಆಧಾರದಲ್ಲಿ ಚರ್ಚೆಗೆ ಅವಕಾಶ ನೀಡಬಹುದು ಎಂದು ತಿಳಿದುಬಂದಿದೆ.

ಕೇರಳ, ತಮಿಳುನಾಡು ರಾಜ್ಯಪಾಲರ ರೀತಿ ನಮ್ಮ ರಾಜ್ಯಪಾಲರು ಮಾಡುವುದಿಲ್ಲ ಎಂಬ ವಿಶ್ವಾಸವಿದೆ. ಸರಕಾರ ಏನು ಬರೆದುಕೊಡುತ್ತದೆಯೋ ಅದನ್ನೇ ಓದಬೇಕು. ಸಂವಿಧಾನದ ವಿರುದ್ಧವಿದ್ದರೂ ಓದುವುದು ಅನಿವಾರ್ಯ. ಆದರೆ ರಾಜ್ಯ ಸರಕಾರವೂ, ರಾಜ್ಯಪಾಲರಿಗೆ ನೀಡುವ ಭಾಷಣ ಸಂವಿಧಾನಾತ್ಮಕವಾಗಿರುವ ವಿಚಾರಗಳನ್ನು ಭಾಷಣದ ಅಂಶದಲ್ಲಿರುವಂತೆ ನೋಡಿಕೊಳ್ಳಬೇಕಿದೆ. ಇದು ಸರಕಾರದ ಜವಾಬ್ದಾರಿ.
– ಬಸವರಾಜ ಹೊರಟ್ಟಿ ವಿಧಾನಪರಿಷತ್ ಸಭಾಪತಿ

ಬೆಳಗಾವಿ: ಕಾಳಸಂತೆಯಲ್ಲಿ ಡೀಸೆಲ್ ಮಾರಾಟ

ಬೆಳಗಾವಿ: ಗಲ್ಫ್ ದೇಶಗಳಿಂದ ರಾಜ್ಯಕ್ಕೆ ಗೋಲ್ಡ್‌ನಂತೆಯೇ ಡೀಸೆಲ್ ಸ್ಮಗ್ಲಿಂಗ್ ನಡೆಯುತ್ತಿರುವ ಭಾರೀ ಅಕ್ರಮ ಜಾಲ ಬೆಳಗಾವಿಯಲ್ಲಿ ಪತ್ತೆಯಾಗಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಕೋಟಿ ಕೋಟಿ ರು. ತೆರಿಗೆ ವಂಚನೆ ಮಾಡುತ್ತಿದ್ದ ಖದೀಮರ ದಂಧೆಯನ್ನು ಬೆಳಗಾವಿ ಮಾಳಮಾರುತಿ ಠಾಣೆ ಪೊಲೀಸರು ಮಿಂಚಿನ ಕಾರ್ಯಾಚರಣೆಯಲ್ಲಿ ಬಹಿರಂಗಪಡಿಸಿದ್ದಾರೆ. ಪೊಲೀಸರು ಸುಮಾರು 17 ಲಕ್ಷ ರು.ಮೌಲ್ಯದ 17 ಸಾವಿರ ಲೀಟರ್ ಡೀಸೆಲ್ ಹಾಗೂ ಟ್ಯಾಂಕರ್‌ನ್ನು ಜಪ್ತಿ ಮಾಡಿದ್ದಾರೆ.

ಮುಂಬೈನಿಂದ ಬೆಳಗಾವಿ ಮಾರ್ಗವಾಗಿ ಬೆಂಗಳೂರಿಗೆ ಟ್ಯಾಂಕರ್‌ನಲ್ಲಿ ಡೀಸೆಲ್ ಸಾಗಾಟ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಮಾಳಮಾರುತಿ ಠಾಣೆ ಇನ್ಸ್‌ಪೆಕ್ಟರ್ ಬಿ. ಆರ್. ಗಡ್ಡೇಕರ್ ನೇತೃತ್ವದ ಪೊಲೀಸ್ ತಂಡ ದಾಳಿ ನಡೆಸಿತು. ದಾಳಿಯ ವೇಳೆ ಯಾವುದೇ ದಾಖಲೆಗಳಿಲ್ಲದೇ ಪೆಟ್ರೋಲಿಯಂ ಉತ್ಪನ್ನಗಳನ್ನು ಸಾಗಿಸುತ್ತಿರುವುದು ಬೆಳಕಿಗೆ ಬಂದಿದೆ. ಸ್ಮಗ್ಲಿಂಗ್ ಜಾಲದಲ್ಲಿ ಮಹಾರಾಷ್ಟ್ರ ಹಾಗೂ ರಾಜಸ್ಥಾನದ ಖದೀಮರು ಶಾಮೀಲಾಗಿರುವ ಶಂಕೆ ವ್ಯಕ್ತವಾಗಿದೆ. ಖಾಸಗಿ ಶಿಪ್‌ಗಳ ಮೂಲಕ ಅಕ್ರಮವಾಗಿ ತೈಲ ತರಲಾಗುತ್ತಿದೆ ಎಂಬ ಅನುಮಾನವೂ ವ್ಯಕ್ತವಾಗಿದೆ. ಈ ತೈಲವನ್ನು ಕಾಳಸಂತೆಯಲ್ಲಿ ಅರ್ಧದರಕ್ಕೆ ಮಾರಾಟ ಮಾಡಿ, ಮಹಾರಾಷ್ಟ್ರ ಹಾಗೂ ಕರ್ನಾಟಕದ ವಿವಿಧ ಬಂಕ್‌ಗಳಿಗೆ ಪೂರೈಕೆ ಮಾಡಲಾಗುತ್ತಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಈ ಕುರಿತು ಬೆಳಗಾವಿ ಪೊಲೀಸ್ ಕಮಿಷನರ್ ಭೂಷಣ್ ಬೊರಸೆ ಮಾತನಾಡಿ, ತನಿಖೆ ಪ್ರಗತಿಯಲ್ಲಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಸತ್ಯಾಂಶಗಳು ಹೊರಬೀಳುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಕಾಶಿಪುರ ವೃತ್ತ, ಶಿವಮೊಗ್ಗ–577204

ಐ.ಎಫ್.ಟಿ. ಸಂ:39/2025–26 ದಿನಾಂಕ: 19.01.2026

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)– ಕೆಡಬ್ಲ್ಯೂ –1/3

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲ್ಯೂ–1/3 ರ ಅನ್ವಯ ತರೀಕೆರೆ/ಶಿವಮೊಗ್ಗ/ಸೊರಬ ಉಪವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ. 3.58 ಲಕ್ಷ ದಿಂದ ರೂ. 80.64 ಲಕ್ಷಗಳು.ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: http:/kppp.karnataka.gov.inನಲ್ಲಿ ದಿನಾಂಕ:20.01.2026 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ: 27.01.2026 17:00 ಘಂಟೆ. ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/25–26/164/01/1671

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

ಐ.ಎಫ್.ಟಿ.ಸಂಖ್ಯೆ: 32/2025–26 ದಿನಾಂಕ: 17.01.2026

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–1&3ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಜಿಲ್ಲೆಂಯು ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.80.62 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.9.51 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 27–01–2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/949/ಕೆಎಸ್‌ಎಂಸಿಎ/2025–26

ನಗರಸಭಾ ಕಾರ್ಯಾಲಯ
ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.
Website: www.gowribidanurtown.gov.in
Email: ka.gouribidanur.cmc@gmail.com

ಸಂಖ್ಯೆ: ನಸಗೌ/ಆಶಾ/ಟೆಂಡರ್/ಸಿಆರ್–05/2025–26 ದಿನಾಂಕ: 16.01.2026

ಟೆಂಡರ್ ಪ್ರಕಟಣೆ (ಎರಡನೇ ಕರೆ)

ಪೌರಾಯುಕ್ತರು, ನಗರಸಭೆ, ಗೌರಿಬಿದನೂರು ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭಾ ನಿಧಿಯಲ್ಲಿ ಮತ್ತು 2025–26ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಅನುಭವಿ ಸರ್ಕಾರೇತರ ಸಂಘ ಸಂಸ್ಥೆಗಳಿಂದ/ಕಂಪನಿಗಳಿಂದ/ ಏಜನ್ಸಿಗಳಿಂದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಈ ವೆಬ್‌ಸೈಟ್ **www.kppp.karnataka.gov.in** ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ **www.gouribidanurcity.gov.in** ನಲ್ಲಿ ಪರಿಶೀಲಿಸಬಹುದು. **(1)** ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 05.02.2026 ರ ಸಂಜೆ 5.00ಗಂಟೆಯವರೆಗೆ** **(2)** ಟೆಂಡರ್ ತೆರೆಯುವ **ದಿನಾಂಕ:06.02.2026 ರ ಸಂಜೆ 5.15 ಗಂಟೆಗೆ.**

ಕ್ರ ಸಂ	ಕಾಮಗಾರಿ	ಅಂದಾಜು ಮೊತ್ತ (ಲಕ್ಷಗಳಲ್ಲಿ)
	ನಗರಸಭಾ ನಿಧಿ	
1	ಗೌರಿಬಿದನೂರು ನಗರವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂತಾನಹರಣ ಚಿಕಿತ್ಸೆ ಮಾಡುವುದು	37.50
2	ಗೌರಿಬಿದನೂರು ನಗರಸಭೆಯ ಸ.ಕಾ.ಅ (ಪರಿಸರ)ರವರಿಗೆ ಕಚೇರಿ ಕೆಲಸಗಳಿಗಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ಕಾರು ಸರಬರಾಜು ಮಾಡುವುದು	5.76
	2025–26ನೇ ಸಾಲಿನ 15ನೇ ಹಣಕಾಸು ಅನುದಾನ	
3	ಗೌರಿಬಿದನೂರು ನಗರಸಭೆಗೆ ಮಿನಿ ಎಕ್ಸವೇಟರ್ ವಾಹನ ಸರಬರಾಜು ಮಾಡುವುದು	31.00

ಸಹಿ/– ಪೌರಾಯುಕ್ತರು, ನಗರಸಭೆ, ಗೌರಿಬಿದನೂರು
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:376/ಕೆ.ಎಸ್.ಎಂ.ಸಿ.ಎ/2025–26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಶೇಷ ವಿಭಾಗ, ಮೈಸೂರು.
www:eepwdsplmys@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ:0821 2492297

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:16/2025–26 ದಿನಾಂಕ: 19.01.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ, ನಜ್ಜರ್‌ಬಾದ್, ಮೈಸೂರು, ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ನಂ 1 ವಿಶೇಷ ಉಪವಿಭಾಗ, ಮೈಸೂರು ರವರ 01 ಸಂಖ್ಯೆ ಕಾಮಗಾರಿಗೆ ಲೆಕ್ಕ ಶೀರ್ಷಿಕೆ:8443–ಠೇವಣಿ ವಂತಿಕೆ ಅಡಿಯಲ್ಲಿ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–1, 01 ಸಂಖ್ಯೆ ಕಾಮಗಾರಿಗೆ ಲೆಕ್ಕ ಶೀರ್ಷಿಕೆ: 4059–80–051–0–29–386 ಇಲಾಖಾ ಕಟ್ಟಡಗಳು ಹಾಗೂ 01 ಸಂಖ್ಯೆ ಕಾಮಗಾರಿಗೆ 4059–80–051–0–32–386 ನ್ಯಾಯಾಲಯ ಕಟ್ಟಡಗಳು–ನಿರ್ಮಾಣ ಅಡಿಯಲ್ಲಿ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4 ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್ ನಲ್ಲಿ ನೊಂದಾಯಿಸಿರುವ ಅರ್ಹ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ (viz https://kppp.karnataka. gov.in/) ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಈ ವಿಭಾಗ ವ್ಯಾಪ್ತಿಯ ಲೆಕ್ಕ ಶೀರ್ಷಿಕೆ:8443–ಠೇವಣಿ ವಂತಿಕೆಯ(ಕ್ರಮ ಸಂಖ್ಯೆ–01) 01 ಸಂಖ್ಯೆ ಕಾಮಗಾರಿಗೆ ದಿ:20.01.2026 ರಿಂದ 03.02.2026 ರವರ ಸಂಜೆ 17:00ರವರೆಗೆ ಹಾಗೂ ಲೆಕ್ಕ ಶೀರ್ಷಿಕೆ: 4059–80–051–0–29–386 ಇಲಾಖಾ ಕಟ್ಟಡಗಳು(ಕ್ರಮ ಸಂಖ್ಯೆ–02) ಹಾಗೂ 4059–80–051–0–32–386 ನ್ಯಾಯಾಲಯ ಕಟ್ಟಡಗಳ(ಕ್ರಮ ಸಂಖ್ಯೆ–03) ಒಟ್ಟು 02 ಸಂಖ್ಯೆ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ದಿ:20.01.2026 ರಿಂದ 07.02.2026 ರ ಸಂಜೆ 17:00ರವರೆಗೆ ಸಲ್ಲಿಸಬಹುದಾಗಿರುತ್ತದೆ ಹಾಗೂ ಸದರಿ 02 ಸಂಖ್ಯೆ ಕಾಮಗಾರಿಗಳಿಗೆ ಪ್ರೀ–ಬಿಡ್ ಮೀಟಿಂಗ್ ಅನ್ನು ದಿ:29.01.2026 ರಂದು ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಬೆಳಗ್ಗೆ 11.00 ಘಂಟೆಗೆ ಆಯೋಜಿಸಲಾಗಿರುತ್ತದೆ. ಕನಿಷ್ಟ ಟೆಂಡರ್‌ಗಿಟ್ಟ ಮೊತ್ತ ರೂ.3.22 ಲಕ್ಷಗಳು ಹಾಗೂ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.788.63 ಲಕ್ಷಗಳು ಮತ್ತು ಕನಿಷ್ಟ ಇ.ಎಂ.ಡಿ ರೂ.0.0805 ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ರೂ.11.83 ಲಕ್ಷಗಳಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ, ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು.
DIPR/DDMYS/1543/KSMCA/875/2025-26

ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಆಡಳಿತ ಭವನ ಕೊಠಡಿ ಸಂಖ್ಯೆ : 128 ನವನಗರ, ಬಾಗಲಕೋಟೆ,
ದೂರವಾಣಿ: 08354–236028 ಇ–ಮೇಲ್: dhobagalkote@gmail.com

No : DHS/NHM/NUHM/PMABHIM/Drugs/15/2024-25 Date : 21-01-2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರಮೆಂಟ್ ಮೂಲಕ)

2025–26 ನೇ ಸಾಲಿಗೆ PM-ABHIM ಯೋಜನೆಯಡಿ **ಬಾಗಲಕೋಟೆ ಜಿಲ್ಲೆಯ "ನಮ್ಮ ಕ್ಲಿನಿಕ್"ಗಳಿಗೆ ಬಿಡುಗಡೆಯಾದ ಅನುದಾನದಡಿ ಔಷಧಿ ಹಾಗೂ ಉಪಯುಕ್ತಗಳ ಸರಬರಾಜಿಗಾಗಿ** ಅರ್ಹ ಸಂಸ್ಥೆಗಳಿಂದ ಇ–ಟೆಂಡರ್ ಮುಖಾಂತರ ಅಲ್ಪಾವದಿ ಟೆಂಡರ್ ಆಹ್ವಾನಿಸಲಾಗಿದೆ.

ಇ–ಪ್ರೋಕ್ಯೂರ್‌ಮೆಂಟ್ ಸಂಖ್ಯೆ : DHFWS/2025-26/IND/2093.

ಸದರಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 28–01–2026 ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ದಿಂದ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/524/ಮಣಿಪಾಲ್/2025–26

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ
(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ನೊಂದಣಿ ಸಂಖ್ಯೆ : KOL-S243-2012-13
ದಿನಾಂಕ : 15–03–2013
ದೂರವಾಣಿ : 08539 225522 / 23,
ಇ–ಮೇಲ್ : directorkimskoppal@gmail.com,
ವೆಬ್‌ಸೈಟ್ : www.kimskoppal.com

ಸಂಖ್ಯೆ : ಕಿಮ್ಸ್/ಕೊಪ್ಪಳ/ಟೆಂಡರ್/25–26/644 ದಿನಾಂಕ : 21–01–2026

ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಜಿಲ್ಲಾ ಬೋಧಕ ಆಸ್ಪತ್ರೆಗೆ 2025–26 ನೇ ಸಾಲಿಗೆ Biochemistry, Microbiology & Pathology ವಿಭಾಗಗಳಿಗೆ ಅವಶ್ಯವಿರುವ Chemicals, Reagents & Glassware ಸಾಮಾಗ್ರಿಗಳನ್ನು ಸಂಸ್ಥೆಯ ವತಿಯಿಂದ ದರ ಗುತ್ತಿಗೆ ಆಧಾರದ ಮೇಲೆ **ಒಂದು (01) ವರ್ಷದ ಅವಧಿಗೆ** ಖರೀದಿಸಲು ಕೆಟಿಪಿಪಿ ಕಾಯ್ದೆ 1999 – 2000 ರ ಅನ್ವಯ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣ ಕೋಶದ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. **ಟೆಂಡರ್ ಅಂದಾಜು ಮೊತ್ತ : ರೂ. 152.66 ಲಕ್ಷಗಳು.**

ಟೆಂಡರ್‌ಗಳನ್ನು ದಿನಾಂಕ : 23–01–2026 ರಿಂದ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿ ಕೊಳ್ಳಬಹುದು. ಸಾಯಂಕಾಲ 5.30 ಗಂಟೆಯಿಂದ.

ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ **ವೆಬ್‌ಸೈಟ್ : https://kppp.karnataka.gov.in** ನಲ್ಲಿ ಹಾಗೂ ಈ ಸಂಸ್ಥೆಯ **ವೆಬ್‌ಸೈಟ್ : http//www.kimskoppal.kar.nic.in** ನಿಂದ ಪಡೆಯಬಹುದು.

ಸಹಿ/– ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/631/ಮಣಿಪಾಲ್/2025–26

ಕರ್ನಾಟಕ ಸರ್ಕಾರ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ
ತಾ: ಸೇಡಂ ಜಿ: ಕಲಬುರಗಿ, E-mail : apmcsedam123@gmail.com office Ph : 08441-276030

ಸಂ:ಕೃಮಾಇ/ಕೃಉಮಾಸ/ಸೇ/569/2025–26 ದಿನಾಂಕ: 19–01–2026

–: ಇ–ಟೆಂಡರ್ ಪ್ರಕಟಣೆ :–

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ ವತಿಯಿಂದ 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಯನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇ–ಟೆಂಡರ್ ವೆಬ್‌ಸೈಟ್ http://kppp.karnataka.gov.in ರಲ್ಲಿ ಸ್ಪರ್ಧಾತ್ಮಕ ಐಟಂವಾರು ಟೆಂಡರ್‌ಗಳನ್ನು Standard Tender Documents KW-4 (with latest amendments) ಷರತ್ತುಗಳನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.
1) ಇ–ಟೆಂಡರ್ ಅರ್ಜಿಗಳನ್ನು ಪಡೆಯುವ ದಿನಾಂಕ: **22–01–2026 ರಿಂದ 09–02–2026 ಸಂಜೆ 4:00 ರವರೆಗೆ** 2) ಪೂರ್ವಭಾವಿ ಸಭೆ ದಿನಾಂಕ: **29–01–2026 ಮಧ್ಯಾಹ್ನ 3.00 ಗಂಟೆಗೆ,** 3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **09–02–2026 ಸಂಜೆ 4:00 ರವರೆಗೆ,** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12–02–2026 ಬೆಳಿಗ್ಗೆ 11:00 ಗಂಟೆಗೆ (ಸಾಧ್ಯವಾದಲ್ಲಿ),** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **26–02–2026 ಸಂಜೆ 4:00 ಗಂಟೆಗೆ (ಸಾಧ್ಯವಾದಲ್ಲಿ),** 6) ಇ–ಟೆಂಡರ್ ತೆರೆಯುವ ಸ್ಥಳ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ.
1) ಕಾಮಗಾರಿಯ ಹೆಸರು: **ಮಳಖೇಡ ಜಾನುವಾರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಜಾನುವಾರುಗಳಿಗೆ 04 ಸಂಖ್ಯೆ ಶೇಡ್ ನಿರ್ಮಾಣ ಮಾಡುವ ಕಾಮಗಾರಿ,** 2) ಟೆಂಡರ್ ಮಾದರಿ: ಐಟಂವಾರು ಇ–ಟೆಂಡರ್ ಕೆ.ಡಬ್ಲ್ಯೂ–04, 3) ಟೆಂಡರ್‌ಗಿಟ್ಟ ಮೊತ್ತ: **ರೂ. 1,11,75,693/- (ಜಿ.ಎಸ್.ಟಿ ಹೊರತುಪಡಿಸಿ),** 4) ಮುಂಗಡ ಠೇವಣಿ (ಇ.ಎಂ.ಡಿ) ರೂ.ಗಳಲ್ಲಿ (1.5%): **ರೂ. 2,00,000/–,** 5) ಪೂರ್ಣಗೊಳಿಸುವ ಅವಧಿ: **5.5 ತಿಂಗಳು** (ಮಳೆಗಾಲ ಹೊರತುಪಡಿಸಿ) 6) ಗುತ್ತಿಗೆದಾರರ ಅರ್ಹತೆ: ಇ–ಪೋರ್ಟಲ್‌ರಲ್ಲಿರುವಂತೆ, 7) ದ್ವಿಪ್ರತಿಗಳು ಟೆಂಡರ್ ಫಾರಂ ಬೆಲೆ: ಇ–ಗೌರ್ನೆನ್ಸ್‌ರಂತೆ
ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪೋರ್ಟಲ್‌ನ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳು ಇ–ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇದ್ದು, ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ http:// kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ
ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ
ವಾ.ಸಾ.ಸಂ.ಇ/ಕಲಬುರಗಿ/1001/ಕೆ.ಎಸ್.ಎಂ.ಸಿ.&ಎ/2025–26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಕ್ರ. ಸಂ.	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗುಅ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.						
1	(ಕಟ್ಟಡಗಳು)	ಬೆಂಜಮಂ/ಕಾನಿಅ(ಕಟ್ಟಡ)/ ಪಿಬಿ/3294/2025–26 ದಿನಾಂಕ: 17–01–2026 (ಪ್ರವರ್ಗ–II(ಎ) ಗೆ ಮೀಸಲಿರಿಸಿದೆ)	1	ರೂ. 19,51,474/– / ರೂ. 24,400/–	04–02–2026 ರ ಸಂಜೆ 4.00 ಗಂಟೆಯವರೆಗೆ	05–02–2026 ರ ಸಂಜೆ 4.00 ಗಂಟೆಯ ನಂತರ
		ಬೆಂಜಮಂ/ಕಾನಿಅ(ಕಟ್ಟಡ)/ ಪಿಬಿ/3292/2025–26 ದಿನಾಂಕ: 17–01–2026	2	ರೂ. 22,82,188/– / ರೂ. 45,645/–		
		ಬೆಂಜಮಂ/ಕಾನಿಅ(ಕಟ್ಟಡ)/ ಪಿಬಿ/3290/2025–26 ದಿನಾಂಕ: 17–01–2026	3	ರೂ. 15,40,287/– / ರೂ. 38,508/–		
		ಬೆಂಜಮಂ/ಕಾನಿಅ(ಕಟ್ಟಡ)/ ಪಿಬಿ/3284/2025–26 ದಿನಾಂಕ: 17–01–2026	4	ರೂ. 12,30,603/– / ರೂ. 30,766/–		
		ಬೆಂಜಮಂ/ಕಾನಿಅ(ಕಟ್ಟಡ)/ ಪಿಬಿ/3288/2025–26 ದಿನಾಂಕ: 17–01–2026 (ಪ್ರವರ್ಗ–II(ಎ) ಗೆ ಮೀಸಲಿರಿಸಿದೆ)	5	ರೂ. 12,30,602/– / ರೂ. 15,400/–		
		ಬೆಂಜಮಂ/ಕಾನಿಅ(ಕಟ್ಟಡ)/ ಪಿಬಿ/3266/2025–26 ದಿನಾಂಕ: 16–01–2026 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	6	ರೂ. 24,79,823/– / ರೂ. 24,800/–		
		ಬೆಂಜಮಂ/ಕಾನಿಅ(ಕಟ್ಟಡ)/ ಪಿಬಿ/3286/2025–26 ದಿನಾಂಕ: 17–01–2026	7	ರೂ. 12,30,602/– / ರೂ. 30,766/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕಟ್ಟಡಗಳು)						
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.						
2	(ಉತ್ತರ–ಪಶ್ಚಿಮ–1)	ಬೆಂಜಮಂ/ಕಾನಿಅ(ಉಪ–1)/ಪಿಬಿ/ 4681/2025–26 ದಿನಾಂಕ: 21–01–2026	1	ರೂ. 79,72,211/– / ರೂ. 1,60,000/–	05–02–2026 ರ ಸಂಜೆ 5.00 ಗಂಟೆಯವರೆಗೆ	06–02–2026 ರ ಸಂಜೆ 5.15 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ–ಪಶ್ಚಿಮ–1)						

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ವೆಬ್‌ಸೈಟ್: **https://kppp.karnataka.gov.in.** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.
ವಾಸಾಸಂಇ/ವಾ.ಪ್ರ/ಅಡ್ವರ್ಟೋರ್/5145/2025–26

ಕರ್ನಾಟಕ ನೀರಾವರಿ ನಿಗಮ ನಿಯುತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ,
ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ–580 001.
E-mail: eesliddwd@gmail.com Ph: 0836-2461218.

No.KNN/SLID/DWD/PB-1/Savanur-Additional/Tender/2025-26/886 Dt:21-01-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯುತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ **"1) Laying of parallel pipe line from Kyalkond to Hulguru via Panigatti and Basanal, 2) Connection of T-Bleeders and Control Valve in DC-4 Rising Main near Kalasur Jack well next to the manifold and construction of open canal or providing pipe line from the bleeder to Varada river including energy dissipation system, 3) Improvements to selected/all tanks and construction of delivery pipe chamber in Savanur and Shiggaon tank filling schemes". (ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.400.94 ಲಕ್ಷಗಳಿಗೆ)** ದ್ವಿ–ಲಕೋಟೆ ಪದ್ಧತಿಯ ಮುಖಾಂತರ ಟೆಂಡರ್‌ನ್ನು ನಿರ್ವಹಿಸಲು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ **(http://kppp. karnataka.gov.in)** ಮುಖಾಂತರವೇ ದಿನಾಂಕ: **29.01.2026 ಬೆಳಿಗ್ಗೆ 11.00 ರಿಂದ** ಡೌನಲೋಡ್ ಮಾಡಿಕೊಂಡು **ದಿನಾಂಕ: 09.02.2026 ರ ಸಂಜೆ 4.00 ಘಂಟೆವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ ಪೂರ್ವಭಾವಿ ಸಭೆಯನ್ನು **ದಿನಾಂಕ 03.02.2026 ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ** ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ಶಿಗ್ಗಾಂವ ಏತ ನೀರಾವರಿ ಭಾಗ ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರಗಳನ್ನು **ದಿನಾಂಕ: 10.02.2026 ರಂದು ಸಂಜೆ 4.30 ಘಂಟೆಗೆ** ಹಾಗೂ ಆರ್ಥಿಕ ಟೆಂಡರ್‌ಗಳನ್ನು ದಿನಾಂಕ: **13.02.2026 ರಂದು ಬೆಳಿಗ್ಗೆ 11.00 ಘಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

(ಮಂಜುನಾಥ.ಬಿ.)
ಕಾರ್ಯಪಾಲಕ ಇಂಜಿನಿಯರ್, ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ, ಧಾರವಾಡ
ವಾಸಾಸಂಇ/ಧಾ/ದಿಶಾ/1132/2025–26

ಸಮಾಚಾರ ಸಣ್ಣದಲ್ಲ

ಕತ್ತು ಹಿಸುಕಿ ನವಜಾತ ಶಿಶುವಿನ ಹತ್ಯೆ

ಚಿಕ್ಕಮಗಳೂರು: ಮದುವೆಗೆ ಮುಂಚೆಯೇ ಗರ್ಭಿಣಿಯಾಗಿದ್ದ ಯುವತಿಯೊಬ್ಬಳು, ಮಗುವಿಗೆ ಜನ್ಮ ನೀಡುತ್ತಿದ್ದಂತೆ ಕತ್ತು ಹಿಸುಕಿ ಕೊಂದಿರುವ ಆರೋಪ ಲಕ್ಕವಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೇಳಿ ಬಂದಿದೆ. ಸ್ಟಾಫ್ ನರ್ಸ್ ಆಗಿ ಕೆಲಸ ಮಾಡ್ತಿದ್ದ ಯುವತಿ, ತನ್ನ ತಂದೆ, ತಾಯಿ, ಅಜ್ಜಿ ಹಾಗೂ ಮೂವರು ಮಹಿಳೆಯರ ಸಹಾಯದಿಂದ ಮನೆಯಲ್ಲೇ ಹೆರಿಗೆ ಮಾಡಿಕೊಂಡಿದ್ದಾಳೆ. ಗಂಡು ಮಗು ಜನಿಸುತ್ತಿದ್ದಂತೆಯೇ ಅಪ್ಪ, ಅಮ್ಮ ಹಾಗೂ ಅಜ್ಜಿ ಸೇರಿ ಒಂದೇ ನಿಮಿಷದಲ್ಲಿ ಕೊಂದು, ತಿಪ್ಪೆಯಲ್ಲಿ ಹೂತು ಬಂದಿದ್ದಾರೆ. 15 ದಿನಗಳ ಹಿಂದೆ ಈ ಪ್ರಕರಣ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಪಕ್ಕದ ಮನೆ ಯುವಕನಿಂದ ಈ ಪ್ರಕರಣ ಬೆಳಕಿಗೆ ಬಂದಿದೆ. ಮಗು ಹುಟ್ಟಿದ ಕೂಡಲೇ ಅನುಮಾನಾಸ್ಪದ ಸಾವು ಎಂದು ಲಕ್ಕವಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ಸಂತ್ರಸ್ತೆ ಕುಟುಂಬಸ್ಥರ ಕ್ಷಮೆ ಕೇಳಿದ ರಾಮುಲು

ಬಳ್ಳಾರಿ: ಬ್ಯಾನರ್ ಗಲಭೆ ಖಂಡಿಸಿ ಜನವರಿ 17 ರಂದು ನಡೆದ ಬೃಹತ್ ಸಮಾವೇಶದಲ್ಲಿ ಪೋಕ್ಸೊ ಪ್ರಕರಣದ ಸಂತ್ರಸ್ತೆಯ ಹೆಸರು ಸೇರಿದಂತೆ ಸಂಪೂರ್ಣ ವಿವರ ಬಹಿ ರಂಗಪಡಿಸಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಶ್ರೀರಾಮುಲು ವಿಷಾದ ವ್ಯಕ್ತಪಡಿಸಿ ಕ್ಷಮೆ ಕೇಳಿದ್ದಾರೆ. ಬಳ್ಳಾರಿಯಲ್ಲಿ ಮಾತನಾಡಿದ ಅವರು, ಗಲಭೆ ಖಂಡಿಸಿ ನಡೆದ ಸಮಾವೇಶದಲ್ಲಿ ಸಾಕಷ್ಟು ವಿಚಾರಗಳನ್ನು ನಮ್ಮ ನಾಯಕರು ಮಾತನಾಡಿದ್ದಾರೆ. ನಾನೂ ಮಾತನಾಡಿದ್ದೇನೆ. ಜಾಗೃತಿ ಮೂಡಿಸುವ ಕೆಲಸ ಮಾಡಿದ್ದೇನೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗ ದಾಂಧಲೆ ನಡೆಯುತ್ತಿದೆ ಎಂದರು.

ಹಣೆಬರಹದಲ್ಲಿ ಬರೆದಂತೆ ಆಗುತ್ತದೆ

ಗದಗ: ಯಾರು ಏನೇ ಅಂದರೂ ಹಣೆಬರಹದಲ್ಲಿ ಏನು ಬರೆದಿದೆಯೋ, ಅದೇ ಆಗುತ್ತದೆ. ನಾನೂ ಅದನ್ನು ನಂಬುತ್ತೇನೆ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು. ಅಣ್ಣನ ಹಣೆಬಹರದಲ್ಲಿ ಇತ್ತೆಂದರೆ ಸಿ.ಎಂ ಆಗುತ್ತಾರೆ ಎಂಬ ಡಿ.ಕೆ.ಸುರೇಶ್ ಹೇಳಿಕೆಗೆ, ಅವರು ಹೇಳಿದ್ದರಲ್ಲಿ ತಪ್ಪೇನಿಲ್ಲ. ಹಣೆಬರಹದಲ್ಲಿ ಬರೆದಂತೆ ಆಗುತ್ತದೆ ಎಂದರು. ಹಣೆಬರಹ ಬರೆಯುವುದು ದೇವರು. ನಾನು 5 ಬಾರಿ ಶಾಸಕ, 3 ಬಾರಿ ಮಂತ್ರಿ ಆಗುವೆ ಅಂತ ಕನಸಿನಲ್ಲೂ ಯೋಚಿಸಿರಲಿಲ್ಲ. ಹಣೆಬರಹದಲ್ಲಿ ಇದ್ದಿದ್ದರಿಂದ ಆಯ್ತು ಎಂದು ಹೇಳಿದರು.

ವಿಶ್ವವಾಣಿ ಕ್ಲಬ್ ಹೌಸ್
22.01.2026
ಸಂಜೆ: 06.55 ರಿಂದ 08.05 ರವರೆಗೆ

ಗುರುವಾರದ ಅತಿಥಿ
ಶ್ರೀ. ನಂದೀಶ ಪಿ.ಕೆ
ವಿಷಯ
ಶ್ರೀ ಅರವಿಂದರ ಸಾವಿತ್ರಿ-11
vishwavani.news

ದಿನ ವಿಶೇಷ

22ಜನವರಿ 2026 ಗುರುವಾರ

» ಸೂರ್ಯೋದಯಟ	06-47
» ಸೂರ್ಯಾಸ್ತ	06-16
» ತಿಥಿ	ಚತುರ್ಥಿ
» ನಕ್ಷತ್ರ	ಶತಭಿಷಾ
» ಸಂವತ್ಸರ	ವಿಶ್ವಾವಸು
» ಆಯನ	ಉತ್ತರಾಯಣ
» ಋತು	ಶಿಶಿರ
» ಮಾಸ	ಮಾಘ
» ಪಕ್ಷ	ಶುಕ್ಲಪಕ್ಷ

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಮಾಳಗೊಂಡನಹಳ್ಳಿ ಕೊಡಿಕ್ಯಾಂಪ್, ದಾವಣಗೆರೆ
- **ಸಮಸ್ಯೆಯೇನು?** ಕೊಡಿಕ್ಯಾಂಪ್ ಗ್ರಾಮದ ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿ ಮಾಡುವ ಕುರಿತು.
- **ಪರಿಹಾರ:** ದಾವಣಗೆರೆ ಜಿಲ್ಲೆ ಕಡ್ಲೇಬಾಳು ಗ್ರಾ.ಪಂ ವ್ಯಾಪ್ತಿಯ ಮಾಳಗೊಂಡನಹಳ್ಳಿಯ ಕೊಡಿಕ್ಯಾಂಪ್‌ನಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ಹೋಗಿದ್ದು, ದುರಸ್ತಿ ಮಾಡಿಸುವಂತೆ ಸ್ಥಳೀಯರೊಬ್ಬರು ದೂರು ಕೊಟ್ಟಿದ್ದರು. ಘಟಕ ಪರಿಶೀಲನೆ ನಡೆಸಿದ ಅಧಿಕಾರಿಗಳು ಹೊಸ ಯಂತ್ರೋಪಕರಣಗಳನ್ನು ಅಳವಡಿಸಿ, ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿ ಮಾಡಿಸಿದ್ದಾರೆ.

ಶ್ರೀಗಳು ಜೀವನದ ನೈತಿಕ ದಿಕ್ಕನ್ನು ಪ್ರಜ್ವಲಿಸುವ ನಂದಾದೀಪ

ಶಿವಕುಮಾರ ಶ್ರೀ 7ನೇ ಪುಣ್ಯಸಂಸ್ಮರಣೋತ್ಸವ ಕಾರ್ಯಕ್ರಮಕ್ಕೆ ಉಪ ರಾಷ್ಟ್ರಪತಿ ರಾಧಾಕೃಷ್ಣನ್ ಚಾಲನೆ

ತುಮಕೂರು: ಅನಿಶ್ಚಿತತೆ, ವಿಭಜನೆ ಮತ್ತು ಅಶಾಂತಿ ಸೃಷ್ಟಿಸುತ್ತಿರುವ ಈ ಯುಗದಲ್ಲಿ ಸಿದ್ಧಗಂಗೆಯ ಲಿಂಗೈಕ್ಯ ಶ್ರೀಶಿವಕುಮಾರ ಸ್ವಾಮೀಜಿ ಅವರ ಜೀವನ ನೈತಿಕ ದಿಕ್ಕನ್ನು ಸೂಚಿಸುವ ಪ್ರಜ್ವಲಿಸುವ ನಂದಾದೀಪವಾಗಿದೆ ಎಂದು ಭಾರತದ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ಸಿದ್ಧಗಂಗಾ ಮಠದಲ್ಲಿ ಆಯೋಜಿಸಿದ್ದ ಶ್ರೀ ಶಿವಕುಮಾರ ಸ್ವಾಮೀಜಿ 7ನೇ ಪುಣ್ಯಸಂಸ್ಮರಣೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾಮೀಜಿಯವರು ಲಿಂಗೈಕ್ಯರಾಗಿ ಏಳು ವರ್ಷ ತುಂಬಿದರೂ ಶ್ರೀಗಳ ಸಾನಿಧ್ಯ ಒಂದಿಷ್ಟೂ ಕುಂದಿಲ್ಲ. ಬದಲಾಗಿ ಇನ್ನೂ ಪ್ರಕರವಾಗಿದೆ. ಅನಿಶ್ಚಿತತೆ, ಅಶಾಂತಿ ಸೃಷ್ಟಿಸುತ್ತಿರುವ ಈ ಯುಗದಲ್ಲಿ ಸ್ವಾಮೀಜಿಯವರ ಜೀವನ ನೈತಿಕ ದಿಕ್ಕನ್ನು ಸೂಚಿಸುವ ನಂದಾದೀಪವಾಗಿದೆ ಎಂದರು.

19ನೇ ಶತಮಾನದಲ್ಲಿ ಅಟವಿ ಸ್ವಾಮೀಜಿಯವರ ಆದರ್ಶಗಳನ್ನು ಅನುಸರಿಸಿ ಶ್ರೀಮಠವು ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆಗಳನ್ನು ಮಾಡುತ್ತಾ ಬಂದಿರುವುದು ಸಂತೋಷದ ವಿಷಯವಾಗಿದ್ದು, ಶಿವಕುಮಾರ ಸ್ವಾಮೀಜಿಯವರು ಮಠದ ಜವಾಬ್ದಾರಿವಹಿಸಿಕೊಂಡು ಶ್ರೀಮಠದಲ್ಲಿ ಕೇವಲ ಆಧ್ಯಾತ್ಮಿಕ ಕೇಂದ್ರವಾಗಿಸದೆ ಸಮಾಜಮುಖಿಯಾಗಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಾ ಮಾದರಿಯಾಗಿದ್ದಾರೆ ಎಂದರು.

ಸಿದ್ದಗಂಗಾ ಮಠದ ಅಧ್ಯಕ್ಷರಾದ ಶ್ರೀಸಿದ್ದಲಿಂಗ ಸ್ವಾಮೀಜಿ ಮಾತನಾಡಿ, 89 ವರ್ಷ ಶ್ರೀಮಠದಲ್ಲಿ ಸುದೀರ್ಘ ಸೇವೆ ಸಲ್ಲಿಸಿದ್ದ ಹಿರಿಯ ಶ್ರೀಗಳು ಸದಾ ಕಾಯಕ ಭಾವನೆ ಜಾಗೃತವಾಗಿರಬೇಕು. ಶ್ರೀಮಠದಲ್ಲಿ ದಾಸೋಹ, ಮಕ್ಕಳ ಶಿಕ್ಷಣ ಎಂದೂ ನಿಲ್ಲಬಾರದು ಎಂದು ವಚನ ನೀಡಿದ್ದಾರೆ. ಇಂದಿಗೂ ಲಕ್ಷಾಂತರ ಮಕ್ಕಳಿಗೆ, ಭಕ್ತರಿಗೆ ದಾರಿದೀಪವಾಗಿದ್ದಾರೆ ಎಂದರು.

ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಗಣ್ಯರನ್ನು ಸ್ವಾಗತಿಸಿದರು. ಶ್ರೀಸಿದ್ದಗಂಗಾ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಜಯವಿಭವಸ್ವಾಮಿ ವಂದಿಸಿದರು. ವಿ. ಸೋಮಶೇಖರ್ ನಿರೂಪಣೆ ಮಾಡಿದರು.

ಸಿದ್ಧಗಂಗಾ ಮಠದಲ್ಲಿ ಆಯೋಜಿಸಿದ್ದ ಶ್ರೀ ಶಿವಕುಮಾರ ಸ್ವಾಮೀಜಿ 7ನೇ ಪುಣ್ಯ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾದ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಶ್ರೀಮಠದ ಸಿದ್ದಲಿಂಗ ಸ್ವಾಮೀಜಿ ಸನ್ಮಾನಿಸಿದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್, ಸಚಿವ ಜಿ.ಪರಮೇಶ್ವರ್ ಸೇರಿ ಇತರರಿದ್ದರು.

> ಅನ್ನ, ಅಕ್ಷರ, ಆಶ್ರಯ ಎಷ್ಟು ಮುಖ್ಯ ಎಂಬುದೇ ಇಂದಿನ ಕಾರ್ಯಕ್ರಮದ ಸಂದೇಶ. ಜಾತಿ ವರ್ಗಗಳನ್ನು ಮೀರಿ ಸಮಾಜದಲ್ಲಿ ಸೇವೆ ಮಾಡುವ ಶ್ರೀಮಠದ ತತ್ವ ಸಿದ್ಧಾಂತವನ್ನು ಅಳವಡಿಸಿಕೊಳ್ಳುವ ಅನಿವಾರ್ಯತೆ ಭಾರತದ ಭವಿಷ್ಯದ ದೃಷ್ಟಿಯಿಂದ ಅಗತ್ಯವಿದೆ.
>
> -ಪರಮೇಶ್ವರ್ ಗೃಹ ಸಚಿವ

> ಜಾತಿ ಮತಗಳನ್ನು ಮೀರಿ ತ್ರಿವಿಧ ದಾಸೋಹದಲ್ಲಿ ಸೇವೆ ಮಾಡುತ್ತಿರುವ ಶ್ರೀಸಿದ್ದಗಂಗಾ ಮಠವು ಐತಿಹಾಸಿಕ ಧಾರ್ಮಿಕ ಕೇಂದ್ರವಾಗಿದೆ. ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡುವುದೇ ನಮ್ಮ ದೇಶದ ಸಂಸ್ಕೃತಿಯಾಗಿದ್ದು ಶ್ರೀಮಠದ ಆದರ್ಶಗಳನ್ನು ಅಳವಡಿಸಿಕೊಳ್ಳುವುದು ಇಂದಿನ ಪ್ರಸ್ತುತತೆ. ಸ್ವಾಮೀಜಿ ಅವರ ಆದರ್ಶಗಳು ನಮಗೆ ಮಾದರಿಯಾಗಿದೆ.
>
> -ಥಾವರ್ ಚಂದ್ ಗೆಹ್ಲೋತ್ ರಾಜ್ಯಪಾಲ

ಅಬಕಾರಿ ಸಚಿವರ ಭ್ರಷ್ಟಾಚಾರಕ್ಕೆ ಸಿಎಂ ಕೃಪಾಕಟಾಕ್ಷ

ಚಿಕ್ಕಮಗಳೂರು: ಅಬಕಾರಿ ಸಚಿವರನ್ನು ವಜಾ ಮಾಡದೇ ಇಟ್ಟುಕೊಂಡಿದ್ದನ್ನು ನೋಡಿದಾಗ ಮಾನ್ಯ ಮುಖ್ಯಮಂತ್ರಿಗಳ ಕೃಪಾಕಟಾಕ್ಷದಲ್ಲೇ ಅಬಕಾರಿ ಸಚಿವರೂ ಭ್ರಷ್ಟಾಚಾರ ನಡೆಸುತ್ತಿರುವುದು ಸ್ಪಷ್ಟವಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಆರೋಪಿಸಿದರು.

ಅಬಕಾರಿ ಇಲಾಖೆ ಭ್ರಷ್ಟಾಚಾರ ಒಂದು ವರ್ಷದ ಹಿಂದೆಯೇ ಜಗಜ್ಜಾಹೀರಾಗಿತ್ತು. ಆ ಸಂದರ್ಭದಲ್ಲಿ ತೇಪೆ ಹಾಕುವ ಕೆಲಸ ಮಾಡಿದ್ದರು. ಆವತ್ತೇ ಮಂತ್ರಿಯನ್ನು ವಜಾ ಮಾಡಬೇಕಿತ್ತು. ಸರಕಾರವೇ ಭ್ರಷ್ಟಾಚಾರದಲ್ಲಿ ತೊಡಗಿದೆ. ಎಲ್ಲ ಇಲಾಖೆಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಯಾರು ಈ ಸರಕಾರವನ್ನು ಬೆಂಬಲಿಸಿದರೋ ಅವರೇ ಇವತ್ತು ಈ ಸರಕಾರ ಅತ್ಯಂತ ಭ್ರಷ್ಟ ಸರಕಾರ ಎಂದು ಮಾತನಾಡುತ್ತಿದ್ದಾರೆ. ಗುತ್ತಿಗೆದಾರರೇ ಶೇ60 ಕಮಿಷನ್ ಆರೋಪ ಮಾಡಿದ್ದಾರೆ. ಮುಖ್ಯಮಂತ್ರಿಗಳು ಕೂಡ ಇನ್ನೆಷ್ಟು ದಿನ ಇರುತ್ತೀನೋ, ನಾಳೆ ಮತ್ತೆ ಈ ಅವಕಾಶ ಸಿಗಲ್ಲ. ಇದ್ದಾಗ ಎಷ್ಟು ಚೀಲ ತುಂಬಿಸಿಕೊಳ್ಳಲು ಸಾಧ್ಯವೋ ಅಷ್ಟು ಚೀಲ ತುಂಬಿಸಿಕೊಳ್ಳುವ ನೀತಿ ಅಳವಡಿಸಿಕೊಂಡಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ವಿಬಿಜಿ ರಾಮ್ ಜಿ ಯೋಜನೆಯಲ್ಲಿ ವಿರೋಧಿಸುವ ಅಂಶಗಳಿಲ್ಲ. ಕಾಂಗ್ರೆಸ್ಸಿನವರು ಬಾಯಿ ಬಡ್ಕೊಳ್ಳುವುದನ್ನು ನೋಡಿದರೆ, ಏನೋ ಇರಬಹುದೇನೋ ಎಂದು ಅಧ್ಯಯನ ಮಾಡಿದ್ದೇನೆ.

ಮುಂಚೆ 100 ದಿನ ಇತ್ತು. ಈಗ 125 ದಿನ ಕೊಟ್ಟಿದ್ದಾರೆ. 25 ದಿನ ಜಾಸ್ತಿ ಸಿಕ್ಕಿದ್ದರಿಂದ ಯಾರಿಗೆ ಅನ್ಯಾಯ ಆಗಲಿದೆ ಎಂದರು.

> ಮಹಾತ್ಮ ಗಾಂಧಿ ಹೆಸರನ್ನು ಬದಲಿಸಿ ವಿಬಿಜಿ ರಾಮ್ ಜಿ ಇಟ್ಟಿದ್ದಾರೆ ಎನ್ನುತ್ತಿದ್ದಾರೆ. ಮಹಾತ್ಮ ಗಾಂಧಿಗೆ ಪ್ರೇರಣೆ ಕೊಟ್ಟಿದ್ದು ರಾಮ. ರಾಮನ ಬಗ್ಗೆ ಯಾಕೆ ಇವರಿಗೆ ದ್ವೇಷ. ಮಹಾತ್ಮ ಗಾಂಧಿ ದಿನಬೆಳಗಾದರೆ ಹೇಳುತ್ತಿದ್ದುದು ರಾಮರಾಜ್ಯದ ಕಲ್ಪನೆಯನ್ನು. ರಾಮನ ಗುಣಗಾನದ ಬಗ್ಗೆ ಈ ಸರಕಾರಕ್ಕೆ ಇಷ್ಟೊಂದು ಅಸಹಿಷ್ಣುತೆ ಯಾಕೆ.
>
> ಸಿ.ಟಿ.ರವಿ ವಿಧಾನಪರಿಷತ್ ಸದಸ್ಯ

24ರಿಂದ 3 ದಿನ ಗಡಿನಾಡು ಬೀದರ್‌ನಲ್ಲಿ ಜ್ಞಾನದ ಹಬ್ಬ

ವೀರಲೋಕ ಪುಸ್ತಕದಿಂದ ಪುಸ್ತಕ ಸಂತೆ | ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಸಾಹಿತ್ಯಾಸಕ್ತರಿಗೆ ಆಹ್ವಾನ

ಬೆಂಗಳೂರು: ಗಡಿನಾಡು ಬೀದರ್ ಜಿಲ್ಲೆಯ ಇತಿಹಾಸದಲ್ಲಿಯೇ ಅತಿ ದೊಡ್ಡ ಸಾಂಸ್ಕೃತಿಕ ಮತ್ತು ಅಕ್ಷರ ಹಬ್ಬವಾದ ವೀರಲೋಕ ಪುಸ್ತಕ ಸಂತೆಯು ಜ.24 ರಿಂದ 26 ರವರೆಗೆ ಬೀದರ್‌ನ ಸಾಯಿ ಸ್ಕೂಲ್ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ವೀರಲೋಕ ಪ್ರಕಾಶನ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಕಾರ್ಯಕ್ರಮವನ್ನು ಹಿರೇಮಠ ಸಂಸ್ಥಾನ ಭಾಲ್ಕಿ, ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದಲ್ಲಿ, ಗುರುನಾಥ ರಾಜಗೀರಾ ನೇತೃತ್ವದಲ್ಲಿ ಆಯೋಜಿಸಲಾಗಿದೆ. ಈ ವೇಳೆ ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ, ರಾಜ್ಯದ ಆರು ವಿಶ್ವವಿದ್ಯಾಲಯಗಳ ಕುಲಪತಿಗಳು, ಶಾಸಕರು ಸೇರಿದಂತೆ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಪುಸ್ತಕ ಸಂತೆಯ ಭಾಗವಾಗಿ 20ಕ್ಕೂ ಹೆಚ್ಚು ಜ್ಞಾನದ ಗೋಷ್ಠಿಗಳು ಮತ್ತು ಸಂವಾದಗಳು ನಡೆಯಲಿದ್ದು, ಸಮಕಾಲೀನ ಸಾಹಿತ್ಯದಿಂದ ಹಿಡಿದು ಕಲೆ-ಸಂಸ್ಕೃತಿಯ ವಿಸ್ತೃತ ವಿಚಾರಗಳ ತನಕ ಚರ್ಚೆಗಳು ನಡೆಯಲಿವೆ. ಓದುಗರನ್ನು ಸೆಳೆಯಲು 60ಕ್ಕೂ ಹೆಚ್ಚು ಪುಸ್ತಕ ಮಳಿಗೆಗಳು ಸ್ಥಾಪನೆಯಾಗಲಿದ್ದು, 100ಕ್ಕೂ ಹೆಚ್ಚು ಸಾಹಿತಿಗಳು ಮತ್ತು ಲೇಖಕರು ಒಂದೇ ವೇದಿಕೆಯಲ್ಲಿ ಸೇರಿ ಓದುಗರೊಂದಿಗೆ ನೇರ ಸಂವಾದ ನಡೆಸಲಿದ್ದಾರೆ.

ಮೂರು ದಿನಗಳ ಈ ಅಕ್ಷರ ಹಬ್ಬದಲ್ಲಿ ಪುಸ್ತಕ ಬಿಡುಗಡೆಗಳು, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಆಹಾರ ಸಂತೆ ಕೂಡ ಆಯೋಜಿಸಲಾಗಿದ್ದು, ಕುಟುಂಬ ಸಮೇತರಾಗಿ ಆಗಮಿಸುವವರಿಗೆ ಸಮೃದ್ಧ ಅನುಭವ ಒದಗಿಸಲಿದೆ.

ರಾಜ್ಯದ ಮೂಲೆಮೂಲೆಗಳಿಂದ ಓದುಗರು ಆಗಮಿಸುವ ನಿರೀಕ್ಷೆಯಿದ್ದು, ಬೀದರ್ ಜಿಲ್ಲೆಯ ಸಮಸ್ತ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಕ್ಷರ ಲೋಕದ ಸವಿಯನ್ನು ಆಸ್ವಾದಿಸಬೇಕೆಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.24 ರಿಂದ ಗಡಿನಾಡು ಬೀದರ್‌ನಲ್ಲಿ ನಡೆಯಲಿರುವ ವೀರಲೋಕ ಪುಸ್ತಕ ಸಂತೆಯ ಆಹ್ವಾನ ಪತ್ರಿಕೆಯನ್ನು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು. ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ್ ಇದ್ದರು.

ಧಾರವಾಡ: ಪ್ಯಾರಾಮೆಡಿಕಲ್ ವಿದ್ಯಾರ್ಥಿನಿಯ ಬರ್ಬರ ಹತ್ಯೆ

ಧಾರವಾಡ: ಪ್ಯಾರಾಮೆಡಿಕಲ್ ಶಿಕ್ಷಣ ಮುಗಿಸಿ ಉದ್ಯೋಗಕ್ಕಾಗಿ ಹುಡುಕಾಟ ನಡೆಸುತ್ತಿದ್ದ 19 ವರ್ಷದ ವಿದ್ಯಾರ್ಥಿನಿಯನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಧಾರವಾಡ ಹೊರವಲಯದಲ್ಲಿ ನಡೆದಿದೆ.



ಮೃತ ವಿದ್ಯಾರ್ಥಿನಿ ಧಾರವಾಡದ ಗಾಂಧಿ ಚೌಕ್ ನಿವಾಸಿಯಾಗಿದ್ದ 19 ವರ್ಷದ ಝುಕಿಯಾ ಮುಲ್ಲಾ ಎಂದು ತಿಳಿದುಬಂದಿದೆ. ಮಂಗಳವಾರ ಸಂಜೆ ಮನೆಯಿಂದ ಲ್ಯಾಬ್‌ಗೆ ಹೋಗಿ ಬರುವುದಾಗಿ ಹೇಳಿ ತೆರಳಿದ್ದ ವಿದ್ಯಾರ್ಥಿನಿ, ರಾತ್ರಿಯಾದರೂ ಮನೆಗೆ ಹಿಂದಿರುಗಿರಲಿಲ್ಲ. ಇದರಿಂದ ಆತಂಕಗೊಂಡ ಕುಟುಂಬಸ್ಥರು ಹುಡುಕಾಟ ನಡೆಸುತ್ತಿದ್ದರು. ಮನಸೂರು ರಸ್ತೆಯ ವಿನಯ್ ಡೈರಿ ಸಮೀಪ ವಿದ್ಯಾರ್ಥಿನಿಯ ಶವ ಬುಧವಾರ ಪತ್ತೆಯಾಗಿದೆ. ಬೇರೆ ಕಡೆ ವಿದ್ಯಾರ್ಥಿನಿಯನ್ನು ಕೊಲೆ ಮಾಡಿ, ನಂತರ ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಇಲ್ಲಿಗೆ ತಂದು ಶವವನ್ನು ಬಿಸಾಡಿ ಹೋಗಿರುವ ಶಂಕೆ ವ್ಯಕ್ತವಾಗಿದೆ. ಸ್ಥಳಕ್ಕೆ ಧಾರವಾಡ ಗ್ರಾಮೀಣ ಹಾಗೂ ವಿದ್ಯಾಗಿರಿ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಲಾಗುತ್ತಿದ್ದು, ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಣಂತಿ ಸಾವು: ಆಸ್ಪತ್ರೆ ವಿರುದ್ಧ ಆಕ್ರೋಶ

ಬೀದರ್: ಸಂತಾನಹರಣ ಶಸ್ತ್ರ ಚಿಕಿತ್ಸೆಗೆಂದು ದಾಖಲಾಗಿದ್ದ ಬಾಣಂತಿ ಸಾವನ್ನಪ್ಪಿದ ಘಟನೆ ಬೀದರ್‌ನ ಖಾಸಗಿ ಆಸ್ಪತ್ರೆಯಲ್ಲಿ ನಡೆದಿದೆ. ವೈದ್ಯರ ನಿರ್ಲಕ್ಷ್ಯದಿಂದಾಗಿ ಮಗಳು ಮೃತಪಟ್ಟಿರುವುದಾಗಿ ಮೃತಳ ಕುಟುಂಬಸ್ಥರು ಆರೋಪಿಸಿದ್ದಾರೆ. ಚಿಮಕೋಡ್ ಗ್ರಾಮದ 26 ವರ್ಷದ ಮೀನಾಕ್ಷಿ ಮೃತ ಬಾಣಂತಿ. ಮಂಗಳವಾರ (ಜ.20) ಸಂತಾನಹರಣ ಶಸ್ತ್ರಚಿಕಿತ್ಸೆಗೆಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಶಸ್ತ್ರ ಚಿಕಿತ್ಸೆ ಬಳಿಕ ಬಾಣಂತಿ ಶೌಚಾಲಯಕ್ಕೆ ತೆರಳುವಾಗ ಕುಸಿದು ಬಿದ್ದಿದ್ದು, ಈ ವೇಳೆ ವೈದ್ಯರು ಇಂಜೆಕ್ಷನ್ ನೀಡಿದ್ದರು. ಅದಾದ ಬಳಿಕ ಬಾಣಂತಿ ಆರೋಗ್ಯದಲ್ಲಿ ಮತ್ತಷ್ಟು ಏರುಪೇರಾಗಿದ್ದು, ಬ್ರಿಮ್ಸ್ ಆಸ್ಪತ್ರೆಗೆ ಕರೆದೊಯ್ಯುವಂತೆ ತಿಳಿಸಿದ್ದರು. ಬ್ರಿಮ್ಸ್ ವೈದ್ಯರು ಪರೀಕ್ಷಿಸಿದಾಗ ಸಾವನ್ನಪ್ಪಿರುವುದಾಗಿ ತಿಳಿಸಿದ್ದಾರೆ. ಮೃತಳ ಕುಟುಂಬಸ್ಥರು ಖಾಸಗಿ ಆಸ್ಪತ್ರೆಯ ಎದುರು ಶವವಿಟ್ಟು ಪ್ರತಿಭಟನೆ ಮಾಡುತ್ತಿದ್ದಾರೆ. ವೈದ್ಯರ ನಿರ್ಲಕ್ಷ್ಯವೇ ಬಾಣಂತಿ ಸಾವಿಗೆ ಕಾರಣವೆಂದು ಆರೋಪ ಮಾಡಿದ್ದಾರೆ.

ಕಿರುಕುಳ: ದಯಾಮರಣ ಕೋರಿ ಪತ್ರ

ಮುಂಡರಗಿ: ಮೇಲಧಿಕಾರಿಗಳು ಕಿರುಕುಳ ನೀಡುತ್ತಿದ್ದು, ನನಗೆ ದಯಾಮರಣಕ್ಕೆ ಅನುಮತಿ ನೀಡಬೇಕು ಎಂದು ಕೋರಿ ತಾಲೂಕಿನ ಡಂಬಳ ಹೋಬಳಿಯ ಗ್ರಾಮ ಆಡಳಿತಾಧಿಕಾರಿ ಯೋಗೇಶ ಕುರಹಟ್ಟಿ ರಾಷ್ಟ್ರಪತಿ ಅವರಿಗೆ ಪತ್ರ ಬರೆದಿದ್ದಾರೆ. ಸಮರ್ಪಕವಾಗಿ ಕೆಲಸ ನಿರ್ವಹಿಸಿದರೂ ಕಿರುಕುಳ ನೀಡುತ್ತಾರೆ. ವಿನಾಕಾರಣ ಪದೇ ಪದೆ ನೋಟಿಸ್ ನೀಡಿ ಹಿಂಸೆ ಕೊಡುತ್ತಾರೆ. ದಿನಚರಿ ನೀಡಿಲ್ಲ ಎಂಬ ಆರೋಪದ ಮೇಲೆ ಎರಡು ತಿಂಗಳಿನಿಂದ ವೇತನ ತಡೆಹಿಡಿದಿದ್ದಾರೆ ಎಂದು ಪತ್ರದಲ್ಲಿ ಆರೋಪಿಸಿದ್ದಾರೆ. ಯೋಗೀಶ ಕುರಹಟ್ಟಿ ಅವರು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲ. ಹಲವು ಬಾರಿ ನೋಟಿಸ್ ನೀಡಲಾಗಿದೆ. ಪ್ರೊಬೆಷನರಿ ಅವಧಿಯನ್ನೂ ಪೂರ್ಣಗೊಳಿಸಿಲ್ಲ. ಪತ್ರ ಕುರಿತಂತೆ ಮೇಲಧಿಕಾರಿಗಳ ಜತೆಗೆ ಚರ್ಚಿಸುತ್ತೇನೆ ಎಂದು ತಹಶೀಲ್ದಾರ್ ಎರ್ರಿಸ್ವಾಮಿ ತಿಳಿಸಿದ್ದಾರೆ.

ಮೈಕ್ರೋ ಫೈನಾನ್ಸ್ ಕಿರುಕುಳ ಕೆರೆಗೆ ಹಾರಿ ಮಹಿಳೆ ಆತ್ಮಹತ್ಯೆ

ಬೈಲಹೊಂಗಲ: ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಬೇಸತ್ತು ವಿವಾಹಿತ ಮಹಿಳೆಯೊಬ್ಬರು ಮನೆಯ ಗೋಡೆಯ ಮೇಲೆ ಡೆತ್ ನೋಟ್ ಬರೆದು, ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಅನಿಗೋಳ ಗ್ರಾಮದಲ್ಲಿ ನಡೆದಿದೆ.

ಅನಿಗೋಳ ಗ್ರಾಮದ ಗೌರವ್ವ ನೀಲಪ್ಪ ಕೆಂಗಾನೂರು (36) ಆತ್ಮಹತ್ಯೆ ಮಾಡಿಕೊಂಡ ಮಹಿಳೆ ಎಂದು ಗುರುತಿಸಲಾಗಿದೆ.

ವಿವಾಹಿತ ಮಹಿಳೆ ಆಗಿದ್ದ ಗೌರವ್ವ ಜೀವನ ನಿರ್ವಹಣೆಗಾಗಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ 7ರಿಂದ 10 ಲಕ್ಷ ರು. ಸಾಲ ಮಾಡಿಕೊಂಡಿದ್ದರು ಎನ್ನಲಾಗಿದೆ. ಸಾಲ ತೀರಿಸುವಂತೆ ಮೈಕ್ರೋ ಫೈನಾನ್ಸ್ ಸಿಬ್ಬಂದಿಯಿಂದ ನಿರಂತರ ಕಿರುಕುಳ ನೀಡಲಾಗುತ್ತಿತ್ತು ಎಂದು ಕುಟುಂಬದವರು ಆರೋಪಿಸಿದ್ದಾರೆ. ಈ ಮಾನಸಿಕ ಒತ್ತಡವನ್ನು ಸಹಿಸಲಾಗದೆ ಗೌರವ್ವ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಆತ್ಮಹತ್ಯೆಗೂ ಮುನ್ನ ಗೋಡೆ ಮೇಲೆ ಬರೆದಿರುವ ಡೆತ್ ನೋಟ್ ಮನಕಲಕುವಂತಿದೆ. ಗೌರವ್ವ ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ಮನೆಯ ಗೋಡೆಯ ಮೇಲೆ ಪೆನ್ಸಿಲ್‌ನಿಂದ ಬರೆದಿದ್ದು, ಆರೂಢ ತಂಗಿಯನ್ನು ಚೆನ್ನಾಗಿ ನೋಡಿಕೊ. ನನ್ನ ಸಾವಿಗೆ ಸಾಲ ಕಾರಣ. ಸುಮವ್ವ, ಮಂಜವ್ವಾ, ಕಸ್ತೂರಿ ಮಕ್ಕಳು ನಿಮ್ಮ ಜವಾಬ್ದಾರಿ. ಸಿದ್ದಪ್ಪಾ ಆರೂಢನನ್ನು 10ನೇ ತರಗತಿ ಪಾಸ ಮಾಡಿಸು. ಇದೆ ನನ್ನ ಕೊನೆಯ ಆಸೆ ಎಂದು ಬರೆದು ಮನೆಯ ಸಮೀಪ ಇರುವ ಕೆರೆಗೆ ಹಾರಿ ಪ್ರಾಣ ಕಳೆದುಕೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ಬಗ್ಗೆ ಹೈಕಮಾಂಡ್ ಸ್ಪಷ್ಟನೆ ನೀಡಲಿ

ದಾವಣಗೆರೆ: ಹೈಕಮಾಂಡ್ ಸಿದ್ದರಾಮಯ್ಯನವರನ್ನೇ ಮುಖ್ಯಮಂತ್ರಿಯಾಗಿ ಮುಂದುವರಿಸುತ್ತೀರೋ, ಡಿ.ಕೆ.ಶಿವಕುಮಾರರನ್ನು ಮುಖ್ಯಮಂತ್ರಿ ಮಾಡುತ್ತೀರೋ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು ಎಂದು ಡಿಕೆಶಿ ಆಪ್ತ, ಚನ್ನಗಿರಿ ಶಾಸಕ ಬಸವರಾಜ ವಿ.ಶಿವಗಂಗಾ ಒತ್ತಾಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಕುರ್ಚಿ ವಿಚಾರದಲ್ಲಿ ಹೈಕಮಾಂಡ್ ಮಧ್ಯ ಪ್ರವೇಶಿಸಬೇಕು. ಸಿಎಂ ಆಗಿ ಸಿದ್ದರಾಮಯ್ಯನವರನ್ನೇ ಮುಂದುವರಿಸುತ್ತೀರೋ, ಡಿ.ಕೆ.ಶಿವಕುಮಾರರನ್ನು ಸಿಎಂ ಮಾಡುತ್ತೀರೋ ಎಂಬುದನ್ನೂ ಸ್ಪಷ್ಟಪಡಿಸಲೆಂದು ಮಾಧ್ಯಮಗಳ ಮೂಲಕ ಮನವಿ ಮಾಡುತ್ತಿದ್ದೇವೆ ಎಂದರು. ಸದ್ಯಕ್ಕೆ ಸಿಎಂ ಹುದ್ದೆ ಖಾಲಿ ಇಲ್ಲ. ಆದರೂ, ಸಿಎಂ ಕುರ್ಚಿ ವಿಚಾರವಾಗಿ ಏನು ನಡೆಯುತ್ತಿದೆಯೋ ಆ ವಿಚಾರದಲ್ಲಿ ಹೈಕಮಾಂಡ್ ಮಧ್ಯ ಪ್ರವೇಶಿಸಬೇಕು. ಪದೇಪದೇ ಮಾಧ್ಯಮಗಳು ನಮ್ಮನ್ನು ಪ್ರಶ್ನಿಸಿದಾಗ ಉತ್ತರ ಕೊಡದೇ ಇರುವುದಕ್ಕೂ ಆಗುವುದಿಲ್ಲ. ಹೈಕಮಾಂಡ್ ಮಧ್ಯ ಪ್ರವೇಶಿಸಿ, ಈ ವಿಚಾರವನ್ನು ಬಗೆಹರಿಸುವಂತೆ ಮನವಿ ಮಾಡಿದ್ದೇನೆ ಎಂದು ತಿಳಿಸಿದರು. 5 ವರ್ಷವೂ ಮುಖ್ಯಮಂತ್ರಿಯಾಗಿ ಮುಂದುವರಿಸುತ್ತಾರಾ, ಮುಂದಿನ ಅವಧಿಗೂ 5 ವರ್ಷಕ್ಕೆ ಸೇರಿಸಿ, ಮುಂದುವರಿಸುತ್ತಾರಾ? ಡಿ.ಕೆ.ಶಿವಕುಮಾರರನ್ನು ಸಿಎಂ ಮಾಡಿದರೂ ಸ್ವಾಗತಿಸುತ್ತೇವೆ. ಪಕ್ಷದ ಸಾಮಾನ್ಯ ಕಾರ್ಯಕರ್ತರನ್ನು ಸಿಎಂ ಮಾಡಿದರೂ ಸ್ವಾಗತಿಸುತ್ತೇವೆ. ಆದರೆ, ಸಿಎಂ ವಿಚಾರದಲ್ಲಿ ಹೈಕಮಾಂಡ್ ತನ್ನ ನಿಲುವನ್ನು ಸ್ಪಷ್ಟಪಡಿಸ ಬೇಕು ಎಂದು ಹೇಳಿದರು.

ಅನಸ್ತೇಶಿಯಾ ಕೊಟ್ಟು ದೊಡ್ಡಪ್ಪ, ದೊಡ್ಡಮ್ಮನ ಕೊಲೆ

ಶಿವಮೊಗ್ಗ: ಶಂಕಾಸ್ಪದ ರೀತಿಯಲ್ಲಿ ಭದ್ರಾವತಿಯಲ್ಲಿ ಸಾವನ್ನಪ್ಪಿದ ದಂಪತಿ ಪ್ರಕರಣಕ್ಕೆ ತಿರುವುದು ಸಿಕ್ಕಿದ್ದು, ಅನಸ್ತೇಶಿಯಾ ಕೊಟ್ಟು ಇಬ್ಬರನ್ನು ಕೊಲೆ ಮಾಡಿರುವ ಅಂಶ ಬೆಳಕಿಗೆ ಬಂದಿದೆ. ಭದ್ರಾವತಿ ಬೂತನ ಗುಡಿ ಬಳಿಯ ಮನೆಯಲ್ಲಿ ಮಂಗಳವಾರ ಜಯಮ್ಮ (75) ಮತ್ತು ಚಂದ್ರಣ್ಣ (78) ಅನುಮಾನಾಸ್ಪದವಾಗಿ ಸಾವಿಗೀಡಾಗಿದ್ದರು.



ಭದ್ರಾವತಿಯಲ್ಲಿ ವೃದ್ಧ ದೊಡ್ಡಪ್ಪ ಹಾಗೂ ದೊಡ್ಡಮ್ಮನನ್ನು ವೈದ್ಯನಾಗಿದ್ದ ಡಾ.ಮಲ್ಲೇಶ್ ಅನಸ್ತೇಶಿಯಾ ಕೊಟ್ಟು ಹತ್ಯೆ ಮಾಡಿದ್ದಾನೆ. ಸದ್ಯ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಆಯುರ್ವೇದಿಕ್ ವೈದ್ಯನಾಗಿದ್ದ ಮಲ್ಲೇಶ್, ಸಾಲ ಮಾಡಿಕೊಂಡಿದ್ದ. ಸಾಲ ತೀರಿಸಲು ದೊಡ್ಡಪ್ಪ ಚಂದ್ರಪ್ಪನವರ ಬಳಿ 15 ಲಕ್ಷ ರು. ಕೇಳಿದ್ದ. ಆದರೆ ಚಂದ್ರಪ್ಪ ಅವರು ಹಣ ಕೊಡಲು ನಿರಾಕರಿಸಿದ್ದರು. ಇದೇ ಸೇಡಿಗೆ ಚಂದ್ರಪ್ಪ ಹಾಗೂ ಜಯಮ್ಮ ಅವರಿಗೆ ಚಿಕಿತ್ಸೆ ಕೊಡುವುದಾಗಿ ಹೆಚ್ಚಿನ ಡೋಸೇಜ್ ಅನಸ್ತೇಶಿಯಾ ಕೊಟ್ಟಿದ್ದ. ಇದರಿಂದ ತಕ್ಷಣ ಬಿಪಿ ಕಡಿಮೆ ಆಗಿದೆ. ಬಳಿಕ ಇಬ್ಬರನ್ನು ಬೇರೆ ಬೇರೆ ಮಲಗಿಸಿ ಚಿನ್ನಾಭರಣ ದೋಚಿದ್ದ. ಬಳಿಕ ಚಿನ್ನವನ್ನು ಅಡವಿಟ್ಟಿದ್ದಾನೆ. ಬಳಿಕ ಸಾಲ ತೀರಿಸಿ ಅಕೌಂಟ್‌ನಲ್ಲಿ 50,000 ರು. ಉಳಿಸಿಕೊಂಡಿದ್ದಾನೆ. 80 ಗ್ರಾಂ ಚಿನ್ನವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೇಸರಿ ಧ್ವಜ ಪ್ರದರ್ಶನ: ಉಡುಪಿ ಡಿಸಿ ವಿರುದ್ಧ ಸಿಎಂಗೆ ದೂರು

ಉಡುಪಿ: ಉಡುಪಿ ಕೃಷ್ಣಮಠದ ಪರ್ಯಾಯದ ಮೆರವಣಿಗೆಗೆ ಚಾಲನೆ ನೀಡುವ ವೇಳೆ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಅವರು ಕೇಸರಿ ಧ್ವಜವನ್ನು ಪ್ರದರ್ಶಿಸಿದ್ದರ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಪರ-ವಿರೋಧ ಚರ್ಚೆ ನಡೆದಿವೆ.

'ಆರ್‌ಎಸ್‌ಎಸ್ ಧ್ವಜ ಪ್ರದರ್ಶಿಸಿದ ಜಿಲ್ಲಾಧಿಕಾರಿ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಉಡುಪಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾನೂನು ಮತ್ತು ಮಾನವ ಹಕ್ಕುಗಳ ವಿಭಾಗದ ಅಧ್ಯಕ್ಷ ಹರೀಶ್ ಶೆಟ್ಟಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೂರು ನೀಡಿದ್ದಾರೆ.

'ಜ.18ರಂದು ಮುಂಜಾನೆ 3 ಗಂಟೆಗೆ ಉಡುಪಿ ನಗರದ ಜೋಡುಕಟ್ಟೆಯಿಂದ ಶ್ರೀಕೃಷ್ಣ ಮಠದವರೆಗೆ ಪರ್ಯಾಯ ಮೆರವಣಿಗೆ ನಡೆದಿದ್ದು, ಮೆರವಣಿಗೆ ಆರಂಭಕ್ಕೂ ಮೊದಲು ಶಾಸಕ ಯಶ್‌ಪಾಲ್ ಸುವರ್ಣ ಅವರು ಆರ್‌ಎಸ್‌ಎಸ್ ಧ್ವಜವನ್ನು ಜಿಲ್ಲಾಧಿಕಾರಿ ಕೈಗೆ ನೀಡಿದ್ದಾರೆ. ಜಿಲ್ಲಾಧಿಕಾರಿ ಅವರು ಆ ಧ್ವಜವನ್ನು ಕೈಯಲ್ಲಿ ಹಿಡಿದು ಮೇಲಕ್ಕೆ ಎತ್ತಿ, ಸಾರ್ವಜನಿಕವಾಗಿ ಪ್ರದರ್ಶಿಸಿದ್ದರು. ಅವರ ನಡೆ ಸರಕಾರಿ ಸೇವಾ ನಿಯಮಗಳು ಮತ್ತು ಸಂವಿಧಾನದ ಧರ್ಮ ನಿರಪೇಕ್ಷ ತತ್ವಗಳಿಗೆ ವಿರುದ್ಧವಾಗಿದ್ದು, ಈ ನಡೆ ಅತ್ಯಂತ ಆಕ್ಷೇಪಾರ್ಹವಾಗಿದೆ. ಸೂಕ್ತ ತನಿಖೆ ನಡೆಸಿ, ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಆಗ್ರಹಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ., 'ನಾನು ಪ್ರದರ್ಶಿಸಿದ್ದು ಭಗವಾಧ್ವಜವಾಗಿದ್ದು, ಕೃಷ್ಣಮಠದ ಕಾರ್ಯಕ್ರಮಗಳಲ್ಲಿ ಅಂತಹ ಧ್ವಜವನ್ನು ಬಳಸುತ್ತಾರೆ. ಯಾವುದೇ ರಾಜಕೀಯ ಪ್ರೇರಿತವಾಗಿ ನಾನು ಭಾಗವಹಿಸಿಲ್ಲ. ಪರ್ಯಾಯ ಮೆರವಣಿಗೆಗೆ ಸಾಮಾನ್ಯವಾಗಿ ಉಡುಪಿ ನಗರಸಭೆಯ ಅಧ್ಯಕ್ಷರು ಚಾಲನೆ ನೀಡುತ್ತಾರೆ. ಈಗ ನಗರಸಭೆಗೆ ಆಡಳಿತ ಮಂಡಳಿ ಇಲ್ಲ. ನಗರಸಭೆಯ ಆಡಳಿತಾಧಿಕಾರಿಯಾಗಿ ನಾನು ಚಾಲನೆ ನೀಡಿದ್ದೇನೆ' ಎಂದು ಹೇಳಿದ್ದಾರೆ.

ಪಾಕಿಸ್ತಾನ ಧ್ವಜವಾಗಿದ್ದರೆ ಟೀಕಿಸಬಹುದಿತ್ತು: ಜಿಲ್ಲಾಧಿಕಾರಿ ಭಗವಾಧ್ವಜ ಹಿಡಿದು ಚಾಲನೆ ಕೊಟ್ಟಿದ್ದಾರೆ. ಹಿಂದೆಯೂ ಹೀಗೇ ನೀಡಲಾಗುತ್ತಿತ್ತು. ಒಂದು ವೇಳೆ ಅವರಿಗೆ ಪಾಕಿಸ್ತಾನ ಧ್ವಜ ಕೊಟ್ಟಿದ್ದರೆ ಟೀಕೆ ಮಾಡಬಹುದಿತ್ತು. ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಅಂದವರ ಮೇಲೆ ಕ್ರಮಕೈಗೊಂಡಿಲ್ಲ. ಪರ್ಯಾಯದ ಯಶಸ್ಸನ್ನು ಸಹಿಸಲು ಆಗದೆ ಈಗ ಟೀಕೆ ಮಾಡಲಾಗುತ್ತಿದೆ.

ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅನಿವಾರ್ಯ ಕಾರಣದಿಂದ ಪರ್ಯಾಯಕ್ಕೆ ಬರಲಿಲ್ಲ. ಆದರೆ ಕನಿಷ್ಠ ಮಾಧ್ಯಮದ ಮೂಲಕವಾದರೂ ಪರ್ಯಾಯಕ್ಕೆ ಅವರು ಶುಭ ಹಾರೈಸಿಲ್ಲ. ನಾನು ದುರುದ್ದೇಶದಿಂದ ಜಿಲ್ಲಾಧಿಕಾರಿ ಕೈಗೆ ಧ್ವಜ ಕೊಟ್ಟಿದ್ದಲ್ಲ ಎಂದು ಶಾಸಕ ಯಶ್‌ಪಾಲ್ ಸುವರ್ಣ ಪ್ರತಿಕ್ರಿಯಿಸಿದ್ದಾರೆ.



ಉಡುಪಿ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಅವರು ಪರ್ಯಾಯ ಮೆರವಣಿಗೆಗೆ ಚಾಲನೆ ನೀಡುವ ವೇಳೆ ಕೇಸರಿ ಧ್ವಜ ಪ್ರದರ್ಶಿಸಿದರು.

> ಜಿಲ್ಲಾಡಳಿತದ ಪರವಾಗಿ ಭಾಗವಹಿಸಿದಾಗ ಸಂವಿಧಾನಿಕ ನಿಯಮಗಳನ್ನು ಪಾಲಿಸಬೇಕು ಎಂಬ ಜಾಗೃತಿ ಜಿಲ್ಲಾಧಿಕಾರಿ ಅವರಿಗೆ ಇರಬೇಕಿತ್ತು. ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.
>
> -ಕೆ.ಫಣಿರಾಜ್ ಪ್ರಧಾನ ಸಂಚಾಲಕ, ಸಹಬಾಳ್ವೆ ಸಂಘಟನೆ

> ಉಡುಪಿ ಪರ್ಯಾಯದ ಮೆರವಣಿಗೆಯಲ್ಲಿ ಕೇಸರಿ ಧ್ವಜ ಹಾರಿಸದೇ ಕಾಂಗ್ರೆಸ್ ಬಾವುಟ ಪ್ರದರ್ಶನ ಮಾಡಬೇಕಿತ್ತೇ?
>
> -ವಿ. ಸುನಿಲ್ ಕುಮಾರ್

ವಿಶ್ವವಾಣಿ

ಸಂಪಾದಕೀಯ

ಇದು ಆತ್ಮವಿಮರ್ಶೆಯ ಹೊತ್ತು

ರಾಜಕಾರಣಿಗಳು, ಅವರ ಹಿಂಬಾಲಕರು ಗುಂಪು ಘರ್ಷಣೆಯಲ್ಲಿ ತೊಡಗುವುದು, ಅಧಿಕಾರಿಗಳು ಕಚೇರಿಯಲ್ಲೇ ರಾಸಲೀಲೆ ನಡೆಸುವುದು, ಸಮಾಜದ ಮೌಲ್ಯಗಳ ಪ್ರತಿನಿಧಿಗಳೆಂದೇ ಗೌರವಿಸಲ್ಪಡುವ ಪೀಠಾಧಿಪತಿಗಳು, ಸನ್ಯಾಸಿಗಳು ಅನೈತಿಕ ಸಂಬಂಧವನ್ನು ಹೊಂದಿರುವುದು... ನಿತ್ಯ ಇಂತಹ ಸುದ್ದಿಗಳನ್ನೇ ಕೇಳುತ್ತ, ನೋಡುತ್ತ, ಇಡೀ ವ್ಯವಸ್ಥೆಯ ಬಗ್ಗೆಯೇ ಅನುಮಾನ ಬರುವಂತಾಗಿದೆ. ಸದ್ಯ ಕೆಲವು ಬಹಿರಂಗವಾಗಿವೆ ಅಷ್ಟೇ. ಜನರ ಬಾಯಿಮಾತಿಗೆ ತುತ್ತಾಗಿ ಒಳಗೊಳಗೇ ಮಾಡಬಾರದ್ದನ್ನೆಲ್ಲ ಮಾಡುತ್ತ, ಅದೃಷ್ಟವಶಾತ್ ಕುಣಿಕೆಯಿಂದ ತಪ್ಪಿಸಿಕೊಂಡವರ ಸಂಖ್ಯೆ ಅಗಾಧಪ್ರಮಾಣದಲ್ಲಿದೆ. ನಮ್ಮ ಸುತ್ತಮುತ್ತ ಎತ್ತ ನೋಡಿದರತ್ತ ಅನೈತಿಕತೆ ತಾಂಡವವಾಡುತ್ತ ಇರುವುದನ್ನು ನೋಡಿದರೂ ಸುಮ್ಮನಿರಬೇಕಾದ ಹತಾಶೆ ಪ್ರಾಮಾಣಿಕರದ್ದು. ಅದೃಷ್ಟವಶಾತ್ ಪಾರಾದವರದ್ದು ಒಂದು ರೀತಿಯಾದರೆ, ಯೋಜಿತವಾಗಿ ಎಲ್ಲವನ್ನೂ ನಡೆಸಿ ತಪ್ಪಿಸಿಕೊಳ್ಳುವವರ ಸಂಖ್ಯೆಯನ್ನು ಹೇಳಲು ಸಾಧ್ಯವಿಲ್ಲ. ಬಹುತೇಕ ರಾಜಕಾರಣಿ ಗಳು, ಅಧಿಕಾರಿಗಳು, ದೊಡ್ಡ ಕಂಪನಿಗಳ ಮುಖ್ಯಸ್ಥರು ಇದೇ ವ್ಯಾಪ್ತಿಯಲ್ಲಿ ಬರುತ್ತಾರೆ. ಇಂತಹದ್ದೊಂದು ಸಮಾಜವನ್ನು ನೋಡಿಕೊಂಡು, ಈ ಅಶುದ್ಧ, ಅಶಕ್ತ, ಅನೀತಿಯುಕ್ತ, ಆತ್ಮವಂಚಕ ವ್ಯವಸ್ಥೆಯಲ್ಲೇ ಬೆಳೆಯುವ ಯುವ ಜನತೆಯ ಮನಸ್ಥಿತಿ ಏನಾಗಬಹುದು? ಭಾರತಕ್ಕೆ ಹೊರಗಿನ ಶತ್ರುಗಳು ದೊಡ್ಡ ಸಮಸ್ಯೆ ಎನ್ನುವುದಕ್ಕಿಂತ ಆಂತರಿಕವಾಗಿರುವ ದುಸ್ಥಿತಿಯೇ ಬಹಳ ಕಷ್ಟವೆನಿಸುತ್ತಿದೆ. ಸಮಾಜವನ್ನು ನಡೆಸುವ ಒಬ್ಬ ಅಧಿಕಾರಿ, ಜನನಾಯಕ, ಶ್ರೀಗಳು ಎಲ್ಲ ಅನಾಚಾರ ಮಾಡಿಯೂ ತಾವು ಮಾಡಿಲ್ಲ ಎಂದು ಸಾಧಿಸಲು ಹೆಣಗಾಡುತ್ತಾರೆ. ಆದರೆ ಅವರಿಗೆ ತಮ್ಮ ತಪ್ಪಿನ ಬಗ್ಗೆ ಕಿಂಚಿತ್ತೂ ಕಳವಳವಿರುವುದಿಲ್ಲ. ತಾವು ಸಿಕ್ಕಿಹಾಕಿಕೊಂಡಿದ್ದಷ್ಟೇ ಅವರಿಗೆ ಬೇಸರದ ಸಂಗತಿಯಾಗಿರುತ್ತದೆ. ನಾವು ತಾರೆಯರು ಎಂದು ಕರೆಯುವ ಸಿನಿಮಾ ನಟರು ಮುಲಾಜಿಲ್ಲದೇ ಕೊಲೆ ಮಾಡುತ್ತಾರೆ ಎನ್ನುವುದನ್ನು ಊಹಿಸಲೂ ಸಾಧ್ಯವಿಲ್ಲ. ಇಂತಹ ಅನಾರೋಗ್ಯಕಾರಿ ಸಮಾಜದ ಭಾಗವಾಗುವ ಹೊಸಪೀಳಿಗೆ ಮುಂದೆ ಎಂತಹ ವ್ಯಕ್ತಿಗಳಾಗಿ ಬೆಳೆಯಬಹುದು? ಇದರಿಂದ ಅವರು ಬೇಸತ್ತು ದೇಶ ತೊರೆಯಲು ನಿರ್ಧರಿಸಿದರೆ ಅವರನ್ನು ನಿಂದಿಸಬೇಕೇ? ಪ್ರತಿಯೊಬ್ಬರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಹೊತ್ತಿದು.

ಸೊಂಪಾದಕೀಯ

ದಂಡಂ ದಶಗುಣಂ

ನಮ್ಮ ಬೆಂಗಳೂರು ನಗರ ಏನಕ್ಕೆ ಫೇಮಸ್ ಅಂತ ಕೇಳಿದ್ರೆ, ಕ್ಲಾಸಿಗೆ ಹೋಗದ ಮಕ್ಕಳು ಕೂಡಾ 'ಟ್ರಾಫಿಕ್ಕಿಗೆ' ಅಂತ ಸುಲಭವಾಗಿ ಹೇಳಬಲ್ಲರು. ಅದು ನಿಜ ಕೂಡಾ. ದೇಶದ ಜನರಿಗೆ ಬದುಕಲು ಬೆಂಗಳೂರು ಎಷ್ಟು ಸುಂದರ ನಗರವೋ, ಟ್ರಾಫಿಕ್ ವಿಷಯದಲ್ಲಿ ಅಷ್ಟೇ ಕಿರಿಕಿರಿ ಮೂಡಿಸುವ ನಗರ ಕೂಡಾ ಹೌದು. ಆದರೆ ಅದರ ಜತೆಗೆ ಬೆಂಗಳೂರು ನಗರದ ನಾಗರಿಕರು ಟ್ರಾಫಿಕ್ ನಿಯಮಗಳನ್ನು ಮೀರುವುದರಲ್ಲೂ ಎತ್ತಿದ ಕೈ. ಅದಕ್ಕಾಗಿ ಎಷ್ಟೇ ದಂಡ ತೆತ್ತರೂ ಅವರು ಬುದ್ಧಿ ಕಲಿಯೋದಿಲ್ಲ. ಈಗಂತೂ ನಗರ ಟ್ರಾಫಿಕ್ ಪೊಲೀಸಿನವರು ಸಾಕಷ್ಟು ತಂತ್ರಜ್ಞಾನದ ಬಳಕೆ ಮಾಡುತ್ತಿದ್ದಾರೆ. ಆದರೆ ನಮ್ಮ ನಾಗರಿಕರು ಮಾತ್ರ ಟ್ರಾಫಿಕ್ ನಿಯಮ ಮೀರಬಾರದು ಅನ್ನೋ ಸಾಮಾನ್ಯ ಜ್ಞಾನವನ್ನು ಮಾತ್ರ ಬಳಸುತ್ತಿಲ್ಲ. ಅದರ ಪರಿಣಾಮವಾಗಿ ಪೊಲೀಸರು ಸಾರ್ವಜನಿಕರಿಂದ ಕೋಟ್ಯಂತರ ರು. ದಂಡ ವಸೂಲಾತಿ ಮಾಡಿದ್ದಾರೆ. ನೂರಾರು ಕೋಟಿ ರು. ಮೊತ್ತ ಸರಕಾರಕ್ಕೆ ಹೋಗಿರುವುದನ್ನು ನೋಡಿದಾಗ ನಮ್ಮ ಜನ ಈ ದಂಡ ವಸೂಲಾತಿ ಫಂಡ್‌ಗೆ ಅದೆಷ್ಟು ಉದಾರವಾಗಿ ದೇಣಿಗೆ ನೀಡುತ್ತಿದ್ದಾರೆ ಅನ್ನೋದರ ಅಂದಾಜು ಸಿಗುತ್ತದೆ. ಇದು ನಮ್ಮ ಊರಿನ ಜನ ರಸ್ತೆಯಲ್ಲಿ ವಾಹನ ಚಲಾಯಿಸುವಾಗ ತೋರಿಸುವ ಬೇಜವಾಬ್ದಾರಿತನ. ಇದಲ್ಲದೆ 'ರೋಡ್ ರೇಜ್' ಪ್ರಕರಣ ಕೂಡಾ ಇತ್ತೀಚೆಗೆ ತುಂಬಾ ಸದ್ದು ಮಾಡುತ್ತಿದೆ. ಸಣ್ಣ ಜಗಳದಂತೆ ಶುರುವಾಗೋ ಈ ಪ್ರಕರಣಗಳಲ್ಲಿ ಇತ್ತೀಚೆಗೆ ಕೆಲವರು ಪ್ರಾಣ ಕಳೆದುಕೊಂಡಿದ್ದೂ ಉಂಟು. ಅಯೋಗ್ಯನೊಬ್ಬ ಬೈಕ್ ಒಂದನ್ನು ಅಟ್ಟಿಸಿಕೊಂಡು ಹೋಗಿ ಕಾರಿನಿಂದ ಗುದ್ದಿ ಬೈಕ್ ಸವಾರನ ಸಾವಿಗೆ ಕಾರಣ ಆಗಿದ್ದಾನೆ. ನಮ್ಮ ವ್ಯವಸ್ಥೆ ಈ ರೀತಿ ಹದಗೆಟ್ಟಿರೋದನ್ನು ನೋಡಿದಾಗ ಸಂಚಾರ ನಿಯಮ ಉಲ್ಲಂಘನೆ ಜತೆಗೆ ರಸ್ತೆಯಲ್ಲಿ ಧಿಮಾಕು ತೋರಿಸುವ ದುರಹಂಕಾರಿಗಳಿಗೂ ಸರಿಯಾದ ವ್ಯವಸ್ಥೆ ಮಾಡುವ ಅಗತ್ಯ ಇದೆ ಅನ್ನಿಸೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಯಾರು ಈ ಅರ್ಮಾಂಡೋ?

ಪಾರಿವಾಳಗಳ ರೇಸಿಂಗ್ ಜಗತ್ತಿನಲ್ಲಿ 'ಅರ್ಮಾಂಡೋ' ಎಂಬ ಹೆಸರು ಒಂದು ದಂತಕಥೆ. ಇದನ್ನು ಪಾರಿವಾಳಗಳ ಲೋಕದ 'ಲೂಯಿಸ್ ಹ್ಯಾಮಿಲ್ಟನ್' ಅಥವಾ 'ಕ್ರಿಸ್ಟಿಯಾನೋ ರೊನಾಲ್ಡೋ' ಎಂದು ಕರೆಯಲಾಗುತ್ತದೆ. 2019ರಲ್ಲಿ ನಡೆದ ಒಂದು ಐತಿಹಾಸಿಕ ಹರಾಜಿನಲ್ಲಿ ಅರ್ಮಾಂಡೋ ವಿಶ್ವದ ಅತ್ಯಂತ ದುಬಾರಿ ಪಾರಿವಾಳವಾಗಿ ಹೊರಹೊಮ್ಮಿತು. ಅಷ್ಟಕ್ಕೂ ಅರ್ಮಾಂಡೋ ಯಾರು? ಅರ್ಮಾಂಡೋ ಬೆಲ್ಜಿಯಂ ಮೂಲದ ಒಬ್ಬ ಪ್ರಸಿದ್ಧ ಪಾರಿವಾಳ ಸಾಕಾಣಿಕೆದಾರ (ಬ್ರೀಡರ್) ಜೋಯಲ್ ವರ್ಶೂಟ್ ಎಂಬುವವರಿಂದ ಬೆಳೆಸಲ್ಪಟ್ಟ ರೇಸಿಂಗ್ ಪಾರಿವಾಳ. ಬೆಲ್ಜಿಯಂ ದೇಶವು ವಿಶ್ವದ ಅತ್ಯುತ್ತಮ ರೇಸಿಂಗ್ ಪಾರಿವಾಳಗಳಿಗೆ ಹೆಸರುವಾಸಿಯಾಗಿದೆ. ಅರ್ಮಾಂಡೋ ಕೇವಲ ಒಂದು ಹಕ್ಕಿಯಲ್ಲ, ಅದು ರೇಸಿಂಗ್ ಜಗತ್ತಿನಲ್ಲಿ ಅಜೇಯ ಶಕ್ತಿಯಾಗಿ ಗುರುತಿಸಲ್ಪಟ್ಟ ಅತ್ಯುನ್ನತ ಅಥ್ಲೀಟ್. 2019ರ ಮಾರ್ಚ್‌ನಲ್ಲಿ ಆನ್‌ಲೈನ್ ಹರಾಜು ಸಂಸ್ಥೆಯಾದ ಪೈಪ (PIPA) ಮೂಲಕ ಅರ್ಮಾಂಡೋ ಹರಾಜಿಗೆ ಬಂದಿತು. ಆರಂಭದಲ್ಲಿ ಈ ಪಾರಿವಾಳವು ಸುಮಾರು 4-5 ಲಕ್ಷ ಯುರೋಗಳಿಗೆ ಮಾರಾಟವಾಗಬಹುದು ಎಂದು ಅಂದಾಜಿಸಲಾಗಿತ್ತು. ಆದರೆ, ಹರಾಜು ಪ್ರಕ್ರಿಯೆ ಆರಂಭವಾದ ಕೂಡಲೇ ಬೆಲೆ ಗಗನಕ್ಕೇರಿತು. ಇಬ್ಬರು ಚೀನೀ ಉದ್ಯಮಿಗಳ ನಡುವೆ ನಡೆದ ಭಾರಿ ಪೈಪೋಟಿಯಿಂದಾಗಿ, ಅರ್ಮಾಂಡೋ ಅಂತಿಮವಾಗಿ 1.25 ಮಿಲಿಯನ್ ಯುರೋಗಳಿಗೆ (ಸುಮಾರು 10 ರಿಂದ 11 ಕೋಟಿ ರುಪಾಯಿಗಳು) ಮಾರಾಟವಾಯಿತು. ಈ ಮೂಲಕ ಅದು ಅಂದಿನ ಕಾಲಕ್ಕೆ ಜಗತ್ತಿನ ಅತ್ಯಂತ ದುಬಾರಿ ಪಾರಿವಾಳ ಎಂಬ ಗಿನ್ನೆಸ್ ದಾಖಲೆಯನ್ನು ಬರೆಯಿತು. ನಂತರದ ದಿನಗಳಲ್ಲಿ 'ನ್ಯೂ ಕಿಮ್' ಎಂಬ ಪಾರಿವಾಳ ಇದಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟವಾದರೂ, ಗಂಡು ಪಾರಿವಾಳಗಳಲ್ಲಿ ಅರ್ಮಾಂಡೋ ಇಂದಿಗೂ ಅತ್ಯಂತ ಪ್ರಶಸ್ತವಾಗಿದೆ. ಅರ್ಮಾಂಡೋ ಏಕೆ ಅಷ್ಟು ವಿಶೇಷ? ಅರ್ಮಾಂಡೋಗೆ ಇಷ್ಟೊಂದು ಬೆಲೆ ಬರಲು ಅದರ ದೈಹಿಕ ಶಕ್ತಿಗಿಂತ ಹೆಚ್ಚಾಗಿ ಅದರ 'ಗೆಲುವಿನ ದಾಖಲೆಗಳು' ಕಾರಣ. ಅರ್ಮಾಂಡೋ 'ಲಾಂಗ್ ಡಿಸ್ಟೆನ್ಸ್' ರೇಸ್‌ಗಳಲ್ಲಿ ನಿಪುಣನಾಗಿತ್ತು. ಸಾವಿರಾರು ಕಿಮೀ ದೂರದಿಂದ ಅತ್ಯಂತ ವೇಗವಾಗಿ ಮತ್ತು ದಾರಿ ತಪ್ಪದೇ ತನ್ನ ಗೂಡಿಗೆ ಮರಳುವ ಅದ್ಭುತ ಕೌಶಲ ಅದರದ್ದಾಗಿತ್ತು. ಅದು ಭಾಗವಹಿಸಿದ ಪ್ರಮುಖ ರೇಸ್‌ಗಳಾದ 'ಆಂಗೌಲೆಮ್' ಮತ್ತು 'ಲಿಮೋಗ್ಸ್'ನಂಥ ಕಠಿಣ ಸ್ಪರ್ಧೆಗಳಲ್ಲಿ ಅಗ್ರಸ್ಥಾನ ಗಳಿಸಿತ್ತು. ಹವಾಮಾನ ವೈಪರೀತ್ಯ ಅಥವಾ ಹದ್ದುಗಳಂಥ ಬೇಟೆ ಹಕ್ಕಿಗಳ ದಾಳಿಯನ್ನು ಎದುರಿಸಿ ಗೆಲ್ಲುವ ವಿಶಿಷ್ಟ ಸಾಮರ್ಥ್ಯ ಅರ್ಮಾಂಡೋಗಿತ್ತು. ಇದನ್ನು ತಜ್ಞರು 'ಪಾರಿವಾಳಗಳ ಜಗತ್ತಿನ ಐನ್‌ಸ್ಟೈನ್' ಎಂದು ಕರೆದಿದ್ದೂ ಉಂಟು. ಒಬ್ಬ ಚೀನೀ ಉದ್ಯಮಿ ಇಷ್ಟೊಂದು ದೊಡ್ಡ ಮೊತ್ತ ನೀಡಿ ಈ ಪಾರಿವಾಳವನ್ನು ಖರೀದಿಸಿದ್ದು ಕೇವಲ ಅದನ್ನು ರೇಸ್‌ಗಳಲ್ಲಿ ಹಾರಿಸಲು ಮಾತ್ರವಲ್ಲ. ಏಕೆಂದರೆ ಹರಾಜಿನ ವೇಳೆಗೆ ಅರ್ಮಾಂಡೋಗೆ 5 ವರ್ಷ ವಯಸ್ಸಾಗಿತ್ತು ಮತ್ತು ಅದು ರೇಸಿಂಗ್‌ನಿಂದ ನಿವೃತ್ತಿ ಪಡೆಯುವ ಹಂತದಲ್ಲಿತ್ತು. ಅರ್ಮಾಂಡೋದ ನಿಜವಾದ ಮೌಲ್ಯ ಅದರ ವಂಶವಾಹಿಯಲ್ಲಿದೆ (ಡಿಎನ್‌ಎ). ಅರ್ಮಾಂಡೋ ಅಂಥ ಚಾಂಪಿಯನ್ ಹಕ್ಕಿಯ ಮರಿಗಳು ಕೂಡ ಚಾಂಪಿಯನ್ ಆಗುವ ಸಾಧ್ಯತೆ ಶೇ.90 ಇರುತ್ತದೆ. ಅರ್ಮಾಂಡೋದ ಮೂಲಕ ಉತ್ಪಾದಿಸಲಾಗುವ ಪ್ರತಿಯೊಂದು ಮರಿಯನ್ನು ಲಕ್ಷಾಂತರ ರುಪಾಯಿಗಳಿಗೆ ಮಾರಾಟ ಮಾಡಬಹುದು. ಹೀಗಾಗಿ, 10 ಕೋಟಿ ರುಪಾಯಿ ಹೂಡಿಕೆ ಮಾಡಿದ ಮಾಲೀಕರು, ಅದರ ಮರಿಗಳನ್ನು ಮಾರಾಟ ಮಾಡುವ ಮೂಲಕ ಮುಂದಿನ ಕೆಲವು ವರ್ಷಗಳಲ್ಲಿ 20ರಿಂದ 30 ಕೋಟಿ ರುಪಾಯಿಗಳನ್ನು ಸುಲಭವಾಗಿ ಗಳಿಸಬಹುದು. ಅರ್ಮಾಂಡೋ ಹುಟ್ಟಿದ್ದು ಬೆಲ್ಜಿಯಂನಲ್ಲಿ ಎಂಬುದು ಕೂಡ ಅದರ ಬೆಲೆ ಹೆಚ್ಚಲು ಒಂದು ಕಾರಣ. ಬೆಲ್ಜಿಯಂನಲ್ಲಿ ಪಾರಿವಾಳ ಸಾಕಣೆ ಎಂಬುದು 19ನೇ ಶತಮಾನದಿಂದಲೂ ಇರುವ ಒಂದು ಸಂಪ್ರದಾಯ. ಅಲ್ಲಿನ ಹವಾಮಾನ ಮತ್ತು ಅಲ್ಲಿನ ತರಬೇತುದಾರರು ನೀಡುವ ತರಬೇತಿ ವಿಶ್ವದಲ್ಲೇ ಶ್ರೇಷ್ಠವಾದುದು. ಅರ್ಮಾಂಡೋನ ಮಾಲೀಕ ಜೋಯಲ್ ವರ್ಶೂಟ್ ಈ ಹಕ್ಕಿಯನ್ನು ದಿನದ 24 ಗಂಟೆಯೂ ಅತ್ಯಂತ ಕಟ್ಟುನಿಟ್ಟಿನ ನಿಗಾದಲ್ಲಿ ಬೆಳೆಸಿದ್ದರು. ಅರ್ಮಾಂಡೋದ ಹರಾಜು ಜಾಗತಿಕ ಮಾರುಕಟ್ಟೆಯಲ್ಲಿ ಚೀನಾದ ಪ್ರಾಬಲ್ಯವನ್ನು ತೋರಿಸುತ್ತದೆ. ಚೀನಾದಲ್ಲಿ ಪಾರಿವಾಳ ರೇಸಿಂಗ್ ಈಗ ಒಂದು ಬೃಹತ್ ಉದ್ಯಮ. ಅಲ್ಲಿ ಒಂದು ರೇಸ್‌ನ ಬಹುಮಾನ ಮೊತ್ತವೇ ಕೋಟ್ಯಂತರ ರುಪಾಯಿಗಳಾಗಿರುತ್ತವೆ. ಶ್ರೀಮಂತ ಚೀನೀ ಉದ್ಯಮಿಗಳು ತಮ್ಮಲ್ಲಿರುವ ಅತ್ಯುತ್ತಮ ಪಾರಿವಾಳಗಳನ್ನು ಪ್ರದರ್ಶಿಸುವುದು ಒಂದು ಪ್ರತಿಷ್ಠೆಯ ವಿಷಯವಾಗಿದೆ.

ಹದಿನೇಳು ವರ್ಷಗಳ ದ್ವೇಷ ಮತ್ತು ಸ್ನೇಹದ ಮರುಜನ್ಮ

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಇಬ್ಬರು ಮಹಾನ್ ಚೇತನಗಳು ಅಥವಾ ದೈತ್ಯ ಪ್ರತಿಭೆಗಳು ಮುಖಾಮುಖಿಯಾದಾಗ ಅಲ್ಲಿ ಕೇವಲ ವಿಚಾರಗಳ ವಿನಿಮಯ ನಡೆಯುವುದಿಲ್ಲ; ಬದಲಿಗೆ ಮನುಷ್ಯ ಸಹಜವಾದ ಅಹಂಕಾರ, ಅಸೂಯೆ, ಪ್ರೀತಿ ಮತ್ತು ಸಂಘರ್ಷಗಳ ಒಂದು ಬೃಹತ್ ನಾಟಕವೇ ಅನಾವರಣಗೊಳ್ಳುತ್ತದೆ. ಒಂದು ಕಾಲಕ್ಕೆ ತಾವು ಅತ್ಯಾಪ್ತ ಸ್ನೇಹಿತರಾಗಿದ್ದೆವು ಎಂಬ ಅಂಶವೂ ಅವರಲ್ಲಿ ನಗಣ್ಯವಾಗಿ ಬಿಡುತ್ತವೆ. ಯಾವಾಗ ಇಬ್ಬರು ವ್ಯಕ್ತಿಗಳು ತಮ್ಮ ಕ್ಷೇತ್ರದಲ್ಲಿ ಅತ್ಯುನ್ನತ ಶಿಖರವನ್ನು ಏರುತ್ತಾರೋ, ಆಗ ಅವರ ನಡುವೆ 'ನಾನು' ಎಂಬ ಭಾವನೆ ಹೆಮ್ಮರವಾಗಿ ಬೆಳೆದುಬಿಡುತ್ತವೆ. ದೈತ್ಯ ಪ್ರತಿಭೆಗಳ ನಡುವೆ ಎಷ್ಟೇ ಗೌರವವಿದ್ದರೂ, ಅಂತರಾಳದಲ್ಲಿ ಒಂದು ರೀತಿಯ ಸೂಕ್ಷ್ಮ ಸ್ಪರ್ಧೆ ಇದ್ದರಂತೂ ಅದು ಯಾವ ಕ್ಷಣದಲ್ಲಾದರೂ ಸ್ಫೋಟಗೊಳ್ಳಲು ಒಂದು ಸಣ್ಣ ಕಿಡಿಗಾಗಿ ಕಾಯುತ್ತಿರುತ್ತದೆ. ಹಾಗೆ ಒಬ್ಬರ ಯಶಸ್ಸು ಇನ್ನೊಬ್ಬರಿಗೆ ಸವಾಲಾಗಿ ಕಂಡಾಗ, ಸಣ್ಣ ವಿಷಯವೂ ದೊಡ್ಡ ಜಗಳಕ್ಕೆ ನಾಂದಿಯಾಗುತ್ತದೆ. ಇಂಥ ಜಗಳಗಳಲ್ಲಿ ಮನುಷ್ಯನ ರೋಷ ಮತ್ತು ಆವೇಶಗಳು ಪರಾಕಾಷ್ಠೆ ತಲುಪುತ್ತವೆ. ಜಗಳದ ನಂತರದ ದೀರ್ಘ ಮೌನವು ಮಾನವ ವರ್ತನೆಯ ಇನ್ನೊಂದು ಮುಖ. ಇಬ್ಬರು ದೈತ್ಯರ ಜಗಳವು ಮನುಷ್ಯ ಎಷ್ಟು ಬಲಿಷ್ಠನೋ ಅಷ್ಟೇ ದುರ್ಬಲ ಎಂಬುದನ್ನು ಸಾಬೀತುಪಡಿಸುತ್ತದೆ.

ಈ ಮಾತನ್ನು ಹೇಳುವಾಗ ನನಗೆ ಬಲವಾಗಿ ಕಾಡುವುದು ಹತ್ತೊಂಬತ್ತನೇ ಶತಮಾನದ ರಷ್ಯನ್ ಸಾಹಿತ್ಯದ ಇಬ್ಬರು ಧ್ರುವತಾರೆಗಳಾದ ಲಿಯೋ ಟಾಲ್‌ಸ್ಟಾಯ್ ಮತ್ತು ಇವಾನ್ ತುರ್ಗೆನೆವ್ ನಡುವಿನ ಗಾಢ ಸ್ನೇಹ ಮತ್ತು ಕಿಚ್ಚಿನ ದ್ವೇಷ. ಇಬ್ಬರೂ ಆತ್ಮೀಯ ಸ್ನೇಹಿತರು. ವಯಸ್ಸಿನಲ್ಲಿ ತುರ್ಗೆನೆವ್ ಹತ್ತು ವರ್ಷ ದೊಡ್ಡವರು. ಟಾಲ್‌ಸ್ಟಾಯ್ ಸಾಹಿತ್ಯ ಲೋಕಕ್ಕೆ ಅಡಿಯಿಟ್ಟಾಗ ತುರ್ಗೆನೆವ್ ಆಗಲೇ ಸ್ಥಾಪಿತ ಲೇಖಕರು. ತುರ್ಗೆನೆವ್ ಅವರು ಟಾಲ್‌ಸ್ಟಾಯ್ ಅವರ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಮಾರ್ಗದರ್ಶಕರಂತೆ ಬೆಂಬಲ ನೀಡಿದರು. ಇಬ್ಬರೂ ಪರಸ್ಪರ ಭೇಟಿಯಾದರೆ ವಾರಗಟ್ಟಲೆ ಬಿಟ್ಟಿರುತ್ತಿರಲಿಲ್ಲ. ಎಲ್ಲ ಸಾಹಿತಿಗಳನ್ನೂ ಟೀಕಿಸುತ್ತಾ, ತಮ್ಮ ಸಾಹಿತ್ಯದ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುತ್ತಿದ್ದರು. ಇವರಿಬ್ಬರನ್ನು ಒಟ್ಟಾಗಿ ಯಾರೂ ಎದುರು ಹಾಕಿಕೊಳ್ಳುತ್ತಿರಲಿಲ್ಲ. ಆ ದಿನಗಳು ಹೇಗಿದ್ದುವೆಂದರೆ, ಇವರಿಬ್ಬರು ಹೇಳಿದ್ದೇ ವೇದವಾಕ್ಯ. ಇವರನ್ನು ಪ್ರಶ್ನಿಸುವ ತಾಕತ್ತು, ಛಾತಿ ಯಾರಿಗೂ ಇರಲಿಲ್ಲ. ಇಬ್ಬರೂ ಸಾಹಿತ್ಯಿಕವಾಗಿ ಗಟ್ಟಿಯಾಗಿದ್ದರಿಂದ, ಬೇರೆಯವರ ಮೇಲೆ ಸವಾರಿ ಮಾಡುತ್ತಿದ್ದರು.

ಆದರೆ ಇವರಿಬ್ಬರ ಮೂಲ ಸ್ವಭಾವಗಳೇ ಬೇರೆಯಾಗಿದ್ದವು. ಒಬ್ಬ ಮಣ್ಣಿನ ವಾಸನೆಯನ್ನು ಅರಸುತ್ತಿದ್ದ ಋಷಿಸದೃಶ್ಯ ಅಕ್ಷರ ಮಾಂತ್ರಿಕನಾದರೆ, ಇನ್ನೊಬ್ಬ ಪಾಶ್ಚಾತ್ಯ ಸಂಸ್ಕೃತಿಯ ಲೇಪವಿದ್ದ ಅಭಿಜಾತ ಸಾಹಿತಿ. ತುರ್ಗೆನೆವ್ ಹತ್ತೊಂಬತ್ತನೇ ಶತಮಾನದ ರಷ್ಯಾದ ಸಾಹಿತ್ಯ ಲೋಕದಲ್ಲಿ ಒಬ್ಬ 'ಪರಿಷ್ಕೃತ' ದೈತ್ಯ ಎನ್ನಬಹುದು. ಇವರು ರಷ್ಯಾದ ಸಾಂಪ್ರದಾಯಿಕ ಕಟ್ಟುಪಾಡುಗಳಿಗಿಂತ ಪಾಶ್ಚಾತ್ಯ ಸಂಸ್ಕೃತಿಯ ಉದಾರವಾದ ಮತ್ತು ಆಧುನಿಕತೆಯಿಂದ ಹೆಚ್ಚು ಪ್ರಭಾವಿತರಾಗಿದ್ದರು. ರಷ್ಯಾದ ಸಮಾಜವು ಪ್ರಗತಿ ಕಾಣಬೇಕಾದರೆ ಅದು ಯುರೋಪಿಯನ್ ಮಾದರಿಯನ್ನು, ಅಂದರೆ ಅಲ್ಲಿನ ವಿಜ್ಞಾನ, ಕಲೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂಬುದು ಅವರ ದೃಢವಾದ ವಾದವಾಗಿತ್ತು.

ಇದೇ ಕಾರಣಕ್ಕೆ ಅವರನ್ನು 'ವೆಸ್ಟರ್ನೈಜರ್' (ಪಶ್ಚಿಮದವ) ಎಂದು ಕರೆಯಲಾಗುತ್ತಿತ್ತು. ತುರ್ಗೆನೆವ್ ಅವರ ವ್ಯಕ್ತಿತ್ವವು ಅವರ ಬರವಣಿಗೆಯಷ್ಟೇ ಮೃದು ಮತ್ತು ಸುಸಂಸ್ಕೃತವಾಗಿತ್ತು. ಒಬ್ಬ ಶ್ರೀಮಂತ ಭೂಮಾಲೀಕ ಕುಟುಂಬದಲ್ಲಿ ಜನಿಸಿದ ಇವರು, ತಮ್ಮ ಜೀವನದ ಹೆಚ್ಚಿನ ಭಾಗವನ್ನು ಯುರೋಪಿನ ವಿವಿಧ ನಗರಗಳಲ್ಲಿ ಕಳೆದರು. ಅವರ ಶೈಲಿಯು ಅತ್ಯಂತ ಸುಂದರ, ಭಾವನಾತ್ಮಕ ಮತ್ತು ಕಾವ್ಯಾತ್ಮಕವಾಗಿರುತ್ತಿತ್ತು. ಸಮಾಜದ ಬದಲಾವಣೆಯನ್ನು ಅವರು ಕ್ರಾಂತಿಯ ಮೂಲಕವಲ್ಲ, ಬದಲಿಗೆ ತಿಳಿವಳಿಕೆ ಮತ್ತು ಸುಧಾರಣೆಯ ಮೂಲಕ ಬಯಸಿದ್ದರು. ಇದೇ ವಿಚಾರಧಾರೆಗಳು ಅವರನ್ನು ಕಡು ಸಂಪ್ರದಾಯವಾದಿ ಮತ್ತು ಮಣ್ಣಿನ ಸಂಸ್ಕೃತಿಯ ಪ್ರತಿಪಾದಕನಾದ ಟಾಲ್‌ಸ್ಟಾಯ್‌ನಿಂದ ಭಿನ್ನವಾಗಿಸಿದ್ದವು. ತುರ್ಗೆನೆವ್ ಕೇವಲ ಒಬ್ಬ ಲೇಖಕನಾಗಿರದೇ, ರಷ್ಯಾದ ಸಾಹಿತ್ಯವನ್ನು ಜಗತ್ತಿಗೆ ಪರಿಚಯಿಸಿದ ಒಬ್ಬ 'ಸಾಂಸ್ಕೃತಿಕ ರಾಯಭಾರಿ'ಯಂತೆ ಬದುಕಿದರು.

ಟಾಲ್‌ಸ್ಟಾಯ್ ಕೇವಲ ಒಬ್ಬ ಬರಹಗಾರನಾಗಿರಲಿಲ್ಲ, ಅವರು ರಷ್ಯಾದ ಮಣ್ಣಿನ ಅಪ್ಪಟ ಚೇತನ ಮತ್ತು ತೀವ್ರಗಾಮಿ ವಿಚಾರಧಾರೆಗಳ ಪ್ರತಿಪಾದಕರಾಗಿದ್ದರು. ತುರ್ಗೆನೆವ್ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಉದ್ಧಾರವನ್ನು ಕಂಡರೆ, ಟಾಲ್‌ಸ್ಟಾಯ್ ಅದಕ್ಕೆ ತದ್ವಿರುದ್ಧವಾಗಿ ರಷ್ಯಾದ ಹಳೆಯ ಸಂಪ್ರದಾಯಗಳು, ರೈತಾಪಿ ಜೀವನ ಮತ್ತು ಆಧ್ಯಾತ್ಮಿಕ ಬೇರುಗಳಲ್ಲಿ ಬದುಕಿನ ಅರ್ಥವನ್ನು ಹುಡುಕುತ್ತಿದ್ದರು. ಟಾಲ್‌ಸ್ಟಾಯ್‌ಗೆ ಯುರೋಪಿನ ನಯ-ವಿನಯಗಳು, ಅಲ್ಲಿನ ವಿಜ್ಞಾನ ಮತ್ತು ಸೋಗಿನ ಶಿಷ್ಟಾಚಾರಗಳು ಕೇವಲ ಮೇಲ್ಪದರದ ಹೊಳಪಿನಂತೆ ಕಾಣುತ್ತಿದ್ದವು. ತುರ್ಗೆನೆವ್ ಅವರ ಅತಿಯಾದ ಪಾಶ್ಚಾತ್ಯ ವ್ಯಾಮೋಹವನ್ನು ಟಾಲ್‌ಸ್ಟಾಯ್ 'ಆಧ್ಯಾತ್ಮಿಕ ಶೂನ್ಯತೆ' ಎಂದು ಜರೆದಿದ್ದರು.

ಟಾಲ್‌ಸ್ಟಾಯ್ ಪ್ರಕಾರ, ಒಬ್ಬ ಮನುಷ್ಯ ತನ್ನ ಮಣ್ಣಿನ ಸಂಬಂಧವನ್ನು ಕಳೆದುಕೊಂಡು ಪರಕೀಯ ಸಂಸ್ಕೃತಿಯನ್ನು



ಅಪ್ಪಿಕೊಂಡರೆ, ಅಲ್ಲಿ ಆತ್ಮಕ್ಕೆ ನೆಲೆ ಇರುವುದಿಲ್ಲ. ಟಾಲ್‌ಸ್ಟಾಯ್ ದೃಷ್ಟಿಯಲ್ಲಿ ತುರ್ಗೆನೆವ್ ಅವರ ಅತಿರಂಜಿತ ಸುಸಂಸ್ಕೃತ ನಡೆವಳಿಕೆಯು ಸತ್ಯಕ್ಕೆ ದೂರವಾದ ಬೂಟಾಟಿಕೆಯಾಗಿತ್ತು. ರಷ್ಯಾದ ರೈತ ಸಮುದಾಯದ ನೈತಿಕ ಶಕ್ತಿ ಮತ್ತು ಪ್ರಾಮಾಣಿಕತೆಯೇ ರಾಷ್ಟ್ರದ ನಿಜವಾದ ಆಸ್ತಿ ಎಂದು ಅವರು ನಂಬಿದ್ದರು. ಈ ತೀವ್ರಗಾಮಿ ನಂಬಿಕೆಯು ಅವರನ್ನು ಎಷ್ಟರಮಟ್ಟಿಗೆ ಬದಲಾಯಿಸಿತೆಂದರೆ, ಅವರು ತಮ್ಮ ಶ್ರೀಮಂತಿಕೆಯನ್ನು ತ್ಯಜಿಸಿ ರೈತನಂತೆ ಬದುಕಲು ಆರಂಭಿಸಿದರು. ತುರ್ಗೆನೆವ್ ಅವರು ಪಾಶ್ಚಾತ್ಯ ಸಂಸ್ಕೃತಿಯನ್ನು ಆರಾಧಿಸುವವರು ಮತ್ತು ಧರ್ಮದ ಬಗ್ಗೆ ಅಷ್ಟೊಂದು ಆಸಕ್ತಿ ಇಲ್ಲದವರು. ಆದರೆ ಟಾಲ್‌ಸ್ಟಾಯ್ ರಷ್ಯಾದ ಸಾಂಪ್ರದಾಯಿಕ ಮೌಲ್ಯಗಳು ಮತ್ತು ಕಟ್ಟುನಿಟ್ಟಾದ ಆಧ್ಯಾತ್ಮಿಕ ಜೀವನದಲ್ಲಿ ನಂಬಿಕೆ ಇಟ್ಟವರು. ತುರ್ಗೆನೆವ್ ಅವರ ಯುರೋಪಿಯನ್ ವ್ಯಾಮೋಹವು ಟಾಲ್‌ಸ್ಟಾಯ್ ಅವರಿಗೆ ಯಾವಾಗಲೂ ಅಸಮಾಧಾನ ತರುತ್ತಿತ್ತು.

ಆದರೂ ಸ್ನೇಹ ಅವರನ್ನು ಕಟ್ಟಿ ಹಾಕಿತ್ತು. ಒಂದು ದಿನ ಟಾಲ್‌ಸ್ಟಾಯ್ ಮತ್ತು ತುರ್ಗೆನೆವ್ ಇಬ್ಬರೂ ತಮ್ಮ ಸ್ನೇಹಿತನಾದ ಕವಿ ಅಫನಾಸಿ ಫೆಟ್ ಅವರ ಮನೆಯಲ್ಲಿ ಬೆಳಗಿನ ಉಪಾಹಾರಕ್ಕೆಂದು ಪರಸ್ಪರ ಭೇಟಿಯಾದರು. ಅಲ್ಲಿ ತುರ್ಗೆನೆವ್ ಅವರು ತಮ್ಮ ಪತ್ನಿಯಲ್ಲದ, ಆದರೆ ಬೇರೊಬ್ಬ ಮಹಿಳೆಯಿಂದ ಹುಟ್ಟಿದ ಮಗಳ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಿದ್ದರು. ಆಕೆ ಬಡವರ ಹರಿದ ಬಟ್ಟೆಗಳನ್ನು ಹೊಲಿಯುವ ಮೂಲಕ ಸಾಮಾಜಿಕ ಸೇವೆ ಮಾಡುತ್ತಿದ್ದಾಳೆ ಎಂದು ತುರ್ಗೆನೆವ್ ಹೊಗಳುತ್ತಿದ್ದರು. ಇದನ್ನು ಕೇಳಿದ ಟಾಲ್‌ಸ್ಟಾಯ್ ವ್ಯಂಗ್ಯವಾಗಿ, 'ಒಬ್ಬ ಶ್ರೀಮಂತ ಹುಡುಗಿ ಅದ್ದೂರಿ ಬಟ್ಟೆಗಳನ್ನು ಧರಿಸಿ, ಫ್ಯಾಷನ್‌ಗಾಗಿ ಹರಿದ ಬಟ್ಟೆಗಳನ್ನು ಕೈಗೆತ್ತಿಕೊಳ್ಳುವುದು ಶುದ್ಧ ನಾಟಕ. ಇದು ಕೇವಲ ಸಾರ್ವಜನಿಕವಾಗಿ ಒಳ್ಳೆಯವಳು ಎಂದು ತೋರಿಸಿಕೊಳ್ಳುವ ಚಮತ್ಕಾರ. ಇದರಂಥ ಬೂಟಾಟಿಕೆ ಮತ್ತೊಂದಿಲ್ಲ. ಇಂಥ ಕೀಳುಮಟ್ಟದ ಕೆಲಸವನ್ನು ಮಾಡುವ ಬದಲು, ಸುಮ್ಮನಿರುವುದು ಲೇಸಲ್ಲವೇ? ಇದು ಸತ್ಯವಲ್ಲದ, ಕೃತಕವಾದ ಕೆಲಸ' ಎಂದುಬಿಟ್ಟರು.

ತನ್ನ ಮಗಳ ಬಗ್ಗೆ ಮಾಡಿದ ಈ ಟೀಕೆ ತುರ್ಗೆನೆವ್ ಅವರನ್ನು ತೀವ್ರವಾಗಿ ಕೆರಳಿಸಿಬಿಟ್ಟಿತು. ಸದಾ ಸಂಯಮದಿಂದ ಇರುತ್ತಿದ್ದ ತುರ್ಗೆನೆವ್ ಅಂದು ಕುದಿಯುವ ಜ್ವಾಲಾಮುಖಿಯಾದರು. 'ಒಂದು ವೇಳೆ ನೀನು ಮತ್ತೊಮ್ಮೆ ಈ ರೀತಿ ಮಾತನಾಡಿದರೆ ನಿನ್ನ ಮುಖದ ಮೇಲೆ ಗುದ್ದುತ್ತೇನೆ' ಎಂದು ಬೆದರಿಕೆ ಹಾಕಿ ಹೊರನಡೆದರು. ಅಲ್ಲಿಗೆ ಗೆಳೆತನದ ಗಾಜು ಚೂರುಚೂರಾಗಿತ್ತು.

ನಂತರ ಇಬ್ಬರೂ ಬೀದಿ ರಂಪಾಟಕ್ಕೆ ನಿಂತುಬಿಟ್ಟರು. ತಾವು ರಷ್ಯಾದ ಮಹಾನ್ ಸಾಹಿತಿಗಳು ಎಂಬುದನ್ನೂ ಲೆಕ್ಕಿಸದೇ ತೀರಾ ಕೆಳಮಟ್ಟದ ಬೈಗುಳ, ನಿಂದನೆಗೆ ಮುಂದಾದರು. ಅಷ್ಟು ದಿನಗಳ ಅವರ ಸ್ನೇಹದಲ್ಲಿ ಆ ಪರಿ ದ್ವೇಷ ಎಲ್ಲಿ ಅಡಗಿತ್ತೋ ಏನೋ, ಒಬ್ಬರನ್ನೊಬ್ಬರು ಕೊಲ್ಲುವುದಾಗಿ ಹೇಳಿಬಿಟ್ಟರು. ಅಷ್ಟಕ್ಕೇ ನಿಲ್ಲದ ಈ ಜಗಳ, ಮುಂದೆ ಟಾಲ್‌ಸ್ಟಾಯ್ ಅವರು ತುರ್ಗೆನೆವ್ ಅವರಿಗೆ ಪ್ರಾಣಾಂತಿಕ ಹೋರಾಟಕ್ಕೆ ಆಹ್ವಾನ ನೀಡುವವರೆಗೆ ಹೋಯಿತು. ನಂತರ ಈ ಇಬ್ಬರು ಮಹಾನ್ ಸಾಹಿತಿಗಳು ಪರಸ್ಪರ ಗುಂಡು ಹೊಡೆದು ಸಾಯಿಸುವ ಹಂತಕ್ಕೆ ತಲುಪಿದ್ದರು! ರಷ್ಯಾದ ಸಾಹಿತ್ಯ

ಲೋಕವೇ ಬೆಚ್ಚಿಬಿದ್ದಿತ್ತು. ಇಬ್ಬರು ಶ್ರೇಷ್ಠ ಲೇಖಕರು ಪರಸ್ಪರ ರಕ್ತ ಚೆಲ್ಲಲು ಮುಂದಾಗಿದ್ದು ಅಕ್ಷರಶಃ ಒಂದು ದುರಂತ ಕಥೆಯ ಮುನ್ನುಡಿಯಂತಿತ್ತು. ಅಷ್ಟು ದಿನಗಳ ಕಾಲ 'ರಷ್ಯಾದ ಸಾಹಿತ್ಯ ಗಗನದ ಸೂರ್ಯರು' ಎಂದು ಕರೆಯಿಸಿಕೊಂಡಿದ್ದ ಅವರಿಬ್ಬರು, ಎರಡು ಸೂರ್ಯರು ಒಂದೇ ಕಡೆ ಇರಲು ಸಾಧ್ಯವಿಲ್ಲ ಎಂಬುದನ್ನು ಸಾಬೀತು ಮಾಡಿದರು.

ಅದೃಷ್ಟವಶಾತ್ ಆ ಮಾರಾಮಾರಿ ನಡೆಯಲಿಲ್ಲ. ಆದರೆ, ಇಬ್ಬರ ನಡುವೆ ದೊಡ್ಡ ಕಂದಕ ಸೃಷ್ಟಿಯಾಯಿತು. ಇದು ಹದಿನೇಳು ವರ್ಷಗಳ ಸುದೀರ್ಘ ಜಟಾಪಟಿಗೆ ಕಾರಣವಾಯಿತು. ಈ ಅವಧಿಯಲ್ಲಿ ಇಬ್ಬರೂ ಪರಸ್ಪರ ಮಾತಾಡಲಿಲ್ಲ. ಎದುರುಬದುರು ಆದರೂ ಮುಖಮುಖ ನೋಡಿಕೊಳ್ಳಲಿಲ್ಲ. ಈ ಅವಧಿಯಲ್ಲಿ ಟಾಲ್‌ಸ್ಟಾಯ್ ತಮ್ಮ ಮೇರುಕೃತಿಗಳಾದ 'ವಾರ್ ಅಂಡ್ ಪೀಸ್' ಮತ್ತು 'ಅನ್ನಾ ಕರೆನಿನಾ' ಬರೆದರು. ತುರ್ಗೆನೆವ್ ಅವರು ರಷ್ಯಾ ತೊರೆದು ಪ್ಯಾರಿಸ್‌ಗೆ ಹೋಗಿ ನೆಲೆಸಿದರು. ಆದರೆ, ದೂರವಿದ್ದರೂ ಇಬ್ಬರೂ ಪರಸ್ಪರರ ಕೃತಿಗಳನ್ನು ಗುಟ್ಟಾಗಿ ಓದುತ್ತಿದ್ದರು ಮತ್ತು ಒಬ್ಬರ ಪ್ರತಿಭೆಯ ಬಗ್ಗೆ ಇನ್ನೊಬ್ಬರು ಗೌರವಭಾವ ವ್ಯಕ್ತಪಡಿಸುತ್ತಿದ್ದರು. ಆದರೆ ಅವರಿಬ್ಬರ ಮಧ್ಯೆ ಎದ್ದಿದ್ದ ಅಹಂ ಎಂಬ ಗೋಡೆ ಮಾತ್ರ ಕುಸಿಯಲಿಲ್ಲ. ಮನುಷ್ಯನ ಅಹಂ ಎಂಬುದು ಎಂಥ ವಿಚಿತ್ರ ಸಂಕೋಲೆ ಎಂದರೆ, ಎದುರಿಗಿರುವ ಗೆಳೆಯನ ಪ್ರೀತಿ ಕಾಣಿಸುವುದಕ್ಕಿಂತ ತನ್ನೊಳಗಿನ ನಾನು ದೊಡ್ಡದಾಗಿ ಕಾಣುತ್ತದೆ. ಈ ಹದಿನೇಳು ವರ್ಷಗಳು ರಷ್ಯನ್ ಸಾಹಿತ್ಯದ ಇತಿಹಾಸದಲ್ಲಿ ಒಂದು ವಿಚಿತ್ರ ಮೌನದ ಕಾಲಘಟ್ಟ.

1878ರ ಸುಮಾರಿಗೆ ಟಾಲ್‌ಸ್ಟಾಯ್ ಜೀವನದಲ್ಲಿ ಒಂದು ಮಹತ್ತರ ಆಂತರಿಕ ಕ್ರಾಂತಿ ಸಂಭವಿಸಿತು. ಲೌಕಿಕ ಯಶಸ್ಸು, ಕೀರ್ತಿ ಮತ್ತು ಸಂಪತ್ತಿನ ಶಿಖರದಲ್ಲಿದ್ದರೂ ಅವರ ಮನಸ್ಸು ಏಕಾಂತ, ಶಾಂತಿಗಾಗಿ ಹಂಬಲಿಸುತ್ತಿತ್ತು. ಅವರು ಆಧ್ಯಾತ್ಮಿಕ ಅನ್ವೇಷಣೆಯತ್ತ ಹೊರಳಿದರು. ಈ ಹಂತದಲ್ಲಿ ಅವರಿಗೆ ಅರಿವಾಗಿದ್ದು ದ್ವೇಷ ಮತ್ತು ಅಹಂಕಾರಗಳು ವ್ಯಕ್ತಿತ್ವ ವಿಕಸನ ಮತ್ತು ಆತ್ಮದ ಬೆಳವಣಿಗೆಗೆ ಅಡ್ಡಿಯಾಗುತ್ತವೆ ಎಂಬುದು. ಈ ಪಶ್ಚಾತ್ತಾಪದ ಭಾಗವಾಗಿಯೇ ಅವರು ತಮ್ಮ ಹಳೆಯ ವೈರಿ ತುರ್ಗೆನೆವ್ ಅವರೊಂದಿಗಿನ ದೀರ್ಘ ಮೌನವನ್ನು ಮುರಿಯಲು ನಿರ್ಧರಿಸಿದರು. ಒಂದು ಬೆಳಗ್ಗೆ ತಮ್ಮ ಎಲ್ಲ ಕಹಿಭಾವನೆಗಳನ್ನು ಗಂಟುಮೂಟೆ ಕಟ್ಟಿ, ಮತ್ತೊಮ್ಮೆ ಸ್ನೇಹ ಹಸ್ತ ಚಾಚಲು ಬಯಸಿ ಪತ್ರ ಬರೆಯಲು ಕುಳಿತುಕೊಂಡರು. ಆ ಪತ್ರದಲ್ಲಿ ಟಾಲ್‌ಸ್ಟಾಯ್ ಯಾವುದೇ ಮುಚ್ಚುಮರೆಯಿಲ್ಲದೇ, 'ನಮ್ಮ ನಡುವಿನ ಹಳೆಯ ಕಹಿ ಘಟನೆಗಳನ್ನು ಮರೆತುಬಿಡೋಣ, ದಯವಿಟ್ಟು ನನ್ನನ್ನು ಕ್ಷಮಿಸಿ' ಎಂದು ಬೇಡಿಕೊಂಡರು.

ಅತ್ತ ಪ್ಯಾರಿಸ್‌ನಲ್ಲಿದ್ದ ತುರ್ಗೆನೆವ್ ಈ ಪತ್ರವನ್ನು ಕಂಡು ಆಶ್ಚರ್ಯಚಕಿತರಾದರು. ಆ ಪತ್ರವನ್ನು ಅವರು ನಿರೀಕ್ಷಿಸಿರಲೇ ಇಲ್ಲ. ಅಷ್ಟೇ ಸಂತೋಷದಿಂದ ತುರ್ಗೆನೆವ್ ಅದನ್ನು ಸ್ವೀಕರಿಸಿದರು. ಹದಿನೇಳು ವರ್ಷಗಳ ಕಾಲ ಹೆಪ್ಪುಗಟ್ಟಿದ್ದ ದ್ವೇಷದ ಮಂಜುಗಡ್ಡೆ ಕೇವಲ ಒಂದು ಪತ್ರದಿಂದ ಕರಗಿ ನೀರಾಯಿತು. ಇಡೀ ರಷ್ಯನ್ ಸಾರಸ್ವತ ಲೋಕ ಇದನ್ನು ಸ್ವಾಗತಿಸಿತು. 1883ರಲ್ಲಿ ತುರ್ಗೆನೆವ್ ಅವರು ಪ್ಯಾರಿಸ್‌ನಲ್ಲಿ ಬೆನ್ನುಮೂಳೆಯ ಕ್ಯಾನ್ಸರ್‌ನಿಂದಾಗಿ ತೀವ್ರ ಅನಾರೋಗ್ಯಕ್ಕೆ ಒಳಗಾದರು. ಸಾವಿನ ಕರೆ ಸಮೀಪಿಸುತ್ತಿದೆ ಎಂಬುದು ಅವರಿಗೆ ತಿಳಿದಿತ್ತು. ಅಂಥ ನೋವಿನ ಕ್ಷಣದಲ್ಲೂ ಅವರ ಮನಸ್ಸಿನಲ್ಲಿದ್ದುದು ತಮ್ಮ ಗೆಳೆಯ ಮತ್ತು ರಷ್ಯಾದ ಸಾಹಿತ್ಯದ ಭವಿಷ್ಯ. ಆ ಸಂದರ್ಭದಲ್ಲಿ ಅವರು ಟಾಲ್‌ಸ್ಟಾಯ್‌ಗೆ ಒಂದು ಪತ್ರ ಬರೆದರು – 'ರಷ್ಯಾದ ಮಣ್ಣಿನ ಮಹಾನ್ ಲೇಖಕರೇ, ನನ್ನ ಈ ಕೊನೆಯ ವಿನಂತಿಯನ್ನು ಆಲಿಸಿ. ಸಾಹಿತ್ಯ ಕ್ಷೇತ್ರಕ್ಕೆ ಮರಳಿ ಬನ್ನಿ. ನಿಮ್ಮ ಲೇಖನಿಯನ್ನು ಕೈಬಿಡಬೇಡಿ. ಆ ಶಕ್ತಿ ನಿಮಗೆ ದೇವರು ಕೊಟ್ಟ ಮಹಾನ್ ವರ. ಈ ಮನುಕುಲವನ್ನು ತಟ್ಟುವಂಥ ಸಾಹಿತ್ಯ ರಚಿಸಿದ್ದೀರಿ. ನಿಮ್ಮ ಲೇಖನಿ ಸೋಲಬಾರದು. ಅಕ್ಷರಲೋಕಕ್ಕೆ ನೀವು ಬೇಕು.' ಈ ಪತ್ರವು ಕೇವಲ ಕಾಗದದ ತುಣುಕಾಗಿರಲಿಲ್ಲ, ಅದು ಒಬ್ಬ ಶ್ರೇಷ್ಠ ಸಾಹಿತಿ ಇನ್ನೊಬ್ಬ ಮಹಾನ್ ಚೇತನಕ್ಕೆ ಸಲ್ಲಿಸಿದ ಸಾಷ್ಟಾಂಗ ನಮನವಾಗಿತ್ತು.

ಆ ಸಮಯದಲ್ಲಿ ಟಾಲ್‌ಸ್ಟಾಯ್ ಬರವಣಿಗೆಯನ್ನು ಬಿಟ್ಟಿದ್ದರು. ಕೇವಲ ಆಧ್ಯಾತ್ಮಿಕ ಮತ್ತು ಸಾಮಾಜಿಕ ಸುಧಾರಣೆಯಲ್ಲಿ ತೊಡಗಿದ್ದರು. ಒಬ್ಬ ಕಲಾವಿದ ತನ್ನ ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಇನ್ನೊಬ್ಬನ ಪ್ರತಿಭೆಯನ್ನು ಗೌರವಿಸಿ ಅದನ್ನು ಜಗತ್ತಿಗಾಗಿ ಉಳಿಸಿಕೊಡಬೇಕೆಂದು ಕೇಳಿಕೊಂಡಿದ್ದು ನಿಜಕ್ಕೂ ಅನನ್ಯ. ಆ ಇಬ್ಬರು ಮಹಾನ್ ಸಾಹಿತಿಗಳ ಆ ಎರಡು ಪತ್ರಗಳು ವಿಶ್ವ ಸಾಹಿತ್ಯ ಚರಿತ್ರೆಯಲ್ಲಿ ಅಜರಾಮರವಾಗಿವೆ. 1883ರಲ್ಲಿ ತುರ್ಗೆನೆವ್ ತೀರಿಕೊಂಡಾಗ ಟಾಲ್‌ಸ್ಟಾಯ್ ತೀವ್ರವಾಗಿ ದುಃಖಿತರಾದರು ಮತ್ತು ಅವರನ್ನು 'ನನ್ನ ಅತ್ಯಂತ ಪ್ರೀತಿಯ ಗೆಳೆಯ' ಎಂದು ಕರೆದರು.

ಸೂಕ್ಷ್ಮವಾಗಿ ಅವಲೋಕಿಸಿದರೆ, ಈ ಇಬ್ಬರು ದೈತ್ಯ ಸಾಹಿತಿಗಳ ಜಗಳವು ಕೇವಲ ವ್ಯಕ್ತಿಗಳ ನಡುವಿನ ಸಂಘರ್ಷವಾಗಿರಲಿಲ್ಲ. ಅದು ಟಾಲ್‌ಸ್ಟಾಯ್ ಅವರ ಉಗ್ರ ನೈತಿಕತೆ ಮತ್ತು ತುರ್ಗೆನೆವ್ ಅವರ ಉದಾರವಾದಿ ದೃಷ್ಟಿಕೋನದ ನಡುವಿನ ಘರ್ಷಣೆಯಾಗಿತ್ತು. ಟಾಲ್‌ಸ್ಟಾಯ್ ಅವರಲ್ಲಿ ಪ್ರೀತಿ ಮತ್ತು ದ್ವೇಷದ ನಡುವೆ ಒಂದು ಸಣ್ಣ ಗೆರೆ ಮಾತ್ರ ಇತ್ತು. ಈ ಪ್ರಸಂಗವು ಸಾಹಿತ್ಯ ಲೋಕದ ಇತಿಹಾಸದಲ್ಲಿ 'ಒಂದೇ ಒರೆಯೊಳಗೆ ಎರಡು ಕತ್ತಿಗಳು ಇರಲಾರವು' ಎಂಬ ಮಾತಿಗೆ ಸಾಕ್ಷಿಯಾಯಿತು. ಎಷ್ಟೇ ದೊಡ್ಡ ಪ್ರತಿಭಾವಂತರಾದರೂ ಅವರು ಮನುಷ್ಯ ಸಹಜವಾದ ಅಸೂಯೆ ಮತ್ತು ಸಿಟ್ಟಿಗೆ ಹೊರತಲ್ಲ. ಜಗಳವಾಡುವುದು ಮನುಷ್ಯ ಗುಣ, ಆದರೆ ಕ್ಷಮಿಸುವುದು ದೈವತ್ವ. ಅಂತಿಮವಾಗಿ ಸಾಹಿತ್ಯದ ಮೇಲಿನ ಪ್ರೇಮವೇ ಇಬ್ಬರನ್ನೂ ಮತ್ತೆ ಒಂದುಗೂಡಿಸಿತು.

ಭಾರತ-ಅಮೆರಿಕ ಸಂಬಂಧ ಹಳಿಗೇರಿಸುವರೇ ಹೊಸ ರಾಯಭಾರಿ?

ಭಾರತಕ್ಕೆ ಅಮೆರಿಕ ಹೊಸ ರಾಯಭಾರಿಯನ್ನು ನೇಮಿಸಿದೆ. ಅವರ ಹೆಸರು ಸೆರ್ಗಿಯೋ ಗೋರ್. ಡೊನಾಲ್ಡ್ ಟ್ರಂಪ್ ಅವರ ಆಪ್ತರ ತಂಡದಲ್ಲಿ ಈತ ಬಹಳ ಪವರ್‌ಫುಲ್ ಮನುಷ್ಯ. ತೆರಿಗೆ ಯುದ್ಧದಲ್ಲಿ ಇವರಿಂದ ಭಾರತಕ್ಕೇನಾದರೂ ಅನುಕೂಲ ಆಗಬಹುದೆ? ಟ್ರಂಪ್‌ರಿಂದ ಹದೆಗೆಟ್ಟಿರುವ ಸಂಬಂಧವನ್ನು ಈತ ಸುಧಾರಿಸಬಹುದೇ?

ಸಂಗತ
ಡಾ.ವಿಜಯ್ ದರಡಾ
vveditoped@gmail.com

ದಿಲ್ಲಿ ದೂರ್ ಹೈ!

ಇದು ಬಹಳ ಪ್ರಸಿದ್ಧ ನುಡಿಗಟ್ಟು. ಅಮೆರಿಕಕ್ಕೂ ದೆಹಲಿ ಬಹಳ ದೂರದಲ್ಲೇ ಇದೆಯೇ? ಈ ಪ್ರಶ್ನೆ ಏಕೆ ಈಗ ಕೇಳಬೇಕಾಗಿ ಬಂದಿದೆ ಅಂದರೆ, ಭಾರತಕ್ಕೆ ಹೊಸತಾಗಿ ನೇಮಕಗೊಂಡ ಅಮೆರಿಕದ ರಾಯಭಾರಿ ದೆಹಲಿಗೆ ಬಂದು ತಲುಪುವುದಕ್ಕೆ ಬರೋಬ್ಬರಿ ಏಳು ತಿಂಗಳು ತೆಗೆದುಕೊಂಡಿದ್ದಾರೆ! ಹೌದು, ಅವರನ್ನು ಏಳು ತಿಂಗಳ ಹಿಂದೆಯೇ ಭಾರತದ ರಾಯಭಾರಿಯಾಗಿ ಅಮೆರಿಕ ನೇಮಿಸಿತ್ತು. ಆದರೆ ಇತ್ತೀಚೆಗಷ್ಟೇ ಅವರು ಬಂದು ಅಧಿಕಾರ ಸ್ವೀಕರಿಸಿದ್ದಾರೆ. ಹೀಗಾಗಿ ನಾವು ಇನ್ನೊಂದು ನಾಣ್ನುಡಿ ನೆನಪು ಮಾಡಿಕೊಳ್ಳುವುದು ಒಳ್ಳೆಯದು. ಬೆಟರ್ ಲೇಟ್ ದ್ಯಾನ್ ನೆವರ್! ಕೊನೆಗೂ ಬಂದರಲ್ಲ! ಬರದೇ ಇರುವುದಕ್ಕಿಂತ ತಡವಾಗಿ ಬರೋದಾದರೂ ಒಳ್ಳೆಯದೇ. ಅವರು ಬಂದಾದ ಮೇಲೆ ಇನ್ನೊಂದು ಪ್ರಶ್ನೆ ಎದ್ದಿದೆ. ಹೊಸ ರಾಯಭಾರಿ ಸೆರ್ಗಿಯೋ ಗೋರ್ ಭಾರತ ಮತ್ತು ಅಮೆರಿಕದ ನಡುವೆ ಹಳಸಿರುವ ಸಂಬಂಧವನ್ನು ಮರುಸ್ಥಾಪನೆ ಮಾಡುತ್ತಾರೆಯೇ?

ಭಾರತಕ್ಕೆ ರಾಯಭಾರಿಯನ್ನು ನೇಮಕ ಮಾಡುವಲ್ಲಿ ಈ ಹಿಂದೆಯೂ ಅಮೆರಿಕ ಕೆಲವೊಮ್ಮೆ ಬಹಳ ವಿಳಂಬ ಮಾಡಿದ ನಿದರ್ಶನಗಳಿವೆ. ಆದರೆ ಈ ಬಾರಿ ಅದು ಹೆಚ್ಚು ಮಹತ್ವ ಪಡೆದಿದೆ, ಏಕೆಂದರೆ, ಈ ಹಿಂದೆ ಭಾರತ-ಅಮೆರಿಕ ನಡುವೆ ಉತ್ತಮ ಬಾಂಧವ್ಯವಿತ್ತು. ಅದು ಈಗ ಹಳಸಿದೆ. ಅಮೆರಿಕವೀಗ ಎಲ್ಲಾ ದೇಶಗಳದ್ದೂ ನಂಬಿಕೆ ಕಳೆದುಕೊಂಡಿದೆ. ಭಾರತ ಕೂಡ ಅಮೆರಿಕವನ್ನು ಮೊದಲಿನಂತೆ ನಂಬುತ್ತಿಲ್ಲ. ಹೀಗಾಗಿ ಸೆರ್ಗಿಯೋ ಗೋರ್ ಮೇಲಿನ ಜವಾಬ್ದಾರಿಯ ಭಾರ ಹೆಚ್ಚಾಗಿದೆ. 2021ರ ಜನವರಿಯಲ್ಲಿ ಕೆನೆತ್ ಜಸ್ಟರ್ ನಿರ್ಗಮನದ ಬಳಿಕ 2023ರ ಏಪ್ರಿಲ್‌ನಲ್ಲಿ ಎರಿಕ್ ಗಾರ್ಸೆಟಿ ಬರುವವರೆಗೆ ಭಾರತದಲ್ಲಿ ಅಮೆರಿಕದ ರಾಯಭಾರಿಯ ಹುದ್ದೆ ಖಾಲಿಯಿತ್ತು. ಅದಕ್ಕೆ ಕಾರಣವೇನು ಎಂಬುದು ಬಹಳ ಸಂಕೀರ್ಣ ವಿಷಯ. ಜೋ ಬೈಡೆನ್ ಅವರು ಎರಿಕ್ ಗಾರ್ಸೆಟಿಯ ಹೆಸರು ಅಂತಿಮಗೊಳಿಸಿದ್ದರೂ ಅವರ ಮೇಲೆ ಸಾಕಷ್ಟು ಆರೋಪಗಳು ಕೇಳಿಬಂದ ಪರಿಣಾಮ ಅವುಗಳ ತನಿಖೆ ಸುದೀರ್ಘ ಸಮಯ ತೆಗೆದುಕೊಂಡಿತು. ಹೀಗಾಗಿ ಆತ ಭಾರತಕ್ಕೆ ಬಂದು ಅಧಿಕಾರ ಸ್ವೀಕರಿಸಲು ವರ್ಷಗಳೇ ಹಿಡಿಯಿತು. ತನಿಖೆಗೆ ಅಷ್ಟೊಂದು ಸಮಯ ಬೇಕಾಗಿತ್ತು ಅಂದರೆ ಮತ್ತು ಗಾರ್ಸೆಟಿ ಮೇಲೆ ಗಂಭೀರ ಆರೋಪಗಳಿದ್ದಿದ್ದರೆ ಬೇರೊಬ್ಬರನ್ನು ನೇಮಕ ಮಾಡಲು ಸಾಧ್ಯವಿರಲಿಲ್ಲವೇ? ಇದನ್ನೇ ಅಮೆರಿಕದ ಸಂಸದ ಮಾರ್ಕ್ ವಾರ್ನರ್ ಕೇಳಿದ್ದರು. ಒಂದೆಡೆ ನಾವು ಭಾರತದ ಜೊತೆಗೆ ಸಂಬಂಧ ಸುಧಾರಿಸಿಕೊಳ್ಳಬೇಕು ಎಂದು ಮಾತನಾಡುತ್ತೇವೆ, ಇನ್ನೊಂದೆಡೆ ಆ ದೇಶಕ್ಕೆ ಒಬ್ಬ ರಾಯಭಾರಿ ನೇಮಿಸದೆ ದೆಹಲಿಯಲ್ಲಿನ ಕುರ್ಚಿ ಖಾಲಿ ಬಿಡುತ್ತೇವೆ, ಹೀಗಾದರೆ ಹೇಗೆ ಎಂದು ಅವರು ಪ್ರಶ್ನಿಸಿದ್ದರು. ಕೊನೆಗೆ ತಿಳಿದುಬಂದಿದ್ದು ಏನೆಂದರೆ, 'ಭಾರತಕ್ಕೆ ನಾವು ಹೆಚ್ಚಿನ ಮಹತ್ವ ನೀಡುತ್ತಿಲ್ಲ, ಹೀಗಾಗಿ ಅಲ್ಲಿಗೆ ಒಬ್ಬ ರಾಯಭಾರಿಯನ್ನು ನೇಮಿಸುವುದಕ್ಕೆ ನಮಗೇನೂ ತರಾತುರಿಯಿಲ್ಲ ಎಂಬ ಸಂದೇಶವನ್ನು ರವಾನಿಸಬೇಕೆಂಬ ಕಾರಣಕ್ಕೆ ಉದ್ದೇಶಪೂರ್ವಕವಾಗಿ ಜೋ ಬೈಡೆನ್ ಹಾಗೆ ಮಾಡಿದ್ದರಂತೆ! ಅದೇನೇ ಇರಲಿ, ಕೊನೆಗೆ ಗಾರ್ಸೆಟಿ ಭಾರತಕ್ಕೆ ರಾಯಭಾರಿಯಾಗಿ ಬಂದು 2025ರ ಮೇ ತಿಂಗಳಲ್ಲಿ ಅವಧಿ ಪೂರ್ಣಗೊಳಿಸಿದ್ದರು.

ಈಗ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಅತ್ಯಂತ ನಂಬಿಕಸ್ಥ ವ್ಯಕ್ತಿಯಾದ ಸೆರ್ಗಿಯೋ ಗೋರ್‌ರನ್ನು ಭಾರತದ ರಾಯಭಾರಿಯಾಗಿ ನೇಮಿಸಿದ್ದಾರೆ. ಆದರೆ ಈ ವ್ಯಕ್ತಿ ಭಾರತಕ್ಕೆ ಬಂದು ಅಧಿಕೃತವಾಗಿ ಅಧಿಕಾರ ವಹಿಸಿಕೊಳ್ಳಲು ಏಳು ತಿಂಗಳು ತೆಗೆದುಕೊಂಡಿದ್ದಾರೆ. ಈ ನಡುವೆ ಚೀನಾ ಸೇರಿದಂತೆ ಅನೇಕ ದೇಶಗಳು 2024ರ ಡಿಸೆಂಬರ್ ಆಸುಪಾಸಿನಲ್ಲಿ ಭಾರತಕ್ಕೆ ಹೊಸ ರಾಯಭಾರಿಗಳನ್ನು ನೇಮಿಸಿವೆ. ಅದೂ ಕೂಡ ಗೋರ್ ನೇಮಕದ ವಿಳಂಬದ ಬಗ್ಗೆ ಪ್ರಶ್ನೆಯೇಳುವಂತೆ ಮಾಡಿದೆ. ಅದಕ್ಕಿಂತ ಹೆಚ್ಚಾಗಿ ಗೋರ್ ಅವರಿಗೆ ಕೇವಲ ಭಾರತದ ಜವಾಬ್ದಾರಿ ಮಾತ್ರ ನೀಡಿಲ್ಲ, ಅದರ ಜೊತೆಗೆ ಅವರು ದಕ್ಷಿಣ ಮತ್ತು ಮಧ್ಯ ಏಷ್ಯಾ ವ್ಯವಹಾರಗಳ ವಿಶೇಷ ರಾಯಭಾರಿ ಕೂಡ ಆಗಿದ್ದಾರೆ. ಇದರರ್ಥ, ಅವರ ಹುದ್ದೆ ತುಂಬಾ ಮಹತ್ವದ್ದು. ಆದರೆ, ಇನ್ನೂ ಮಹತ್ವದ ಪ್ರಶ್ನೆ ಏನೆಂದರೆ, ಭಾರತದ ಜೊತೆಗಿನ ಅಮೆರಿಕದ ಸಂಬಂಧ ಗೋರ್ ಮುಂದಾಳತ್ವದಲ್ಲಿ ಸುಧಾರಣೆಯಾಗುತ್ತದೆಯೇ? ಎಷ್ಟರಮಟ್ಟಿಗೆ ಉಭಯ ದೇಶಗಳ ನಡುವೆ ಈಗ ಕದಡಿರುವ ನೀರು ತಿಳಿಯಾಗುತ್ತದೆ? ದೆಹಲಿಯಲ್ಲಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ಅವರು 'ಅಮೆರಿಕಕ್ಕೆ ಎಲ್ಲಾ ದೇಶಗಳಿಗಿಂತ ಭಾರತದ ಜೊತೆಗಿನ ಸಂಬಂಧ ಮುಖ್ಯ. ಹೀಗಾಗಿ ಭಾರತ ಮತ್ತು ಅಮೆರಿಕದ ನಡುವಿನ ಸಂಬಂಧ ಸುಧಾರಣೆಗೆ ನಾನು ಗರಿಷ್ಠ ಗಮನ ನೀಡುತ್ತೇನೆ ಎಂದು ಹೇಳಿದ್ದಾರೆ. ಅವರ ಈ ಮಾತು ಭಾರತಕ್ಕೆ ಹೊಸ ಆಶಾಕಿರಣದಂತಿದೆ. ಏಕೆಂದರೆ ಗೋರ್ ಅವರು ಡೊನಾಲ್ಡ್ ಟ್ರಂಪ್‌ರ ಅತ್ಯಂತ ಆಪ್ತ ಅಧಿಕಾರಿ. ಅವರಿಗೆ ಟ್ರಂಪ್ ಜೊತೆಗೆ ನೇರವಾದ ಸಂಪರ್ಕವಿದೆ. ಟ್ರಂಪ್ ಟೀಮ್‌ನಲ್ಲಿ ಗೋರ್ ಅತ್ಯಂತ ಪ್ರಭಾವಿ ವ್ಯಕ್ತಿಯೆಂದು ಪರಿಗಣಿಸಲ್ಪಡುತ್ತಾರೆ. ಸ್ವತಃ ಟ್ರಂಪ್ ಕೂಡ ಗೋರ್ ಜೊತೆಗೆ ತಮ್ಮ ಕುಟುಂಬಕ್ಕೆ ನಿಕಟ ಸಂಬಂಧವಿರುವ ಬಗ್ಗೆ ಹೇಳಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅವರೇ ಖುದ್ದಾಗಿ ಗೋರ್ ಮೇಲೆ ಹೊಗಳಿಕೆಯ ಮಳೆ ಸುರಿಸಿದ್ದಾರೆ. ಇಷ್ಟೇ ಅಲ್ಲ, ಟ್ರಂಪ್ ಅವರ ಮಗ ಡೊನಾಲ್ಡ್ ಟ್ರಂಪ್ ಜೂನಿಯರ್‌ಗೆ ಗೋರ್ ಆಪ್ತ ಗೆಳೆಯ. ಹೀಗಾಗಿ, ಭಾರತದ ಜೊತೆಗೆ ಮಧುರವಾದ ಸಂಬಂಧ ಇರಿಸಿಕೊಳ್ಳದೆ ದಕ್ಷಿಣ ಏಷ್ಯಾದಲ್ಲಿ ಚೀನಾವನ್ನು ನಿಯಂತ್ರಿಸುವುದು ಅಮೆರಿಕಕ್ಕೆ ಸಾಧ್ಯವಿಲ್ಲ ಎಂಬುದನ್ನು ಟ್ರಂಪ್‌ಗೆ ಗೋರ್ ಮನವರಿಕೆ ಮಾಡಿಕೊಡುವ ಎಲ್ಲಾ ಸಾಧ್ಯತೆಗಳೂ ಇವೆ.

ಇನ್ನು, ಭಾರತವಂತೂ ನಾನಾ ಜಾಗತಿಕ ಕಾರಣಗಳಿಂದಾಗಿ ಅಮೆರಿಕಕ್ಕೆ ವಿಶ್ವಾಸಾರ್ಹ ಪಾಲುದಾರನಾಗುವ ಎಲ್ಲಾ ಅರ್ಹತೆ ಹೊಂದಿದೆ. ಹಾಗೆ ನೋಡಿದರೆ ಕಳೆದ ಒಂದು ದಶಕದಲ್ಲಿ ಭಾರತ ಮತ್ತು ಅಮೆರಿಕದ ನಡುವಿನ ಸಂಬಂಧ ಬಹಳ ಸುಧಾರಿಸಿತ್ತು. ಎರಡೂ ದೇಶಗಳು ಪರಸ್ಪರರನ್ನು ಸಾಕಷ್ಟು ಗೌರವದಿಂದ ನೋಡುತ್ತಾ, ವ್ಯಾಪಾರ ವ್ಯವಹಾರಗಳ ಪಾಲುದಾರಿಕೆಯನ್ನು ಕೂಡ ಹೆಚ್ಚಿಸಿಕೊಂಡಿದ್ದವು. ಆದರೆ ಟ್ರಂಪ್ ಬಂದ ಮೇಲೆ ಈ ಸಂಬಂಧ ಹಳ್ಳ ಹಿಡಿದಿದೆ. ಹೀಗಾಗಿ ಗೋರ್ ಮೇಲಿನ ಜವಾಬ್ದಾರಿ ಹೆಚ್ಚಾಗಿದೆ. ಆದರೂ

ಗೋರ್ ಈ ವಿಷಯದಲ್ಲಿ ಯಶಸ್ಸು ಕಾಣುತ್ತಾರೆಂದು ನನಗೆ ನಂಬಿಕೆಯಿದೆ. ಏಕೆಂದರೆ ಈ ಮನುಷ್ಯ ಅಸಾಧ್ಯವಾದುದನ್ನು ಕೂಡ ಸಾಧ್ಯವಾಗಿಸುವ ಚಾಕಚಕ್ಯತೆ ಹೊಂದಿದ್ದಾರೆ. ಇವರಿಗೆ ಭಾರತದ ಸಂಸ್ಕೃತಿಯ ಬಗ್ಗೆ ಚೆನ್ನಾಗಿ ಅರಿವಿದೆ. ಭಾರತವು ಸ್ನೇಹಕ್ಕೆ ತುಂಬಾ ಮಹತ್ವ ನೀಡುತ್ತದೆ ಎಂಬುದು ಗೋರ್‌ಗೆ ಗೊತ್ತಿದೆ. ಚುನಾವಣೆಯ ವೇಳೆ ಟ್ರಂಪ್‌ಗೆ ಭಾರತ ಹೇಗೆ ಬೆಂಬಲ ನೀಡಿತ್ತು ಎಂಬುದನ್ನು ಅವರೇ ಬಹಿರಂಗವಾಗಿ ನೆನಪಿಸಿಕೊಂಡಿದ್ದಾರೆ. ಭಾರತ ಮತ್ತು ಅಮೆರಿಕದ ನಡುವೆ ವಾಣಿಜ್ಯ ಸಂಬಂಧ ಇನ್ನಷ್ಟು ವಿಸ್ತರಿಸಿದರೆ ಎರಡೂ ದೇಶಕ್ಕೆ ಲಾಭವಿದೆ ಎಂಬುದು ಮೃದು ಸ್ವಭಾವದ ಗೋರ್‌ಗೆ ತಿಳಿದಿದೆ. ಭಾರತ ಮತ್ತು ಅಮೆರಿಕದ ಪ್ರಜೆಗಳ ನಡುವೆ ನಿಜವಾದ ಸ್ನೇಹಶೀಲ ಸಂಬಂಧವಿರಬೇಕು ಎಂಬ ಭಾವನೆಯನ್ನೇ ಅವರು ಹೊಂದಿದ್ದಾರೆ.

ಒಂದು ಸಂಗತಿಯಂತೂ ನಿಜ. ಯಾವುದೇ ದೇಶದ ರಾಯಭಾರಿ ತಾನು ಕೆಲಸ ಮಾಡುವ ದೇಶದಲ್ಲಿದ್ದುಕೊಂಡು ತನ್ನ ಮಾತೃದೇಶದ ಹಿತಾಸಕ್ತಿಯನ್ನು ಕಾಪಾಡುವ ಕುರಿತೇ ಸದಾ ಯೋಚಿಸುತ್ತಾನೆ. ಅಂದರೆ ಭಾರತದಲ್ಲಿದ್ದುಕೊಂಡು ಸೆರ್ಗಿಯೋ ಗೋರ್ ಕೂಡ ಅಮೆರಿಕದ ಹಿತವನ್ನು ಕಾಪಾಡುವ ಕೆಲಸ ಮಾಡುತ್ತಾರೆಯೇ ಹೊರತು ಭಾರತದ ಹಿತ ಕಾಪಾಡುವ ತಲೆನೋವನ್ನು ಅವರೇನೂ ತೆಗೆದುಕೊಳ್ಳುವುದಿಲ್ಲ. ಮೇಲಾಗಿ ಈ ವ್ಯಕ್ತಿ ಡೊನಾಲ್ಡ್ ಟ್ರಂಪ್ ಅವರ 'ಅಮೆರಿಕ ಮೊದಲು ಎಂಬ ನೀತಿಯ ಕಟ್ಟರ್ ಬೆಂಬಲಿಗ. ಗ್ರೀನ್‌ಲ್ಯಾಂಡನ್ನು ವಶಪಡಿಸಿಕೊಳ್ಳುವ ಬಗ್ಗೆ ಟ್ರಂಪ್ ಮಾತನಾಡುವಾಗ ಮತ್ತು ಕೆಲವೇ ದಿನಗಳ ನಂತರ ಡೊನಾಲ್ಡ್ ಟ್ರಂಪ್ ಜೂನಿಯರ್ ಗ್ರೀನ್‌ಲ್ಯಾಂಡ್ ಗಡಿಗೆ ಭೇಟಿ ನೀಡುವಾಗ ಇಬ್ಬರ ಜೊತೆಗೂ ಗೋರ್ ಇದ್ದರು. ನಾನೇಕೆ ಈ ಘಟನೆಯನ್ನಿಲ್ಲಿ ಉಲ್ಲೇಖಿಸಿದೆ ಅಂದರೆ, ಸೆರ್ಗಿಯೋ ಗೋರ್ ಡೊನಾಲ್ಡ್ ಟ್ರಂಪ್ ಮತ್ತು ಅವರ ಮಗನಿಗೆ ಎಷ್ಟು ಹತ್ತಿರದವರು ಹಾಗೂ ಭಾರತದಲ್ಲಿದ್ದರೂ ಇವರ ಹೃದಯ ಹೇಗೆ ಅಮೆರಿಕಕ್ಕಾಗಿ ತುಡಿಯುತ್ತಿರುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡುವುದಕ್ಕೆ. ಗೋರ್ ಹೀಗೆ ಇರುವುದರಲ್ಲಿ ತಪ್ಪೇನಿಲ್ಲ. ಎಲ್ಲರೂ ಅವರವರ ದೇಶವನ್ನು ಪ್ರೀತಿಸಬೇಕು ಮತ್ತು ಗೌರವಿಸಬೇಕು. ಆದರೆ, ಭಾರತದಲ್ಲಿನ ಅಮೆರಿಕದ ರಾಯಭಾರಿಯಾಗಿದ್ದುಕೊಂಡು ಎರಡೂ ದೇಶಗಳ ನಡುವಿನ ಸಂಬಂಧವನ್ನು ಸುಧಾರಿಸುವ ಕಾರ್ಯದಲ್ಲಿ ಯಶಸ್ವಿಯಾಗಬೇಕು ಅಂದರೆ ಅವರಿಗೆ ಭಾರತದ ಹಿತಾಸಕ್ತಿಗಳು ಏನು ಎಂಬುದರ ಅರಿವು ಕೂಡ ಇರಬೇಕು.

ಅಮೆರಿಕದ ಇತ್ತೀಚಿನ ಆಟಗಳನ್ನು ನೋಡಿ ಭಾರತೀಯರು ಬೇಸತ್ತಿದ್ದಾರೆ. ಒಂದು ಕಾಲದಲ್ಲಿ ನಾವು ವಿಶ್ವಾಸದಿಂದ ಕಂಡಿದ್ದ ಅಮೆರಿಕ ಈಗ ನಮ್ಮ ಜೊತೆಗೆ ನ್ಯಾಯಯುತವಾಗಿ ನಡೆದುಕೊಳ್ಳುತ್ತಿದೆಯೇ ಎಂದು ಭಾರತೀಯರು ಪ್ರಶ್ನಿಸುತ್ತಿದ್ದಾರೆ. ಅಮೆರಿಕ ಏಕೆ ಇಂದು ಪಾಕಿಸ್ತಾನದ ಪರ ನಿಂತಿದೆ? ರಷ್ಯಾದಿಂದ ಚೀನಾ ತೈಲ ಖರೀದಿಸುತ್ತಿದೆ, ಯುರೋಪಿಯನ್ ದೇಶಗಳು ಗ್ಯಾಸ್ ಖರೀದಿಸುತ್ತಿವೆ ಮತ್ತು ಸ್ವತಃ ಅಮೆರಿಕವೇ ಯುರೇನಿಯಂ ಖರೀದಿಸುತ್ತಿದೆ. ಆದರೆ ರಷ್ಯಾದಿಂದ ಭಾರತ ತೈಲ ಖರೀದಿಸುತ್ತಿದೆ ಎಂಬ ನೆಪ ಹೇಳಿ ಭಾರತದ ಮೇಲಷ್ಟೇ ಏಕೆ ಟ್ರಂಪ್ ತೆರಿಗೆ ಯುದ್ಧ ನಡೆಸುತ್ತಿದ್ದಾರೆ? ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಭಾರತಕ್ಕೆ 500% ತೆರಿಗೆ ವಿಧಿಸುವ ಎಚ್ಚರಿಕೆ ಕೂಡ ನೀಡುತ್ತಿದ್ದಾರೆ. ಅಂದರೆ ಜಗತ್ತಿನಲ್ಲೇ ಅತಿಹೆಚ್ಚು ಜನಸಂಖ್ಯೆಯಿರುವ ದೇಶವನ್ನು ಅವರು ಬೆದರಿಸಿ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿದ್ದಾರೆಯೇ? ಈ ಎಲ್ಲಾ ಪ್ರಶ್ನೆಗಳಿಗೂ ಸೆರ್ಗಿಯೋ ಗೋರ್ ಉತ್ತರ ಕಂಡುಕೊಳ್ಳಬೇಕು. ಬಳಿಕ ಟ್ರಂಪ್‌ಗೆ ಭಾರತದ ದೃಷ್ಟಿಕೋನವೇನು ಎಂಬುದನ್ನು ತಿಳಿಹೇಳಬೇಕು. ಆಗ ಮಾತ್ರ ಉಭಯ ದೇಶಗಳ ನಡುವಿನ ಸಂಬಂಧದಲ್ಲಿ ಪುನಃ ಸಿಹಿ ಸುರಿಯಲು ಗೋರ್‌ಗೆ ಸಾಧ್ಯವಾದೀತು. ಭಾರತದ ಶುಭ ಹಾರೈಕೆಗಳಂತೂ ಅವರ ಜೊತೆಗೆ ಇದ್ದೇ ಇರುತ್ತವೆ.

ಭಟ್ಟರ್ ಸ್ನಾಕ್

- **ಸಮೀರ ಶರ್ಮ, ಕುಂದಾಪುರ**
ಭಟ್ರೇ, ಪೊಲೀಸ್ ಅಧಿಕಾರಿ ರಾಮಚಂದ್ರ ರಾವ್ ಬಗ್ಗೆ ಏನನಿಸುತ್ತದೆ?
– **ಸದಾ ಕರ್ತವ್ಯನಿರತ ಅಧಿಕಾರಿ!**

- **ನಾಣಿ, ನೊಣವಿನಕೆರೆ**
ಭಟ್ರೇ, ಹೂವಿನಕೆರೆಯಿಂದ ನಮ್ಮೂರಿಗೆ ಹೊಸದಾಗಿ ಬಂದಿರುವ ಹುಡುಗಿಗೆ ನಮ್ಮೂರ ಕೆರೆಯ ಮೇಲೆ ಕೋಪಕ್ಕೆ ಕಾರಣ?
– **ನಿಮ್ಮೂರ ಹೆಸರು!**

- **ಘಂಟಿ ಆಚಾರ್ಯ, ಮೈಸೂರು**
ಭಟ್ರೇ, ವರ್ಷಕ್ಕೆ ಎಷ್ಟು ದಿನಗಳು?
– **ನಕ್ಷತ್ರ ಪಂಚಾಂಗವೋ, ಸೌರಮಾನವೋ, ಚಾಂದ್ರಮಾನವೋ ತಿಳಿಯಲು ಪ್ರಶ್ನೆಯನ್ನು ಅದಮಾರು ಶ್ರೀಗಳಿಗೆ ಫಾರ್ವರ್ಡ್ ಮಾಡಲಾಗಿದೆ!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಹೆಂಡತಿ ಮುಖ ನೋಡುತ್ತಿದ್ದರೆ ತರಕಾರಿಗಳ ನೆನಪು ಬರಲು ಸಾಧ್ಯವೇ?
– **ಯಾಕೆ ಸಾಧ್ಯವಿಲ್ಲ? ತೊಂಡೆ ತುಟಿ, ನುಗ್ಗೆಕಾಯಿ ಬೆರಳು, ಟೊಮಾಟೋ ಕೆನ್ನೆ, ಮೂಲಂಗಿ ಮೂಗಿನಂತಿದ್ದರೆ!?**

- **ಹರಿ ಬ್ರಹ್ಮ ಶಾಸ್ತ್ರೀ, ಶಂಕರಪುರ**
ಗಡ್ಡ ಕೆರೆಯೋದು ಅಂತ ಅಂತಾರೆ, ಮೂಗು ಮುರಿಯೋದು ಅಂತಾರೆ, ಹಾಗಾದರೆ ಕಣ್ಣು?
– **ಹೊಡೆಯೋದು ಅಂತಾರೆ!**

- **ಮೈಸೂರು ರಾಘವೇಂದ್ರ**
ಭಟ್ರೇ, ಪುರಂದರದಾಸರ ಆರಾಧನೆಗೂ ಫ್ಯೂಷನ್ ಸಂಗೀತಕ್ಕೂ ಏನು ಸಂಬಂಧ?
– **ಕರ್ನಾಟಕ ಸಂಗೀತ ಪಿತಾಮಹರಿಗೆ ಹೊಸ ನಮೂನೆ ಸಂಗೀತ ಪರಿಚಯವಾಗಲಿ ಅಂತಿರಬಹುದು!**

- **ಸಂಗೀತ ಪಿ., ಬಾಣಾವರ**
ಭಟ್ರೇ, ಯಾವ ಕೆಲಸವನ್ನು ನಾವು ಕಣ್ಣು ಮುಚ್ಚಿಕೊಂಡೇ ಮಾಡಬೇಕು?
– **ಧ್ಯಾನ ಮತ್ತು ನಿದ್ರೆ !**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಯಾವ ದೀಪಕ್ಕೆ ಎಣ್ಣೆಯೂ ಬೇಡ, ಬತ್ತಿಯೂ ಬೇಡ?
– **ಮನೆ ಬೆಳಗುವ 'ಕುಲದೀಪ'!**

- **ಕಾಂತೇಶ, ಅರಸೀಕೆರೆ**
ಭಟ್ರೇ, ಸತ್ತ ಮೇಲೂ ಬೆಳೆಯುವ ವಸ್ತು ಯಾವುದು?
– **ಸ್ಮಶಾನದ ಸುತ್ತ ಬೆಳೆದಿರುವ ಗಿಡಗಂಟಿಗಳು!**

- **ರಾಜೇಶ ಹುದೇರ, ಬೆಳಗಾವಿ**
ಭಟ್ರೇ, ಜೋರಾಗಿ ಹನ್ನೆರಡು ಕಿಮೀ ದೂರ ಓಡಿ ಬಂದ್ರೆ ಏನನಿಸುತ್ತದೆ?
– **ನಾಲ್ಕು ಇಡ್ಲಿ, ಎರಡು ವಡೆ ಬೇಕು ಅನಿಸುತ್ತದೆ!**

- **ಕೇಶವ ಭಟ್, ತುಮಕೂರು**
ಮದುವೆ ಫೋಟೋಗ್ರಾಫರ್‌ಗಳಿಗೆ ಮೇಕಪ್ ಮೇಲೆ ಯಾಕೆ ಸಿಟ್ಟು?
– **ಯಾಕಂದ್ರೆ, ಅವರು ತೆಗೆದ ಫೋಟೋಕ್ಕಿಂತ, ಮೇಕಪ್ ಆರ್ಟಿಸ್ಟ್ ಮಾಡಿದ 'ಎಡಿಟಿಂಗ್' ಜಾಸ್ತಿ ಲೈಕ್ಸ್ ಗಿಟ್ಟಿಸಿಕೊಳ್ಳುತ್ತೆ!**

8450 ಪ್ರಶ್ನೆಕೋಶದ ಒಳಗುಟ್ಟು ಅರಿತವರಾರು?

ಪ್ರಸ್ತುತ

ಸುರೇಂದ್ರ ಪೈ, ಭಟ್ಕಳ
vveditoped@gmail.com

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 18ರಿಂದ ಪ್ರಾರಂಭವಾಗಲಿದೆ. ಅರ್ಥಾತ್ ಮಕ್ಕಳಿಗೆ ಇನ್ನೂ ಬರೋಬ್ಬರಿ ಎರಡು ತಿಂಗಳು ಕಾಲ ಮಾತ್ರ ಸಮಯಾವಕಾಶವಿದೆ. ಈ ಸಮಯದಲ್ಲಿ ಶಿಕ್ಷಣ ಇಲಾಖೆಯು ಅತ್ಯುತ್ತಮ ಫಲಿತಾಂಶಕ್ಕಾಗಿ ಹೊಸದೊಂದು ಪ್ರಯೋಗ ಮಾಡುವ ಮೂಲಕ ದಾಖಲೆಯ ಫಲಿತಾಂಶ ಪಡೆಯಲು ವಿದ್ಯಾರ್ಥಿಗಳ ಭವಿಷ್ಯವನ್ನು ಅವರ ಸೃಜನಶೀಲತೆಯನ್ನು ಪಣಕ್ಕಿಡಲು ಹೊರಟಿದೆ. ಇತ್ತೀಚೆಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಗ್ರಾಮಾಂತರ ಉಪ ನಿರ್ದೇಶಕರಾದ ಬೈಲಾಂಜನಪ್ಪ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಉತ್ತಮ ಫಲಿತಾಂಶಕ್ಕೆಂದು ರಾಜ್ಯ ಶಿಕ್ಷಣ ಇಲಾಖೆ 8,450 ಪ್ರಶ್ನೆಗಳಿರುವ ಪ್ರಶ್ನೆಕೋಶ'ವನ್ನು ಸಿದ್ಧಪಡಿಸಿದೆ. ಈ ಬಾರಿಯ ವಾರ್ಷಿಕ ಪರೀಕ್ಷೆಯಲ್ಲಿ ಈ ಪ್ರಶ್ನೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಶ್ನೆಗಳು ಬರುವುದಿಲ್ಲ ಎಂಬುದೇ ಈ ವರ್ಷದ ವಿಶೇಷ ಎಂಬ ಹೇಳಿಕೆ ವರದಿಯಾಗಿದೆ. ಆದರೆ ಈ 8450 ಪ್ರಶ್ನೆಕೋಶ ಇನ್ನೂ ತನಕ ಪ್ರಕಟಗೊಂಡಿಲ್ಲ. ಆದರೆ ಇದು ಹೌದು ಎಂಬ ಸುದ್ದಿ ಶಿಕ್ಷಣ ಇಲಾಖೆಯಲ್ಲಿದೆ. ಹಾಗಾದರೆ ಈ ಪ್ರಶ್ನೆಕೋಶದ ಒಳಗುಟ್ಟು ಏನು? ನಿಜವಾಗಲೂ ಇದು ಮಕ್ಕಳಿಗೆ ಅನುಕೂಲಕರವೇ ಅಥವಾ ಶಿಕ್ಷಣ ಇಲಾಖೆಯ ಸಾಧನೆಯ ಅಂಕಿಅಂಶಗಳನ್ನು ಎತ್ತರಕ್ಕೇರಿಸಲು ಕೈಗೊಂಡಿರುವ ಹುನ್ನಾರವೇ? ಏನಿ ಹೊಸ ಪ್ರಯೋಗದ ಮರ್ಮ ಎಂಬುದನ್ನೊಮ್ಮೆ ಸೂಕ್ಷ್ಮವಾಗಿ ಅವಲೋಕಿಸಬೇಕಿದೆ.

ನಾವೆಲ್ಲಾ ಯಥಾ ರಾಜ ತಥಾ ಪ್ರಜಾ ಎಂಬ ಮಾತನ್ನು ಕೇಳಿದ್ದೇವೆ. ರಾಜ ಹೇಗಿದ್ದಾನೋ ಹಾಗೆಯೇ ಪ್ರಜೆಗಳೂ ಇರುತ್ತಾರೆ ಎಂದರ್ಥ. ಇದು ನಾಯಕನ ನಡವಳಿಕೆ ಮತ್ತು ಗುಣಗಳು ಪ್ರಜೆಗಳ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿಸುತ್ತದೆ. ರಾಜನು ಉತ್ತಮ ನೈತಿಕತೆ ಮತ್ತು ಪ್ರಾಮಾಣಿಕತೆಯಿಂದ ನಡೆದುಕೊಂಡರೆ, ಪ್ರಜೆಗಳೂ ಅದೇ ರೀತಿಯಾಗಿ ವರ್ತಿಸುತ್ತಾರೆ, ಇಲ್ಲದಿದ್ದರೆ ಭ್ರಷ್ಟಾಚಾರ ಹೆಚ್ಚಾಗುತ್ತದೆ ಎಂದು ಕೌಟಿಲ್ಯನಂತಹ ಚಿಂತಕರು ಹೇಳುತ್ತಾರೆ. ಪ್ರಸ್ತುತ ರಾಜ್ಯ ಶಿಕ್ಷಣ ಇಲಾಖೆ ಮುನ್ನಡೆಸುವ ಸಚಿವರ ನಡೆ ಕಂಡಾಗ ಈ ಮಾತು ನೆನಪಾಗುತ್ತದೆ. ನೇರವಾಗಿ ಹೇಳಬೇಕೆಂದರೆ ಇತ್ತೀಚಿನ ಶೈಕ್ಷಣಿಕ ವ್ಯವಸ್ಥೆಯ ಕುಸಿಯುತ್ತಿರುವ ಗುಣಮಟ್ಟದ ನಡುವೆಯೇ ಹೊಸ ಪ್ರಯೋಗದ ಹೆಸರಿನಲ್ಲಿ ಜಾರಿ ಮಾಡ ಹೊರಟ 8450 ಪ್ರಶ್ನೆಕೋಶದ ಹೊಸ ಪ್ರಯೋಗವು ಒಂದು ನಿದರ್ಶನ. ಈಗಾಗಲೇ ರಾಜ್ಯದ ಶಿಕ್ಷಣ ಸಚಿವರಿಗೆ ಸ್ಪಷ್ಟವಾಗಿ ಕನ್ನಡ ಓದಲು ಬಾರದಿರುವುದು ನಮಗೆಲ್ಲಾ ತಿಳಿದಿರದ ಸಂಗತಿಯೇನಲ್ಲ. ಈ ವಿಷಯದ ಸಂಬಂಧ ಹಲವು ಬಾರಿ ಮುಜುಗರಕ್ಕೆ ಒಳಗಾದರೂ ಸಹ ಎಚ್ಚೆತ್ತುಕೊಳ್ಳದೇ ಅದೇ ಅವಿವೇಕತನವನ್ನು ಪ್ರದರ್ಶನ ಮಾಡಿಕೊಂಡು ಬಂದಿರುವುದು ಹೊಸ ವಿಷಯವೇನಲ್ಲ ಬಿಡಿ. ಅದು ಅವರ ವೈಯಕ್ತಿಕ ಅಂದುಕೊಂಡು ಸುಮ್ಮನಾದರೂ ಸಹ ತಮ್ಮ ಅವಿವೇಕದ ತಪ್ಪು ನಿರ್ಧಾರದಿಂದಾಗಿ ಮಕ್ಕಳ ಸೃಜನಶೀಲತೆಯನ್ನು ಹತ್ತಿಕ್ಕುವ ಅಧಿಕಾರವನ್ನು ಇವರಿಗ್ಯಾರು ಕೊಟ್ಟರು ಎಂಬುದೇ ಇಲ್ಲಿಯ ಪ್ರಶ್ನೆ?

ಶಿಕ್ಷಣದ ಮೂಲ ಉದ್ದೇಶ ಅರಿತ ಯಾವೊಬ್ಬ ಶಿಕ್ಷಣ ಸಚಿವರು, ಆಯುಕ್ತರು, ಶಿಕ್ಷಣ ತಜ್ಞರು ಸಹ ನೋಡಿ ಮಕ್ಕಳೇ ಈ ಬಾರಿ ಪರೀಕ್ಷೆಗೆ ಇಷ್ಟೇ ಪ್ರಶ್ನೆ ಬರುತ್ತದೆ. ಇಷ್ಟನ್ನು ಮಾತ್ರ ಓದಿಕೊಂಡರೆ ಸಾಕು. ಅತ್ಯುತ್ತಮ ಅಂಕಗಳಿಸುವವರು ನೂರಕ್ಕೆ ನೂರು ಅಂಕಗಳಿಸಬಹುದು. ಇನ್ನೂ ಅನುತ್ತೀರ್ಣರಾಗುವವರು ಸಹ ಸುಲಭದಲ್ಲಿ ಪಾಸ್ ಆಗಬಹುದು. ಇದನ್ನು ಬಿಟ್ಟು ಬೇರೇನೂ ಓದಬೇಡಿ ಎಂದು ಹೇಳುತ್ತಾರಾ? ಇಂದೆಂಥಾ ಶಿಕ್ಷಣ ವ್ಯವಸ್ಥೆ. ಇದುವೇ ಶಿಕ್ಷಣದ ಮೂಲ ಉದ್ದೇಶವಾ? ಹಾಗಾದರೆ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಆಲೋಚನಾತ್ಮಕ ಚಿಂತನೆ ಮೂಡಿಸುವುದು, ಬೆಳೆಸುವುದು ಯಾರ ಹೊಣೆ? ಅದು ಶಿಕ್ಷಣದ ಗುರಿ ಯಾಕಾಗಿಲ್ಲ?

ಇಷ್ಟೇ, ಇಂತಹುದೇ ಪರೀಕ್ಷೆಗೆ ಬರುತ್ತದೆ ಎಂದಾದರೆ 1-10ನೇ ತರಗತಿಯ ತನಕ ಕಲಿಯುವ ಅಗತ್ಯ ಏನಿದೆ? ಇನ್ನೂ ಶಿಕ್ಷಕರು ವರ್ಷವಿಡೀ ಪಾಠ ಮಾಡುವ ಅಗತ್ಯವೇನಿದೆ ಅಲ್ಲವೇ? ಮಕ್ಕಳ ಗುಣಮಟ್ಟದ ಫಲಿತಾಂಶದ ಬಗ್ಗೆ ಕಾಳಜಿಯೋ ಅಥವಾ ಇಲಾಖೆಯ ದಾಖಲೆಯ ಫಲಿತಾಂಶದ ಏರಿಕೆ ಬಗ್ಗೆ ಅಷ್ಟೊಂದು ಕಾಳಜಿ, ಹುನ್ನಾರ ಮೊದಲೇ ಇದಿದ್ದರೆ, ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ 8450 ಪ್ರಶ್ನೆ ನೀಡಿದ್ದರೆ ಸಾಕಿತ್ತು. ಶಿಕ್ಷಕರು ತಲೆಬಿಸಿ ಕಡಿಮೆಯಾಗುತ್ತಿತ್ತು. ಹೇಗೂ ದಿನಪೂರ್ತಿ ಇಲಾಖೆಗೆ ಬೇಡವಾದ ಮಾಹಿತಿ, ದಾಖಲೆ ಒದಗಿಸುವ ಕೆಲಸದಲ್ಲೇ ಮುಳುಗಿರುವ ಅವರಿಗೆ ಕೊನೆಯ ಪಕ್ಷ ವಾರ್ಷಿಕ ಪರೀಕ್ಷೆಗಾಗಿ ಮಕ್ಕಳನ್ನು ತಯಾರು ಮಾಡುವ ಟೆನ್ಶನ್ ಆದರೂ ತಪ್ಪುತ್ತಿತ್ತು. ದಿನವೂ 8450ರಲ್ಲಿನ ಒಂದಿಷ್ಟು ಪ್ರಶ್ನೆಗಳನ್ನೇ ಉರು ಹೊಡೆಯಿಸುತ್ತಾ,

ಅದನ್ನೇ ನಾಲ್ಕಾರು ಬಾರಿ ಬರೆಯಿಸುತ್ತಾ ಗಿಳಿಪಾಠವನ್ನು ಮಾಡಿಸುತ್ತಿದ್ದರು. ಅದನ್ನು ಬಿಟ್ಟು ಪರೀಕ್ಷೆಗೆ ಇನ್ನೇನು ಎರಡು ತಿಂಗಳು ಇರುವಾಗ ಹೀಗೆಲ್ಲಾ ಹೊಸ ಪ್ರಯೋಗವೊಂದನ್ನು ಮಕ್ಕಳ ಮೇಲೆ ಹೇರಿದರೆ ಅವರು ಎರಡು ದೋಣಿಯ ಮೇಲೆ ಕಾಲಿಟ್ಟ ಹಾಗೇ ಆಗುವುದಿಲ್ಲವೇ? ಮಕ್ಕಳ ಮಾನಸಿಕತೆ ಬಗ್ಗೆ ಸ್ವಲ್ಪವಾದರೂ ಅರಿವಿದ್ದರೆ ಇಂತಹ ನೀತಿಯನ್ನು ಯಾವೊಬ್ಬ ಜವಬ್ದಾರಿಯುತ ಶಿಕ್ಷಣ ಸಚಿವರು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಜಾರಿಗೊಳಿಸುತ್ತಿದ್ದರು ಎಂಬುದನ್ನು ಒಮ್ಮೆ ಚಿಂತಿಸಬೇಕಲ್ಲವೇ.

ವರ್ಷವಿಡೀ ಪರಿಶ್ರಮಪಟ್ಟು , ಪ್ರಾಮಾಣಿಕವಾಗಿ ಓದಿ ಭವಿಷ್ಯದ ಕನಸನ್ನು , ತಮ್ಮ ಗುರಿಯನ್ನು ಸಾಕಾರಗೊಳಿಸಬೇಕೆಂಬ ಹಂಬಲ ಹೊಂದಿದ ವಿದ್ಯಾರ್ಥಿಗಳ ಜೊತೆಗೆ ಈ ರೀತಿ ಕಪಟ ನಾಟಕ ಮಾಡುವುದು ಎಷ್ಟರಮಟ್ಟಿಗೆ ಸರಿ? ಪರೀಕ್ಷೆಗೆ 60 ದಿನ ಗಳಿರುವಾಗ ಈ ರೀತಿಯ ಹೊಸ ಪ್ರಯೋಗ ಮಾಡಲು ಹೊರಟ ಬಗ್ಗೆ, ಇಲಾಖಾ ಅಧಿಕಾರಿಗಳ ಹೇಳಿಕೆಗಳು ಮಕ್ಕಳ ಸೃಜನಶೀಲತೆಗೆ ಪೆಟ್ಟು ನೀಡಲಿದೆ. ಇದರಿಂದ ವಿದ್ಯಾರ್ಥಿಗಳ ವಿಷಯ ಜ್ಞಾನಕ್ಕಿಂತ ನೆನಪಿನ ಶಕ್ತಿಗೆ ಆದ್ಯತೆ ನೀಡಿದಂತಾಗುತ್ತದೆ. ಪ್ರಶ್ನೆಕೋಶದಲ್ಲಿನ ಪ್ರಶ್ನೆಗಳಿಗೆ ಮಾತ್ರ ಪ್ರಾಮುಖ್ಯತೆ ನೀಡುವುದರಿಂದ ಕಂಠಪಾಠಕ್ಕೆ ಉತ್ತೇಜನ ನೀಡಿದಂತಾಗುತ್ತದೆ. ಇದರಿಂದ ಭವಿಷ್ಯದ ಸವಾಲು ಎದುರಿಸುವ ಮಕ್ಕಳ ಆಲೋಚನಾತ್ಮಕ, ವಿಶ್ಲೇಷಣಾತ್ಮಕ ಅಂಶವು ಕಡೆಗಣಿಸಲ್ಪಡುತ್ತದೆ. ಇಂತಹ ಹೊಸ ಪ್ರಯೋಗದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶವೇನೋ ಹೆಚ್ಚಾಗಬಹುದು. ಆದರೆ, ಮಕ್ಕಳ ಪ್ರತಿಭೆಗೆ ಧಕ್ಕೆಯಾಗಲಿದೆ.

ಶಿಕ್ಷಣದ ಉದ್ದೇಶ ಕೇವಲ ಅಂಕಗಳಿಗೆ ಮಾತ್ರ ಸೀಮಿತವನ್ನಾಗಿಸುವ 8450 ಪ್ರಶ್ನೆಕೋಶದೊಳಗಿನ ಪ್ರಶ್ನೆ ಮಾತ್ರ ಪರೀಕ್ಷೆಯಲ್ಲಿ ಕೇಳುವ ಅವೈಜ್ಞಾನಿಕ ಆಲೋಚನೆ ಸುತಾರಾಂ ಒಪ್ಪಿತವಲ್ಲ. ನಮ್ಮಲ್ಲಿ ಕೆಲವು ಶಿಕ್ಷಕರು 1-9 ತರಗತಿಯ ತನಕ ತಾವು ಒಳ್ಳೆಯ ಶಿಕ್ಷಕರು ಎಂದು ಪಾಲಕರು, ಆಡಳಿತ ಮಂಡಳಿ ಹಾಗೂ ಇಲಾಖೆಯ ಮುಂದೆ ತೋರಿಸಿಕೊಳ್ಳಲು ಪರೀಕ್ಷೆಗೂ ಮುನ್ನ ಪಾಠವಾರು ಪ್ರಮುಖ ಪ್ರಶ್ನೆಗಳು ಎಂದು ಪಠ್ಯಪುಸ್ತಕದಲ್ಲಿ ಮಾರ್ಕ್ ಮಾಡಿಸುವ ಕೆಟ್ಟ ಚಾಳಿ ಇದೆ. ಬಹುಶಃ ಇದನ್ನು ಗಮನಿಸಿದ ಪಾಲಕರು ಇದು ತಪ್ಪು ಎಂದು ಪ್ರತಿಭಟಿಸಿದ ಹಲವು ನಿದರ್ಶನಗಳು ನಮ್ಮಲ್ಲಿವೆ. ಈಗ ಪ್ರಸುತ್ತ ಶಿಕ್ಷಣ ಇಲಾಖೆಯು ಪರಿಚಯಿಸಲಿರುವ 8450 ಪ್ರಶ್ನೆಕೋಶದ ಹಿಂದಿನ ಉದ್ದೇಶವು ಇದೇ ಇರಬಹುದೇ ಎಂಬ ಶಂಕೆಯೊಂದು ಎಲ್ಲೆಡೆ ಬಹು ಚರ್ಚೆ ಆಗುತ್ತಿದೆ. ಅಂದರೆ ಈಗಾಗಲೇ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಉತ್ತಮ ಪರೀಕ್ಷಾ ಫಲಿತಾಂಶದ ಹೆಸರಿನಲ್ಲಿ ಪಾಸ್ ಅಂಕಗಳನ್ನು 100ಕ್ಕೆ ಆಂತರಿಕ 20 ಅಂಕಗಳೊಂದಿಗೆ 33 ಅಂಕ ಪಡೆದರೆ ಸಾಕು ಎಂಬ ಹೊಸ ನಿಯಮ ಜಾರಿಗೆ ತಂದಿದೆ. ಇದನ್ನು ಸಮರ್ಥಿಸಿಕೊಳ್ಳಲು ಸಿಬಿಎಸ್‌ಸಿ ಕೇಂದ್ರೀಯ ಶಿಕ್ಷಣ ಇಲಾಖೆಯ ಮಾದರಿ ಅಳವಡಿಸಿದ್ದೇವೆ ಎಂಬ ಗೊಡ್ಡು ತರ್ಕ ಬೇರೆ. ಇಷ್ಟಾದರೂ ಸಹ ತಮ್ಮ ಆಡಳಿತಾತ್ಮಕ ವೈಫಲ್ಯದಿಂದಾಗಿ ಈ ಬಾರಿಯು ಗರಿಷ್ಠ ಸಂಖ್ಯೆಯಲ್ಲಿ ಮಕ್ಕಳು ಅನುತ್ತೀರ್ಣ ಆಗಬಹುದು ಎಂಬ ಒಂದು ಚಿಕ್ಕ ಅನುಮಾನ ಶಿಕ್ಷಣ ಸಚಿವರು, ಅಧಿಕಾರಿಗಳಲ್ಲಿ ಮನೆಮಾಡಿದಂತಿದೆ. ಒಂದು ವೇಳೆ ಈ ಅನುಮಾನ ನಿಜವಾದರೆ ಖಂಡಿತವಾಗಿಯೂ ರಾಜ್ಯದ ಜನರಿಂದ ಛೀಮಾರಿ ಹಾಕಿಸಿಕೊಳ್ಳುವುದು ನಿಶ್ಚಿತ! ಹಾಗಾಗಿ ಇವೆಲ್ಲವನ್ನೂ ತಪ್ಪಿಸಿಕೊಳ್ಳಲು 8450 ಪ್ರಶ್ನೆಕೋಶದ ಮಾಸ್ಟರ್ ಪ್ಲಾನ್ ಸಿದ್ಧವಾದಂತೆ ಕಾಣುತ್ತಿದೆ. ಹೇಗೆ ಶಿಕ್ಷಕರು ಪರೀಕ್ಷೆಯ ಮೊದಲೇ ಇಂಪಾರ್ಟೆಂಟ್ ಕ್ವೆಶ್ಚನ್ ಮಾರ್ಕ್ ಮಾಡಿಸುತ್ತಿದ್ದರೋ, ಅದೇ ರೀತಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪಟ್ಟಿಯಲ್ಲಿ ತೀರಾ ಕೆಳಗಿರುವ ಜಿಲ್ಲೆಗಳು ಹಾಗೂ ತಾಲೂಕುಗಳು 8450 ಪ್ರಶ್ನೆಗಳಲ್ಲೇ 20-30 ಅಂಕದ ವಾರ್ಷಿಕ ಪರೀಕ್ಷೆಯ ಪ್ರಶ್ನೆಗಳನ್ನೇ ಮಾರ್ಕ್ ಮಾಡಿ ನೀಡಿ ಮಕ್ಕಳಿಗೆ ಅವುಗಳನ್ನಷ್ಟೇ ಊರು ಹೊಡೆಯುತ್ತಾ, ಬರೆಯಿಸುವ ಹುನ್ನಾರ ಇರಬಹುದೇ ಎಂಬ ದೊಡ್ಡ ಸಂದೇಹ ಬಹುತೇಕರಲ್ಲಿ ಮನೆಮಾಡಿದೆ. ಇದುವೇ ಹೊಸ ಪ್ರಯೋಗದ ಒಳಗುಟ್ಟು ಎಂಬ ಸಂಶಯ ಇಲಾಖೆಯ ಒಳಗೂ, ಹೊರಗೂ ಕೇಳಿಬರುತ್ತಿದೆ.

ಈ ಗುಮಾನಿಯೇ ನಿಜವಾದರೆ, ಇಂತಹದೊಂದು ಮಾಸ್ಟರ್ ಪ್ಲಾನ್‌ನಿಂದ ಇಲಾಖೆ ಎಲ್ಲೂ ಸಿಲುಕಿ ಹಾಕಿಕೊಳ್ಳಲು ಸಾಧ್ಯವಿಲ್ಲ. ನಾಳೆ ಫಲಿತಾಂಶ ಘೋಷಣೆ ಆದ ಬಳಿಕ ಪತ್ರಕರ್ತರ ಸಚಿವರೇ, ಈ ಬಾರಿ ದಾಖಲೆಯ ಫಲಿತಾಂಶ ಬರಲು ಕಾರಣ ವೇನು? ಎಂಬ ಪ್ರಶ್ನೆಗೆ ನೋಡಿ ಈ ಬಾರಿ ಕೊನೆಯ ಕ್ಷಣದಲ್ಲಿ ಸಿದ್ಧಪಡಿಸಲಾದ 8450 ಪ್ರಶ್ನೆಗಳೇ ಯಶಸ್ಸಿನ ಗುಟ್ಟು ಎಂದು ಹೇಳದೆ ಇರುತ್ತಾರೆಯೇ? ಹಾಗೇನಾದರೂ ಆದರೆ ಅದು ಬಹು ದೊಡ್ಡ ಇಲಾಖಾ ಅಕ್ರಮ ಎಂದೇ ಪರಿಗಣಿಸಬೇಕಾಗುತ್ತದೆ. ಇಲಾಖೆಯ ಅಧಿಕಾರಿಗಳೇ ತಮ್ಮ ತಾಲೂಕು, ಜಿಲ್ಲೆಯ ಫಲಿತಾಂಶ ಹೆಚ್ಚಳಕ್ಕಾಗಿ ಲಾಬಿ ನಡೆಸಿ, 20-30 ಪಾಸ್ ಪ್ರಶ್ನೆಗಳನ್ನು ತಾವೇ ಅನಧಿಕೃತವಾಗಿ ಲೀಕ್ ಮಾಡಿಲ್ಲ ಎಂಬುದಕ್ಕೆ ಏನಿದೆ ಆಧಾರ? ಇಂತಹದೊಂದು ಆಲೋಚನೆ ಬರಲು ಕಾರಣ ಇತ್ತೀಚಿನ ಶಿಕ್ಷಣ ಇಲಾಖೆಯಲ್ಲಿ ನಡೆಯುತ್ತಿರುವ ಪ್ರಶ್ನೆ ಪತ್ರಿಕೆ ಲೀಕ್ ಅಕ್ರಮದ ವಾಸನೆ. ವಾರ್ಷಿಕ ಪರೀಕ್ಷೆ ಬಿಡಿ, ಈಗಾಗಲೇ ನಡೆದ ಮೊದಲ ಪೂರ್ವಸಿದ್ಧತಾ ಪರೀಕ್ಷೆಯ ಹಿಂದಿ, ಸಮಾಜ ವಿಜ್ಞಾನ, ಗಣಿತ, ಇಂಗ್ಲಿಷ್ ವಿಷಯದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪ್ರಶ್ನೆ ಪತ್ರಿಕೆಗಳು ಶಿಕ್ಷಕರ ಸಹಾಯದಿಂದಲೇ ಲೀಕ್ ಆಗಿದೆ ಎಂದು ಪೊಲೀಸರು ಅಪರಾಧಿಗಳನ್ನು ಬಂಧಿಸಿದ್ದಾರೆ. ಇದುವೇ ನಾಳೆ ಆಗದು ಎಂಬ ಗ್ಯಾರಂಟಿ ಏನು?

ಪರೀಕ್ಷಾ ಸಮಯ ಬಂತೂ ಮಕ್ಕಳೇ ಮೊಬೈಲ್, ಸಾಮಾಜಿಕ ಜಾಲತಾಣದಿಂದ ದೂರವಿರಿ ಎಂದು ಪದೇಪದೇ ಹೇಳುವ ಶಿಕ್ಷಕರು, ಪಾಲಕರಿಗೆ ಪರೀಕ್ಷೆಯ ಮೊದಲೇ 30 ರು., 50 ರು.ಗಳಿಗೆ ಪ್ರಶ್ನೆಪತ್ರಿಕೆ ಇನ್ಸ್ಟಾಗ್ರಾಮ್ ಮತ್ತು ಟೆಲಿಗ್ರಾಮ್‌ನಲ್ಲಿ ದೊರಕುವಂತಾಗಿದೆ. ಈಗ ಮಕ್ಕಳು ಓದುವುದಕ್ಕಿಂತಲೂ ಮೊಬೈಲ್‌ನಲ್ಲಿ ಪ್ರಶ್ನೆ ಪತ್ರಿಕೆ ಬಂತಾ ಎಂದು ನೋಡುತ್ತಾ, ಕಾಯುತ್ತಾ ಕೂರುವುದು ಸಾಮಾನ್ಯವಾಗಿದೆ. ಇದನ್ನು ವ್ಯಂಗ್ಯಚಿತ್ರಕಾರ ರಘುಪತಿ ಶೃಂಗೇರಿ ವಿಶ್ವವಾಣಿಯ ಫನ್‌ತರಂಗ್‌ದಲ್ಲಿ ರೀ ಆಗಾಗ ಚೆಕ್ ಮಾಡ್ತಾ ಇರೀ, ಮಗ ಓದ್ತಿದಾನಾ ಅಥವಾ ಇನ್ಸ್ಟಾಗ್ರಾಮ್ ನೋಡ್ತಿದಾನಾ ಅಂತಾ...! ಎಂಬ ವಿಬಂಡನಾತ್ಮಕ ಕಟು ಸತ್ಯವನ್ನು ವ್ಯಂಗ್ಯ ಚಿತ್ರದ ಮೂಲಕ ಚಿತ್ರಿಸಿದ್ದರು. ಇಂದು 8450 ಪ್ರಶ್ನೆಕೋಶ ಇರುವ ಕಾರಣ ವಾರ್ಷಿಕ ಪರೀಕ್ಷೆಗೆ ಹೊರಡುವ ಮುನ್ನ ಓದುವ ಬದಲು ಮೊಬೈಲ್‌ನಲ್ಲಿ ಪ್ರಶ್ನೆ ಪತ್ರಿಕೆ ಬಂತಾ ಎಂದು ನೋಡಬೇಕಿಲ್ಲ ಎಂದೆನಿಸುತ್ತದೆ. ಎಲ್ಲವೂ ಮೊದಲೇ ಗಿಳಿಪಾಠ ಮಾಡಿ ಆಗಿರುತ್ತದಲ್ಲ.!

ಇಂದಿನ ಪರೀಕ್ಷಾ ಪದ್ಧತಿಯ ದುರವಸ್ಥೆಯ ನಡುವೆ ಕೋವಿಡ್ ಸಮಯದಲ್ಲಿ ಅಂದಿನ ಶಿಕ್ಷಣ ಸಚಿವರಾಗಿದ್ದ ಸುರೇಶ್ ಕುಮಾರ ಅವರು ನೆನಪಾಗುತ್ತಾರೆ. ಅಂದು ಅವರು ತೆಗೆದುಕೊಂಡ ನಿರ್ಧಾರ ಸರ್ವತ್ರ ಶ್ಲಾಘನೀಯ. ಆದರೆ ಇಂದಿನ ಶಿಕ್ಷಣ ಸಚಿವರ ನಿರ್ಧಾರ ಸರ್ವತ್ರ ತಿರಸ್ಕರಣೀಯ ಎಂಬುದು ಬಹು ಜನರ ಇಂಗಿತ. ಇದರ ಬದಲಾಗಿ ಶಿಕ್ಷಕರ ಮೇಲೆ ಹೇರಲಾಗಿರುವ ಅನಗತ್ಯ ಇಲಾಖಾ ಕೆಲಸದ ಭಾರ ಇಳಿಸಿ, ತರಗತಿ ಪಾಠದ ಕಡೆ ಮುಖ ಮಾಡುವಂತೆ ಮಾಡಿದರೆ ಎಲ್ಲವೂ ಸರಿಯಾಗುತ್ತದೆ. ಇಂದು ಬಿಆರ್ ಸಿ ಕೇಂದ್ರಗಳು 'ಕಸ್ಟಮರ್ ಕೇರ್ ಸೆಂಟರ್‌ಗಳಾಗಿವೆ. ಸಿಆರ್‌ಪಿಗಳು ಶಿಕ್ಷಕರಿಗೆ ಸಂಪನ್ಮೂಲ ಒದಗಿಸುವ ಬದಲಾಗಿ ನಿಮ್ಮ ಶಾಲೆಯ ಯುಡೈಸ್ ಪ್ಲಸ್ ಅಪ್ಡೇಟ್ ಆಗಿದೆಯಾ? ಆಧಾರ್ ಅಪ್ಡೇಟ್ ಆಯ್ತಾ? ಮೊಟ್ಟೆಯ ಲೆಕ್ಕ? ಆ ಮೀಟಿಂಗೂ, ಈ ಮೀಟಿಂಗೂ ಅಂಥ ಮಾಹಿತಿ ಕಲೆ ಹಾಕುವುದರಲ್ಲೇ ನಿರತರಾಗಿದ್ದಾರೆ.

ವಿದ್ಯಾರ್ಥಿ ಜೀವನದ ಅತಿ ಮಹತ್ವದ ಘಟ್ಟ ಎಂದೇ ಪರಿಗಣಿಸಲಾದ ಎಸ್‌ಎಸ್‌ಎಲ್‌ಸಿ , ಪಿಯುಸಿ ಹಂತವನ್ನು ಗಿಳಿಪಾಠಕ್ಕೆ, ಸೀಮಿತ ವ್ಯಾಪ್ತಿಗೆ ಒಳಪಡಿಸುವ ಯೋಚನೆ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಹಾನಿಕರ. ಇದರ ಬಗ್ಗೆ ಬಹುತೇಕರು ಜಾಗೃತರಾಗಿಲ್ಲ. ತಮ್ಮ ಮಕ್ಕಳು ಶೇಕಡಾ 95 ಅಂಕ ಪಡೆದರು ಎಂದು ಎದೆಯುಬ್ಬಿಸಿ ಹೇಳುತ್ತಾರೆ. ಆದರೆ ಪರೋಕ್ಷವಾಗಿ ಅವರನ್ನು ಬಾವಿಯೊಳಗಿನ ಕಪ್ಪೆಯನ್ನಾಗಿಸುತ್ತಿದ್ದೇವೆ ಎಂಬ ಪರಿವೆ ಬಹುತೇಕರಲ್ಲಿಲ್ಲ. ಇದು ಚುನಾವಣೆಯ ಕಣವಲ್ಲ, ಮತದಾತನನ್ನು ಓಲೈಸಲು ನೂರೋ, ಇನ್ನೂರೋ ನೀಡಿ ಮತ ಗಿಟ್ಟಿಸಿಕೊಳ್ಳಲು, ಇದು ಮಕ್ಕಳ ಭವಿಷ್ಯ, ದೇಶದ ಪ್ರಗತಿಯ ವಿಷಯ. ಅಂಕಗಳು ಭವಿಷ್ಯ ರೂಪಿಸಲಾರವು ಎಂಬ ಅರಿವು ಮೂಡಬೇಕಲ್ಲವೇ. ಅಂತಹ ಶಿಕ್ಷಣ ವ್ಯವಸ್ಥೆ ನಮ್ಮದಾಗುವುದು ಯಾವಾಗ?

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಆಸ್ಪತ್ರೆಗಳಲ್ಲಿ ದರ ಪಟ್ಟಿ ಆದೇಶ ಜಾರಿಗೆ ಬರಲಿ

2013ರಿಂದ 2018ರ ಅವಧಿಯಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾಗ ಆರೋಗ್ಯ ಸಚಿವರಾಗಿದ್ದ ರಮೇಶ್ ಕುಮಾರ್ ಅವರು ಬಹಳ ಒಳ್ಳೆಯ ಉದ್ದೇಶದಿಂದ ಖಾಸಗಿ ಆಸ್ಪತ್ರೆಗಳಲ್ಲಿ ದರಪಟ್ಟಿಯನ್ನು ಕಡ್ಡಾಯವಾಗಿ ಪ್ರಕಟಿಸಬೇಕೆಂಬ ಕಾನೂನನ್ನು ರೂಪಿಸಿದ್ದಾರೆ. ಆದರೆ ಇಲ್ಲಿಯ ತನಕ ಯಾವುದೇ ಆಸ್ಪತ್ರೆಯಲ್ಲೂ ದರಪಟ್ಟಿಯನ್ನು ಪ್ರಕಟಿಸಿರುವುದಿಲ್ಲ. ಸಾಮಾನ್ಯ ನಾಗರಿಕರು ತಮ್ಮ ಕುಟುಂಬದ ಸದಸ್ಯರಿಗೆ ತೀವ್ರವಾದ ಆರೋಗ್ಯದ ಸಮಸ್ಯೆಗಳು ಎದುರಾದ ಸಂದರ್ಭದಲ್ಲಿ ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳ ಮೊರೆ ಹೋಗುತ್ತಾರೆ. ಈ ಸಂದರ್ಭದಲ್ಲಿ ಅವರಿಗೆ ಅವರ ಬಂಧುಗಳ ಜೀವದ ರಕ್ಷಣೆಯೇ ಪ್ರಮುಖ ಉದ್ದೇಶವಾಗಿರುತ್ತದೆ. ಆಸ್ಪತ್ರೆಗಳಲ್ಲಿ ದಾಖಲಾಗಿ ಚಿಕಿತ್ಸೆ ಪಡೆದ ನಂತರ ರೋಗಿಗಳು ಮನೆಗೆ ಮರಳುವಾಗ ಇಲ್ಲವೇ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದಾಗ, ಆಸ್ಪತ್ರೆಯ ಬಿಲ್‌ಗಳನ್ನು ಪಾವತಿಸಲು ಪಡುವ ಕಷ್ಟ ಭಗವಂತನೇ ಬಲ್ಲ. ಇನ್ಸೂರೆನ್ಸ್ ಕಂಪನಿಗಳು ಹಣ ಬಿಡುಗಡೆ ಮಾಡುವಲ್ಲಿಯೂ ಸಾಕಷ್ಟು ಗೊಂದಲಗಳನ್ನು ಸೃಷ್ಟಿಸುತ್ತಾರೆ. ಇದರಿಂದಾಗಿ ರೋಗಿಗಳ ಆಸ್ಪತ್ರೆಯ ಬಿಡುಗಡೆ ಇಲ್ಲವೇ, ಹೆಣ ಮನೆಗೆ ಸಾಗಿಸುವುದು ಸಹ ತಡವಾಗುತ್ತದೆ. ಇನ್ನು ಇನ್ಸೂರೆನ್ಸ್ ಇಲ್ಲದವರ ಪಾಡು ಹೇಳತಿರದು. ಆತುರದಲ್ಲಿ ಆಸ್ಪತ್ರೆಗಳಿಗೆ ದಾಖಲಿಸಿ ನಂತರದಲ್ಲಿ ಬಿಲ್ ಮೊತ್ತವನ್ನು ಕಂಡು ಗಾಬರಿಯಾಗುತ್ತಾರೆ. ಇವೆಲ್ಲವೂ ಪ್ರತಿದಿನವೂ ಖಾಸಗಿ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ಘಟನೆಗಳಾಗಿವೆ. ಆಸ್ಪತ್ರೆಯವರು ಸಾಮಾನ್ಯ, ವಿಶೇಷ ವಾರ್ಡ್‌ಗಳಿಗೆ ಇಷ್ಟು ಹಣ, ಇಂತಹ ಚಿಕಿತ್ಸೆಗೆ ಇಷ್ಟಿಷ್ಟು ಹಣ ಎಂದು ದರ ಪಟ್ಟಿಯನ್ನು ಹಾಕಿದರೆ ಇದರಿಂದ ಜನಸಾಮಾನ್ಯರು ಆಸ್ಪತ್ರೆಗೆ ಸೇರಿಸುವ ಮೊದಲೇ ಯೋಚಿಸಿ ತಮ್ಮ ಆರ್ಥಿಕ ಪರಿಸ್ಥಿತಿಗೆ ಹೊಂದಿಕೊಳ್ಳುವ ಆಸ್ಪತ್ರೆಗಳಿಗೆ ಹೋಗುತ್ತಾರೆ.

ಈ ಎಲ್ಲ ಸಮಸ್ಯೆಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸೂಕ್ತವಾದಂತಹ ಚಿಕಿತ್ಸೆ ಮತ್ತು ಸೌಲಭ್ಯಗಳು ದೊರೆಯದೆ ಇರುವುದು. ಉಳ್ಳವರು ಮತ್ತು ನಮ್ಮನ್ನು ಆಳುವವರು ಅವರ ಕುಟುಂಬದವರು ಅಥವಾ ಅವರ ಸಾಕುಪ್ರಾಣಿಗಳಿಗೂ ಸಣ್ಣಪುಟ್ಟ ಕಾಯಿಲೆಗಳಿಗೂ ಸರ್ಕಾರಿ ಆಸ್ಪತ್ರೆಗಳ ಕಡೆ ತಿರುಗಿ ನೋಡದ ಕಾರಣದಿಂದ ಆಳುವವರಿಗೆ ನಂಬಿಕೆ ಇಲ್ಲದ ವ್ಯವಸ್ಥೆಯ ಮೇಲೆ ಜನರಿಗೆ ಹೇಗೆ ತಾನೇ ವಿಶ್ವಾಸ ಹೊಂದಲು ಸಾಧ್ಯ? ಈ ಕಾರಣಕ್ಕಾಗಿ ಜನರು ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಿದ್ದಾರೆ. ಸರ್ಕಾರ ಕೂಡಲೇ ಈ ಹಿಂದೆ ಆಗಿರುವ ಕಾನೂನಿನ ಪ್ರಕಾರ ಖಾಸಗಿ ಆಸ್ಪತ್ರೆಗಳು ಕಡ್ಡಾಯವಾಗಿ ದರಪಟ್ಟಿಗಳನ್ನು ಹೋಟೆಲ್‌ಗಳಲ್ಲಿ ಪ್ರಕಟಿಸಿರುವ ರೀತಿಯಲ್ಲಿಯೇ ಪ್ರಕಟಿಸಬೇಕೆಂದು, ಆದೇಶವನ್ನು ಹೊರಡಿಸಿ, ಆದೇಶವನ್ನು ಉಲ್ಲಂಘಿಸುವವರಿಗೆ ದಂಡ ವಿಧಿಸುವ ಎಚ್ಚರಿಕೆಯನ್ನು ನೀಡಿದರೆ ಖಾಸಗಿ ಆಸ್ಪತ್ರೆಯವರು ಕಾನೂನು ಪಾಲಿಸಬಹುದು.

-ಕೆ.ಎಸ್.ನಾಗರಾಜ್, ಬೆಂಗಳೂರು

ಕುವೆಂಪು ನಗರ ಗ್ರಂಥಾಲಯ ವಿಶಾಲಗೊಳ್ಳಲಿ, ಸ್ವಚ್ಛವಾಗಲಿ

ಮೈಸೂರಿನಲ್ಲಿ, ಹಿರಿಯ ನಾಗರಿಕರೇ ಹೆಚ್ಚಾಗಿ ವಾಸಿಸುವ ಕುವೆಂಪು ನಗರದಲ್ಲಿರುವ ಕೇಂದ್ರ ಗ್ರಂಥಾಲಯಕ್ಕೆ ಪ್ರತಿ ದಿನ ಸಾಕಷ್ಟು ಮಂದಿ ಹಿರಿಯ ನಾಗರಿಕರು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಗೂ ವಾರ್ಷಿಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ನೂರಾರು ಓದುಗರು ಇಲ್ಲಿಗೆ ಬಂದು ಅಭ್ಯಾಸ ನಡೆಸುತ್ತಾರೆ. ಮೈಸೂರಿನ ಪೀಪಲ್ಸ್ ಪಾರ್ಕ್‌ನಲ್ಲಿರುವ ಜಿಲ್ಲಾ ಕೇಂದ್ರ ಗ್ರಂಥಾಲಯವನ್ನು ಹೊರತುಪಡಿಸಿದರೆ, ಅತಿ ಹೆಚ್ಚಿನ ಓದುಗರನ್ನು ಹೊಂದಿರುವ ಗ್ರಂಥಾಲಯವಾಗಿದೆ. ಆದರೆ ಇಲ್ಲಿ ಸ್ಥಳದ ಅಭಾವದಿಂದಾಗಿ ಹಿರಿಯ ನಾಗರಿಕರು ಇಕ್ಕಟ್ಟಿನಲ್ಲಿ, ನಿಂತುಕೊಂಡೇ ದಿನ ಪತ್ರಿಕೆಗಳನ್ನು ಓದುವಂತಾಗಿದೆ. ಈ ಗ್ರಂಥಾಲಯದ ಅರ್ಧಭಾಗವು ವಿದ್ಯಾರ್ಥಿಗಳು ಓದಲು ಮೀಸಲಾಗಿದೆ. ಇಲ್ಲಿ ಸ್ಥಳದ ಅಭಾವಿರುವುದರಿಂದ ಈ ಗ್ರಂಥಾಲಯದ ಮೇಲೆ ಮೊದಲ ಮಹಡಿಯನ್ನು ನಿರ್ಮಾಣ ಮಾಡಿ, ಅಲ್ಲಿ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ಅನುಕೂಲ ಮಾಡಿಕೊಡಬೇಕು ಹಾಗೂ ಈಗ ಗ್ರಂಥಾಲಯದ ಒಳಭಾಗದಲ್ಲಿರುವ ಶೌಚಾಲಯವನ್ನು, ಗ್ರಂಥಾಲಯದ ಹೊರಗೆ ಸಾಕಷ್ಟು ಜಾಗ ಇರುವುದರಿಂದ, ಅಲ್ಲಿಗೆ ಸ್ಥಳಾಂತರ ಮಾಡಬೇಕು. ಕೆಲವೊಮ್ಮೆ ಈ ಶೌಚಾಲಯದಿಂದ, ಕೆಟ್ಟ ವಾಸನೆ ಬರುವುದು ತಪ್ಪುತ್ತದೆ.

-ಬೂಕನಕೆರೆ ವಿಜೇಂದ್ರ, ಮೈಸೂರು

ಬ್ಯಾಲೆಟ್-ಇವಿಎಂ ಜಗಳದಲ್ಲಿ ನಾಡು ಬಡವಾಗದಿರಲಿ

ಅಚ್ಚರಿಯೆಂದರೆ ಈ ಬಾರಿಯ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇವಿಎಂಗಳ ಬದಲಾಗಿ 'ಅಂದಕಾಲತ್ತಿಲ್' ಉಪಯೋಗಿಸುತ್ತಿದ್ದ ಮತಪತ್ರಗಳನ್ನು ಬಳಸಲು ರಾಜ್ಯಸರಕಾರ ಶಿಫಾರಸು ಮಾಡಿ, ಆ ಕುರಿತು ಕಾನೂನಾತ್ಮಕ ಬದಲಾವಣೆ-ಒಪ್ಪಿಗೆ ಪಡೆದು, ರಾಜ್ಯ ಚುನಾವಣಾ ಆಯೋಗ ಕಾರ್ಯಪ್ರವೃತ್ತವಾಗಿದೆ. ಈ ಬಾರಿ ಚುನಾವಣಾ ಫಲಿತಾಂಶ ಕಾಂಗ್ರೆಸ್‌ಗೆ ಉಲ್ಟಾ ಆದರೆ ಅದು ಏನು ಮಾಡಲಿದೆ? ಕಾಂಗ್ರೆಸ್ ನಿಲುವನ್ನು ಸರಿಯಾಗಿ ವಿರೋಧಿಸಲು ಬಿಜೆಪಿಯೂ ಸೋತಿದೆ.

ಮೇಲಾಟ

ರವೀ ಸಜಂಗದ್ದೆ
vveditoped@gmail.com

ಈಗಿನ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಚುನಾವಣೆ ನಡೆಯದೆ, ಮೇಯರ್ ಇಲ್ಲದೆ ಅದಾಗಲೇ ಒಂಭತ್ತು ವರ್ಷಗಳು! ಅನ್ಯಾನ್ಯ ಕಾರಣಗಳಿಂದ ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆ ಚುನಾವಣೆಗಳೂ ಹಲವು ಬಾರಿ ಮುಂದೂಡಿಕೆಯಾಗಿವೆ. ನ್ಯಾಯಾಲಯವು ಈ ಕುರಿತು ವಿವರಣೆ ಕೇಳಿ, ರಾಜ್ಯ ಸರಕಾರವನ್ನು ಗದರಿದರೂ, ಹಲವಾರು ಕಾರಣಗಳನ್ನು ಮುಂದಿಟ್ಟು ಈ ಚುನಾವಣೆಗಳಿಗೆ ಮುಹೂರ್ತ ನಿಗದಿಯಾಗಲಿಲ್ಲ. ಮೀಸಲಾತಿ ಗೊಂದಲ ಮತ್ತು ಕ್ಷೇತ್ರ ಮರುವಿಂಗಡಣೆ ಎಲ್ಲವೂ ಮುಗಿದು, ಕೋರ್ಟ್ ಛೀಮಾರಿ-ಮುಜುಗರಗಳ ನಂತರ, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ರಾಜ್ಯ ಸರಕಾರ ತೀರ್ಮಾನಿಸಿ ಚಟುವಟಿಕೆಗಳು ಗರಿಗೆದರಿ ಈ ವರ್ಷದ ಮೇ ತಿಂಗಳಿನಲ್ಲಿ ಚುನಾವಣೆಗಳು ನಡೆಯಲಿವೆ. ಅಚ್ಚರಿಯೆಂದರೆ ಈ ಬಾರಿಯ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇವಿಎಂಗಳ ಬದಲಾಗಿ 'ಅಂದಕಾಲತ್ತಿಲ್' ಉಪಯೋಗಿಸುತ್ತಿದ್ದ ಮತಪತ್ರಗಳನ್ನು ಬಳಸಲು ರಾಜ್ಯಸರಕಾರ ಶಿಫಾರಸು ಮಾಡಿ, ಆ ಕುರಿತು ಕಾನೂನಾತ್ಮಕ ಬದಲಾವಣೆ-ಒಪ್ಪಿಗೆ ಪಡೆದು, ರಾಜ್ಯ ಚುನಾವಣಾ ಆಯೋಗ ಕಾರ್ಯಪ್ರವೃತ್ತವಾಗಿದೆ. ದೇಶಾದ್ಯಂತ ಚರ್ಚೆಯಲ್ಲಿರುವ, ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಮತಚೌರ್ಯ/ಮತಗಳವು, ಅಕ್ರಮ ಮತದಾರರ ಪಟ್ಟಿಯ ಆಂದೋಲನ, ದೇಶಾದ್ಯಂತ ಪರ-ವಿರೋಧ ಚರ್ಚೆಯಲ್ಲಿರುವ ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮುಂತಾದವುಗಳ ನಡುವೆ ರಾಜಕೀಯ ತಂತ್ರಗಾರಿಕೆಯ ಮುಂದುವರಿದ ಭಾಗವಾಗಿ ಸದ್ಯೋಭವಿಷ್ಯದ ಜಿಬಿಎ ಚುನಾವಣೆಗೆ ಕರ್ನಾಟಕ ಕಾಂಗ್ರೆಸ್ ಸರಕಾರವು ಬ್ಯಾಲೆಟ್‌ಗೆ ಮಣೆ ಹಾಕಿದಂತೆ ಮೇಲ್ನೋಟಕ್ಕೆ ಕಾಣಿಸುತ್ತಿದೆ. ಈ 'ಬ್ಯಾಲೆಟ್ vs ಇವಿಎಂ' ವಿಚಾರದ ಕುರಿತಾದ ರಾಜಕೀಯ ತಂತ್ರಗಾರಿಕೆಯ ವಿಶ್ಲೇಷಣೆಯಿದು.

ರಾಜ್ಯ ಸರಕಾರದ ಅಧೀನದಲ್ಲಿ ಬರುವ ಸ್ಥಳೀಯ ಸಂಸ್ಥೆಗಳು, ನಗರ ಸಭೆಗಳು ಮತ್ತು ಮಹಾನಗರ ಪಾಲಿಕೆಗಳ ಚುನಾವಣೆಗಳನ್ನು ನಡೆಸುವ ಕರ್ತವ್ಯ ಮತ್ತು ಜವಾಬ್ದಾರಿ ಆಯಾ ರಾಜ್ಯಸರಕಾರಗಳದ್ದು. 'ರಾಜ್ಯದ ಚುನಾವಣಾ ಆಯೋಗವು ರಾಜ್ಯ ಸರಕಾರದ ನಿರ್ಧಾರ ಮತ್ತು ನಿರ್ದೇಶನಗಳ ಅನುಸಾರ ಕ್ಲುಪ್ತ ಸಮಯಕ್ಕೆ, ಪಾರದರ್ಶಕವಾಗಿ ಚುನಾವಣಾ ಪ್ರಕ್ರಿಯೆ ನಡೆಸಬೇಕು' ಎನ್ನುವುದು ಕೇಂದ್ರ ಚುನಾವಣಾ ಆಯೋಗದ ನಿಯಮಗಳಲ್ಲೊಂದು. ಅದೇ ನಿಯಮದ ಆಧಾರದಲ್ಲಿ, ರಾಜ್ಯ ಸರಕಾರವು ಸದ್ಯ ಚಾಲ್ತಿಯಲ್ಲಿರುವ ಇವಿಎಂ ಬದಲಾಗಿ ಮತಪತ್ರ ವಿಧಾನದ ಮೂಲಕ ಈ ಚುನಾವಣೆಗಳನ್ನು ನಡೆಸಲು ಕಾರ್ಯಪ್ರವೃತ್ತವಾಗಿದೆ. ಇತ್ತೀಚಿನ ಸಂಪುಟ ಸಭೆಯು ಸರ್ವಾನುಮತದಿಂದ 'ಸ್ಥಳೀಯ ಸಂಸ್ಥೆಗಳ ಚುನಾವಣೆ ಮತಪತ್ರಗಳ ಮೂಲಕ ನಡೆಸಲು' ತೀರ್ಮಾನಿಸಿದೆ. ರಾಜ್ಯ ಚುನಾವಣಾ ಆಯೋಗವೂ ಮತಪತ್ರ ಬಳಸಿ ಚುನಾವಣೆ ನಡೆಸಲು ನಿರ್ಧರಿಸಿದೆ.

'ಇವಿಎಂ ಹ್ಯಾಕ್ ಮಾಡುವ ಚಾಳಿಯನ್ನು ಬಿಜೆಪಿ ಹೊಂದಿದೆ' ಮತ್ತು ತಾನು ಇತ್ತೀಚಿನ ದಶಕದಲ್ಲಿ ಸೋತಿರುವ ಎಲ್ಲಾ ಚುನಾವಣೆಗಳಲ್ಲಿ ಮತಗಳವು ಆಗಿದೆ ಎನ್ನುವುದು ಕಾಂಗ್ರೆಸ್ ಪಕ್ಷದ ವಾದ ಮತ್ತು ಆರೋಪ. ಈ ವಿಚಾರಕ್ಕೆ ಇನ್ನಷ್ಟು ಪುಷ್ಟಿ ಕೊಡುವ ಕಾರ್ಯತಂತ್ರದ ಭಾಗವಾಗಿ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರ ಬಳಸುವ ಕಾರ್ಯತಂತ್ರ ರೂಪಿಸಿ ಜಾರಿಗೊಳಿಸಿದೆ.

ಕರ್ನಾಟಕದಲ್ಲಿ ಈವರೆಗಿನ ಗ್ರಾಮ ಪಂಚಾಯತ್ ಚುನಾವಣೆಗಳನ್ನು ಮತಪತ್ರ ಉಪಯೋಗಿಸಿ ನಡೆಸಲಾಗಿದೆ. ಹಾಗಾಗಿ ಅದೇನೂ ಹೊಸದಲ್ಲ ಮತ್ತದು ಮುಂದುವರೆಯಲಿದೆ. ಜಿಬಿಎ ಸೇರಿದಂತೆ ಪಾಲಿಕೆ ಚುನಾವಣೆಗಳಲ್ಲಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಕಳೆದೆರಡು ದಶಕಗಳಿಂದ ಇವಿಎಂ ಬಳಕೆಯಾಗುತ್ತಿತ್ತು. ಇನ್ಮುಂದೆ ಕರ್ನಾಟಕದಲ್ಲಿ ಆ ಚುನಾವಣೆಗಳೂ ಮತಪತ್ರಗಳ ಮೂಲಕ ನಡೆಯಲಿವೆ. ಬಿಜೆಪಿಯ ವಿರೋಧಿ ಪಕ್ಷಗಳು ಸೋತಾಗಲೆಲ್ಲ (ಸೋತಾಗ



ಮಾತ್ರ!) ಇವಿಎಂಗಳ ವಿಶ್ವಾಸಾರ್ಹತೆ ಮತ್ತು ಪಾರದರ್ಶಕತೆಯ ಬಗ್ಗೆ ಶಂಕೆ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಕಾಂಗ್ರೆಸ್ ಸರಕಾರ ಈ ಮಹತ್ವದ (?) ತೀರ್ಮಾನವನ್ನು ತೆಗೆದುಕೊಂಡಂತೆ ಕಾಣುತ್ತಿದೆ. ಮುಂಬರುವ 'ಮತಪತ್ರದ ಚುನಾವಣೆ'ಯಲ್ಲೂ ಒಂದು ವೇಳೆ ನಿರೀಕ್ಷಿತ ಫಲಿತಾಂಶ ಬಾರದಿದ್ದರೆ ಕಾಂಗ್ರೆಸ್ ನಿಲುವು ಏನಾಗಲಿದೆ ಎನ್ನುವುದೂ ಕುತೂಹಲಕಾರಿ ವಿಚಾರ. ಯಾಕೆಂದರೆ ಇವಿಎಂಗಳನ್ನು ಹ್ಯಾಕ್ ಮಾಡಲು ಯಾರಿಂದಲೂ ಈವರೆಗೆ ಸಾಧ್ಯವಾಗಿಲ್ಲ ಮತ್ತು ಚುನಾವಣಾ ಆಯೋಗ ಇವಿಎಂ ಹ್ಯಾಕ್ ಮಾಡಲು ಹಾಕಿದ ಮುಕ್ತ ಸವಾಲನ್ನು ಸ್ವೀಕರಿಸಿ ಯಾರೂ ಈವರೆಗೆ ಯಶಸ್ವಿಯಾಗಲಿಲ್ಲ. ಇವಿಎಂಗಳ ಕುರಿತ ಈವರೆಗಿನ ಆರೋಪಗಳು ಮತ್ತು ಬೊಬ್ಬೆಗಳು ಸಂಪೂರ್ಣ ರಾಜಕೀಯ ಪ್ರೇರಿತ ಅನ್ನುವುದು ಸ್ವತಃ ಆರೋಪ ಮಾಡುವವರಿಗೂ ಗೊತ್ತಿದೆ! ಏನು ಮಾಡುವುದು? ರಾಜಕೀಯದಲ್ಲಿ, ಅಧಿಕಾರದಲ್ಲಿರುವ ಮತ್ತು ತಮ್ಮ ರಾಜಕೀಯ ವಿರೋಧಿ ಪಕ್ಷ ಮತ್ತದರ ನಿಲುವುಗಳನ್ನು ವಿರೋಧಿಸುವುದೇ ವಿರೋಧ ಪಕ್ಷಗಳ ಕೆಲಸ ಅನ್ನುವಷ್ಟು ನಿಕೃಷ್ಟ ಹಂತಕ್ಕೆ ಪಕ್ಷಾತೀತವಾಗಿ ಭಾರತದಲ್ಲಿ ರಾಜಕಾರಣ ಬಂದು ನಿಂತಿದೆ.

ಬ್ಯಾಲೆಟ್‌ಗೆ ಮಣೆ ಹಾಕಿದ ವಿಚಾರವನ್ನು ಬಿಜೆಪಿ-ಜೆಡಿಎಸ್ ನಿರೀಕ್ಷೆಯಂತೆ ವಿರೋಧಿಸಿವೆ. ಅವರು ನೀಡಿರುವ ಕಾರಣಗಳನ್ನು ಅವಲೋಕಿಸಿದರೆ ಕೆಲವು ಕಾರಣಗಳು ಸಮಂಜಸ ಎನಿಸಿದರೂ ಇನ್ನೂ ಕೆಲವು ಕಾರಣ-ಹೇಳಿಕೆಗಳು ಇತರ ಪಕ್ಷಗಳು ವಿವಿಧ ಸಂದರ್ಭಗಳಲ್ಲಿ ಬಿಜೆಪಿಯನ್ನು 'ವಿರೋಧಿಸುವ ಸಲುವಾಗಿ' ಹೇಳುವ ಹೇಳಿಕೆಗಳಂತೆ ರಾಜಕೀಯ ಪ್ರೇರಿತ ಎಂದು ಅನಿಸದಿರದು! 'ಇಡೀ ಜಗತ್ತು ತಂತ್ರಜ್ಞಾನವನ್ನು ಆಧರಿಸಿ ವೇಗವಾಗಿ ಮತ್ತು ಆಧುನಿಕತೆಯ ಕಡೆಗೆ ಮುಖ ಮಾಡುತ್ತಿದ್ದರೆ, ಕಾಂಗ್ರೆಸ್ ಮತಪತ್ರದ ಚುನಾವಣೆಗೆ ಒಲವು ತೋರುವ ಮೂಲಕ ಹೆಬ್ಬೆಟ್ಟಿನ ದಿನಗಳೆಡೆಗೆ ಸಾಗುತ್ತಿದೆ' ಎನ್ನುವ ಬಿಜೆಪಿ ರಾಜ್ಯಾಧ್ಯಕ್ಷರ ಮಾತು ಒಪ್ಪತಕ್ಕದ್ದು. ಇದರ ಜೊತೆಗೆ ಮತಪತ್ರಗಳ ಮೂಲಕ ಚುನಾವಣೆಗಳು ನಡೆಯುತ್ತಿದ್ದ ಕಾಲದಲ್ಲಿ ಹೆಚ್ಚಿನ ಅಕ್ರಮಗಳು, booth capturing, ಕಳ್ಳ ಮತದಾನ, ಅಡ್ಡ ಮತದಾನ ಮುಂತಾದ ಅಪಸವ್ಯಗಳು ಪ್ರತಿಯೊಂದು ಚುನಾವಣೆಯಲ್ಲೂ ನಡೆಯುತ್ತಿರುವಾಗ ಕೇಂದ್ರ ಮತ್ತು ರಾಜ್ಯದಲ್ಲಿ ಬಹುತೇಕ ಸಂದರ್ಭಗಳಲ್ಲಿ ಅಧಿಕಾರದಲ್ಲಿ ಇದ್ದದ್ದು ಆಗಿನ ದೊಡ್ಡ ರಾಜಕೀಯ ಪಕ್ಷ ಕಾಂಗ್ರೆಸ್ ಎನ್ನುವುದೂ ಸತ್ಯ! ಹಾಗಾಗಿ ಬ್ಯಾಲೆಟ್ ವ್ಯವಸ್ಥೆಯೂ ಪಾರದರ್ಶಕವಾಗಿ ಇರಲಿಲ್ಲ ಎನ್ನುವ ಬಿಜೆಪಿಯ ವಾದದಲ್ಲೂ ಹುರುಳಿದೆ.

ರಾಜ್ಯ ಬಿಜೆಪಿ-ಜೆಡಿಎಸ್ ಮೈತ್ರಿ ನಾಯಕರು ಜಾಣ ನಡೆ ಅನುಸರಿಸಿ ಈ ಮತಪತ್ರದ ಚುನಾವಣೆಯನ್ನು ಹಾರ್ದಿಕವಾಗಿ, ತುಂಬು ಹೃದಯದಿಂದ ಸ್ವಾಗತಿಸಬೇಕಿತ್ತು! ಹಾಗಾಗಲಿಲ್ಲ ಎನ್ನುವುದು ಬೇರೆ ಮಾತು. ಯಾಕೆ ಸ್ವಾಗತಿಸಬೇಕಿತ್ತು ಎಂದರೆ ಚುನಾವಣೆ ನಡೆಯುವ ವಿಧಾನ ಯಾವುದೇ ಇರಲಿ, ಕೇಂದ್ರ ಸರಕಾರದ ಸದ್ಯದ ಹಲವಾರು ಜನಪರ ನೀತಿ-ನಿರ್ಣಯಗಳು ಮತ್ತು ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳ ವೆಚ್ಚದಿಂದ ಉಳಿದ ಅಭಿವೃದ್ಧಿ ಕಾಮಗಾರಿಗಳು ಕುಂಠಿತಗೊಂಡು ಅಭಿವೃದ್ಧಿ ನಿಂತ ನೀರಿನಂತಾಗಿದೆ. ಇದೆಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪ್ರಮುಖ ಪ್ರಚಾರದ ವಸ್ತುವಾಗಿಸಿ, ಹೆಚ್ಚಿನ ಮತಗಳನ್ನು ಬಾಚುವ ಎಲ್ಲಾ ಅವಕಾಶಗಳು ಎನ್‌ಡಿಎ ಮೈತ್ರಿಕೂಟಕ್ಕೆ ಇರುವುದು ಸತ್ಯ. ಅದನ್ನು encash ಮಾಡಿಕೊಂಡು, ಮತಪತ್ರದ ಚುನಾವಣೆಯಲ್ಲೂ ಗೆಲುವು ಸಾಧಿಸಿ ಕಾಂಗ್ರೆಸ್ ಪಕ್ಷಕ್ಕೆ 'ಡಬ್ಬಲ್ ಟಕ್ಕರ್' ನೀಡುವ ಸುವರ್ಣ ಅವಕಾಶ ಈಗಲೂ ಬಿಜೆಪಿ-ಜೆಡಿಎಸ್ ಮೈತ್ರಿಕೂಟಕ್ಕೆ ಇದೆ. ಆ ದೆಸೆಯಲ್ಲಿ ಕಾರ್ಯಪ್ರವೃತ್ತವಾಗಿ, ಕಾರ್ಯತಂತ್ರ ಹೆಣೆಯುವ ಬದಲು, ಸುಖಾ ಸುಮ್ಮನೆ ಮಾಧ್ಯಮದಲ್ಲಿ ಬೊಬ್ಬೆ ಹಾಕಿ, ಈ ಪಕ್ಷಗಳ ಧುರೀಣರು ಕಾಲಹರಣ ಮಾಡುತ್ತಿದ್ದಾರೆ. ದಿನಗಳೆದಂತೆ ಕಾಂಗ್ರೆಸ್ ಈ ಚುನಾವಣೆಯನ್ನು ಗೆಲ್ಲಲು ರಣತಂತ್ರ ರೂಪಿಸುವಲ್ಲಿ ನಿರತವಾಗಿದೆ. ಡಿಕೆಶಿ ಅವರಿಗೆ ಮುಖ್ಯಮಂತ್ರಿ ಪಟ್ಟ ದಕ್ಕಲು ಈ ಚುನಾವಣಾ ಗೆಲುವು ಖಂಡಿತಾ ಹೆಬ್ಬಾಗಿಲು! ಹಾಗಾಗಿ ಅವರು ತನ್ನೆಲ್ಲ ಶಕ್ತಿ-ಸಾಮರ್ಥ್ಯವನ್ನು ಈ ಚುನಾವಣಾ ಅಖಾಡದಲ್ಲಿ ಒರೆಗೆ ಹಚ್ಚುವುದು ನಿಸ್ಸಂಶಯ. ಈಗಿರುವ ಪೂರಕ ಪರಿಸ್ಥಿತಿಯನ್ನು ತನ್ನೆಡೆಗೆ ವಾಲಿಸಿಕೊಳ್ಳುವ ನಿಟ್ಟಿನಲ್ಲಿ ಮೈತ್ರಿ ಪಡೆ ಇನ್ನೂ ಮೀನ-ಮೇಷ ಎಣಿಸುತ್ತಿರುವುದು ಕಾಂಗ್ರೆಸ್ ಮತ್ತು ಡಿಕೆಶಿಗೆ ವರದಾನವೇ ಸರಿ. ಕಾಂಗ್ರೆಸ್ ಪಕ್ಷವನ್ನು ಮತಯಂತ್ರದ ಚುನಾವಣೆಯಲ್ಲೂ ಸೋಲಿಸಿ ರಾಷ್ಟ್ರೀಯ ಮಟ್ಟದಲ್ಲಿ ತನ್ನ ವರ್ಚಸ್ಸು ಹೆಚ್ಚಿಸಿಕೊಳ್ಳುವ ಸುವರ್ಣಾವಕಾಶವನ್ನು ಕರ್ನಾಟಕದ ಬಿಜೆಪಿ-ಜೆಡಿಎಸ್ ಮೈತ್ರಿ ಪಡೆ ಹೇಗೆ ಬಳಸಿಕೊಳ್ಳಲಿದೆ ಎನ್ನುವುದು ಸದ್ಯದ ಕೌತುಕ.

'ಮತಪತ್ರದ ಚುನಾವಣೆಯ ಮೇಲೆ ಮಾತ್ರ ನಂಬಿಕೆ ಇಟ್ಟಿರುವ ರಾಜ್ಯ ಸರಕಾರ, ಇವಿಎಂ ಮತಯಂತ್ರ ಬಳಸಿ ರಾಜ್ಯದಲ್ಲಿ 2023ರ ಚುನಾವಣೆಯಲ್ಲಿ ಆರಿಸಿ ಬಂದಿರುವ 140 ಕಾಂಗ್ರೆಸ್ ಶಾಸಕರಿಂದ ಮತ್ತು 9 ಕಾಂಗ್ರೆಸ್ ಲೋಕಸಭಾ ಸದಸ್ಯರಿಂದ ರಾಜೀನಾಮೆ ಕೊಡಿಸಲಿ, ಮತಪತ್ರ ಬಳಸಿ ಮತ್ತೆ ಚುನಾವಣೆಯಿಂದ ಗೆದ್ದು ಬರಲಿ, ಇಲ್ಲದಿದ್ದರೆ ಮತಗಳ್ಳತನದಿಂದ ನಾವು ಆಯ್ಕೆಯಾಗಿ ಅಧಿಕಾರಕ್ಕೆ ಬಂದಿರುವುದು ಎಂದು ಒಪ್ಪಿಕೊಳ್ಳಲಿ' ಎಂದು ಬಿಜೆಪಿಯು ಕಾಂಗ್ರೆಸ್ ಪಕ್ಷಕ್ಕೆ ಸವಾಲು ಹಾಕಿದೆ. ಇದೆಲ್ಲ ಆಗಿಹೋಗುವ ವಿಷಯ ಅಲ್ಲ ಎನ್ನುವುದು ಜನರಿಗೂ ಗೊತ್ತಿದೆ!

'ಮತಪತ್ರಗಳ ಬಳಕೆ ನಿಷೇಧಿಸಲಾಗಿಲ್ಲ. ಅಮೆರಿಕದಂತಹ ಮುಂದುವರಿದ ದೇಶಗಳಲ್ಲೇ ಬ್ಯಾಲೆಟ್ ಪೇಪರ್ ಬಳಸಲಾಗುತ್ತಿದೆ. ಕಾನೂನಿನಲ್ಲಿ ಬ್ಯಾಲೆಟ್ ಪೇಪರ್ ಅಥವಾ ಇವಿಎಂ ಬಳಸಿಕೊಂಡು ಚುನಾವಣೆಗಳನ್ನು ನಡೆಸಲು ಅವಕಾಶವಿದೆ' ಎನ್ನುತ್ತಾರೆ ಕರ್ನಾಟಕ ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ. ಅವರ ಪ್ರಕಾರ ಇವಿಎಂ ಬಳಸಿ ಮಾಡುವ ಚುನಾವಣೆಯ ವೆಚ್ಚ ಮತ್ತು ಮತಪತ್ರಗಳ ಬಳಕೆಯ ಚುನಾವಣಾ ವೆಚ್ಚದಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ. ಹಾಗಾಗಿ ಇದರಿಂದ ಆರ್ಥಿಕ ಹೊರೆ ಆಗದು. ಆದರೆ ಇದಕ್ಕಾಗಿ ಪೇಪರ್ ಬಳಕೆ ಜಾಸ್ತಿ ಆಗುವುದರಿಂದ, ಮರಗಳನ್ನು ಕಡಿದು ಪರಿಸರದ ಮೇಲೆ ಆಗುವ ಹಾನಿಯ ಕುರಿತ ವಿವರಗಳು ಸದ್ಯಕ್ಕೆ ಲಭ್ಯವಿಲ್ಲ! ಇವಿಎಂ ವ್ಯವಸ್ಥೆಗೆ ಹೋಲಿಸಿದರೆ ಮತಪತ್ರದ ಬಳಕೆಯಿಂದ ಚುನಾವಣಾ ಪ್ರಕ್ರಿಯೆ ಮತ್ತು ಮತಗಣತಿಯ ಪ್ರಕ್ರಿಯೆ ಒಂದಷ್ಟು ನಿಧಾನವಾಗಿ, ಫಲಿತಾಂಶ ಪ್ರಕಟಣೆ ತಡವಾಗಲಿದೆ. ರಾಜ್ಯದಲ್ಲಿ ಸರಕಾರದ ಬಹುತೇಕ ಯೋಜನೆಗಳು ಪೂರ್ಣಗೊಳ್ಳಲು ವರ್ಷಗಳಷ್ಟು ತಡವಾಗುವ ವ್ಯವಸ್ಥೆಗೆ ಒಗ್ಗಿಕೊಂಡಿರುವ ನಮಗೆ ಇದೆಲ್ಲ ಹೊಸದಲ್ಲವಲ್ಲ!

ರಾಜ್ಯದಲ್ಲಿ ಜನರು ಅನುಭವಿಸುತ್ತಿರುವ ಅನೇಕ ಜ್ವಲಂತ ಸಮಸ್ಯೆಗಳು, ಡ್ರಗ್ಸ್ ಮಾಫಿಯಾ ಮುಂತಾದ ವಿಚಾರಗಳ ಪರಿಹಾರಕ್ಕಾಗಿ ಹಕ್ಕೊತ್ತಾಯ ಮಾಡಿ, ಪ್ರತಿಭಟನೆ ನಡೆಸಿ, ರಾಜ್ಯ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಬದಲು, ಕ್ಷುಲ್ಲಕ ಮತ್ತು ಸದ್ಯದ ಪರಿಸ್ಥಿತಿಯಲ್ಲಿ ಮೈತ್ರಿಕೂಟಕ್ಕೆ ಹೆಚ್ಚಿನ ಅನುಕೂಲವನ್ನೇ ಮಾಡಬಹುದಾದ ಮತಪತ್ರದ ಚುನಾವಣೆಯನ್ನು 'ಪ್ರತಿಪಕ್ಷಗಳಾಗಿ ರಾಜ್ಯ ಸರಕಾರವನ್ನು ವಿರೋಧಿಸಲೇಬೇಕು' ಎನ್ನುವ ಹಟಕ್ಕೆ ಬಿಜೆಪಿ-ಜೆಡಿಎಸ್ ಬಿದ್ದಂತಿದೆ. ನಾಯಕತ್ವದ ಕೊರತೆ, ದೂರದೃಷ್ಟಿಯ ಮಂದತೆ ಮತ್ತು ಮಾಹಿತಿ-ಮಾರ್ಗದರ್ಶನದ ಬರವನ್ನು ರಾಜ್ಯ ಬಿಜೆಪಿ-ಜೆಡಿಎಸ್ ಎದುರಿಸುತ್ತಿವೆ. ಅಧಿಕಾರದಲ್ಲಿ ಇದ್ದಾಗ ಜನರಿಗೆ ಸಹಕಾರಿಯಾಗದ, ವಿರೋಧ ಪಕ್ಷದಲ್ಲಿ ಇದ್ದಾಗ ಜನಪರ ಧ್ವನಿ ಎತ್ತದೇ ತಂತಮ್ಮ ಅನುಕೂಲಕ್ಕೆ ಕೆಲಸ ಮಾಡುವ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳನ್ನು ಪಡೆದ ನಾವೇ ಧನ್ಯರು. ಅಲ್ಲಿಗೆ ಮತ್ತೊಮ್ಮೆ ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು!

'ಬ್ಯಾಲೆಟ್ ಆದರೂ, ಇವಿಎಂ ಆದರೂ, ಈಗಿನ ಅವ್ಯವಸ್ಥೆಗಳಿಂದ ಎಂದು ಆದೇವು ನಾವು ಮುಕ್ತ ಮುಕ್ತ ಮುಕ್ತ?' ಎಂದು ಜನರು ಕೇಳುತ್ತಿದ್ದಾರೆ. ರಾಜಕಾರಣಿಗಳು ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳುತ್ತಿಲ್ಲ. 'ಮಲಗಿರುವವರನ್ನು ಎಬ್ಬಿಸಬಹುದು, ಮಲಗಿದಂತೆ ನಟಿಸುವವರನ್ನು ಎಬ್ಬಿಸಲು ಸಾಧ್ಯವೇ?' - ಸಾಧ್ಯವಿಲ್ಲ! ಛೇ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 08

ಸಮಾಚಾರ ಸಣ್ಣದಲ್ಲ

ಅರಾವಳಿ ಬೆಟ್ಟ: ಅಕ್ರಮ ಗಣಿಗಾರಿಕೆ ನಿಲ್ಲಿಸಿ

ದೆಹಲಿ: ಅರಾವಳಿ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ಮುಂದುವರಿದರೆ ಪರಿಸರಕ್ಕೆ ಬದಲಾಯಿಸಲಾಗದ ಹಾನಿ ಉಂಟಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಎಚ್ಚರಿಸಿದೆ. ಈ ಪ್ರದೇಶದಲ್ಲಿ ಯಾವುದೇ ಅನಧಿಕೃತ ಗಣಿಗಾರಿಕೆ ನಡೆಯದಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ. ದೀರ್ಘಕಾಲದಿಂದ ನಡೆಯುತ್ತಿರುವ ಅರಾವಳಿ ಬೆಟ್ಟ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ಈ ಹೇಳಿಕೆ ನೀಡಿದೆ. ಇದರಲ್ಲಿ ಗಣಿಗಾರಿಕೆ ಮತ್ತು ಸಂಬಂಧಿತ ಸಮಸ್ಯೆಗಳನ್ನು ಸಮಗ್ರ ರೀತಿಯಲ್ಲಿ ಪರಿಶೀಲಿಸಲು ತಜ್ಞರ ಸಮಿತಿಯನ್ನು ನಿರ್ಮಿಸಲು ನಿರ್ಧರಿಸಿತು. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ ಪಾಂಚೋಲಿ ಅವರನ್ನೊಳಗೊಂಡ ಪೀಠವು, ಅರಾವಳಿ ಬೆಟ್ಟಗಳ ರಕ್ಷಣೆ ಅಗತ್ಯ. ಈ ಪ್ರದೇಶದಲ್ಲಿ ಯಾವುದೇ ಕಾನೂನುಬಾಹಿರ ಚಟುವಟಿಕೆಯನ್ನು ನಿಲ್ಲಿಸಬೇಕು ಎಂದು ಸ್ಪಷ್ಟಪಡಿಸಿತು. ಭಾರತದ ವಾಯುವ್ಯದಲ್ಲಿರುವ ಅತ್ಯಂತ ಹಳೆಯ ಪರ್ವತ ಶ್ರೇಣಿಗಳಲ್ಲಿ ಅರಾವಳಿ ಬೆಟ್ಟ ಒಂದಾಗಿದ್ದು, ದೆಹಲಿಯಿಂದ ಗುಜರಾತ್‌ನವರೆಗೆ ಹರಿಯಾಣ ಮತ್ತು ರಾಜಸ್ಥಾನದ ಮೂಲಕ ಹಾದುಹೋಗುತ್ತದೆ.

ಝೊಮಾಟೊ ಸಿಇಒ ದೀಪಿಂದರ್ ರಾಜೀನಾಮೆ

ದೆಹಲಿ: ಜನಪ್ರಿಯ ಆಹಾರ ವಿತರಣಾ ಆ್ಯಪ್ ಝೊಮಾಟೊದ ಪೋಷಕ ಸಂಸ್ಥೆಯಾಗಿರುವ ಎಟರ್ನಲ್‌ನ ಗ್ರೂಪ್ ಸಿಇಒ ಹುದ್ದೆಗೆ ದೀಪಿಂದರ್ ಗೋಯಲ್ ರಾಜೀನಾಮೆ ನೀಡಿರುವ ಮಾಹಿತಿ



ಹಂಚಿಕೊಂಡಿದ್ದಾರೆ. ಹೊಸ ಆಲೋಚನೆಗಳು ಮತ್ತು ಯೋಜನೆಗಳನ್ನು ಎಟರ್ನಲ್ ಹೊರಗಡೆ ಅನ್ವೇಷಿಸುವ ಉದ್ದೇಶದಿಂದ ತಾವು ಗ್ರೂಪ್ ಸಿಇಒ ಹುದ್ದೆಯಿಂದ ಹಿಂದೆ ಸರಿಯುತ್ತಿರುವುದಾಗಿ ಅವರು ತಿಳಿಸಿದ್ದಾರೆ. ಇದರ ಹೊರತಾಗಿಯೂ, ಷೇರು ದಾರರು ಅನುಮತಿಸಿದರೆ ನಿರ್ದೇಶಕರ ಮಂಡಳಿಯಲ್ಲಿ ಉಳಿಯುವುದಾಗಿ ಗೋಯಲ್ ಹೇಳಿದರು. ಗುಂಪಿನ ಕಾರ್ಯಾಚರಣಾ ನಿರ್ಧಾರಗಳನ್ನು ಹೊಸ ಸಿಇಒ ತೆಗೆದುಕೊಳ್ಳುತ್ತಾರೆ ಎಂದು ಅವರು ಎಟರ್ನಲ್‌ನ ಷೇರುದಾರರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ದೀರ್ಘಕಾಲೀನ ಕಾರ್ಯತಂತ್ರ, ನಾಯಕತ್ವ ಅಭಿವೃದ್ಧಿ ಹಾಗೂ ನೈತಿಕತೆ ಮತ್ತು ಆಡಳಿತ ವಿಷಯಗಳಲ್ಲಿ ನನ್ನ ಭಾಗವಹಿಸುವಿಕೆ ಮುಂದುವರಿಯುತ್ತದೆ ಎಂದಿದ್ದಾರೆ.

ಸುಪ್ರೀಂ ಸೂಚನೆ ಪಾಲಿಸಿ: ಮಮತಾ

ಕೋಲ್ಕತ್ತಾ: ಜಿಲ್ಲಾಧಿಕಾರಿಗಳು ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತು ಸುಪ್ರೀಂ ಕೋರ್ಟ್‌ನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ತಾರ್ಕಿಕ ವ್ಯತ್ಯಾಸಗಳ ಹೆಸರಿನಲ್ಲಿ ಜನರಿಗೆ ಕಿರುಕುಳ ನೀಡಬಾರದು ಎಂದು ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ತಾಕೀತು ಮಾಡಿ ದ್ದಾರೆ. ಮಂಗಳವಾರ ಸಚಿವಾಲಯ ನಬನ್ನಾದಲ್ಲಿ ಮುಖ್ಯ ಕಾರ್ಯದರ್ಶಿ ನಂದಿನಿ ಚಕ್ರವರ್ತಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಸಿಎಂ ಈ ಸೂಚನೆ ಕೊಟ್ಟಿದ್ದಾರೆ. ಎಸ್‌ಐಆರ್‌ಗೆ ಸಂಬಂಧಿಸಿದ ಎಲ್ಲಾ ವಿಚಾರಣೆಗಳನ್ನು ಸುಪ್ರೀಂ ಕೋರ್ಟ್‌ನ ನಿರ್ದೇಶನಗಳಿಗೆ ಅನುಸಾರವಾಗಿ ಕಟ್ಟು ನಿಟ್ಟಾಗಿ ಪಾಲಿಸಬೇಕು ಎಂದು ಸಿಎಂ ಸ್ಪಷ್ಟಪಡಿಸಿ ದ್ದಾರೆ. ತಾರ್ಕಿಕ ವ್ಯತ್ಯಾಸಗಳ ನೆಪದಲ್ಲಿ ಜನರು ಅನಾನುಕೂಲತೆಗೆ ಒಳಗಾಗದಂತೆ ನೋಡಿಕೊಳ್ಳಲು ಅವರು ಅಧಿಕಾರಿಗಳಿಗೆ ನಿರ್ದಿಷ್ಟವಾಗಿ ಸೂಚನೆ ನೀಡಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಿಂದೂ ಧರ್ಮದ ಮೇಲೆ ದಾಳಿ: ಕೋರ್ಟ್

ಚೆನ್ನೈ: ಸನಾತನ ಧರ್ಮದ ಕುರಿತು ತಮಿಳುನಾಡು ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರು 2023ರಲ್ಲಿ ನೀಡಿದ್ದ ಹೇಳಿಕೆಗಳು ದ್ವೇಷ ಭಾಷಣಕ್ಕೆ ಸಮವಾಗಿದೆ ಎಂದು ಮದ್ರಾಸ್ ಹೈಕೋರ್ಟ್ ಹೇಳಿದೆ. 100 ವರ್ಷಗಳಲ್ಲಿ ಡಿಎಂಕೆಯಿಂದ ಹಿಂದೂ ಧರ್ಮದ ಮೇಲೆ ಸ್ಪಷ್ಟ ದಾಳಿ ನಡೆದಿದೆ ಎಂದು ಹೈಕೋರ್ಟ್‌ನ ಮಧುರೈ ಪೀಠವು ಅಭಿಪ್ರಾಯ ಪಟ್ಟಿದೆ, ಸಚಿವರು ಅದೇ ಸೈದ್ಧಾಂತಿಕ ವಂಶಕ್ಕೆ ಸೇರಿದವರು ಎಂದು ನ್ಯಾಯಾಲಯ ಹೇಳಿದೆ. ತಮಿಳುನಾಡಿನಲ್ಲಿ ಸಚಿವರ ವಿರುದ್ಧ ದ್ವೇಷ ಭಾಷಣಕ್ಕಾಗಿ ಯಾವುದೇ ಪ್ರಕರಣ ದಾಖಲಾಗಿಲ್ಲ, ಆದರೆ ಇತರ ರಾಜ್ಯಗಳಲ್ಲಿ ಕೆಲವು ಪ್ರಕರಣಗಳು ದಾಖಲಾಗಿವೆ ಎಂದು ಹೈಕೋರ್ಟ್ ಹೇಳಿದೆ. ಕೆಲವು ವಿಷಯಗಳನ್ನು ವಿರೋಧಿಸಿ ಸುಮ್ಮನಿರಲು ಸಾಧ್ಯವಿಲ್ಲ, ಅವುಗಳನ್ನು ನಾಶ ಮಾಡಬೇಕು. ಹಿಂದೂ ಧರ್ಮವು ಡೆಂಗ್ಯೂ, ಮಲೇರಿಯಾ, ಕರೋನಾ ಇದ್ದಂತೆ. ಇದನ್ನು ನಾಶ ಪಡಿಸಬೇಕು ಎಂದು ಉದಯನಿಧಿ ಸ್ಟಾಲಿನ್ ಹೇಳಿದ್ದರು.

ಬಾಂಗ್ಲಾ: ಹಿಂದೂಗಳ ಸಾವಿನ ಸಂಖ್ಯೆ 17ಕ್ಕೆ

ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂಗಳ ಸರಣಿ ಸಾವು ಮುಂದುವರಿದಿದೆ. ಇತ್ತೀಚೆಗಷ್ಟೇ ಕಾಣೆಯಾಗಿದ್ದ ಹಿಂದೂ ವಿದ್ಯಾರ್ಥಿಯ ಶವ ನವೋಗಾಂವ್ ಜಿಲ್ಲೆಯ ನದಿಯೊಂದರಲ್ಲಿ ಒತ್ತೆಯಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಮೂಲಗಳ ಪ್ರಕಾರ, ನವೋಗಾಂವ್ ಪಟ್ಟಣದ ಕಾಲಿತಾಲಾ ಸ್ಮಶಾನದ ಬಳಿಯ ನದಿಯಲ್ಲಿ ಶವ ಪತ್ತೆಯಾಗಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಆರಂಭದಲ್ಲಿ ಮೃತನ ಗುರುತು ಪತ್ತೆಯಾಗಿರಲಿಲ್ಲ, ಬಳಿಕ ಸರಕಾರಿ ಕಾಲೇಜಿನ ಮ್ಯಾನೇಜ್‌ಮೆಂಟ್ ವಿಭಾಗದ ವಿದ್ಯಾರ್ಥಿ ಅಭಿ ಅನ್ನೋದು ತಿಳಿದು ಬಂದಿದೆ. ಅವರು ನವೋಗಾಂವ್ ಜಿಲ್ಲೆಯ ಕಾಲೇಜಿ ನಲ್ಲಿ 4ನೇ ವರ್ಷ ವ್ಯಾಸಂಗ ಮಾಡುತ್ತಿದ್ದರು. ಜನವರಿ 11 ರಂದು ಜಗಳವಾಡಿಕೊಂಡು ಮನೆ ಯಿಂದ ಹೊರಬಂದು ಕಾಣೆಯಾಗಿದ್ದ. ನಂತರ ಆತನ ಶವ ಪತ್ತೆಯಾದ ಸುದ್ದಿ ಸಾಮಾಜಿಕ ಜಾಲತಾ ಣದಲ್ಲಿ ಹರಿದಾಡಿತ್ತು.

ಇರಾನ್‌ನ ಜನರಲ್ ಅಬೋಲ್ಫಜಲ್ ಶೇಕಾರ್ಚಿ ಹೇಳಿಕೆಗೆ ಅಮೆರಿಕ ಅಧ್ಯಕ್ಷರ ಎಚ್ಚರಿಕೆ

ಅಮೆರಿಕ ನಾಯಕನ ಹತ್ಯೆಗೈದರೆ ಇರಾನ್ ವಿನಾಶ ಖಚಿತ: ಟ್ರಂಪ್

ವಾಷಿಂಗ್ಟನ್: ಅಮೆರಿಕದ ನಾಯಕನನ್ನು ಇರಾನ್ ಹತ್ಯೆ ಮಾಡುವಲ್ಲಿ ಯಶಸ್ವಿಯಾದರೆ, ಇರಾನ್ ಅನ್ನು ಈ ಭೂಮಿಯಿಂದಲೇ ಅಳಿಸಿಹಾಕಲಾಗುವುದು ಎಂಬ ಎಚ್ಚರಿಕೆಯನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದಾರೆ.

'ಇರಾನ್ ಮತ್ತು ಅಮೆರಿಕ ಎರಡೂ ದೇಶಗಳ ನಾಯಕರು ಹತ್ಯೆಯಾದರೆ ವ್ಯಾಪಕ ಯುದ್ಧಗಳಿಗೆ ಕಾರಣವಾಗಬಹುದು ಎಂದು ಎರಡೂ ದೇಶಗಳು ಈಗಾಗಲೇ ಪರಸ್ಪರ ಬೆದರಿಕೆ ಹಾಕಿವೆ. ಏನೇ ಅಚಾತುರ್ಯ ಉಂಟಾದರೂ ಅವರನ್ನು ಈ ಭೂಮಿ ಮೇಲೆ ಇಲ್ಲದಂತೆ ಮಾಡಲಾಗುವುದು' ಎಂದು ಟ್ರಂಪ್ ಮಾಧ್ಯಮ ಸಂದರ್ಶನದಲ್ಲಿ ಇರಾನ್‌ನ ಬೆದರಿಕೆಗಳ ಕುರಿತಾದ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ನಮ್ಮ ನಾಯಕನ ಕಡೆಗೆ ಆಕ್ರಮಣಕಾರಿ ಕೈ ಚಾಚಿದರೆ, ನಾವು ಆ ಕೈಯನ್ನು ಕತ್ತರಿಸಿ ಮಾತ್ರ ಹಾಕುವುದಿಲ್ಲ ಎಂದು ಟ್ರಂಪ್‌ಗೆ ತಿಳಿದಿದೆ ಎಂದು ಇರಾನಿನ ಜನರಲ್ ಅಬೋಲ್ಫಜಲ್ ಶೇಕಾರ್ಚಿ, ಅಲ್ಲಿನ ಸರಕಾರಿ ಟಿವಿ ಚಾನೆಲ್‌ಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ. ನಾವು ಅವರ ಜಗತ್ತಿಗೆ ಬೆಂಕಿ ಹಚ್ಚುತ್ತೇವೆ, ಈ ಪ್ರದೇಶದಲ್ಲಿ ಅವರಿಗೆ ಯಾವುದೇ ಸುರಕ್ಷಿತ ತಾಣವನ್ನು ಬಿಡುವುದಿಲ್ಲ ಎಂದು ಪ್ರತಿ ಎಚ್ಚರಿಕೆ ನೀಡಿದ್ದಾರೆ. ವರ್ಷದ ಹಿಂದೆ ಶ್ವೇತಭವನಕ್ಕೆ ಅಧಿಕಾರಕ್ಕೆ ಹಿಂದಿರುಗಿದ ಸ್ವಲ್ಪ ಸಮಯದ ನಂತರ, ಟ್ರಂಪ್ ಇರಾನ್‌ಗೆ ಇದೇ ರೀತಿಯ ಎಚ್ಚರಿಕೆಯನ್ನು ನೀಡಿದ್ದರು. 1979ರ ಇಸ್ಲಾಮಿಕ್

ಕ್ರಾಂತಿಯ ನಂತರದ ಕೆಲವು ದೊಡ್ಡ ಸರಕಾರಿ ವಿರೋಧಿ ಪ್ರತಿಭಟನೆಗಳ ಸಮಯದಲ್ಲಿ ನಡೆದ ಹಿಂಸಾಚಾರದಿಂದ ಇರಾನ್ ಇನ್ನೂ ತತ್ತರಿಸುತ್ತಿದೆ.

ಡಿಸೆಂಬರ್‌ನಲ್ಲಿ ಆರ್ಥಿಕ ಸಂಕಷ್ಟಗಳಿಂದ ಪರಿಹಾರಕ್ಕಾಗಿ ಇರಾನಿಯನ್ನರು ಸಾಮೂಹಿಕ ಪ್ರದರ್ಶನಗಳನ್ನು ನಡೆಸಲು ಪ್ರಾರಂಭಿಸಿದರು, ದಶಕಗಳಿಂದ ಪ್ರಜಾಪ್ರಭುತ್ವ ಸುಧಾರಣೆಯನ್ನು ವಿರೋಧಿಸುತ್ತಿರುವ 86 ವರ್ಷದ ಅಯತೊಲ್ಲಾ ನೇತೃತ್ವದಲ್ಲಿ ದೇಶದ ಕರೆನ್ಸಿ ಏರಿಕೆ ಕಂಡುಬಂದಿತ್ತು. ದೇಶಭ್ರಷ್ಟ ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ಶಿರಿನ್ ಎಬಾದಿ ಸೇರಿದಂತೆ ಇರಾನ್‌ನ ಜಾಗತಿಕ ವಲಸೆಗಾರರಲ್ಲಿ ಅನೇಕರು ಇರಾನ್‌ನಲ್ಲಿ ಅಮೆರಿಕದ ಹಸ್ತಕ್ಷೇಪಕ್ಕೆ ಕರೆ ನೀಡಿದ್ದಾರೆ.

ಟ್ರಂಪ್ ವಿಮಾನದಲ್ಲಿ ತಾಂತ್ರಿಕ ದೋಷ

ಡೊನಾಲ್ಡ್ ಟ್ರಂಪ್ ಅವರು ದಾವೋಸ್‌ಗೆ ತೆರಳುತ್ತಿದ್ದ ಏರ್‌ಫೋರ್ಸ್ ಒನ್ ವಿಮಾನದಲ್ಲಿ ತಾಂತ್ರಿಕ ದೋಷ ಕಂಡುಬಂದಿದ್ದರಿಂದ, ಟೇಕ್ ಆಫ್ ಆದ ಕೆಲವೇ ನಿಮಿಷಗಳಲ್ಲಿ ಏರ್‌ಬೇಸ್‌ಗೆ ಮರಳಿದೆ. ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆ ಸಮಾವೇಶದಲ್ಲಿ ಭಾಗಿಯಾಗಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತೆರಳುತ್ತಿದ್ದರು. ಜಂಟಿ ನೆಲೆ ಆ್ಯಂಡ್ರ್ಯೂಸ್‌ನಿಂದ ಮಂಗಳವಾರ ಸಂಜೆ ಹೊರಟ ಏರ್‌ಫೋರ್ಸ್ ಒನ್ ವಿಮಾನ ಟೇಕ್ ಆಫ್ ಆಗಿತ್ತು. ಅಲ್ಲಿಂದ ಹೊರಟ ಕೆಲವೇ ನಿಮಿಷಗಳ ಬಳಿಕ ಪ್ರೆಸ್ ಕ್ಯಾಬಿನ್‌ನ ದೀಪಗಳು ಸ್ವಲ್ಪ ಹೊತ್ತು ಆಫ್ ಆಗುವಂತಹ ವಿದ್ಯುತ್ ಸಮಸ್ಯೆ ಎದುರಾಗಿತ್ತು. ವೈಟ್ ಹೌಸ್ ಪ್ರೆಸ್ ಸೆಕ್ರಟರಿ ಕ್ಯಾರೊಲೈನ್ ಲೆವಿಟ್ ಅವರ ಮಾಹಿತಿಯಂತೆ, ಈ ತಾಂತ್ರಿಕ ಸಮಸ್ಯೆಯನ್ನು ಗುರುತಿಸಿದ ನಂತರ ಎಚ್ಚರಿಕೆಯಿಂದ ವಿಮಾನವನ್ನು ಮರಳಿ ಬೇಸ್‌ಗೆ ತಿರುಗಿಸಲಾಯಿತು. ಸುಮಾರು 1 ಗಂಟೆಯ ನಂತರ ವಿಮಾನವು ವಾಷಿಂಗ್ಟನ್ ಪ್ರದೇಶದ ಜಂಟಿ ಬೇಸ್ ಆ್ಯಂಡ್ರ್ಯೂಸ್‌ಗೆ ಸುರಕ್ಷಿತವಾಗಿ ಮರಳಿತು.

ಯೂರೋಪ್ ಒಕ್ಕೂಟದ ಉರ್ಸುಲಾ ಬಣ್ಣನೆ

ಭಾರತದ ಜತೆ ಐತಿಹಾಸಿಕ ಒಪ್ಪಂದ

ದಾವೋಸ್: ಅಮೆರಿಕ ಅಧ್ಯಕ್ಷ ಟ್ರಂಪ್ ಜತೆಗಿನ ವಿರೋಧದಿಂದಾಗಿ 27 ದೇಶಗಳನ್ನು ಒಳಗೊಂಡಿರುವ ಯೂರೋಪಿಯನ್ ಒಕ್ಕೂಟವು ಭಾರತದ ಜೊತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಮುಂದಾಗಿವೆ.

ಸ್ವಿಟ್ಜರ್ಲ್ಯಾಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಶೃಂಗಸಭೆ ಯಲ್ಲಿ ಮಾತನಾಡಿದ ಯೂರೋಪ್ ಒಕ್ಕೂಟದ ಮುಖ್ಯಸ್ಥೆ ಉರ್ಸುಲಾ ವನ್ ಡರ್ ಲೆಯಾನ್ ಮಾತನಾಡಿ, ಮುಂದಿನ ವಾರಾಂತ್ಯದಲ್ಲಿ ನಾನು ಭಾರತಕ್ಕೆ ಪ್ರಯಾಣಿಸುತ್ತೇನೆ. ಐತಿಹಾಸಿಕ ವ್ಯಾಪಾರ ಒಪ್ಪಂದ ಮಾಡುವ ಅಂತಿಮ ಹಂತದಲ್ಲಿದ್ದೇವೆ. ಇದನ್ನು ಕೆಲವರು ಎಲ್ಲಾ ಒಪ್ಪಂದಗಳ ತಾಯಿ ಎಂದು ಕರೆಯುತ್ತಾರೆ ಎಂದು ಬಣ್ಣಿಸಿದರು.

ಒಪ್ಪಂದವು ಸುಮಾರು ಎರಡು ಶತಕೋಟಿ ಜನರ ಸಂಯೋಜಿತ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ ಮತ್ತು ಜಾಗತಿಕ ಜಿಡಿಪಿಯ ಸುಮಾರು ಕಾಲು ಭಾಗದಷ್ಟು ಪಾಲನ್ನು ಹೊಂದಿರುತ್ತದೆ. ಇದು ಯುರೋಪಿಯನ್ ಕಂಪನಿಗಳಿಗೆ ವಿಶ್ವದ ವೇಗವಾಗಿ ಬೆಳೆಯುತ್ತಿರುವ ಪ್ರದೇಶಗಳಲ್ಲಿ ಹೂಡಿಕೆಗೆ ಸಹಾಯ ಮಾಡಲಿದೆ. ಯುರೋಪ್ ಲ್ಯಾಟಿನ್ ಅಮೆರಿಕದಿಂದ ಹಿಡಿದು ಇಂಡೋ-ಪೆಸಿಫಿಕ್ ಮತ್ತು ಅದರಾಚೆಗಿನವರೆಗೆ ವ್ಯವಹಾರ ಮಾಡಲು ಬಯಸುತ್ತದೆ ಎಂದು ಹೇಳಿದರು.

ಗಣರಾಜ್ಯೋತ್ಸವ ಅತಿಥಿಯಾಗಿ ಭಾಗಿ

ಸುಮಾರು 2 ದಶಕಗಳಿಂದಲೂ ಮಾತುಕತೆಯಲ್ಲಿರುವ ಒಪ್ಪಂದಕ್ಕೆ ಜನವರಿ 27ರಂದು ದೆಹಲಿಯಲ್ಲಿ ಸಹಿ ಬೀಳುವ ಸಾಧ್ಯತೆಯಿದೆ. ವ್ಯಾಪಾರ ಒಪ್ಪಂದದ ಜೊತೆಗೆ ರಕ್ಷಣೆ, ಭದ್ರತೆ ಹಾಗೂ ರಾಜಕೀಯ ಬಾಂಧವ್ಯ ಗಟ್ಟಿಗೊಳ್ಳಲಿದೆ. ಹೀಗಾಗಿ ಈ ಬಾರಿಯ ಗಣರಾಜ್ಯೋತ್ಸವ ತುಂಬಾ ವಿಶೇಷವಾಗಿರಲಿದೆ. ಉರ್ಸುಲಾ ವನ್ ಡರ್ ಲೆಯಾನ್ ಜತೆಗೆ ಯೂರೋಪಿಯನ್ ಕೌನ್ಸಿಲ್‌ನ ಅಧ್ಯಕ್ಷ ಆಂಟೋನಿಯೋ ಕೋಸ್ಟಾ ಗಣರಾಜ್ಯೋತ್ಸವ ಮುಖ್ಯ ಅತಿಥಿಗಳಾಗಲಿದ್ದಾರೆ. ಜನವರಿ 25, 26, 27 ಮೂರು ದಿನ ಭಾರತದಲ್ಲಿ ಉಳಿಯಲಿದ್ದು, ಈ ವೇಳೆ ಹಲವು ಒಪ್ಪಂದಗಳಿಗೆ ಸಹಿ ಹಾಕಲಿದ್ದಾರೆ.

ಉದ್ಘಾಟನೆಗೂ ಮುನ್ನವೇ ಟ್ಯಾಂಕ್ ಕುಸಿತ

ಸೂರತ್: 21 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ನೀರಿನ ಟ್ಯಾಂಕ್ ಉದ್ಘಾಟನೆಗೂ ಮುನ್ನವೇ ಕುಸಿದಿರುವ ಘಟನೆ ಗುಜರಾತ್‌ನ ಸೂರತ್ ಜಿಲ್ಲೆಯಲ್ಲಿ ನಡೆದಿದೆ. 33 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಗುರಿಯನ್ನು ಹೊಂದಿರುವ ಯೋಜನೆಗೆ ದೊಡ್ಡ ಹಿನ್ನಡೆಯಾಗಿದೆ. ಈ ಘಟನೆ ಭ್ರಷ್ಟಾಚಾರ ವಿವಾದಕ್ಕೆ ನಾಂದಿ ಹಾಡಿದ್ದು, ನೀರಿನ ಟ್ಯಾಂಕ್ ನಿರ್ಮಿಸಲು ಬಳಸಿದ ನಿರ್ಮಾಣ ಸಾಮಗ್ರಿಗಳ ಗುಣಮಟ್ಟದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಗೇಪಾಗ್ಲಾ ಗ್ರೂಪ್ ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಮಾಂಡ್ವಿ ತಾಲೂಕಿನ ತಡಕೇಶ್ವರ ಗ್ರಾಮದಲ್ಲಿ ಈ ಘಟನೆ ಸಂಭವಿಸಿದೆ. ಜನವರಿ 19ರಂದು ಪ್ರಾಯೋಗಿಕ ಚಾಲನೆಯ ಸಮಯದಲ್ಲಿ 11 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ನೀರಿನ ಟ್ಯಾಂಕ್ ಕುಸಿದು ಬಿದ್ದಿದ್ದು, ಆ ಪ್ರದೇಶದಲ್ಲಿ ಭೀತಿ ಮತ್ತು ಸ್ಥಳೀಯ ನಿವಾಸಿಗಳಲ್ಲಿ ಆಕ್ರೋಶಕ್ಕೆ ಕಾರಣವಾಗಿತ್ತು. ಅಧಿಕಾರಿಗಳ ಪ್ರಕಾರ, ಮಧ್ಯಾಹ್ನ ಸುಮಾರು 12 ಗಂಟೆಗೆ ಪರೀಕ್ಷೆಗಾಗಿ ಸುಮಾರು 9 ಲಕ್ಷ ಲೀಟರ್ ನೀರನ್ನು ಟ್ಯಾಂಕ್‌ಗೆ ತುಂಬಿಸಲಾಯಿತು. ಈ ವೇಳೆ

ಇದ್ದಕ್ಕಿದ್ದಂತೆ ಟ್ಯಾಂಕ್ ಕುಸಿದು ಬಿತ್ತು. ಈ ಅಪಘಾತದಲ್ಲಿ ಒಬ್ಬ ಮಹಿಳೆ ಸೇರಿದಂತೆ ಮೂವರು ಕಾರ್ಮಿಕರು ಗಾಯಗೊಂಡರು. ಅದೃಷ್ಟವಶಾತ್, ಟ್ಯಾಂಕ್ ಅನ್ನು ಇನ್ನೂ ಉದ್ಘಾಟಿಸದ ಕಾರಣ ಹಾಗೂ ವಸತಿ ನೀರು ಸರಬರಾಜು ಮಾರ್ಗಗಳಿಗೆ ಸಂಪರ್ಕಿಸದ ಕಾರಣ ದೊಡ್ಡ ದುರಂತವೊಂದು ತಪ್ಪಿದೆ.

ಹೂಡಿಕೆಗಳ ಮೇಲೆ ಹೆಚ್ಚಿನ ಆದಾಯದ ತನ್ನ ನಕಲಿ ವಿಡಿಯೊ ಬಗ್ಗೆ ಪ್ರತಿಕ್ರಿಯೆ

ನಕಲಿ ವಿಡಿಯೊ ಬಗ್ಗೆ ಸುಧಾಮೂರ್ತಿ ಬೇಸರ

ದೆಹಲಿ: ಹಣಕಾಸು ಹೂಡಿಕೆಗಳ ಬಗ್ಗೆ ತಾವು ಎಂದಿಗೂ ವಿಡಿಯೊ ಸಂದೇಶ ಕಳುಹಿಸುವುದಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್

ಆಗಿರುವ ತಮ್ಮ ವಿಡಿಯೊ ನಕಲಿ ಎಂದು ರಾಜ್ಯಸಭಾ ಸಂಸದೆ ಮತ್ತು ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷೆ ಸುಧಾ ಮೂರ್ತಿ ಹೇಳಿದ್ದಾರೆ. ತಾವು ಹಣವನ್ನು ಹೂಡಿಕೆ ಮಾಡುವ ಬಗ್ಗೆ ಮಾತನಾಡುವುದನ್ನು ತೋರಿಸುವ ವಿಡಿಯೊಗಳು ಸಂಪೂರ್ಣ ಸುಳ್ಳು. ಈ ಬಗ್ಗೆ ನಂಬಿರುವ ಅನೇಕರು ಹೂಡಿಕೆ ಮಾಡಿ ಹಣವನ್ನು ಕಳೆದುಕೊಂಡಿದ್ದಾರೆ ಎಂದು ಅವರು ತಿಳಿಸಿದರು.

ಈ ಕುರಿತು ಸಾಮಾಜಿಕ ಮಾಧ್ಯಮವಾದ ಎಕ್ಸ್ ನಲ್ಲಿ ಮಾಹಿತಿ ನೀಡಿದ ಅವರು, ಫೇಸ್‌ಬುಕ್‌ನಲ್ಲಿ ಪ್ರಸಾರ ಮಾಡಲಾದ ಈ ವಿಡಿಯೊಗಳನ್ನು ತಮ್ಮ ಒಪ್ಪಿಗೆಯಿಲ್ಲದೆ ಕೃತಕ ಬುದ್ಧಿಮತ್ತೆಯನ್ನು ಬಳಸಿ ರಚಿಸಲಾಗಿದೆ ಎಂದ ಅವರು, ಯಾವುದೇ ರೀತಿಯಲ್ಲಿ ಹೂಡಿಕೆ ಮಾಡುವಾಗ ವಿಶ್ವಾಸಾರ್ಹ ಬ್ಯಾಂಕುಗಳು ಅಥವಾ ಅಧಿಕೃತ ಮೂಲಗಳಲ್ಲೇ ನಡೆಸುವಂತೆ ಅವರು ತಿಳಿಸಿದ್ದಾರೆ.

ತನಗೆ ತಿಳಿದಿರುವ ಅನೇಕ ಜನರು ಹೂಡಿಕೆ ಮಾಡಿ ಹಣವನ್ನು ಕಳೆದುಕೊಂಡಿದ್ದಾರೆ ಎಂದು ಹೇಳಿದ್ದು, ಫೇಸ್‌ಬುಕ್‌ನಂತಹ ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಹಣಕಾಸಿನ ವಹಿವಾಟು ಸಂಬಂಧಿತ ಸಂದೇಶಗಳನ್ನು ನಂಬಬೇಡಿ ಎಂದು ಜನರನ್ನು ಕೇಳಿಕೊಂಡರು. ನಾನು ಯಾವಾಗಲೂ ಕೆಲಸ, ಭಾರತದ ಸಂಸ್ಕೃತಿ, ಮಹಿಳೆಯರು ಮತ್ತು ಶಿಕ್ಷಣದ ಬಗ್ಗೆ ಮಾತನಾಡುತ್ತೇನೆ. ಹಣವನ್ನು ಹೂಡಿಕೆ ಮಾಡುವ ಮತ್ತು ಅದರಿಂದ ಲಾಭ ಪಡೆಯುವ ಬಗ್ಗೆ ನಾನು ಎಂದಿಗೂ ಮಾತನಾಡುವುದಿಲ್ಲ ಎಂದು ಅವರು ಹೇಳಿದರು. ಕಷ್ಟಪಟ್ಟು ಸಂಪಾದಿಸಿದ ಹಣವನ್ನು ದುರಾಸೆಗಾಗಿ ಕಳೆದುಕೊಳ್ಳಬೇಡಿ, ಅದನ್ನು ಅವರು ಬಲೆಗೆ ಬೀಳಿಸಿ ಒಳಗೆ ಸೇರಿಸಿಕೊಳ್ಳಿ ಎಂದು ಅವರು ಸಲಹೆ ನೀಡಿದರು, ನಿಮ್ಮ ಹಣವನ್ನು ಉಳಿಸಿ, ಏನಾದರೂ ಸಮಸ್ಯೆ ಇದ್ದರೆ ಪೊಲೀಸ್ ಠಾಣೆ ಅಥವಾ ಬ್ಯಾಂಕಿನಲ್ಲಿ ಹೋಗಿ ವಿಚಾರಿಸಿ ಎಂದು ಸುಧಾಮೂರ್ತಿ ಹೇಳಿದ್ದಾರೆ.

ಶಿಂಧೆ ಸೇನಾಗೆ ಎಂಎನ್‌ಎಸ್ ಬೆಂಬಲ

ಮುಂಬೈ: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸಹೋದರ ಉದ್ಧವ್ ಠಾಕ್ರೆಜತೆ ಮೈತ್ರಿ ಮಾಡಿಕೊಂಡಿದ್ದ ರಾಜ್ ಠಾಕ್ರೆಯ ಮಹಾರಾಷ್ಟ್ರ ನವ ನಿರ್ಮಾಣ ಸೇನೆ ಈಗ ಶಿಂಧೆ ಬಣದ ಶಿವಸೇನೆಗೆ ಬೆಂಬಲ ಸೂಚಿಸಿದೆ. ಕಲ್ಯಾಣ್-ಡೊಂಬಿವಿಲಿ ಮುನ್ಸಿಪಲ್ ಕಾರ್ಪೊರೇಷನ್ ಮೇಯರ್ ಚುನಾವಣೆಗೆ ಎಂಎನ್‌ಎಸ್ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಗೆ ಬೆಂಬಲ ನೀಡಿದೆ. ರಾಜ್ ಠಾಕ್ರೆ ಸ್ಥಳೀಯ ನಾಯಕರಿಗೆ ಈ ವಿಚಾರದ ಬಗ್ಗೆ ನಿರ್ಧಾರ ಕೈಗೊಳ್ಳಲು ಅಧಿಕಾರ ನೀಡಿದ್ದರು. ನಮ್ಮ ಪ್ರದೇಶದ ಅಭಿವೃದ್ಧಿಯ ಹಿತದೃಷ್ಟಿಯಿಂದ ಶಿಂಧೆ ನೇತೃತ್ವದ ಶಿವಸೇನೆಗೆ ಬೆಂಬಲ ನೀಡುವ ನಿರ್ಧಾರವನ್ನು ಸ್ಥಳೀಯ ನಾಯಕತ್ವ ತೆಗೆದುಕೊಂಡಿದೆ ಎಂದು ಪಕ್ಷ ಹೇಳಿದೆ. 122 ಸದಸ್ಯ ಬಲದ ನಗರ ಪಾಲಿಕೆಯಲ್ಲಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ 53 ಸ್ಥಾನಗಳನ್ನು ಗೆದ್ದರೆ, ಬಿಜೆಪಿ 50 ಸ್ಥಾನಗಳನ್ನು ಗೆದ್ದಿದೆ. ಶಿವಸೇನೆ (ಯುಬಿಟಿ) 11, ಎಂಎನ್‌ಎಸ್ 5, ಕಾಂಗ್ರೆಸ್ 2, ಎನ್‌ಸಿಪಿ (ಎಸ್‌ಪಿ) 1 ವಾರ್ಡ್ ಗೆದ್ದುಕೊಂಡಿದೆ. ಕಲ್ಯಾಣ್- ಡೊಂಬಿವಿಲಿ ಮತ್ತು ಇತರ 28 ಪುರಸಭೆಗಳಲ್ಲಿ ಮೇಯರ್‌ಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ

ಬಾಂಗ್ಲಾದಿಂದ ಮರಳಲು ಅಧಿಕಾರಿಗಳಿಗೆ ಸೂಚನೆ

ದೆಹಲಿ: ಮುಂದಿನ ತಿಂಗಳ ಆರಂಭದಲ್ಲಿ ಬಾಂಗ್ಲಾದೇಶದಲ್ಲಿ ಸಂಸತ್ತು ಚುನಾವಣೆ ನಡೆಯಲಿದೆ. ಅದಕ್ಕೂ ಮೊದಲು ಭಾರತೀಯ ಅಧಿಕಾರಿಗಳು ಅಲ್ಲಿಂದ ಮರಳುವಂತೆ ಭಾರತ ಸಲಹೆ ನೀಡಿದೆ. ಬಾಂಗ್ಲಾದೇಶದಲ್ಲಿರುವ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಭಾರತ, ಅಲ್ಲಿನ ಸದ್ಯದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಈ ತೀರ್ಮಾನ ಕೈಗೊಳ್ಳಲಾಗಿದೆ. ಭದ್ರತೆ ಆತಂಕದ ಹಿನ್ನೆಲೆಯಲ್ಲಿ ಬಾಂಗ್ಲಾದೇಶದಲ್ಲಿ ನಿಯೋಜಿಸಲಾದ ಭಾರತೀಯ ಅಧಿಕಾರಿಗಳನ್ನು ಮರಳಿ ಕರೆಸಲು ಭಾರತ ನಿರ್ಧರಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬಾಂಗ್ಲಾದೇಶದ ಹೈಕಮಿಷನ್ ಮತ್ತು ಎಲ್ಲಾ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ತಮ್ಮ ಕರ್ತವ್ಯದಲ್ಲಿ ಮುಂದುವರಿಯುತ್ತಾರೆ. ಆದರೆ ಭದ್ರತಾ ಆತಂಕವಿರುವ ಹಿನ್ನೆಲೆಯಲ್ಲಿ ಅವರೆಲ್ಲ ಮರಳಿ ಬರಲು ಆದೇಶಿಸಲಾಗಿದೆ. ಫೆಬ್ರವರಿ 12ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ಇದರೊಂದಿಗೆ ಜನಾಭಿಪ್ರಾಯ ಸಂಗ್ರಹ ಕಾರ್ಯವು ನಡೆಯಲಿದೆ. ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಪದಚ್ಯುತಿಯ ಬಳಿಕ ಬಾಂಗ್ಲಾದೇಶದ ರಾಜಕೀಯ ವ್ಯವಸ್ಥೆಯನ್ನು ಮರುರೂಪಿಸಲು ಮುಹಮ್ಮದ್ ಯೂನಸ್ ನೇತೃತ್ವದ ಆಡಳಿತವು ಮತದಾನದ ಕೇಂದ್ರದಲ್ಲಿ ಕಾರ್ಯನಿರ್ವಾಹಕ ಅಧಿಕಾರದ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ.

ಸಾಮಾನ್ಯವಾಗಿ ಮೊಬೈಲ್‌ನಿಂದ ಸಿಮ್ ಹೊರತೆಗೆದಾಗ ವೈಫೈ ಮೂಲಕ ವಾಟ್ಸಪ್ ಬಳಸಬಹುದು. ಜತೆಗೆ ಟೆಲಿಗ್ರಾಂ ಅನ್ನು ಕೂಡ ಒಂದು ಬಾರಿ ಲಾಗಿನ್ ಆದರೆ ಸಿಮ್ ಇಲ್ಲದೆ ಬಳಸಬಹುದು. ಇದೀಗ ದೂರ ಸಂಪರ್ಕ ಇಲಾಖೆ ವಾಟ್ಸಾಪ್, ಟೆಲಿಗ್ರಾಂ, ಸಿಗ್ನಲ್, ಸ್ನಾಪ್ ಚಾಟ್, ಶೇರ್ ಚಾಟ್ ಸೇರಿದಂತೆ ಹೆಚ್ಚಿನ ಆ್ಯಪ್‌ಗಳು ಮೊಬೈಲ್‌ನಲ್ಲಿ ಸಿಮ್ ಇದ್ದರೆ ಮಾತ್ರ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಲು ಸೂಚಿಸಿದೆ.

ಇನ್ಮುಂದೆ ಮೊಬೈಲ್‌ನಿಂದ ಸಿಮ್ ತೆಗೆದ್ರೆ ವಾಟ್ಸಪ್ ಬಂದ್!

ತಂತ್ರಜ್ಞಾನ ಬೆಳೆದಂತೆ ಅದರ ಉಪಯೋಗದ ಜೊತೆಗೆ ದುರುಪಯೋಗವು ಹೆಚ್ಚಾಗುತ್ತಿದೆ. ತಂತ್ರಜ್ಞಾನದ ಅನುಕೂಲಕ್ಕಿಂತ ಹೆಚ್ಚಾಗಿ ಅದನ್ನು ಹೇಗೆ ದುರುಪಯೋಗಪಡಿಸಿಕೊಳ್ಳಬಹುದು ಎಂದೇ ಯೋಚಿಸುತ್ತಾರೆ.

ಹೌದು, ಇತ್ತೀಚಿನ ದಿನಗಳಲ್ಲಿ ಮೊಬೈಲ್‌ನಲ್ಲಿ ಯಾವುದೇ ಒಂದು ಸಂದೇಶ ಅಥವಾ ಮೇಲ್ ಬಂದಾಗ ಆದಷ್ಟು ಜಾಗರೂಕರಾಗಿರಬೇಕು. ಅಪ್ಪಿತಪ್ಪಿಯೂ ಎಡವಟ್ಟಾದರೆ ನಿಜಕ್ಕೂ ಬೆಲೆ ತೆರಬೇಕಾಗುತ್ತದೆ. ನಾವೆಲ್ಲರೂ ತುಂಬಾ ಕಡೆ ನೋಡಿರುತ್ತೇವೆ. ಅಲ್ಲದೆ ಅದು ನಮ್ಮ ಅನುಭವಕ್ಕೂ ಬಂದಿರುತ್ತದೆ. ಸಾಮಾನ್ಯವಾಗಿ ಮೊಬೈಲ್‌ನಿಂದ ಸಿಮ್ ಹೊರತೆಗೆದಾಗ ವೈಫೈ ಮೂಲಕ ವಾಟ್ಸಪ್ ಬಳಸಬಹುದು. ಜತೆಗೆ ಟೆಲಿಗ್ರಾಂ ಅನ್ನು ಕೂಡ ಒಂದು ಬಾರಿ ಲಾಗಿನ್ ಆದರೆ ಸಿಮ್ ಇಲ್ಲದೆ ಬಳಸಬಹುದು. ಇದೀಗ ದೂರ ಸಂಪರ್ಕ ಇಲಾಖೆ ವಾಟ್ಸಾಪ್, ಟೆಲಿಗ್ರಾಂ, ಸಿಗ್ನಲ್, ಸ್ನಾಪ್ ಚಾಟ್, ಶೇರ್ ಚಾಟ್ ಸೇರಿದಂತೆ ಹೆಚ್ಚಿನ ಆಪ್‌ಗಳು ಮೊಬೈಲ್‌ನಲ್ಲಿ ಸಿಮ್ ಇದ್ದರೆ ಮಾತ್ರ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಲು ಸೂಚಿಸಿದೆ.

ಏನಿದು ಸಿಮ್ ಬೈಂಡಿಂಗ್?: ಸದ್ಯಕ್ಕೆ ಗಮನಿಸಿದರೆ ನಿಮ್ಮ ಮೊಬೈಲ್‌ನಲ್ಲಿರುವ ಸಿಮ್‌ಅನ್ನು ಹೊರತೆಗೆದಾಗ ವಾಟ್ಸಪ್, ಟೆಲಿಗ್ರಾಂ ಸೇರಿದಂತೆ ಇನ್ನಿತರ ಆ್ಯಪ್‌ಗಳು ಮೊಬೈಲ್ ಇಂಟರ್‌ನೆಟ್ ಇಲ್ಲದೆ ವೈಫೈ ಮೂಲಕ ಕಾರ್ಯನಿರ್ವಹಿಸುತ್ತವೆ. ಇನ್ನು ಮುಂದೆ ಮೊಬೈಲ್‌ನಲ್ಲಿ ಸಿಮ್ ಇಲ್ಲದಿದ್ದರೆ ಈ ಕೆಲವು ಅಪ್ಲಿಕೇಶನ್‌ಗಳು ಕಾರ್ಯನಿರ್ವಹಿಸುವುದಿಲ್ಲ. ಇದೇ ವಿಷಯವಾಗಿ ಸರಕಾರ ಹೊಸ ಬದಲಾವಣೆಯೊಂದನ್ನು ತರುತ್ತಿದೆ. ಇದನ್ನೇ ಸಿಮ್ ಬೈಂಡಿಂಗ್ ಎಂದು ಕರೆಯಲಾಗುತ್ತದೆ.

ಯಾಕೆ ಈ ಕ್ರಮ?: ವಾಟ್ಸಪ್, ಟೆಲಿಗ್ರಾಮ್, ಸಿಗ್ನಲ್, ಸ್ನ್ಯಾಪ್ ಚಾಟ್, ಶೇರ್‌ಚಾಟ್, ಜಿಯೋಚಾಟ್, ಅರಟ್ಟೈ ಮತ್ತು ಜೋಶ್ ನಂತಹ ಜನಪ್ರಿಯ ಮೆಸೇಜಿಂಗ್ ಅಪ್ಲಿಕೇಶನ್‌ಗಳು ಆರಂಭದದಲ್ಲಿ ಸಿಮ್ ಮೂಲಕ ಒಟಿಪಿ ಪಡೆದು ಲಾಗಿನ್ ಆಗುತ್ತದೆ. ಒಂದು ಬಾರಿ ಲಾಗಿನ್ ಆದ ಬಳಿಕ ಸಿಮ್ ಕಾರ್ಡ್ ಮೊಬೈಲ್‌ನಲ್ಲಿ ತೆಗೆದರೂ ಅದು ಸಕ್ರಿಯವಾಗಿರುತ್ತದೆ. ಈ ರೀತಿ ಸಿಮ್ ಸಕ್ರಿಯವಾಗಿರುವುದು ಸೈಬರ್ ಅಪರಾಧ ಕೃತ್ಯಗಳಿಗೆ ಬಳಕೆಯಾಗುತ್ತಿರುವುದು ಕೇಂದ್ರದ ಗಮನಕ್ಕೆ ಬಂದಿದೆ. ಭಾರತದ ಹೊರಗಿನಿಂದ ಕಾರ್ಯನಿರ್ವಹಿಸುತ್ತಿರುವ ಸೈಬರ್ ಅಪರಾಧಿಗಳು, ಸಿಮ್‌ಗಳನ್ನು ಬದಲಾಯಿಸಿದ ಅಥವಾ ನಿಷ್ಕ್ರಿಯಗೊಳಿಸಿದ ನಂತರವೂ ಈ ಅಪ್ಲಿಕೇಶನ್‌ಳನ್ನು ಬಳಸಿ ಕೃತ್ಯ ಎಸಗುತ್ತಿದ್ದಾರೆ. ಇದರಿಂದಾಗಿ ಕರೆ ದಾಖಲೆಗಳು, ಸ್ಥಳ ದಾಖಲೆಯ ಮೂಲಕ ವಂಚನೆಯ ಚಟುವಟಿಕೆಯನ್ನು ಪತ್ತೆಹಚ್ಚುವುದು ಅಸಾಧ್ಯವಾಗಿದೆ. ಈ ಕೃತ್ಯಗಳನ್ನು ತಡೆಗಟ್ಟಲು ಸರ್ಕಾರ ನಿಯಮವನ್ನು ಬಿಗಿಗೊಳಿಸುತ್ತಿದೆ.

ಸೈಬರ್ ವಂಚಕರು ಭಾರತದ ಮೊಬೈಲ್ ನಂಬರ್‌ಗಳನ್ನು ಬಳಸಿಕೊಂಡು ದೇಶದ ಹೊರಗಡೆ ಜನರನ್ನು ವಂಚಿಸುತ್ತಾರೆ. ಹಳೆಯ ಅಥವಾ ನಿಷ್ಕ್ರಿಯವಾಗಿರುವ ಭಾರತೀಯ ಸಿಮ್‌ಗಳನ್ನು ಬಳಸಿಕೊಂಡು ಆಪ್‌ಗಳಲ್ಲಿ ಲಾಗಿನ್ ಆಗುತ್ತಾರೆ. ಬಳಿಕ ಆ ಸಿಮ್ ಅನ್ನು ಮೊಬೈಲ್‌ನಿಂದ ಹೊರತೆಗೆಯುತ್ತಾರೆ. ಹೀಗೆ ಮಾಡುವುದರಿಂದ ಮೊಬೈಲ್‌ನ ಅಥವಾ ವಾಟ್ಸಪ್ ಬಳಕೆ ಮಾಡುತ್ತಿರುವ ಮೊಬೈಲ್‌ನ ನಿಜವಾದ ಸ್ಥಳ ಪತ್ತೆಯಾಗುವುದಿಲ್ಲ ಹಾಗೂ ಅದರ ಯಾವುದೇ ದಾಖಲೆಗಳು ರೆಕಾರ್ಡ್ ಆಗುವುದಿಲ್ಲ. ಇದರಿಂದ ಸೈಬರ್ ವಂಚಕರು ಹಾಗೂ ಇನ್ನಿತರ ಅಪರಾಧಿಗಳನ್ನು ಪತ್ತೆ ಹಚ್ಚುವುದು ಕಷ್ಟಕರವಾಗುತ್ತದೆ.

ಸರಕಾರದ ಮಾಹಿತಿ ಪ್ರಕಾರ, ಸಾಮಾನ್ಯವಾಗಿ ಯಾವುದೇ ಆ್ಯಪ್‌ಗೆ ಲಾಗಿನ್ ಆಗುವಾಗ ಮಾತ್ರ ಅದು ಮೊಬೈಲ್ ಸಂಖ್ಯೆಯನ್ನು ಪರಿಶೀಲಿಸುತ್ತದೆ. ಬಳಿಕ ನೀವು ಮೊಬೈಲ್‌ನಿಂದ ಸಿಮ್ ಹೊರ ತೆಗೆದರೂ ಆ ಅಪ್ಲಿಕೇಶನ್ ಹಾಗೆಯೇ ಕಾರ್ಯನಿರ್ವಹಿಸುತ್ತದೆ. ಇದೇ ವ್ಯವಸ್ಥೆಯನ್ನು ಹ್ಯಾಕರ್ಸ್, ಸ್ಕ್ಯಾಮರ್ ಹಾಗೂ ವಂಚಕರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.

ಇದು ಹೇಗೆ ಕಾರ್ಯನಿರ್ವಹಿಸುತ್ತದೆ?: ಮೊದಲನೆಯದಾಗಿ ಅಪ್ಲಿಕೇಶನ್ ಯಾವಾಗಲೂ ಮೊಬೈಲ್‌ನಲ್ಲಿ ಸಿಮ್ ಇದೆಯೇ ಎಂಬುದನ್ನು ಪರಿಶೀಲಿಸುತ್ತಿರಬೇಕು ಅಥವಾ ಟ್ರ್ಯಾಕ್ ಮಾಡುತ್ತಿರಬೇಕು. ಒಂದು ವೇಳೆ ಸಿಮ್ ಇಲ್ಲದಿದ್ದರೆ ಅಥವಾ ಸರಿಯಾದ ರೀತಿಯಲ್ಲಿ ಸಿಮ್ ಹಾಕಿಲ್ಲದ್ದರೆ ಅಪ್ಲಿಕೇಶನ್ ಸ್ವಯಂ ಚಾಲಿತವಾಗಿ ಕಾರ್ಯನಿರ್ವಹಿಸುವುದನ್ನು ನಿಲ್ಲಿಸಬೇಕು.

ಇನ್ನು ಕೆಲವರು ತಮ್ಮ ವಾಟ್ಸಪ್ ಖಾತೆಗಳನ್ನು ವಾಟ್ಸಾಪ್ ವೆಬ್‌ನಲ್ಲಿ ಲಾಗಿನ್ ಆಗಿರುತ್ತಾರೆ. ಇವರುಗಳಿಗಾಗಿ ಪ್ರತಿ ಬಾರಿ ಲಾಗಿನ್ ಆದ ನಂತರ ಖಾತೆಯು 6 ಗಂಟೆಗಳ ಬಳಿಕ ಸ್ವಯಂ ಚಾಲಿತವಾಗಿ ಲಾಗ್ ಔಟ್ ಆಗುತ್ತದೆ. ಮತ್ತೆ ಲಾಗಿನ್ ಆಗಲು ಕ್ಯೂಆರ್ ಸ್ಕ್ಯಾನ್ ಅಥವಾ ಮೊಬೈಲ್ ನಂಬರ್ ಮೂಲಕ ಲಾಗಿನ್ ಆಗಬಹುದು. ಈ ಮೂಲಕ ನಿಜವಾದ ಬಳಕೆದಾರರು ಎಂದು ಖಚಿತಪಡಿಸಿಕೊಳ್ಳಬಹುದು. ಇನ್ನೂ ಕೆಲವರು ಒಂದು ಮೊಬೈಲ್‌ನಲ್ಲಿ ಸಿಮ್, ಇನ್ನೊಂದು ಮೊಬೈಲ್‌ನಲ್ಲಿ ವಾಟ್ಸಪ್ ಲಾಗಿನ್ ಆಗಿರುತ್ತಾರೆ. ಈ ರೀತಿ ಅವರಿಗೆ ಇದು ಸಮಸ್ಯೆಯನ್ನು ಉಂಟುಮಾಡುತ್ತದೆ.

ಹೊಸ ನಿಯಮದಲ್ಲಿ ಏನಿದೆ?

ಹೊಸ ನಿಯಮದ ಅಡಿಯಲ್ಲಿ ಈ ಅಪ್ಲಿಕೇಶನ್‌ಗಳು 90 ದಿನಗಳಲ್ಲಿ ಸಿಮ್ ಕಾರ್ಡ್ ಗಳು ತಮ್ಮ ಸೇವೆಗಳಿಗೆ ನಿರಂತರವಾಗಿ ಲಿಂಕ್ ಆಗಿರುವುದನ್ನು ಖಚಿತಪ ಡಿಸಿಕೊಳ್ಳ ಬೇಕು. ಇದರ ಜೊತೆ ವೆಬ್ ಬ್ರೌಸರ್ ಲಾಗಿನ್ ವ್ಯವಸ್ಥೆಯಲ್ಲೂ ಬದಲಾ ವಣೆ ಮಾಡಲಾಗಿದೆ. ಹೊಸ ಸಿಮ್ ಬೈಂಡಿಂಗ್ ಪದ್ಧತಿಯಡಿಯಲ್ಲಿ ಬಳಕೆದಾರರು ಸಿಮ್-ಬೌಂಡ್ ಮೊಬೈಲ್ ಫೋನ್ ಮೂಲಕ ಸೆಷನ್ ಅನ್ನು ಮರುಪರಿಶೀಲಿಸದ ಹೊರತು, ಈ ಡೆಸ್ಕ್‌ಟಾಪ್ ಸೆಷನ್‌ಗಳನ್ನು ಪ್ರತಿ ಆರು ಗಂಟೆಗಳಿಗೊಮ್ಮೆ ಬಲವಂತ ವಾಗಿ ಲಾಗೌಟ್ ಮಾಡಲಾಗುತ್ತದೆ. ಅಂದರೆ ಪ್ರತಿ 6ಗಂಟೆಗಳಿಗೊಮ್ಮೆ, ಬಳಕೆದಾರರು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಮತ್ತೊಮ್ಮೆ ಲಾಗಿನ್ ಆಗಬೇಕಾಗುತ್ತದೆ. ಚೀನಾ ಈಗಾಗಲೇ ಈ ರೀತಿಯ ನಿಯಮವನ್ನು ಅಳವಡಿಸಿ ಕೊಂಡಿದೆ. ಅಲ್ಲಿ WeChat ನಂತಹ ಸಂದೇಶ ಕಳುಹಿಸುವ ಅಪ್ಲಿಕೇಶನ್‌ಗಳು ಸಿಮ್ ಕಾರ್ಡ್ ಸಕ್ರಿಯವಾಗಿರುವ ಫೋನಿನಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತವೆ.

ಕೇಂದ್ರ ಸರಕಾರ ಹೇಳಿದ್ದೇನು?

ಬಳಕೆದಾರರ ಮೊಬೈಲ್‌ನಲ್ಲಿ ಸಕ್ರಿಯವಾಗಿರುವ ಸಿಮ್ ಇದ್ದಾಗ ಮಾತ್ರ ವಾಟ್ಸಪ್ ಸೇರಿದಂತೆ ಆ್ಯಪ್ ಆಧಾರಿತ ಸಂವಹನ ಸೇವೆ ಕಾರ್ಯನಿರ್ವಹಿಸ ಬೇಕೆಂದು ಕೇಂದ್ರ ಸರಕಾರ ಸೂಚಿಸಿದೆ. ಈ ಕುರಿತಂತೆ 120 ದಿನಗಳೊಳಗಾಗಿ ದೂರಸಂಪರ್ಕ ಇಲಾಖೆಗೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕು. ವರದಿ ಸಲ್ಲಿಸಲು ವಿಫಲವಾದಲ್ಲಿ ದೂರಸಂಪರ್ಕ ಕಾಯ್ದೆ 2023, ಟೆಲಿಕಾಂ ಸೈಬರ್ ಭದ್ರತಾ ನಿಯಮ ಮತ್ತು ಇತರ ಕಾಯ್ದೆಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಆ್ಯಪ್ ಆಧಾರಿತ ಕಂಪನಿಗಳಿಗೆ ಎಚ್ಚರಿಕೆ ನೀಡಲಾಗಿದೆ.

ಸಮಾಚಾರ ಸಣ್ಣದಲ್ಲ

ಕಬ್ಬನ್ ಪಾರ್ಕ್‌ನಲ್ಲಿ ಗಾಳಿಪಟದ ಸೂತ್ರದ ಮಾಂಜ ದಲ್ಲಿ ಸಿಕ್ಕಿ ಹಾಕಿಕೊಂಡು ಒದ್ದಾಡಿದ ಗಿಡುಗ.
ಫೋಟೋ: ಸುಧಾಕರ್ ದೇವರಾಜ್

ಬಿಡಿಎನಿಂದ 35 ಕೋಟಿ ರು. ಮೌಲ್ಯದ ಆಸ್ತಿ ವಶ

ಬೆಂಗಳೂರು: ಬಿಡಿಎ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರಿಸಿದ್ದು, ಜ್ಞಾನಭಾರತಿ ನಾಗದೇವನಹಳ್ಳಿಯಲ್ಲಿ 35 ಕೋಟಿ ರು. ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ. ಬೆಂಗಳೂರು ದಕ್ಷಿಣ ತಾಲೂಕು, ಕೆಂಗೇರಿ ಹೋಬಳಿ, ಜ್ಞಾನಭಾರತಿ ನಾಗದೇವನಹಳ್ಳಿ ಗ್ರಾಮದಲ್ಲಿ 30 ಗುಂಟೆ ಪ್ರದೇಶಗಳಲ್ಲಿ ಅನಧಿಕೃವಾಗಿ ನಿರ್ಮಾಣಗಳನ್ನು ತೆರವುಗೊಳಿಸಿ, ಸುಮಾರು 35 ಕೋಟಿ ರು. ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿದೆ. ಈ ಕಾರ್ಯಾಚರಣೆಯನ್ನು ಬಿಡಿಎ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ಅಭಿಯಂತರ ಅಧಿಕಾರಿ-1, ಪಶ್ಚಿಮ ವಿಭಾಗದ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನೆರವೇರಿಸಲಾಯಿತು.

ರಾಷ್ಟ್ರೀಯ ರಸ್ತೆ ಸುರಕ್ಷತಾ ಜಾಗೃತಿ ರ‍್ಯಾಲಿ

ಬೆಂಗಳೂರು: ಬ್ರಿಗೇಡ್ ಮೆಡೋಸ್‌ನ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಆಸ್ಪತ್ರೆ ಹಾಗೂ ಕಗ್ಗಲೀಪುರ ಪೊಲೀಸ್ ಠಾಣೆ ಸಹಯೋಗದೊಂದಿಗೆ ರಾಷ್ಟ್ರೀಯ ರಸ್ತೆ ಸುರಕ್ಷತಾ ಜಾಗೃತಿ ರ‍್ಯಾಲಿ ಆಯೋಜಿಸಲಾಗಿತ್ತು. ರ‍್ಯಾಲಿ ಕನಕಪುರ ಮುಖ್ಯ ರಸ್ತೆಯ ಐಬಿಎ ಇನ್ಸಿಟ್ಯೂಟ್ ಬಳಿ ಪ್ರಾರಂಭವಾಗಿ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ರಸ್ತೆ ಸುರಕ್ಷತಾ ಜಾಗೃತಿ ಫಲಕಗಳನ್ನು ಹಿಡಿದು ಸುರಕ್ಷಿತ ರಸ್ತೆ ಅಭ್ಯಾಸಗಳ ಮಹತ್ವವನ್ನು ಸಾರುತ್ತಾ ಸಾರ್ವಜನಿಕ ಘೋಷಣೆಗಳನ್ನು ಕೂಗುತ್ತಾ ಸಾಲುಹುಣಸೆ ಬ್ರಿಗೇಡ್ ಮೆಡೋಸ್‌ನಲ್ಲಿ ಮುಕ್ತಾಯಗೊಳಿಸಿದರು. ಕಗ್ಗಲೀಪುರ ಪೋಲಿಸ್ ಠಾಣಾ ಇನ್ಸ್‌ಪೆಕ್ಟರ್ ಕೆ.ವೆಂಕಟೇಶ್ ಮಾತನಾಡಿ, ಸಾರ್ವಜನಿಕರಲ್ಲಿ ರಸ್ತೆ ಸುರಕ್ಷತೆ, ಸಂಚಾರ ನಿಯಮಗಳ ಅನುಸರಣೆ ಮತ್ತು ರಸ್ತೆ ಅಪಘಾತಗಳ ತಡೆಗಟ್ಟುವಿಕೆಯ ಅಗತ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಕೈಗೊಂಡಿರುವ ರ‍್ಯಾಲಿಗೆ ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ಸ್ಪಂದನೆ ನೀಡುತ್ತಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ಬೆಂಗಳೂರು ದಕ್ಷಿಣ ಜಿಲ್ಲೆಯ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಡಿ.ಎಸ್.ರಾಜೇಂದ್ರ, ಸೇಂಟ್‌ಜಾನ್ಸ್ ನ್ಯಾಷನಲ್ ಅಕಾಡೆಮಿ ಆಫ್ ಹೆಲ್ತ್ ಸೈನ್ಸಸ್‌ನ ನಿರ್ದೇಶಕ ರೆವರೆಂಡ್ ಫಾದರ್ ಜೇಸುದಾಸ್ , ಅಸೋಸಿಯೇಟ್ ಡೈರೆಕ್ಟರ್ ರೆವರೆಂಡ್ ಡಾ. ಫಾದರ್ ವಿಲ್ಸನ್ ಚೆರ್ವಿಲ್, ಲತಾ ಮಂಜುನಾಥ್ ಭಾಗವಹಿಸಿದರು.

ಕ್ಯಾನ್ಸರ್ ಚಿಕಿತ್ಸೆಗೆ ಕಿದ್ವಾಯಿ ಪ್ರಥಮ

ಬೆಂಗಳೂರು: ಬಡರೋಗಿಗಳ ಆಶಾಕಿರಣ ಹಾಗೂ ವಿಶ್ವಮಟ್ಟದಲ್ಲಿ ಪ್ರಖ್ಯಾತಿ ಪಡೆದಿರುವ ರಾಜ್ಯದ



ಪ್ರತಿಷ್ಠಿತ ಕ್ಯಾನ್ಸರ್ ಆಸ್ಪತ್ರೆಯಾದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಕರ್ನಾಟಕದ ಆಸ್ಪತ್ರೆಗಳ ಪೈಕಿ ಪ್ರಥಮ ಸ್ಥಾನ ಪಡೆದಿದೆ. 2025ರಲ್ಲಿದ ವೀಕ್ ಹನ್ಸಾ ಸಂಶೋಧನಾ ಸಮೀಕ್ಷೆಯಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಭಾರತದಲ್ಲಿ 5ನೇ ಸ್ಥಾನ ಪಡೆದಿದೆ. ದೇಶದಲ್ಲಿ ಕ್ಯಾನ್ಸರ್ ಆರೈಕೆಯಲ್ಲಿ ಸರಕಾರಿ ಆಸ್ಪತ್ರೆಗಳ ಪೈಕಿ ಕಿದ್ವಾಯಿ ಮೂರನೇ ಸ್ಥಾನ ಪಡೆದಿರುವುದು ಹೆಮ್ಮೆಯ ವಿಚಾರ. ರಾಜ್ಯದಲ್ಲಿರುವ ಕ್ಯಾನ್ಸರ್ ಆಸ್ಪತ್ರೆಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಕಿದ್ವಾಯಿ ಆಸ್ಪತ್ರೆ ಮುಂಚೂಣಿಯಲ್ಲಿದೆ. ಖಾಸಗಿ ಆಸ್ಪತ್ರೆಗಳಿಗೆ ಹೋಲಿಕೆ ಮಾಡಿದರೆ ಕಿದ್ವಾಯಿ ಕ್ಯಾನ್ಸರ್ ರೋಗಿಗಳ ಚಿಕಿತ್ಸೆಯಲ್ಲಿ ಅತ್ಯುತ್ತಮ ಎಂದು ಸಾಬೀತಾಗಿದೆ. ಕ್ಯಾನ್ಸರ್ ರೋಗಿಗಳಿಗೆ ಉನ್ನತ ದರ್ಜೆಯ ಚಿಕಿತ್ಸೆ ಹಾಗೂ ರೋಗಿಗಳ ಆರೈಕೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಕಿದ್ವಾಯಿ ಆಸ್ಪತ್ರೆ ಹೆಗ್ಗಳಿಕೆಗೆ ಪಾತ್ರವಾಗಿದೆ. ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ವಿಶ್ವದರ್ಜೆಯ ಚಿಕಿತ್ಸೆ ನೀಡುತ್ತಿರುವ ಸರಕಾರಿ ಆಸ್ಪತ್ರೆಯಾಗಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಪಾಶ್ಚಿಮಾತ್ಯ ದೇಶಗಳಿಗೆ ಸರಿಸಮನಾಗಿ ಅತ್ಯಾಧುನಿಕ ಕ್ಯಾನ್ಸರ್ ಆರೈಕೆ ಮತ್ತು ತಂತ್ರಜ್ಞಾನ ಆಧಾರಿತ ಸೇವೆಯನ್ನು ಒದಗಿಸುತ್ತಿದೆ. ಕ್ಯಾನ್ಸರ್ ಬಗ್ಗೆ ಜನಜಾಗೃತಿ ಮೂಡಿಸುವಲ್ಲಿ, ಕ್ಯಾನ್ಸರ್ ತಡೆಗಟ್ಟುವಿಕೆಯಲ್ಲಿ ಮತ್ತು ಆರಂಭಿಕ ಪತ್ತೆಹಚ್ಚುವಿಕೆಯಲ್ಲಿ ಸದಾ ಮುಂಚೂಣಿಯಲ್ಲಿದ್ದೇವೆ. ರಾಜ್ಯದಲ್ಲಿ ಫೆರಿಫೆರಲ್ ಕ್ಯಾನ್ಸರ್ ಘಟಕಗಳ ನಿರ್ಮಾಣ ಮಾಡುವ ಮೂಲಕ ರೋಗಿಗಳಿಗೆ ಶೀಘ್ರದಲ್ಲೆ ತಪಾಸಣೆ ನಡೆಸಿ ಚಿಕಿತ್ಸೆ ನೀಡಲಾಗುತ್ತಿದೆ. ರಾಜ್ಯ ಸರಕಾರ ಕಿದ್ವಾಯಿ ಬೆಳವಣಿಗೆಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ಅವರು ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮದಲ್ಲಿ ಸಚಿವ ಶಿವರಾಜ್ ತಂಗಡಗಿ

ಫೆಬ್ರವರಿ 10ರೊಳಗೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ ಸಲ್ಲಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಧುಸೂದನ್ ನಾಯಕ್ ಅವರ ನೇತೃತ್ವದ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಜನವರಿ ಅಂತ್ಯ ಅಥವಾ ಫೆಬ್ರವರಿ 10ರೊಳಗೆ ಸರಕಾರಕ್ಕೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಸಲ್ಲಿಸುವ ಸಾಧ್ಯತೆ ಇದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಯನ ಸಭಾಂಗಣದಲ್ಲಿ ಬುಧವಾರ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಆಯೋಜಿಸಿದ್ದ ಅಂಬಿಗರ ಚೌಡಯ್ಯ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ಅಂಕಿ ಅಂಶಗಳ ಕ್ರೋಢೀಕರಣ ನಡೆಯುತ್ತಿದ್ದು, ವರದಿ ಶೀಘ್ರ ಸಲ್ಲಿಸಲಿದ್ದಾರೆ. ಈ ವರದಿಯಿಂದ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಗುರುತಿಸಿ ಸರಕಾರದ ಯೋಜನೆ ತಲುಪಿಸಲು ಸಾಧ್ಯವಾಗಲಿದೆ. ಅಲ್ಲದೆ, ಕೆಲವರು ಯಾವುದೇ ಮಾಹಿತಿ ಕೇಳಿದರೂ ನಮ್ಮ ಸಮುದಾಯವರು ಅಷ್ಟಿದ್ದಾರೆ, ಇಷ್ಟಿದ್ದಾರೆ ಅನ್ನುತ್ತಾರೆ. ವರದಿಯಿಂದ ವಾಸ್ತವ ಅಂಶ ಗೊತ್ತಾಗಲಿದೆ ಎಂದರು.

ಹಿಂದುಳಿದ ವರ್ಗಗಳ ಬಗ್ಗೆ ಮುಖ್ಯಮಂತ್ರಿಗಳು ವಿಶೇಷ ಕಾಳಜಿ ಹೊಂದಿದ್ದಾರೆ. ಈ ಹಿಂದಿನ ಸರಕಾರಗಳು ನಿಗಮಕ್ಕೆ ಮೊದಲು ಐದು ಕೋಟಿಯಷ್ಟೇ ಅನುದಾನ ನೀಡುತ್ತಿದ್ದರು. ಕಳೆದ ವರ್ಷ ಮುಖ್ಯಮಂತ್ರಿಗಳ ಬಳಿ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಇಟ್ಟಾಗ, ಅದಕ್ಕೆ ಸ್ಪಂದಿಸಿ ಇಲಾಖೆಯ ಎಲ್ಲ ನಿಗಮಗಳಿಗೆ 1,600 ಕೋಟಿ ಅನುದಾನ ಒದಗಿಸಿದ್ದರು. ಈ ಪೈಕಿ 23.24 ಕೋಟಿ ಅನುದಾನವನ್ನು ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ ನೀಡಲಾಗಿದೆ. ಅಲ್ಲದೆ, ಗಂಗಾ ಕಲ್ಯಾಣ ಯೋಜನೆಯಡಿ ನೀಡುತ್ತಿದ್ದ ಘಟಕದ ವೆಚ್ಚವನ್ನು 2.50 ಲಕ್ಷದಿಂದ 3.75ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ. ಹಿಂದಿನ ಸರಕಾರ ಮೂರುವರೆ ವರ್ಷದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಒಂದೇ ಒಂದು ಕೊಳವೆ ಬಾವಿ ಕೊರೆದಿಲ್ಲ. ನಾನು ಇಲಾಖೆ ಸಚಿವನಾದ ಬಳಿಕ 18 ಸಾವಿರ ಕೊಳವೆ ಬಾವಿ ಕೊರೆಸಲಾಗಿದೆ. ಇನ್ನು ಹಿಂದುಳಿದ ವರ್ಗಗಳ ಮಕ್ಕಳ ವಿದೇಶ ವ್ಯಾಸಂಗಕ್ಕೆ 20 ಲಕ್ಷ ರು. ಸಾಲ ನೀಡಲಾಗುತ್ತಿತ್ತು. ನಾವು ಆ ಮೊತ್ತವನ್ನು ಶೂನ್ಯ ಬಡ್ಡಿದರಲ್ಲಿ 50 ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಯನ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಂಬಿಗರ ಚೌಡಯ್ಯ ಜಯಂತಿಯನ್ನು ಸಚಿವ ಶಿವರಾಜ್ ತಂಗಡಗಿ ಉದ್ಘಾಟಿಸಿದರು.

> ಬೆಂಗಳೂರಿನಲ್ಲಿ ಅಂಬಿಗರ ಚೌಡಯ್ಯ ಅವರ ಪ್ರತಿಮೆಯನ್ನು ನಿರ್ಮಾಣ ಮಾಡಲಾಗುವುದು. ಪ್ರತಿಮೆ ನಿರ್ಮಾಣಕ್ಕಾಗಿ ಈಗಾಗಲೇ ಸ್ಥಳ ಹುಡುಕಾಟ ನಡೆಸಿದ್ದೇವೆ. ಸ್ಥಳ ಗುರುತಿಸಿದ ಬಳಿಕ ಇಲಾಖೆ ವತಿಯಿಂದ ಪ್ರತಿಮೆ ನಿರ್ಮಾಣವನ್ನು ಬೆಂಗಳೂರಿನಲ್ಲಿ ಮಾಡಲಾಗುವುದು.
> – ಶಿವರಾಜ್ ತಂಗಡಗಿ ಸಚಿವರು

ಮಹಾನ್ ನಿಷ್ಠುರ ಮಾನವತಾವಾದಿ ಚೌಡಯ್ಯ: ಹನ್ನೆರಡನೆಯ ಶತಮಾನದ ಬಸವಣ್ಣನವರ ವಚನ ಚಳವಳಿ ಹುಟ್ಟುಹಾಕಿದ ಹಲವಾರು ಪ್ರತಿಭೆಗಳಲ್ಲಿ ಅಂಬಿಗರ ಚೌಡಯ್ಯನವರು ಅಗ್ರಸ್ಥಾನದಲ್ಲಿ ನಿಲ್ಲುತ್ತಾರೆ. ತಮ್ಮ ವಚನಗಳಲ್ಲಿ ವೈಚಾರಿಕ ನಿರೂಪಣೆಯ ಧಾರೆಯನ್ನು ಹರಿಸುವ ಮೂಲಕ ನಿಷ್ಠುರ ಮಾನವತಾವಾದಿ ಎಂದೇ ಹೆಸರಾಗಿದ್ದವರು. ಶೋಷಣೆಗೆ ಒಳಗಾಗಿ ದ್ದ ಪರಿಸರದಲ್ಲಿ ಹುಟ್ಟಿ ಬೆಳೆದ ಚೌಡಯ್ಯನವರು ತಮ್ಮ ಸಮುದಾಯದ ಬದಲಾವಣೆಯತ್ತ ಗಮನ ಹರಿಸಿದ್ದರು. ಶರಣರು ತಮ್ಮ ದಿಟ್ಟತನದಿಂದ ಗುರುತಿಸಿಕೊಂಡವರು. ಸಮಾಜದಲ್ಲಿನ ದುರ್ಗುಣಗಳ ಕುರಿತು ನಿರ್ದಾಕ್ಷಿಣ್ಯವಾಗಿ ಹಲವು ಅಂಶಗಳನ್ನು ಖಂಡಿಸಿದ್ದಾರೆ. ಧಾರ್ಮಿಕ ಹೆಸರಿನಲ್ಲಿ ನಡೆಯುವ ಮಳಸ, ವಂಚನೆ, ಲಿಂಗಬೇಧ, ತಾರತಮ್ಯಗಳನ್ನು ಅವರು ಖಂಡಿಸಿದ್ದರು ಎಂದು ನೆನೆದರು.

ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್, ರೇಷ್ಮೆ ಮಾರುಕಟ್ಟೆ ಮಂಡಳಿ ಅಧ್ಯಕ್ಷ ಗಂಗಾಧರ್, ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಕೆ.ಮಾನಸ, ಇಲಾಖೆ ಕಾರ್ಯದರ್ಶಿ ಜೆ. ಮಂಜುನಾಥ್, ನಿರ್ದೇಶಕಿ ಕೆ.ಎಂ.ಗಾಯಿತ್ರಿ, ಪ್ರಾಧ್ಯಾಪಕ ಡಾ.ಸ್ವಾಮಿ, ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಗ್ರಾಮೀಣ ಶಾಲೆಗಳನ್ನು ಮುಚ್ಚುವ ಯತ್ನ: ವೀಣಾ ನಾಯ್ಕ್

ಕೆಪಿಎಸ್ ಮ್ಯಾಗ್ನೆಟ್ ಯೋಜನೆ ರಾಜ್ಯ ಸರಕಾರ ಹಿಂಪಡೆಯಲಿ

ಸುದ್ದಿಗೋಷ್ಠಿಯಲ್ಲಿ ಸರಕಾರಿ ಶಾಲೆ ಉಳಿಸಿ ಆಂದೋಲನದ ರಾಜ್ಯಾಧ್ಯಕ್ಷೆ ವೀಣಾ ನಾಯ್ಕ್ ಮಾತನಾಡಿದರು.

ಬೆಂಗಳೂರು: ಸರಕಾರಿ ಶಾಲೆಗಳನ್ನು ವಿಲೀನಗೊಳಿಸಿ ಕೆಪಿಎಸ್-ಮ್ಯಾಗ್ನೆಟ್ ಶಾಲೆಗಳನ್ನಾಗಿ ರೂಪಿಸುವ ರಾಜ್ಯ ಸರಕಾರದ ತೀರ್ಮಾನ ಬಡ ಮತ್ತು ಗ್ರಾಮೀಣ ಮಕ್ಕಳ ಶಿಕ್ಷಣ ಹಕ್ಕನ್ನು ಕಸಿಯುವ ಕರಾಳ ಕ್ರಮವಾಗಿದೆ ಎಂದು ಸರಕಾರಿ ಶಾಲೆ ಉಳಿಸಿ ಆಂದೋಲನದ ರಾಜ್ಯಾಧ್ಯಕ್ಷೆ ವೀಣಾ ನಾಯ್ಕ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ-2020ನ್ನು ವಿರೋಧಿಸಿ ರಾಜ್ಯ ಶಿಕ್ಷಣ ನೀತಿ ರೂಪಿಸಿದ ಕಾಂಗ್ರೆಸ್ ಸರಕಾರವೇ ಈಗ ಅದೇ ಎನ್‌ಇಪಿ ಅಂಶಗಳನ್ನು ಜಾರಿಗೊಳಿಸಲು ಮುಂದಾಗಿದೆ. ಶಾಲಾ ಸಂಕೀರ್ಣ ತತ್ವದ ಹೆಸರಿನಲ್ಲಿ ರಾಜ್ಯದ 25,683 ಸರಕಾರಿ ಶಾಲೆಗಳನ್ನು 700 ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳಲ್ಲಿ ವಿಲೀನಗೊಳಿಸುವ ಮೂಲಕ ಗ್ರಾಮೀಣ ಶಾಲೆಗಳನ್ನು ಶಾಶ್ವತವಾಗಿ ಮುಚ್ಚುವ ಯತ್ನ ನಡೆಯುತ್ತಿದೆ ಎಂದರು.

ಮ್ಯಾಗ್ನೆಟ್ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ಸಾರಿಗೆ ವ್ಯವಸ್ಥೆಯ ಜವಾಬ್ದಾರಿ ಪೋಷಕರ ಮೇಲೆ ಹಾಕಲಾಗಿದೆ. ಅಲ್ಲದೆ ಶಾಲೆಗಳಿಗೆ ಹೊರಗುತ್ತಿಗೆ, ಸ್ವಯಂ ಆದಾಯ ಸೃಷ್ಟಿ ಹಾಗೂ ಕಾರ್ಪೊರೇಟ್ ದೇಣಿಗೆಗಳ ವ್ಯವಸ್ಥೆ ಮಾಡಿರುವುದು ಮುಂದಿನ ದಿನಗಳಲ್ಲಿ ಶಿಕ್ಷಣ ಖಾಸಗೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಈ ಯೋಜನೆಗಾಗಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ 2,500 ಕೋಟಿ ರು. ಸಾಲ, ಕಲ್ಯಾಣ ಕರ್ನಾಟಕ ಹಾಗೂ ಗಣಿಗಾರಿಕಾ ಪುನಶ್ಚೇತನ ನಿಧಿಗಳಿಂದ ಹಣ ಬಳಸಿರುವುದನ್ನು ಜನಕಲ್ಯಾಣ ನಿಧಿಗಳ ದುರುಪಯೋಗ ಎಂದರು.

> ಸರಕಾರಿ ಶಾಲೆಗಳನ್ನು ವಿಲೀನಗೊಳಿಸಿ ಕೆಪಿಎಸ್ -ಮ್ಯಾಗ್ನೆಟ್ ಶಾಲೆಗಳನ್ನಾಗಿ ರೂಪಿಸುವ ನಿರ್ಧಾರದ ವಿರುದ್ಧ ರಾಜ್ಯಾದ್ಯಂತ ಪಾಲಕರು ಮತ್ತು ಗ್ರಾಮಸ್ಥರು ಪ್ರತಿಭಟನೆ ನಡೆಸುತ್ತಿದ್ದು, ಜನಾಭಿಪ್ರಾಯವನ್ನು ಧಿಕ್ಕರಿಸಿರುವ ಸರಕಾರದ ನಿರಂಕುಶ ಕ್ರಮವನ್ನು ಎಲ್ಲ ವಿದ್ಯಾರ್ಥಿ ಸಂಘಟನೆಗಳು ಖಂಡಿಸಿವೆ. ತಕ್ಷಣವೇ ಯೋಜನೆಯನ್ನು ಹಿಂಪಡೆಯಬೇಕು ಮತ್ತು ಸರಕಾರಿ ಶಾಲೆಗಳಿಗೆ ಶಿಕ್ಷಕರು ಹಾಗೂ ಮೂಲಸೌಕರ್ಯ ಒದಗಿಸಿ ಅಭಿವೃದ್ಧಿಪಡಿಸಬೇಕು.
> – ವೀಣಾ ನಾಯ್ಕ್ ಸರಕಾರಿ ಶಾಲೆ ಉಳಿಸಿ ಆಂದೋಲನದ ರಾಜ್ಯಾಧ್ಯಕ್ಷೆ

ಬಾರ್ ಕೌನ್ಸಿಲ್ ಚುನಾವಣೆಯಲ್ಲಿ ಎಸ್ಸಿ, ಎಸ್ಟಿ ಅಭ್ಯರ್ಥಿ ಗೆಲ್ಲಿಸಿ

ಬೆಂಗಳೂರು: ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಕೀಲರ ಸಂಘದ ರಾಜ್ಯ ಮಟ್ಟದ ಸಮಾವೇಶ ಹಾಗೂ 2ನೇ ವರ್ಷದ ವಾರ್ಷಿಕೋತ್ಸವ ಕುರಿತು ಚರ್ಚಿಸಲು ಗಾಂಧಿ ನಗರದ ಕಾನಿಷ್ಕಾ ಹೋಟೆಲ್‌ನಲ್ಲಿ ಬುಧವಾರ ಪೂರ್ವಭಾವಿ ಸಭೆ ಆಯೋಜಿಸಲಾಗಿತ್ತು.

ಈ ವೇಳೆ ಮಾತನಾಡಿದ ಸಂಘದ ಅಧ್ಯಕ್ಷ ಎಂ. ಮುನಿಯಪ್ಪ, ದೇಶದ ಎಲ್ಲ ಬಾರ್ ಕೌನ್ಸಿಲ್‌ನಲ್ಲಿ ಮತ್ತು ಅದರ ಚುನಾವಣೆಗಳಲ್ಲಿ ಮೀಸಲಾತಿ ಇಲ್ಲ, ಅದಕ್ಕಾಗಿ ಹೋರಾಟ ಮಾಡಬೇಕಿದೆ. ಹಾಗೆಯೇ ಬಾರ್ ಕೌನ್ಸಿಲ್ ಮತ್ತು ವಕೀಲರ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ಪಂಗಡದ ಅಭ್ಯರ್ಥಿಯನ್ನು ಗೆಲ್ಲಿಸಲು ಶ್ರಮ ಪಡಬೇಕು. ಏಪ್ರಿಲ್‌ನಲ್ಲಿ ರಾಜ್ಯಮಟ್ಟದ ಸಮಾವೇಶ ಮಾಡಲು ರಾಜ್ಯಾದ್ಯಂತ ಸಂಘವನ್ನು ಬೆಳೆಸಲು ಎಲ್ಲರೂ ಶ್ರಮಿಸಬೇಕು. ಎಲ್ಲ ವಕೀಲರು ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ದೇಶಕ್ಕೆ ಮಾದರಿಯಾಗುವ ಸಂಘವನ್ನು ಕಟ್ಟಬೇಕು. ಮುಂದಿನ ಪೀಳಿಗೆಗೆ ಈ ಸಂಘ ಆದರ್ಶವಾಗಬೇಕು. ಸಂಘದ ಕೇಂದ್ರ ಕಚೇರಿಯನ್ನು ಮಾಡುವಲ್ಲಿ ಎಲ್ಲರೂ ಕೆಲಸ ಮಾಡಬೇಕು, ಮಾರ್ಗದರ್ಶನ ಮಾಡಬೇಕು ಎಂದರು.

ಈ ವೇಳೆ ಸಂಘದ ಉಪಾಧ್ಯಕ್ಷ ಡಾ.ವೆಂಕಟೇಶ್ ಕೆ.ಪಿ., ಪ್ರಧಾನ ಕಾರ್ಯದರ್ಶಿ ಮುನಿರಾಜ್ ಎಸ್.ಎಂ, ಖಜಾಂಚಿ ಟಿ.ಎಲ್.ನಾಗರಾಜು, ನ್ಯಾಯವಾದಿ ಲೋಕನಾಥ್, ಆನೇಕಲ್ ವಕೀಲರ ಅಧ್ಯಕ್ಷ ಫಟಾಫಟ್ ಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಚಲನಚಿತ್ರ ನಿರ್ದೇಶಕ ಜಡೇಶ್, ನ್ಯಾಯವಾದಿ ಬಾಲನ್, ಸಂಘದ ಉಪಾಧ್ಯಕ್ಷ ಡಾ.ವೆಂಕಟೇಶ್ ಕೆ.ಪಿ., ಪ್ರಧಾನ ಕಾರ್ಯದರ್ಶಿ ಮುನಿರಾಜ್ ಎಸ್.ಎಂ, ಖಜಾಂಚಿ ಟಿ.ಎಲ್.ನಾಗರಾಜು, ನ್ಯಾಯವಾದಿ ಲೋಕನಾಥ್, ಆನೇಕಲ್ ವಕೀಲರ ಅಧ್ಯಕ್ಷ ಫಟಾಫಟ್ ಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬುಧವಾರ ಆಯೋಜಿಸಿದ್ದ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಕೀಲರ ಸಂಘದ ರಾಜ್ಯಮಟ್ಟದ ಸಮಾವೇಶ ಹಾಗೂ 2ನೇ ವರ್ಷದ ವಾರ್ಷಿಕೋತ್ಸವದ ಪೂರ್ವಭಾವಿ ಸಭೆಯಲ್ಲಿ ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಉದ್ಘಾಟಿಸಿದರು.

ಮಸ್ಕತ್‌ನಲ್ಲಿ ವಿಜೃಂಭಣೆಯ ಜನಪದ ಜಾತ್ರೆ

ಚಾಲುಕ್ಯ ಕೂಟ ಮಸ್ಕತ್ ವತಿಯಿಂದ ಒಮಾನ್‌ನ ಮಸ್ಕತ್ ನಗರ ಸಮೀಪದ ಎಂ.ಕೆ. ಫಾರ್ಮ್‌ಹೌಸ್‌ನಲ್ಲಿ ಆಯೋಜಿಸಿದ್ದ ಉತ್ತರ ಕರ್ನಾಟಕದ ಜನಪದ ಜಾತ್ರೆಯಲ್ಲಿ ದೇಶಿಯ ಉಡುಗೆಗಳನ್ನು ತೊಟ್ಟು ಮಹಿಳೆಯರು ಜನಪದ ಜಾತ್ರೆಯನ್ನುವಿಜೃಂಭಿಸಿದರು.

ಬೆಂಗಳೂರು: ಚಾಲುಕ್ಯ ಕೂಟ ಮಸ್ಕತ್ ವತಿಯಿಂದ ಒಮಾನ್‌ನ ಮಸ್ಕತ್ ನಗರ ಸಮೀಪದ ಎಂ.ಕೆ.ಫಾರ್ಮ್‌ಹೌಸ್‌ನಲ್ಲಿ ಉತ್ತರ ಕರ್ನಾಟಕದ ಜನಪದ ಜಾತ್ರೆ ಜ.16ರಂದು ವಿಜೃಂಭಣೆಯಿಂದ ನೆರವೇರಿತು. ಉತ್ತರ ಕರ್ನಾಟಕದ ಸಾಹಿತ್ಯ, ಕಲೆ, ಉಡುಗೆ, ಆಹಾರ ಪದ್ಧತಿ, ಜನಪದ ಸಂಸ್ಕೃತಿಯನ್ನು ವಿದೇಶದಲ್ಲಿ ಪರಿಚಯಿಸುವ ಉದ್ದೇಶದೊಂದಿಗೆ ಆಯೋಜಿಸಿದ್ದ 3ನೇ ವರ್ಷದ ಜಾತ್ರೆ ಯಶಸ್ವಿಯಾಗಿ ನೆರವೇರಿತು.

ಜಾತ್ರೆಗೆ ನಗೆ ಸಾರ್ವಭೌಮ ಗಂಗಾವತಿ ಪ್ರಾಣೇಶ್ ಹಾಗೂ ಹಾಸ್ಯ ಕಲಾವಿದ ಬಸವರಾಜ ಮಹಾಮನೆ ಅವರು ಮುಖ್ಯ ಅತಿಥಿಗಳಾಗಿದ್ದರು. ರಂಗೋಲಿ, ಚಿತ್ರಕಲೆ, ಗ್ರಾಮೀಣ ಕ್ರೀಡೆಗಳು ಸೇರಿ ವಿವಿಧ ಸ್ಪರ್ಧೆಗಳು ಜಾತ್ರೆಯ ವಿಶೇಷ ಆಕರ್ಷಣೆಯಾಗಿದ್ದವು. ಬಣ್ಣಬಣ್ಣದ ರಿಬ್ಬನ್‌ಗಳು, ತೋರಣಗಳಿಂದ ಅಲಂಕರಿಸಿದ್ದ ವೇದಿಕೆ, ಗ್ರಾಮೀಣ ಕ್ರೀಡೆಗಳಲ್ಲಿ ಪುರುಷರು, ಮಹಿಳೆಯರು, ಮಕ್ಕಳು ಉತ್ಸಾಹದಿಂದ ಪಾಲ್ಗೊಂಡಿದ್ದು ಗಮನ ಸೆಳೆಯಿತು. ಈ ವೇಳೆ ಹೇಮಲತಾ ಧರಣಪ್ಪಗೌಡರ ಸೇರಿ ಹಲವರಿದ್ದರು.

ಬೆಂವಿವಿಗೆ ನಿರ್ಮಲಾನಂದನಾಥ ಶ್ರೀ ಭೇಟಿ

ಬೆಂಗಳೂರು: ಶೀಘ್ರದಲ್ಲೇ ಕೆಂಪೇಗೌಡರ ಪ್ರತಿಮೆ, ಕೆಂಪೇಗೌಡರ ಪರಂಪರೆ ಬಿಂಬಿಸುವ ಭವನ ಕಾಮಗಾರಿ ಪೂರ್ಣಗೊಳಿಸುವಂತೆ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದ ನಾಥ ಮಹಾಸ್ವಾಮೀಜಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜ್ಞಾನಭಾರತಿಗೆ ಭೇಟಿ ನೀಡಿ ನಾಡ ಪ್ರಭು ಕೆಂಪೇಗೌಡ ಅಧ್ಯಯನ ಕೇಂದ್ರದ ಕಟ್ಟಡ ಕಾಮಗಾರಿ ವೀಕ್ಷಿಸಿ, ನಾಡಪ್ರಭು ಕೆಂಪೇಗೌಡ ಅಧ್ಯಯನ ಕೇಂದ್ರ ಕಟ್ಟಡದಲ್ಲಿ ಕೆಂಪೇಗೌಡರ 25 ಅಡಿ ಅಶ್ವಾರೂಢ ಕೆಂಪೇಗೌಡರ ಪ್ರತಿಮೆ, ಕೆಂಪೇಗೌಡರ ಪರಂಪರೆ ಬಿಂಬಿಸುವ ಭವನ, ಹವಾ ನಿಯಂತ್ರಣ ಸುಸಜ್ಜಿತ ಸಭಾಂಗಣ, ಆಡಳಿತ ಕಚೇರಿ, ವಸ್ತು ಸಂಗ್ರಹಾಲಯ ನಿರ್ಮಿಸಲಾಗುತ್ತಿದ್ದು, ಶೇ.50ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಬಾಕಿ ಕೆಲಸಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು. ಕುಲಪತಿ ಡಾ.ಜಯಕರ ಎಸ್.ಎಂ, ಕುಲಸಚಿವರಾದ ಕೆ.ಟಿ. ಶಾಂತಲಾ, ಪ್ರೊ.ಸಿ.ಎಸ್. ಕರಿಗಾರ್, ಕೆಂಪೇಗೌಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎಸ್.ಪುಟ್ಟಸ್ವಾಮಯ್ಯ, ಡಾ. ಅಪ್ಪಾಜಿ, ಸಿಂಡಿಕೇಟ್ ಸದಸ್ಯರು, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಇದ್ದರು.



ಬೆಂಗಳೂರು ವಿವಿಯ ಜ್ಞಾನಭಾರತಿ ಕ್ಯಾಂಪಸ್‌ಗೆ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದ ನಾಥ ಮಹಾಸ್ವಾಮೀಜಿ ಕಾಮಗಾರಿ ಪರಿಶೀಲನೆ ನಡೆಸಿದರು.

60 ವರ್ಷ ಮೇಲ್ಪಟ್ಟ ಪತ್ರಕರ್ತರ ಚಿಕಿತ್ಸೆಗೆ ಶೇ.75ರಷ್ಟು ರಿಯಾಯಿತಿ

ಬೆಂಗಳೂರು: 60 ವರ್ಷ ಮೇಲ್ಪಟ್ಟ ಎಲ್ಲ ಪತ್ರಕರ್ತರಿಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಎಲ್ಲ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆಯಲ್ಲಿ ಶೇ.75ರಷ್ಟು ರಿಯಾಯಿತಿ ನೀಡಲಾಗುವುದು. ಅಲ್ಪ ಶುಲ್ಕ ಪಾವತಿಸಿದರೆ ಸಾಕು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಇಲಾಖೆ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಹಿರಿಯ ಪತ್ರಕರ್ತರ ವೇದಿಕೆ ಸಂಯುಕ್ತಾಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಿಗೆ ಗುರುತಿನ ಚೀಟಿ ವಿತರಿಸಿ ಮಾತನಾಡಿ, ಸಿಎಂ ಜತೆ ಸಮಾಲೋಚಿಸಿ ಮುಂದಿನ ದಿನಗಳಲ್ಲಿಯೂ ಶೇ.25ರಷ್ಟು ಹಣದ ಬಗ್ಗೆಯೂ ರಿಯಾಯಿತಿ ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಪತ್ರಕರ್ತರು ನಮ್ಮ ಸರಕಾರದ ಜವಾಬ್ದಾರಿ, ನಿವೃತ್ತರಾದ ಹಿರಿಯರಿಗೆ ಗೌರವಯುತ ಜೀವನ ನಡೆಸಲು ಅನುವು ಮಾಡಿಕೊಡಲು ನಾವು ಬದ್ಧರಾಗಿದ್ದೇವೆ. ಸಮಾಜಕ್ಕೆ ಕೊಡುಗೆ ನೀಡಿ ವೃತ್ತಿಯಿಂದ ನಿವೃತ್ತರಾಗಿರುವ ಹಿರಿಯ ಪತ್ರಕರ್ತರಿಗೆ ಪಿಂಚಣಿ ಸೌಲಭ್ಯ ಒದಗಿಸಲಾಗುತ್ತಿದ್ದು, ಇದರ ನಿಯಮಗಳು, ಪ್ರಕ್ರಿಯೆಗಳನ್ನು ಸರಳೀಕೃತಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಹಿರಿಯ ಪತ್ರಕರ್ತರಿಗೂ ಯಶಸ್ವಿನಿ ಯೋಜನೆಯಡಿ ಸೌಲಭ್ಯಗಳನ್ನು ಪಡೆಯಲು ಅವಕಾಶ ಕಲ್ಪಿಸಲು ಕ್ರಮ ವಹಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ, ಜಯದೇವ ಸಂಸ್ಥೆಯ ನಿರ್ದೇಶಕರಾದ ಡಾ. ಬಿ. ದಿನೇಶ್, ಹಿರಿಯ ಪತ್ರಕರ್ತರ ವೇದಿಕೆ ಅಧ್ಯಕ್ಷ ಆರ್.ಪಿ. ಸಾಂಬ ಸದಾಶಿವರೆಡ್ಡಿ, ಹಿರಿಯ ಅಧಿಕಾರಿಗಳು, ಎಂ.ಎ. ಪೊನ್ನಪ್ಪ, ವೆಂಕಟೇಶ್ ಪ್ರಸಾದ್ ಇತರರು ಹಾಜರಿದ್ದರು.

ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ ಬೆಳ್ಳಿ ಮಹೋತ್ಸವದಲ್ಲಿ ಉಪರಾಷ್ಟ್ರಪತಿ ರಾಧಾಕೃಷ್ಣನ್ ಭಾಗಿ

ಇನ್ನೆರಡು ದಶಕದಲ್ಲಿ ವಿಕಸಿತ ಭಾರತದ ಗುರಿ

ವಿಶ್ವವಾಣಿ ಸುದ್ದಿಮನೆ ಮಹದೇವಪುರ

ಭಾರತವು 2047ರ ವೇಳೆಗೆ ವಿಕಸಿತ ಭಾರತವಾಗುವ ಗುರಿ ಹೊಂದಿದೆ. ಭಾರತದ ಯುವಶಕ್ತಿಯು ಈ ಕನಸನ್ನು ನನಸಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ನಗರದ ಐಟಿ ಪಾರ್ಕ್ ರಸ್ತೆಯಲ್ಲಿರುವ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಬೆಳ್ಳಿ ಮಹೋತ್ಸವ ಹಾಗೂ ನೂತನವಾಗಿ ನಿರ್ಮಾಣವಾಗಿರುವ ಇನ್‌ಕ್ಯುಬೇಷನ್ ಸೆಂಟರ್ ಮತ್ತು ಬೆಳ್ಳಿ ಹಬ್ಬ ಆಡಿಟೋರಿಯಂ ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, ಶಿಕ್ಷಣ ಇಲ್ಲದಿದ್ದರೆ ಭವಿಷ್ಯವೇ ಇಲ್ಲ, ಹಿಂದಿನ ಕಾಲದಲ್ಲಿ ಶಾಲೆಗೆ ಹೋಗಲು ಮೂರ‍್ನಾಲ್ಕು ಕಿ.ಮೀ ನಡೆದುಕೊಂಡು ಹೋಗಬೇಕಿತ್ತು. ಆದರೆ ಇದೀಗ ಕೈಗೆಟಕುವ ರೀತಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತಿ ನಿಂತಿವೆ. ಭಾರತದಲ್ಲಿರುವ ಉತ್ತಮ ಯುವ ಸಮೂಹದಿಂದ ನಮ್ಮ ದೇಶ ಸೂಪರ್ ಪವರ್ ಪಡೆದುಕೊಂಡಿದೆ. ಶಿಕ್ಷಣ, ಟೆಕ್ನಾಲಜಿ, ಸೈನ್ಸ್ ಸೇರಿದಂತೆ ಎಲ್ಲಾ ರೀತಿಯಲ್ಲೂ ಮುಂದೆ ಇದ್ದೇವೆ ಎಂದರು.

ಕರೋನಾ ಹೆಚ್ಚಾಗಿ ಸಾವಿರಾರು ಜನ ಸಾವುನೋವುಗಳನ್ನು ಕಂಡರೂ ಪ್ರಧಾನಿ ಮೋದಿಯವರು ನಮ್ಮ ವಿಜ್ಞಾನಿಗಳ ಮೇಲೆ ನಂಬಿಕೆ ಕಳೆದುಕೊಂಡಿಲ್ಲ. ನಮ್ಮ ವಿಜ್ಞಾನಿಗಳು ತಯಾರಿಸಿದ ಲಸಿಕೆ ಅನೇಕರನ್ನು ಬದುಕಿಸಿತು. ನಮ್ಮ ದೇಶ ಉಳಿಸಿಕೊಂಡು ಬೇರೆ ದೇಶಗಳಿಗೂ ಸಹ ಲಸಿಕೆ ನೀಡಿ ಪ್ರಾಣವನ್ನು ಉಳಿಸುವ ಕೆಲಸ ಮೋದಿ ಮಾಡಿದ್ದಾರೆ ಎಂದು ಹೇಳಿದರು.

ಹವಾಮಾನ ಬದಲಾವಣೆ, ಎಐ ನೈತಿಕ ಬಳಕೆಯಂತಹ ಸವಾಲುಗಳನ್ನು ಎದುರಿಸುವಲ್ಲಿ ಭಾರತೀಯ ಸ್ಟಾರ್ಟ್‌ಅಪ್‌ಗಳು ಜಾಗತಿಕ ನಾಯಕರಾಗಿ ಹೊರಹೊಮ್ಮಲಿವೆ. ಭಾರತೀಯ ನವೋದ್ಯಮಗಳು ಪ್ರಸ್ತುತ ಜಾಗತಿಕ ಸವಾಲುಗಳನ್ನು ಪರಿಹರಿಸುವ ಶಕ್ತಿಯನ್ನು ಹೊಂದಿವೆ. ಕಾಲೇಜುಗಳು ಕೇವಲ ಕಲಿಕಾ ಕೇಂದ್ರಗಳಲ್ಲ, ಅವು ನಾವೀನ್ಯತೆಗಳ ಪ್ರಯೋಗಾಲಯಗಳಾಗಬೇಕು. ವಿದ್ಯಾರ್ಥಿಗಳಲ್ಲಿ ರೂಪುಗೊಳ್ಳುವ ಜವಾಬ್ದಾರಿಯುತ ನಾಯಕತ್ವ ಅವರ ಯಶಸ್ಸಿನ ಗುಟ್ಟು ಎಂದರು.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಈ ನಿಟ್ಟಿನಲ್ಲಿ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಯ ಪಾತ್ರ ಶ್ಲಾಘನೀಯ, ಬೆಂಗಳೂರು ಕೇವಲ ಐಟಿ ಕೇಂದ್ರವಲ್ಲ, ಅದು ನವೋದ್ಯಮಗಳ ರಾಜಧಾನಿ. ಇಂದಿನ ಜಗತ್ತನ್ನು ಎಐ, ಡೇಟಾ ಸೈನ್ಸ್, ರೊಬೊಟಿಕ್ಸ್ ಪರಿವರ್ತಿಸುತ್ತಿವೆ ಎಂದರು.

ಮಾಜಿ ರಾಜ್ಯಸಭಾ ಸದಸ್ಯ ಡಾ.ಕೆ.ಸಿ.ರಾಮಮೂರ್ತಿ ಮಾತನಾಡಿ, ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ 25 ವರ್ಷಗಳ ಗುಣಮಟ್ಟದ ಶೈಕ್ಷಣಿಕ ಸೇವೆಯ ಪಯಣವು ನಮಗೆ ಸಾರ್ಥಕತೆಯ ಹೆಮ್ಮೆ ತಂದಿದೆ. ರಾಷ್ಟ್ರೀಯ ಶಿಕ್ಷಣ ಪರಿಸರ ವ್ಯವಸ್ಥೆಗೆ ಪೂರಕವಾದ ಗುಣಮಟ್ಟದ ಶಿಕ್ಷಣ ನೀಡಲು ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆ ಬದ್ಧವಾಗಿದೆ ಎಂದರು.

ಈ ವೇಳೆ ಸಿಎಂಆರ್ ವಿಶ್ವವಿದ್ಯಾಲಯ ಕುಲಾಧಿಪತಿ ಡಾ. ಸಬಿತಾ ರಾಮಮೂರ್ತಿ, ಎನ್‌ಪಿಎಸ್ ಸಮೂಹ ಸಂಸ್ಥೆ ಅಧ್ಯಕ್ಷ ಡಾ.ಕೆ.ಪಿ.ಗೋಪಾಲಕೃಷ್ಣ, ಶಾಸಕಿ ಮಂಜುಳಾ ಲಿಂಬಾವಳಿ, ಸಿಎಂಆರ್ ಜ್ಞಾನಧಾರ ಟ್ರಸ್ಟ್ ಕಾರ್ಯದರ್ಶಿ ಕೆ.ಸಿ.ಜಗನ್ನಾಥ್ ರೆಡ್ಡಿ, ಸಹಕುಲಪತಿ ಜಯದೀಪ್ ಕೆ.ಆರ್.ರೆಡ್ಡಿ, ಏಕ್ಯಾ ಸಮೂಹ ಶಾಲೆಗಳ ಸಂಸ್ಥಾಪಕಿ ಡಾ.ತ್ರಿಸ್ತಾ ರಾಮಮೂರ್ತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಗರದ ಐಟಿ ಪಾರ್ಕ್ ರಸ್ತೆಯಲ್ಲಿರುವ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಬೆಳ್ಳಿ ಮಹೋತ್ಸವ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರಿಗೆ ರಾಧಾಕೃಷ್ಣ ಇರುವ ಶಿಲ್ಪಕಲೆ ನೀಡುವ ಮೂಲಕ ಸ್ವಾಗತಿಸಿದರು. ಈ ವೇಳೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಥ್, ಮಾಜಿ ರಾಜ್ಯಸಭಾ ಸದಸ್ಯ ಡಾ.ಕೆ.ಸಿ. ರಾಮಮೂರ್ತಿ, ಸಿಎಂಆರ್ ವಿವಿ ಕುಲಾಧಿಪತಿ ಡಾ. ಸಬಿತಾ ರಾಮಮೂರ್ತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಇನ್‌ಕ್ಯುಬೇಷನ್ ಸೆಂಟರ್ ಉದ್ಘಾಟನೆ

ಬೆಳ್ಳಿ ಮಹೋತ್ಸವದ ಸ್ಮರಣಾರ್ಥವಾಗಿ ಉದ್ಘಾಟನೆಗೊಂಡ ಸಿಎಂಆರ್ ಐಟಿ ಇನ್‌ಕ್ಯುಬೇಷನ್ ಸೆಂಟರ್ ವಿಶ್ವದರ್ಜೆಯ ನಾವೀನ್ಯತೆಯ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಇದು ಅತ್ಯಾಧುನಿಕ ಮೂಲಸೌಕರ್ಯ, ತಜ್ಞ ಮಾರ್ಗದರ್ಶಕರ ತಂಡ ಮತ್ತು ಉದ್ಯಮ-ಸಮನ್ವಯ ಬೆಂಬಲದ ಮೂಲಕ ಉದಯೋನ್ಮುಖ ನವೋದ್ಯಮಗಳನ್ನು ಮತ್ತು ಯುವ ಉದ್ಯಮಿಗಳನ್ನು ಪೋಷಿಸುವ ಗುರಿ ಹೊಂದಿದೆ. ನವ ಪರಿಕಲ್ಪನೆಗಳಿಗೆ ರೆಕ್ಕೆ ನೀಡಿ ಪೋಷಿಸುವ ಸಂಶೋಧನಾ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ.

ಸಮಾಚಾರ ಸಣ್ಣದಲ್ಲ

ಬಜೆಟ್ ಸಿದ್ಧತೆಗೆ ಸಲಹೆ ಆಹ್ವಾನ

ಬೆಂಗಳೂರು: ಬೆಂಗಳೂರು ಕೇಂದ್ರ ನಗರ ಪಾಲಿಕೆಯ 2026-27ನೇ ಸಾಲಿನ ಆಯವ್ಯಯ ಸಿದ್ಧಪಡಿಸುವ ಪ್ರಕ್ರಿಯೆ ಪ್ರಸ್ತುತ ಪ್ರಗತಿಯಲ್ಲಿದ್ದು, ಈ ಹಿನ್ನೆಲೆ ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ನಾಗರಿಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಸಂಘ ಸಂಸ್ಥೆಗಳು ತಮ್ಮ ಅಮೂಲ್ಯ ಸಲಹೆಗಳನ್ನು ಸಲ್ಲಿಸುವಂತೆ ಕೇಂದ್ರ ನಗರ ಪಾಲಿಕೆ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ಮನವಿ ಮಾಡಿದ್ದಾರೆ. ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಮೂಲ ಸೌಕರ್ಯ, ಸಾರ್ವಜನಿಕ ಆರೋಗ್ಯ, ಸುರಕ್ಷತೆ, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಕಲ್ಯಾಣಕ್ಕೆ ಆದ್ಯತೆ ನೀಡಿ, ಸಮಗ್ರ ಹಾಗೂ ಸುಸ್ಥಿರ ನಗರ ಅಭಿವೃದ್ಧಿಗೆ ಪೂರಕವಾದ ಬಜೆಟ್ ಸಿದ್ಧಪಡಿಸಲು ಅನುವಾಗುವಂತೆ, ಸಾರ್ವಜನಿಕರಿಂದ ತಮ್ಮ ಅಮೂಲ್ಯ ಸಲಹೆಗಳನ್ನು ನೀಡುವಂತೆ ಮನವಿ ಮಾಡಿದ್ದು, ಸಾರ್ವಜನಿಕರು, ಸಂಘ-ಸಂಸ್ಥೆಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಬೆಂಗಳೂರು ಕೇಂದ್ರ ನಗರ ಪಾಲಿಕೆಯ 2026-27ನೇ ಸಾಲಿನ ಆಯವ್ಯಯಕ್ಕೆ ಸಂಬಂಧಿಸಿದಂತೆ ತಮ್ಮ ಸಲಹೆಗಳನ್ನು ನೀಡುವ ಸಲುವಾಗಿ ಉಪ ನಿಯಂತ್ರಕರು (ಹಣಕಾಸು), ಪಿ.ಯು.ಬಿ ಕಟ್ಟಡ, ಎಂ. ಜಿ. ರಸ್ತೆ, ಬೆಂಗಳೂರು ಕಚೇರಿಯ ಮುಖ್ಯದ್ವಾರದ ಸಲಹಾ ಪೆಟ್ಟಿಗೆಯ ಮೂಲಕ ಸಲಹೆ ನೀಡಬಹುದು ಅಥವಾ dcfbcccgmail.com- ಮೇಲ್ ವಿಳಾಸಕ್ಕೆ ಜ.27ರೊಳಗಾಗಿ ಸಲ್ಲಿಸಬಹುದು ಎಂದು ತಿಳಿಸಿದ್ದಾರೆ.

ಒಳನಾಡು ಜಲಮಾರ್ಗ ಮಂಡಳಿ 3ನೇ ಸಭೆ

ಬೆಂಗಳೂರು: ಒಳನಾಡು ಜಲಸಾರಿಗೆ (ಐಡಬ್ಲ್ಯುಟಿ) ವಲಯದ ಸಾಧನೆ ತಿಳಿಸುವ ಮತ್ತು ಅದರ ಭವಿಷ್ಯದ ದೃಷ್ಟಿಕೋನ ವಿವರಿಸುವ ಉದ್ದೇಶದಿಂದ ಒಳನಾಡು ಜಲಮಾರ್ಗ ಅಭಿವೃದ್ಧಿ ಮಂಡಳಿಯ (ಐಡಬ್ಲ್ಯುಡಿಸಿ) 3ನೇ ಸಭೆ ಜ. 23ರಂದು ಕೇರಳದ ಕೊಚ್ಚಿಯಲ್ಲಿ ನಡೆಯಲಿದೆ. ಕೇಂದ್ರ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನೊವಾಲ್ ಅವರು ದಿನವಿಡೀ ನಡೆಯುವ ಅಧಿವೇಶನದ ಅಧ್ಯಕ್ಷತೆ ವಹಿಸಲಿದ್ದಾರೆ. ಬಂದರು, ಹಡಗು ಮತ್ತು ಜಲಮಾರ್ಗಗಳ ರಾಜ್ಯ ಸಚಿವ ಶಂತನು ಠಾಕೂರ್ ಮತ್ತು ವಿವಿಧ ರಾಜ್ಯ ಸರಕಾರಗಳ ಸಚಿವರು ಭಾಗವಹಿಸಲಿದ್ದಾರೆ. ಸಭೆಯಲ್ಲಿ ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವರು ವಿವಿಧ ರಾಜ್ಯಗಳಲ್ಲಿ ಒಳನಾಡು ಜಲಸಾರಿಗೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಹೊಸ ಉಪಕ್ರಮಗಳಿಗೆ ಚಾಲನೆ ನೀಡಲಿದ್ದಾರೆ. ಹಲವಾರು ರಾಜ್ಯಗಳ ಬೆಂಬಲ ಒಪ್ಪಂದಗಳಿಗೆ ಸಹಿ ಹಾಕುವ ನಿರೀಕ್ಷೆಯಿದೆ. ಇದು ಐಡಬ್ಲ್ಯುಟಿ ಯೋಜನೆಗಳಿಗೆ ಕೇಂದ್ರ-ರಾಜ್ಯ ಸಹಯೋಗವನ್ನು ಬಲಪಡಿಸುತ್ತದೆ. ಸಭೆಯು ಒಳನಾಡು ಜಲಮಾರ್ಗಗಳ ನಿಯಂತ್ರಣ ಚೌಕಟ್ಟನ್ನು ಪರಿಶೀಲಿಸುತ್ತದೆ ಮತ್ತು ಚಾಲ್ತಿಯಲ್ಲಿರುವ ಮತ್ತು ಉದ್ದೇಶಿತ ಒಳನಾಡು ಜಲಸಾರಿಗೆ ಯೋಜನೆಗಳಿಗೆ ಸಂಬಂಧಿಸಿದಂತೆ ರಾಜ್ಯಗಳು ಎತ್ತಿದ ಕಳವಳಗಳನ್ನು ಪರಿಹರಿಸುತ್ತದೆ.

ಸಚಿವರ ರಾಜೀನಾಮೆ ಆಗ್ರಹಿಸಿ ಹೋರಾಟ

ಬೆಂಗಳೂರು: ಬಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುವ ಕೆಲಸವನ್ನು ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಮಾಡುತ್ತಾರೆ ಎಂದು ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ

ಆರೋಪಿಸಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದೇ ಕಾರಣಕ್ಕೆ ಮಾನ್ಯ ಅಬಕಾರಿ ಸಚಿವರನ್ನು ಭ್ರಷ್ಟಾಚಾರ ಮಾಡಿಸಿ ಸಿಕ್ಕಿ ಹಾಕಿಸಿದ್ದಾರೆ ಎಂದು ದೂರಿದರು. ವಾಲ್ಮೀಕಿ ಹಗರಣದಲ್ಲೂ ಬೇರೆಯವರ ಕೈಲಿ ಹಗರಣ ಮಾಡಿಸಿ ಅವರನ್ನು ಮನೆಗೆ ಕಳಿಸಿದ್ದಾರೆ. ಇವರು ಕೂಡ ಮನೆಗೆ ಹೋಗುವ ಪರಿಸ್ಥಿತಿ ಬಂದಿದೆ. ಅವರನ್ನು ರಕ್ಷಿಸಲು ಸಾಧ್ಯವಿಲ್ಲ. ಸದನ ಪ್ರಾರಂಭವಾಗಲಿದ್ದು, ಅಲ್ಲಿ ನಾವು ಅವರ ರಾಜೀನಾಮೆಗೆ ಆಗ್ರಹಿಸಿ ಹೋರಾಟ ಮಾಡುತ್ತೇವೆ ಎಂದರು. ತಮ್ಮ ಮಗನನ್ನು ಹೆಸರಲ್ಲಿ ತಂದು ನನ್ನನ್ನು ಟಾರ್ಗೆಟ್ ಮಾಡುವ ಪ್ರಯತ್ನ ಮಾಡಿದ್ದಾರೆಂದು ಅಬಕಾರಿ ಸಚಿವರು ಒಪ್ಪಿಕೊಂಡಿದ್ದಾರೆ. ಬೆಂಕಿ ಇಲ್ಲದೇ ಹೊಗೆ ಆಡುವುದಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕಿದೆ. ಇದರಲ್ಲಿ ಸಚಿವರು ಸಿಲುಕಿಕೊಂಡಿದ್ದು ಸತ್ಯ. ಮುಖ್ಯಮಂತ್ರಿಗಳೂ ಇದರಲ್ಲಿ ಕೈಜೋಡಿಸಿದ್ದಾರೆಂಬುದು ಅನುಮಾನ ಎಂದರು.

ಅವಘಡ ತಪ್ಪಿಸಲು ಮಹತ್ವದ ಕ್ರಮ

ಬೆಂಗಳೂರು: ರಾಜ್ಯದಲ್ಲಿ ಬಸ್ ಅವಘಡವನ್ನು ತಪ್ಪಿಸುವ ನಿಟ್ಟಿನಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಹತ್ವದ ಕ್ರಮ ವಹಿಸಿದ್ದು, ಸ್ಲೀಪರ್ ಬಸ್ ಗಳಲ್ಲಿ 8

ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಖಡಕ್ ಸೂಚನೆ ನೀಡಿದ್ದಾರೆ. ಖಾಸಗಿ ಬಸ್ ಮಾಲೀಕರ ಜತೆಗೆ ಸಭೆ ನಡೆಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಭೆಯಲ್ಲಿ ಕೆಲ ಖಡಕ್ ಸೂಚನೆಗಳನ್ನು ನೀಡಿದ್ದಾರೆ. ಖಾಸಗಿ ಬಸ್‌ಗಳಲ್ಲಿ ಇನ್ನು ಮುಂದೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ರೋಡ್ ಟ್ರಾನ್ಸ್ ಪೋರ್ಟ್ ನಿಯಮ ಜಾರಿಗೊಳಿಸಲಾಗುತ್ತಿದೆ. ಇನ್ನು ಮುಂದೆ ಸ್ಲೀಪರ್ ಬಸ್‌ಗಳಲ್ಲಿ 8 ನಿಯಮಗಳ ಪಾಲನೆ ಕಡ್ಡಾಯವಾಗಿದೆ. ಸ್ಲೀಪರ್ ಬಸ್‌ಗಳಲ್ಲಿ ಚಾಲಕರ ಹಿಂಬದಿ ಡೋರ್ ತೆಗೆಯಬೇಕು. ಸ್ಲೀಪರ್ ಬರ್ತ್ ಗಳಲ್ಲಿ ಸ್ಲೈಡರ್ ತೆಗೆಯಬೇಕು ಎಂಬುದಾಗಿ ಸೂಚಿಸಿದ್ದಾರೆ. ಫೈರ್ ಡಿಟೆಕ್ಷನ್‌ನ್ನು ತಿಂಗಳೊಳಗೆ ಕಡ್ಡಾಯವಾಗಿ ಅಳವಡಿಸಬೇಕಾಗಿದ್ದು, 10 ಕೆ.ಜಿ ತೂಕದ ಅಗ್ನಿಶಾಮಕ ಸಾಧನ ಅಳವಡಿಸುವುದು ಕಡ್ಡಾಯವಾಗಿದೆ. ಚಾಸಿಸ್ ಅನಧಿಕೃತ ವಿಸ್ತರಣೆಯನ್ನು ನಿರ್ಬಂಧಿಸಲಾಗಿದ್ದು, ಅನುಮೋದಿತ ಟೆಸ್ಟಿಂಗ್ ಏಜೆನ್ಸಿಯಿಂದ ಪ್ರಮಾಣ ಪತ್ರ ಕಡ್ಡಾಯವಾಗಿದೆ. ಪ್ರಯಾಣಿಕರ ಸೇಫ್ಟಿ ಮಾನದಂಡ ಇದ್ದರೆ ಮಾತ್ರ ಎಫ್ ಸಿ ಮಾಡಬೇಕು. ಬಸ್ ಕವಚ ನಿರ್ಮಾಣ ಸಂಸ್ಥೆ ಸಿಂಧುತ್ವ ಪರಿಶೀಲಿಸಿದ ಬಳಿಕವೇ ನೋಂದಣಿ ಎಂಬುದಾಗಿ ಖಾಸಗಿ ಬಸ್ ಮಾಲೀಕರ ಜತೆಗಿನ ಸಭೆಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಖಡಕ್ ಸೂಚನೆ ನೀಡಿದ್ದಾರೆ.

ಕಾಂಗ್ರೆಸ್ ಸರಕಾರಕ್ಕೆ ಜನತೆಯ ಅಭಿವೃದ್ಧಿಗಿಂತಲೂ ದ್ವೇಷ ರಾಜಕಾರಣ ಮುಖ್ಯ: ಬಿವೈ ವಿಜಯೇಂದ್ರ

ಕೇಂದ್ರ ಸರಕಾರದ ಟೀಕೆಗೆ ರಾಜ್ಯಪಾಲರ ದುರ್ಬಳಕೆ

ಬೆಂಗಳೂರು: ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಸರಕಾರದ ವಿರುದ್ಧದ ಅಂಶಗಳನ್ನು ಅಳವಡಿಕೆ ಮಾಡದೇ ಆರೋಗ್ಯಕರ ಪ್ರಜಾಪ್ರಭುತ್ವ, ಸಕಾರಾತ್ಮಕ ಒಕ್ಕೂಟ ವ್ಯವಸ್ಥೆಯಡಿ ವಿಧಾನ

ಮಂಡಲದ ಉಭಯ ಸದನಗಳ ಅಧಿವೇಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅನುವು ಮಾಡಿಕೊಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ.

ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿರುವ ಅವರು, ರಾಜ್ಯಪಾಲರು ಭಾಷಣ ಮಾಡಲು ಎಲ್ಲಿಯೂ ವಿರೋಧಿಸಿಲ್ಲ. ರಾಜ್ಯ ಸರಕಾರ ಸುಳ್ಳು ಹಾಗೂ ತಪ್ಪು ಮಾಹಿತಿಯನ್ನು ಹರಡುವುದಕ್ಕೆ ಮತ್ತು ಜನಸಾಮಾನ್ಯರನ್ನು ಕೇಂದ್ರ ಸರಕಾರದ ವಿರುದ್ಧ ಅಪಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವುದನ್ನು ಮಾತ್ರ ವಿರೋಧಿಸಿದ್ದಾರೆ. ರಾಜ್ಯ ಸರಕಾರ ನಿರಂತರವಾಗಿ ಕೇಂದ್ರದ ಯೋಜನೆಗಳ ವಿರುದ್ಧ ಅಪಪ್ರಚಾರ ಮಾಡುತ್ತಿದೆ. ಈ ರೀತಿಯ ಅಪಪ್ರಚಾರಕ್ಕೆ ಸಂವಿಧಾನಾತ್ಮಕ ಹುದ್ದೆಯಲ್ಲಿರುವ ರಾಜ್ಯಪಾಲರನ್ನೂ ಬಳಸಿಕೊಳ್ಳುತ್ತಿರುವುದು ದುರದೃಷ್ಟಕರ. ಹಾಗೂ ಇದು ಸಂವಿಧಾನ ವಿರೋಧಿ ಎಂದು ಅಭಿಪ್ರಾಯಪಟ್ಟಿದ್ದಾರೆ.

ರಾಷ್ಟ್ರದ ಏಕತೆ ಮತ್ತು ಅಖಂಡತೆಗೆ ಧಕ್ಕೆ ತರಬಲ್ಲಂತಹ ಹೇಳಿಕೆಯನ್ನು ನಾನು ಓದುವುದಿಲ್ಲ ಎಂದು ರಾಜ್ಯಪಾಲರು ಹೇಳಿರುವುದು ಸ್ವಾಗತಾರ್ಹ. ಸರಕಾರದ ಈ ರೀತಿಯ ನಡೆ ಖಂಡನೀಯ ಎಂದಿರುವ ಅವರು, ಕಾಂಗ್ರೆಸ್ ಸರಕಾರಕ್ಕೆ ಜನತೆಯ ಅಭಿವೃದ್ಧಿಗಿಂತಲೂ ದ್ವೇಷದ ರಾಜಕಾರಣ ಮುಖ್ಯವಾಗಿದೆ. ರಾಜ್ಯಪಾಲರ ತೀರ್ಮಾನದ ನಂತರದಲ್ಲಾದರೂ ಕಾಂಗ್ರೆಸ್ ಸರಕಾರ ತನ್ನ ನಡೆಯನ್ನು ಸುಧಾರಿಸಿಕೊಳ್ಳುವುದು ಉತ್ತಮ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಸರಕಾರ ಕಳೆದ ಎಂಟು ಅಧಿವೇಶನಗಳಲ್ಲಿ 5 ಬಾರಿ ಕೇಂದ್ರದ ವಿರುದ್ಧ ವಿಧಾನ ಮಂಡಲದಲ್ಲಿ ಐದು ನಿರ್ಣಯಗಳನ್ನು ಅಂಗೀಕರಿಸಿ ರಾಜ್ಯದ ಜನತೆ ನೀಡಿರುವ ಜನಾದೇಶದ ಬಹುಮತವನ್ನು ದುರುಪಯೋಗ ಮಾಡುತ್ತಾ ಬಂದಿದೆ. ಗ್ಯಾರಂಟಿ ಯೋಜನೆಗಳ ನೆಪದಲ್ಲಿ ರಾಜ್ಯದ ಅಭಿವೃದ್ಧಿಯನ್ನು ಬದಿಗೊತ್ತಿ ಸರಕಾರದ ಆರ್ಥಿಕ ಸಾಮರ್ಥ್ಯ ಕುಸಿದು ಹೋಗಿದ್ದು ಯಾವುದೇ ಕ್ಷಣದಲ್ಲಿ ರಾಜ್ಯದ ಬೊಕ್ಕಸ ದಿವಾಳಿ ಆಗುವ ಲಕ್ಷಣಗಳಿವೆ. ಹೀಗಾಗಿ ಕೇಂದ್ರ ಸರಕಾರದ ಮೇಲೆ ಸುಳ್ಳು ಆಪಾದನೆ ಮಾಡುತ್ತಾ ರಾಜ್ಯದ ಜನರಲ್ಲೂ ದ್ವೇಷ ಬಿತ್ತುವ ಕೆಲಸ ಮಾಡುತ್ತಿದೆ. ವಿಬಿ ಜಿ ರಾಮ್ ಜಿ ಯೋಜನೆ ವಿರುದ್ಧ ವಿಧಾನ ಮಂಡಲದಲ್ಲಿ ವಿಶೇಷ ಚರ್ಚೆಗೆ ಅಧಿವೇಶನ ಕರೆದು ಮತ್ತೊಮ್ಮೆ ಕೇಂದ್ರ ಸರಕಾರದ ವಿರುದ್ಧ ಹುಯಿಲು ಎಬ್ಬಿಸಲು ಹುನ್ನಾರ ನಡೆಸಿದೆ ಎಂದು ಬಿವೈವಿ ಟೀಕಿಸಿದ್ದಾರೆ.

ರಾಜ್ಯದ ಜನತೆಗೆ ಕಾಂಗ್ರೆಸ್‌ನಿಂದ ದ್ರೋಹ

ಒಕ್ಕೂಟ ವ್ಯವಸ್ಥೆಯನ್ನು ಬಲವಾಗಿ ಪ್ರತಿಪಾದಿಸುವ ಕಾಂಗ್ರೆಸ್ ಕರ್ನಾಟಕದಲ್ಲಿ ತಾನು ಅಧಿಕಾರದಲ್ಲಿದ್ದೇನೆ ಎಂಬ ಒಂದೇ ಕಾರಣಕ್ಕೆ ಸಂವಿಧಾನಕ್ಕೆ ಅಪಚಾರ ಎಸಗುವ ರೀತಿಯಲ್ಲಿ ಶಾಸನಸಭೆಯನ್ನು ಕೇಂದ್ರ ಸರಕಾರದ ವಿರುದ್ಧ ದ್ವೇಷ ಸಾಧಿಸಲು ಬಳಕೆ ಮಾಡುತ್ತಿರುವ ಕ್ರಮ ಪ್ರಜಾಪ್ರಭುತ್ವಕ್ಕೆ ಎಸಗುವ ಅಪಚಾರ ಅಲ್ಲದೆ ಮತ್ತೇನಲ್ಲ. ಸಂವಿಧಾನ ಹಾಗೂ ಒಕ್ಕೂಟ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಿರುವ ಕಾಂಗ್ರೆಸ್ ಸತತವಾಗಿ ಕೇಂದ್ರದ ವಿರುದ್ಧ ವಿಷ ಕಾರುತ್ತ ರಾಜ್ಯದ ಜನತೆಗೆ ದ್ರೋಹ ಮಾಡುತ್ತಿದೆ. ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಗೆ ನಿರಂತರ ಅಪಚಾರ ಎಸಗುತ್ತ ಬಂದಿದೆ. ಕಳೆದ 32 ತಿಂಗಳ ಅವಧಿಯಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ರಾಜ್ಯದ ಜನರ ಹಿತ ಕಾಪಾಡದೆ ನಿರಂತರವಾಗಿ ಕೇಂದ್ರದ ಎನ್‌ಡಿಎ ಸರಕಾರದ ವಿರುದ್ಧ ವಿಧಾನ ಮಂಡಲದಲ್ಲಿ ನಿರ್ಣಯಗಳನ್ನು ಕೈಗೊಂಡು ಒಕ್ಕೂಟ ವ್ಯವಸ್ಥೆ ಭಗ್ನಗೊಳಿಸಲು ಷಡ್ಯಂತ್ರ ರೂಪಿಸುತ್ತಾ ಬಂದಿದೆ ಎಂದು ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಿಮ್ ಟ್ರೈನರ್‌ಗೆ ಕಿರುಕುಳ: ಹರಿಯಾಣದ ವ್ಯಕ್ತಿ ಬಂಧನ

ಬೆಂಗಳೂರು: ಸಾಮಾಜಿಕ ಜಾಲತಾಣಗಳ ಮೂಲಕ ಫಿಟ್ನೆಸ್ ತರಬೇತುದಾರೆಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಆರೋಪಿಯನ್ನು ನಗರದ ದಕ್ಷಿಣ ವಿಭಾಗದ ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

34 ವರ್ಷದ ಫಿಟ್ನೆಸ್ ತರಬೇತುದಾರೆ ನೀಡಿದ ದೂರಿನನ್ವಯ ಹರಿಯಾಣದ ಸುಧೀರ್ ಕುಮಾರ್ ಎಂಬಾತನನ್ನು ಬಂಧಿಸಲಾಗಿದೆ. ಹರಿಯಾಣದ ರೇವಾರಿ ಮೂಲದ ಯುವತಿ ಬೆಂಗಳೂರಲ್ಲಿ ಫಿಟ್ನೆಸ್ ತರಬೇತುದಾರಳಾಗಿ 15 ವರ್ಷಗಳಿಂದ ವಾಸಿಸುತ್ತಿದ್ದರು. ಕಳೆದ ವರ್ಷ ಹರಿಯಾಣದಲ್ಲಿ ಕುಟುಂಬಸ್ಥರ ಮನೆಗೆ ಬಂದಾಗ ದೂರುದಾರಳನ್ನು ನೋಡಿದ್ದ ಸುಧೀರ್ ಕುಮಾರ್, ನಂತರ ಸಾಮಾಜಿಕ ಜಾಲತಾಣಗಳ ಮೂಲಕ ಕಿರುಕುಳ ನೀಡಲಾರಂಭಿಸಿದ್ದ. ಆರೋಪಿತನಿಂದ ಅಪೇಕ್ಷಿಸಲಾರದಷ್ಟು ಅಶ್ಲೀಲ, ಅಸಂಬದ್ಧ ಸಂದೇಶಗಳು ಬರಲಾರಂಭಿಸಿದಾಗ ದೂರುದಾರೆ ಆತನನ್ನು ಬ್ಲಾಕ್ ಮಾಡಿದ್ದರು. ಆದರೂ ಸಹ ಬೇರೆ ಬೇರೆ ಖಾತೆಗಳ ಮೂಲಕ, ವಾಟ್ಸ್ ಆ್ಯಪ್ ಮೂಲಕ ಆರೋಪಿ ತನ್ನ ಚಾಳಿ ಮುಂದುವರೆಸಿದ್ದ ಎಂದು ಯುವತಿಯು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ನಂತರ ಜನವರಿ 12ರಂದು ಬೆಂಗಳೂರಿಗೆ ಬಂದಿದ್ದ ಆರೋಪಿ, ಬನಶಂಕರಿ 3ನೇ ಹಂತದಲ್ಲಿರುವ ಜಿಮ್ ಬಳಿ ತೆರಳಿ ಯುವತಿಯ ಕುರಿತು ಆಕೆಯ ಪರಿಚಿತರ ಬಳಿ ವಿಚಾರಿಸಿದ್ದ. ವಿಚಾರ ತಿಳಿಯುತ್ತಿದ್ದಂತೆ, ಯುವತಿ ಬೆಂಗಳೂರು ದಕ್ಷಿಣ ವಿಭಾಗದ ಮಹಿಳಾ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಇದೀಗ ಸುಧೀರ್ ಕುಮಾರ್‌ನನ್ನು ಬಂಧಿಸಿದ್ದು, ವಿಚಾರಣೆ ನಡೆಯುತ್ತಿದೆ.

ಗುಜರಾತ್ ವಾಹನಗಳಿಗೆ ಕರ್ನಾಟಕದಲ್ಲಿ ಬೇಕಾಬಿಟ್ಟಿ ಎಫ್‌ಸಿ

ನಿಯಮಬಾಹಿರ ಎಫ್‌ಸಿ: ಅಧಿಕಾರಿ ಅಮಾನತು

ಬೆಂಗಳೂರು: ನಿಯಮ ಬಾಹಿರವಾಗಿ ಗುಜರಾತ್ ವಾಹನಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ನೀಡಿದ್ದ ಅಧಿಕಾರಿಗಳಿಗೆ ಅಮಾನತಿನ ಶಿಕ್ಷೆಯನ್ನು ಸಾರಿಗೆ ಇಲಾಖೆ ನೀಡಿದೆ.

ನಿಯಮಬಾಹಿರವಾಗಿ ಎಫ್‌ಸಿ ನೀಡುತ್ತಿದ್ದ ವಿಷಯ ಬಹಿರಂಗವಾಗುತ್ತಿದ್ದಂತೆ, ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಇಡೀ ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿ ಪಡೆದರು. ಬಳಿಕ ಹಿರಿಯ ಮೋಟಾರು ವಾಹನ ನಿರೀಕ್ಷಕ ಅಮಾನತುಗೊಳಿಸುವಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೂಚನೆ ನೀಡಿದ್ದರಿಂದ ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ.

ಹಿರಿಯ ಮೋಟಾರ್ ವಾಹನ ನಿರೀಕ್ಷಕ ನಿಸಾರ್ ಆಹಮ್ಮದ್, ಗುಜರಾತ್ ರಾಜ್ಯದ ವಾಹನಗಳಿಗೆ ನಿಯಮಬಾಹಿರವಾಗಿ ಫಿಟ್‌ನೆಸ್ ಸರ್ಟಿಫಿಕೇಟ್ ನೀಡಿದ್ದು ಕರ್ತವ್ಯ ಲೋಪ ಎಸಗಿರುವ ಹಿನ್ನೆಲೆಯಲ್ಲಿ ಅವರನ್ನು ಅಮಾನತ್ತು ಮಾಡಿ ಆಯುಕ್ತರು ಸಾರಿಗೆ ಇಲಾಖೆ ಆದೇಶ ಹೊರಡಿಸಲಾಗಿದೆ.

ಗುಜರಾತ್ ರಾಜ್ಯದ ಸಾರಿಗೆ ಕಚೇರಿಯ ಇ-ಡಿಟೆಕ್ಷನ್ ತಂಡ, 41 ವಾಹನಗಳನ್ನು ಕರ್ನಾಟಕದ ಆರ್‌ಟಿಒ ಕಚೇರಿಗಳಲ್ಲಿ ತಪಾಸಣೆ ಮಾಡಿ ಫಿಟ್‌ನೆಸ್ ಸರ್ಟಿಫಿಕೇಟ್ ನೀಡಿದ ಬಳಿಕ ಅದೇ ದಿನ ಗುಜರಾತ್‌ನ ಟೋಲ್ ಪ್ಲಾಜಾ ಮೂಲಕ ಸದರಿ ವಾಹನಗಳು ಹಾದುಹೋಗಿವೆ. ಈ ವಾಹನಗಳನ್ನು ನಿಸಾರ್ ಅಹಮದ್ ಇವರು ಅನುಮೋದಿಸಿರುವುದಾಗಿ ಗುಜರಾತ್‌ನ ಸಾರಿಗೆ ಆಯುಕ್ತರ ಕಚೇರಿಯ ಉಪ ನಿರ್ದೇಶಕರು ಕರ್ನಾಟಕ ಸಾರಿಗೆ ಇಲಾಖೆಗೆ ವರದಿ ಸಲ್ಲಿಸಿದ್ದರು.

ಈ ವರದಿಯಲ್ಲಿರುವ ಂಶ 4.0 ತಂತ್ರಾಂಶದನ್ವಯ ದೃಢಪಟ್ಟಿರುತ್ತದೆ ಹಾಗೂ ಸದರಿ 41 ವಾಹನಗಳು ಅದೇ ದಿನ

ಅಂದರೆ ತಪಾಸಣೆ ನಡೆಸಿದ ದಿನಾಂಕದಂದು ಗುಜರಾತ್‌ನಲ್ಲಿರುವ ಟೋಲ್ ಪ್ಲಾಜಾಗಳ ಮೂಲಕ ಪಾಸ್ ಆಗಿರುವುದು ಸ್ಪಷ್ಟವಾಗಿರುವುದರಿಂದ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಈ ವಾಹನಗಳನ್ನು ಭೌತಿಕವಾಗಿ ಪರಿಶೀಲನೆ ಮಾಡದೇ ನಮೂನೆ-38(ಎ) ನ್ನು ನಿಯಮಬಾಹಿರವಾಗಿ ಅನುಮೋದಿಸಿರುವುದು ಕಂಡುಬಂದಿರುತ್ತದೆ. ಇದರಿಂದಾಗಿ ಮೋಟಾರು ವಾಹನಗಳ ಕಾಯಿದೆ ಮತ್ತು ನಿಯಮಗಳನ್ನು ಉಲಂಘಿಸಿದ್ದು, ವಾಹನಗಳನ್ನು ಭೌತಿಕವಾಗಿ ಪರಿಶೀಲನೆ ಮಾಡದೇ ಅನುಮೋದಿಸುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಆದ್ದರಿಂದ ಅವರನ್ನು ಸೇವೆಯಿಂದ ಅಮಾನತ್ತು ಮಾಡಲಾಗಿದೆ ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಜೋಡಿಗಳ ಟ್ಯಾಕ್ಸ್ ಉಳಿತಾಯಕ್ಕೆ ಮಹತ್ವದ ಯೋಜನೆ ಘೋಷಣೆಯಾಗುವ ಸಾಧ್ಯತೆ

ಕೇಂದ್ರ ಬಜೆಟ್‌ನಲ್ಲಿ ದಂಪತಿಗೆ ನಿರ್ಮಲಾ ಭರ್ಜರಿ ಗಿಫ್ಟ್

ದೆಹಲಿ: ನಿರ್ಮಲಾ ಸೀತಾರಾಮನ್ ಮಂಡಿಸಲಿರುವ ಕೇಂದ್ರ ಬಜೆಟ್‌ನಲ್ಲಿ ಮದುವೆಯಾದ ಜೋಡಿಗಳಿಗೆ ಭರ್ಜರಿ ಗಿಫ್ಟ್ ನೀಡುವ ಸಾಧ್ಯತೆ ಇದೆ. ಜೋಡಿಗಳ ಟ್ಯಾಕ್ಸ್ ಉಳಿತಾಯಕ್ಕೆ ಮಹತ್ವದ ಯೋಜನೆ ಘೋಷಣೆಯಾಗುವ ಸಾಧ್ಯತೆ ಇದೆ.

2026-27ರ ಸಾಲಿನ ಆಯವ್ಯಯಗಳ ಕೇಂದ್ರ ಬಜೆಟ್ ಮಂಡನೆಗೆ ಕೌಂಟ್‌ಡೌನ್ ಶುರುವಾಗಿದೆ. ಈಗಾಗಲೇ ಹಲವು ಕ್ಷೇತ್ರಗಳು ಹೊಸ ಘೋಷಣೆಯ ನಿರೀಕ್ಷೆಯಲ್ಲಿವೆ. ಪ್ರಮುಖವಾಗಿ ತೆರಿಗೆ ವಿನಾಯಿತಿ, ಆರೋಗ್ಯ, ಔಷಧಿಗಳ ಮೇಲಿನ ತೆರಿಗೆ ಇಳಿಕೆ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳು ಹೊಸ ಯೋಜನೆಗಳ ನಿರೀಕ್ಷೆಯಲ್ಲಿದೆ. ಇದರ ನಡುವೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗಂಡ ಹೆಂಡತಿಗೆ ಭರ್ಜರಿ ಗಿಫ್ಟ್ ನೀಡಲು ಮುಂದಾಗಿದ್ದಾರೆ.

ಮದುವೆಯಾದ ಜೋಡಿಗೆ ಬಿಗ್ ರಿಲೀಫ್: ಮದುವೆಯಾದ ಜೋಡಿಗಳಿಗೆ ಈ ಬಾರಿಯ ಬಜೆಟ್‌ನಲ್ಲಿ ಬಿಗ್ ರಿಲೀಫ್ ಸಿಗುವ ಸಾಧ್ಯತೆ ಇದೆ. ಗಂಡ ಹೆಂಡತಿ ಜೊತೆಯಾಗಿ ತೆರಿಗೆ ಸಲ್ಲಿಕೆ ಮಾಡುವ ಅವಕಾಶ ನೀಡುವ ಸಾಧ್ಯತೆ ಇದೆ. ಇದರಿಂದ ಗಂಡ ಹೆಂಡತಿ ತೆರಿಗೆ ಉಳಿತಾಯ ಮಾಡಲು ಸಾಧ್ಯವಾಗಲಿದೆ. ಈ ಕುರಿತು ಇಂಡಿಯನ್ ಚಾರ್ಟೆಡ್ ಅಕೌಂಟೆಂಟ್ (ಐಇಅಐ) ಮಹತ್ವದ ಸಲಹೆ ನೀಡಿದೆ.

ವಿದೇಶದಲ್ಲಿರುವಂತೆ ಜೊತೆಯಾಗಿ ಟ್ಯಾಕ್ಸ್ ಸಲ್ಲಿಕೆಗೆ ಅವಕಾಶ: ಕೆಲ ದೇಶಗಳಲ್ಲಿರುವಂತೆ ಪತಿ ಹಾಗೂ ಪತ್ನಿ ಇಬ್ಬರು ಜೊತೆಯಾಗಿ ಟ್ಯಾಕ್ಸ್ ಸಲ್ಲಿಕೆಗೆ ಅವಕಾಶ ನೀಡಬೇಕು ಎಂದು ಐಇಅಐ ಸಲಹೆ ನೀಡಿದೆ. ಈ ಸಲಹೆ ಬಜೆಟ್ ಸಭೆಯಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಐಇಅಐ ಗಂಡ ಹೆಂಡತಿ ಟ್ಯಾಕ್ಸ್ ಸಲ್ಲಿಕೆಗೆ ಹಲವು ಸೂಚನೆ ಹಾಗೂ ಸಲಹೆಗಳನ್ನು ನೀಡಿದೆ. ಇದರಿಂದ ದಂಪತಿಗಳ ಟ್ಯಾಕ್ಸ್ ಉಳಿತಾಯ ಮಾಡಲು ನೆರವಾಗಲಿದೆ.

ಗಂಡ ಹೆಂಡತಿ ಟ್ಯಾಕ್ಸ್ ಸಲ್ಲಿಕೆ

ಸದ್ಯ ಗಂಡ ಹೆಂಡತಿ ಟ್ಯಾಕ್ಸ್ ಬೇರೆ ಬೇರೆ ಅಂದರೆ ಇಬ್ಬರು ಬೇರೆ ಬೇರೆ ಪ್ಯಾನ್ ಕಾರ್ಡ್ ಮೂಲಕ ಸಲ್ಲಿಕೆ ಮಾಡಲಾಗುತ್ತದೆ. ಒಂದು ವೇಳೆ ಹೆಂಡತಿ ಆದಾಯ ಗಳಿಸುತ್ತಿಲ್ಲದಿದ್ದರೆ ಅವರ ಟ್ಯಾಕ್ಸ್ ವಿನಾಯಿತಿಗಳು ಉಪಯೋಗ ಮಾಡಲು ಸಾಧ್ಯವಾಗುದಿಲ್ಲ, ಇತ್ತ ಗಂಡನಿಗೆ ಟ್ಯಾಕ್ಸ್ ಹೊರೆಯಾಗಲಿದೆ. ಆದರೆ ಇಬ್ಬರು ಜೊತೆಯಾಗಿ ಸಲ್ಲಿಕೆ ಮಾಡುವ ಅವಕಾಶ ನೀಡಿದರೆ ವಿನಾಯಿತಿ ಮೊತ್ತ ಸಡಿಲಿಕೆಯಾಗಲಿದೆ.

ತೆರಿಗೆ ವಿನಾಯಿತಿ ಮೊತ್ತ ಹೆಚ್ಚಳ: ಗಂಡ ಹೆಂಡತಿಯ ಒಟ್ಟು ಆದಾಯದ ಮೇಲೆ ತೆರಿಗೆ ಅನ್ವಯವಾಗಲಿದೆ. ಈ ವೇಳೆ ತೆರಿಗೆ ವಿನಾಯಿತಿ ಮೊತ್ತಗಳು ಹೆಚ್ಚಾಗ್ತಲಿದೆ. ಇದೇ ವೇಳೆ ಮನೆ ಸಾಲ, ವಿಮೆ, ಇತರ ಭತ್ಯೆಗಳಲ್ಲಿನ ವಿನಾಯಿತಿಗಳ ಮೊತ್ತವೂ ಹೆಚ್ಚಳವಾಗಲಿದೆ.ಇದು ದಂಪತಿಗಳಿಗೆ ಟ್ಯಾಕ್ಸ್ ಉಳಿತಾಯ ಮಾಡಲು ಸಾಧ್ಯವಾಗಲಿದೆ.

ಇಬ್ಬರು ಆದಾಯ ಗಳಿಸುತ್ತಿದ್ದರೆ ಏನು?: ಒಂದು ವೇಳೆ ಪತಿ ಹಾಗೂ ಪತ್ನಿ ಇಬ್ಬರು ಆದಾಯ ಗಳಿಸುತ್ತಾರೆ. ಇಬ್ಬರು ಜೊತೆಯಾಗಿ ತೆರಿಗೆ ಸಲ್ಲಿಕೆ ಮಾಡುವಾಗ ಒಟ್ಟು ಆದಾಯದ ಮೇಲೆ ವಿನಾಯಿತಿ ವಂಚಿತರಾಗುವಂತಿದ್ದರೆ, ಇಂತಹ ಸಂದರ್ಭಗಳಲ್ಲಿ ಸದ್ಯ ಇರುವಂತೆ ಬೇರೆ ಬೇರೆಯಾಗಿ ತೆರಿಗೆ ಪಾವತಿಗೆ ಅವಕಾಶ ಮಾಡಿಕೊಡಬೇಕು ಎಂದು ಐಇಅಐ ಸಲಹೆ ನೀಡಿದೆ.

ಈ ಬಜೆಟ್‌ನಲ್ಲಿ ಘೋಷಣೆ ಸಾಧ್ಯತೆ

ಗಂಡ ಹೆಂಡತಿ ಜೊತೆಯಾಗಿ ಟ್ಯಾಕ್ಸ್ ಸಲ್ಲಿಕೆ ಘೋಷಣೆ ಈ ಬಜೆಟ್‌ನಲ್ಲಿ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಈ ಘೋಷಣೆ ಭಾರತದಲ್ಲಿ ಹಲವು ಕುಟುಂಬಗಳ ತೆರಿಗೆ ಹಣ ಉಳಿತಾಯ ಮಾಡಲಿದೆ. ಇಷ್ಟೇ ಅಲ್ಲ ಹಲವು ತೆರಿಗೆ ವಿನಾಯಿತಿ ಹಾಗೂ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಲಿದೆ.

ಕೆಐಎನಲ್ಲಿ ಗೇಟ್ ಝೀ ಲಾಂಜ್ ಆರಂಭ

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬೆಂಗಳೂರು ಗೇಟ್ ಝೀ ಎಂಬ ಲಾಂಜ್‌ನ್ನು ಪ್ರಾರಂಭಿಸಿದ್ದು, ಜೆನ್ ಝೀ ಪೀಳಿಗೆಯಿಂದ ಪ್ರೇರಿತವಾದ, ದೇಶದ ಮೊದಲ ಸಾಮಾಜಿಕ ಲಾಂಜ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಪ್ರಯಾಣಿಕರು ತಮ್ಮ ಜೀವನಶೈಲಿಗೆ ಹತ್ತಿರವಿರುವ, ಸಾಮಾಜಿಕವಾಗಿ ಬೆರೆಯಲು ಪೂರಕವಾದ ಮತ್ತು ಆಪ್ತವೆನಿಸುವ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಗೇಟ್‌ಝೀ ಲಾಂಜ್‌ನ್ನು ವಿನ್ಯಾಸಗೊಳಿಸಲಾಗಿದ್ದು, ಸಾಂಪ್ರದಾಯಿಕ ಲಾಂಜ್‌ನ ಬದಲಾಗಿ ಆರಾಮದಾಯಕವಾಗಿ, ಸಂಸ್ಕೃತಿ ಸಮುದಾಯವನ್ನು ಬೆಸೆಯುವ ಸಮಾನ ಸ್ಥಳವನ್ನೊಳಗೊಂಡಿದೆ.

ಆರಾಮದಾಯಕ ಆಸನ ವ್ಯವಸ್ಥೆ, ಹಿತವಾದ ಬೆಳಕು ಮತ್ತು ಸಂವಾದಾತ್ಮಕ ವಲಯಗಳು ಕೆಲಸ ಮಾಡಲು, ದಣಿವಾರಿಸಿಕೊಳ್ಳಲು, ಇತರರೊಂದಿಗೆ ಬೆರೆಯಲು ಅಥವಾ ಏಕಾಂತವಾಗಿರಲು ಅನುವು ಮಾಡಿಕೊಡುತ್ತವೆ. ವಿನ್ಯಾಸ, ಆಹಾರ ಮತ್ತು ಕಲಾತ್ಮಕತೆಯ ಜಾಗತಿಕ ಶೈಲಿಯು ಸ್ಥಳೀಯ ಸೊಗಡಿನೊಂದಿಗೆ ಮಿಳಿತಗೊಂಡಿದೆ. ಸಯಾನ್ ಮತ್ತು ಆರೆಂಜ್ ಬಣ್ಣಗಳ ಸಂಯೋಜನೆ, ಬೀದಿ ದೀಪಗಳಿಂದ ಪ್ರೇರಿತವಾದ ಬೆಳಕು ಮತ್ತು ಪರಿಸರ ಸ್ನೇಹಿ ವಸ್ತುಗಳ ಬಳಕೆ ಇಲ್ಲಿನ ವಾತಾವರಣಕ್ಕೆ ಸಮಕಾಲೀನ ಕಳೆ ನೀಡುತ್ತವೆ. ಹೆಚ್ಚುವರಿಯಾಗಿ, ಪ್ರಯಾಣಿಕರಿಗೆ ದಾರಿ ತಿಳಿಯಲು, ವೈಯಕ್ತಿಕ ಅಗತ್ಯಗಳನ್ನು ಪೂರೈಸಲು ಮತ್ತು ಪ್ರಯಾಣದ ಅನುಕೂಲವನ್ನು ಹೆಚ್ಚಿಸಲು ಎಐ ತಂತ್ರಜ್ಞಾನವನ್ನು ಇಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಬಳಸಲಾಗಿದೆ.

ಗೇಟ್ ಝೀ ಉದ್ಘಾಟನೆ ಬಳಿಕ ಮಾತನಾಡಿದ ಬಿಎಎಸ್‌ಎಲ್ ಅಧಿಕಾರಿ ಜಾರ್ಜ್ ಬೆನೆಟ್ ಕುರುವಿಲ್ಲಾ, ಪ್ರಯಾಣದ ಸಂದರ್ಭದಲ್ಲಿ ಆರಾಮದ ಅನುಭವನ್ನು ನೀಡುವ ಉದ್ದೇಶದಿಂದ ಝೆನ್ ಝೀ ಜೀವನಶೈಲಿಗೆ ಅನುಗುಣವಾಗಿ ಈ ಲಾಂಜ್ ನಿರ್ಮಾಣಗೊಂಡಿದೆ. ಎಲ್ಲಾ ವಯೋಮಾನದವರಿಗೂ ಆಪ್ತವೆನಿಸುವ ಮತ್ತು ಆಹ್ಲಾದಕರ ವಾತಾವರಣ ಒದಗಿಸುತ್ತದೆ. ಭಾರತದ ಯುವಜನತೆಯನ್ನೇ ಈ ಲಾಂಜ್‌ಗೆ ಹೆಸರಿಡಲು ಆಹ್ವಾನಿಸುವ ಮೂಲಕ, ನಾವು ಸಹ-ಸೃಜನಶೀಲತೆ' ಎಂಬ ತತ್ವವನ್ನು ವಿಸ್ತರಿಸಿದ್ದೇವೆ. ಈ ಮೂಲಕ ಗೇಟ್ ಝೀ ಯಾವ ಮನಸ್ಥಿತಿಯನ್ನು ಪ್ರತಿನಿಧಿಸುತ್ತದೆಯೋ, ಅದೇ ಮನಸ್ಥಿತಿಯ ಯುವಜನತೆಯಿಂದ ಇದು ರೂಪಿತವಾಗಿದೆ ಎಂದರು.

ಪ್ರಮುಖ ಆಕರ್ಷಣೆಗಳು

- **ಬಬಲ್ ಆಂಡ್ ಬ್ರೂ: ಪ್ರಯಾಣಕ್ಕೂ ಮುನ್ನ ನಿಮ್ಮ ಮನಸ್ಸಿಗೆ ಚೈತನ್ಯ ನೀಡುವ ವಿಶಿಷ್ಟ ಕೆಫೆ-ಬಾರ್.**
- **ದ ಸಿಪ್ಪಿಂಗ್ ಲೌಂಜ್: ವಿಶ್ರಾಂತಿ ಪಡೆಯಲು ಅಥವಾ ಹರಟೆ ಹೊಡೆಯಲು ಹೇಳಿಮಾಡಿಸಿದ ಆರಾಮದಾಯಕ ತಾಣ.**
- **ಸಬ್ವೇ ಡೈನರ್: ಇದು ರೆಟ್ರೋ ಶೈಲಿಯಿಂದ ಸ್ಫೂರ್ತಿ ಪಡೆದ ಉಪಹಾರ ಮಂದಿರವಾಗಿದ್ದು, ಲೈವ್ ಕೌಂಟರ್‌ಗಳು ಮತ್ತು ಉತ್ಸಾಹ ತುಂಬಬಲ್ಲ ವಿನ್ಯಾಸವಿದೆ.**
- **ದ ಅಂಫಿಜೋನ್: ವಿಡಿಯೋ ಪ್ರದರ್ಶನಗಳು, ಪಾಪ್-ಅಪ್ ಕಾರ್ಯಕ್ರಮಗಳು ಮತ್ತು ಅನಿರೀಕ್ಷಿತ ಸಮ್ಮಿಲನಗಳಿಗಾಗಿ ರೂಪಿಸಲಾದ ಆಧುನಿಕ ಆಂಫಿಥಿಯೇಟರ್.**

ರಾಜ್ಯದಲ್ಲಿ ಡೇಟಾ ಕೇಂದ್ರ ಸ್ಥಾಪನೆಗೆ ಸಿಫಿ, ಭಾರ್ತಿ ಒಲವು: ಎಂಬಿಪಾ

ಬೆಂಗಳೂರು: ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಸಿಫಿ ಟೆಕ್ನಾಲಜೀಸ್ ಮತ್ತು ಭಾರ್ತಿಎಂಟರ್‌ಪ್ರೈಸಸ್ ರಾಜ್ಯದ ದ್ವಿತೀಯ ಸ್ತರದ ನಗರಗಳಲ್ಲಿ ಡೇಟಾ ಕೇಂದ್ರಗಳನ್ನು ತೆರೆಯಲು ಆಸಕ್ತಿ ವ್ಯಕ್ತಪಡಿಸಿದೆ. ಜತೆಗೆ ಪಾನೀಯ ತಯಾರಿಕೆ ವಲಯದಲ್ಲಿ ಕಾರ್ಲ್ಸ್ ಬರ್ಗ್ ಗ್ರೂಪ್ ರಾಜ್ಯದಲ್ಲಿ 350 ಕೋಟಿ ರು.ಹೂಡಿಕೆಯೊಂದಿಗೆ ಬಾಟ್ಲಿಂಗ್ ಘಟಕ ಸ್ಥಾಪಿಸುವ ಬದ್ಧತೆ ಪುನರುಚ್ಚರಿಸಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಸ್ವಿಟ್ಜರ್‌ಲೆಂಡಿನ ದಾವೋಸ್ ನಗರದಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ಸಮಾವೇಶದ ಮೂರನೆಯ ದಿನ ಬುಧವಾರ ಅವರು ಹಲವು ಕಂಪನಿಗಳ ಜೊತೆ ಬಂಡವಾಳ ಹೂಡಿಕೆ ಮತ್ತು ವಿಸ್ತರಣೆ ಸಂಬಂಧ ಉನ್ನತ ಮಟ್ಟದ ಪ್ರತಿನಿಧಿಗಳ ಜತೆ ಮಾತುಕತೆ ನಡೆಸಿದರು. ಈ ಪೈಕಿ ಭಾರ್ತಿಎಂಟರ್‌ಪ್ರೈಸಸ್ ಉಪಾಧ್ಯಕ್ಷ ರಾಜನ್ ಭಾರ್ತಿಮಿತ್ತಲ್ ಜತೆಗಿನ ಮಾತುಕತೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಪಾಲ್ಗೊಂಡಿದ್ದರು.

ಉದ್ಯಮಿಗಳ ಜತೆಗಿನ ಸಭೆಗಳ ಬಗ್ಗೆ ಮಾಹಿತಿ ನೀಡಿರುವ ಸಚಿವ ಪಾಟೀಲರು, ಬೆಂಗಳೂರಿನಲ್ಲಿರುವ ಹಲವು ಡೇಟಾ ಕೇಂದ್ರಗಳಲ್ಲಿ ಸಿಫಿ ಟೆಕ್ನಾಲಜೀಸ್ ಈಗಾಗಲೇ ಸಾಕಷ್ಟು ಹೂಡಿಕೆ ಮಾಡಿದ್ದು, ಡಿಜಿಟಲ್ ಮೂಲಸೌಕರ್ಯ ಅಭಿವೃದ್ಧಿಗೆ ಕೊಡುಗೆ ನೀಡಿದೆ. ಅದು ಅಭಿವೃದ್ಧಿಪಡಿಸಿರುವ ಡೇಟಾ ಕೇಂದ್ರ ಉದ್ಘಾಟನೆಗೆ ಸಿದ್ಧವಾಗಿದ್ದು, ಎರಡನೇ ಸ್ತರದ ನಗರಗಳ ಮೇಲೂ ಅದು ಆಸಕ್ತಿ ತಾಳಿದೆ. ಈ ನಿಟ್ಟಿನಲ್ಲಿ ಅದು ಸಂಪರ್ಕ ವ್ಯವಸ್ಥೆ ಮತ್ತು ಭೂಮಿಯ ಲಭ್ಯತೆ ಇತ್ಯಾದಿಗಳ ಬಗ್ಗೆ ಚರ್ಚಿಸಿದೆ ಎಂದಿದ್ದಾರೆ.

ಭಾರ್ತಿ ಎಂಟರ್‌ಪ್ರೈಸಸ್ ರಾಜ್ಯದಲ್ಲಿ ಇದುವರೆಗೆ 13 ಸಾವಿರ ಕೋಟಿ ರು. ಹೂಡಿಕೆ ಮಾಡಿದೆ. ಇದೂ ಸಹ ರಾಜ್ಯದಲ್ಲಿ ಮತ್ತೊಂದು ಡೇಟಾ ಕೇಂದ್ರ ಸ್ಥಾಪಿಸುವ ಒಲವು ಹೊಂದಿದ್ದು, ಮಾತುಕತೆಯ ಸಂದರ್ಭದಲ್ಲಿ ಪ್ರಸ್ತಾಪವಾಗಿದೆ. ಫೋರ್ಜಿಂಗ್ ಮತ್ತು ಪ್ರಿಸಿಷನ್ ಎಂಜಿನಿಯರಿಂಗ್ ಕಂಪನಿಯಾಗಿರುವ ಭಾರತ್ ಫೋರ್ಜ್ ಲಿಮಿಟೆಡ್ ಕೂಡ ರಾಜ್ಯದಲ್ಲಿ ಮತ್ತಷ್ಟು ಹೂಡಿಕೆಗೆ ಇರುವ ಅವಕಾಶಗಳ ಬಗ್ಗೆ ನಮ್ಮಿಂದ ಮಾಹಿತಿ ಪಡೆದುಕೊಂಡಿದೆ ಎಂದರು.

ಕ್ವಿನ್ ಸಿಟಿಯಲ್ಲಿ ಇಂಪೀರಿಯಲ್ ಕಾಲೇಜಿನ ಆರ್‌ಡಿ ಕೇಂದ್ರ

ಲಂಡನ್‌ನ ಅಗ್ರಗಣ್ಯ ವಿ.ವಿ.ಗಳಲ್ಲಿ ಒಂದಾಗಿರುವ ಇಂಪೀರಿಯಲ್ ಕಾಲೇಜು, ಡಾಬಸಪೇಟೆ-ದೊಡ್ಡಬಳ್ಳಾಪುರದ ಮಧ್ಯೆ ಅಸ್ತಿತ್ವಕ್ಕೆ ಬರುತ್ತಿರುವ ಕ್ವಿನ್ ಸಿಟಿಯಲ್ಲಿ ತನ್ನ ಸಂಶೋಧನಾ ಮತ್ತು ಅಭಿವೃದ್ಧಿ (ಆರ್‌ಡಿ) ಕೇಂದ್ರ ಆರಂಭಿಸುವ ಕುರಿತು ಮಾತುಕತೆ ನಡೆಸಿದೆ. ಇಂಪೀರಿಯಲ್ ಕಾಲೇಜು ಈಗಾಗಲೇ ಬೆಂಗಳೂರಿನಲ್ಲಿ ಇನ್ನೋವೇಶನ್ ಹಬ್ ಹೊಂದಿದ್ದು, ಭಾರತೀಯ ವಿಜ್ಞಾನ ಸಂಸ್ಥೆಯೊಂದಿಗೆ ಸಹಭಾಗಿತ್ವ ಹೊಂದಿದೆ. ಅದು ವಿಜ್ಞಾನ, ಎಂಜಿನಿಯರಿಂಗ್, ಔಷಧ ವಿಜ್ಞಾನ ಮತ್ತು ಬಿಝಿನೆಸ್ ವಿಚಾರಗಳ ಕಲಿಕೆಯಲ್ಲಿ ಉನ್ನತ ಮಟ್ಟದಲ್ಲಿದ್ದು, ನಮ್ಮಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ ಮತ್ತಷ್ಟು ಸಹಯೋಗದ ಮೂಲಕ ಸಂಶೋಧನಾ ಚಟುವಟಿಕೆ ನಡೆಸಲು ತುದಿಗಾಲಲ್ಲಿ ನಿಂತಿದೆ. ಆ ವಿ.ವಿ.ಯ ಮುಖ್ಯಸ್ಥ ಪ್ರೊ.ಹಗ್ ಬ್ರಾಡಿ ಅವರು ಲಂಡನ್ನಿನಲ್ಲಿರುವ ಕ್ಯಾಂಪಸ್ಸಿಗೆ ಭೇಟಿ ನೀಡುವಂತೆ ಆಹ್ವಾನ ನೀಡಿದ್ದಾರೆ ಎಂದು ಪಾಟೀಲ ತಿಳಿಸಿದ್ದಾರೆ.

ನೈಜ ಕೃಷಿಗೆ ಒತ್ತು ನೀಡಬೇಕು

ಬೆಂಗಳೂರು: ರಾಜ್ಯದಲ್ಲಿ ಶೇ.75 ರಷ್ಟು ಸಣ್ಣ ಮತ್ತು ಅತೀ ಸಣ್ಣ ರೈತರಿದ್ದು, ಕೇಂದ್ರ ಹಾಗೂ ರಾಜ್ಯ ಸರಕಾರಗಳು ನೈಜ ಕೃಷಿಗೆ ಒತ್ತು ನೀಡಿ, ಅದರಿಂದ ಬಂದ

ಪ್ರಾಥಮಿಕ ಉತ್ಪನ್ನಗಳನ್ನು ಸಂಸ್ಕರಣೆ ಮಾಡಿ ಮಾರುಕಟ್ಟೆಗೆ ಒದಗಿಸಿದಲ್ಲಿ ನೈಜ ಕೃಷಿ ಕಾರ್ಯಕ್ರಮ ಯಶಸ್ವಿಯಾಗುವುದು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು..

ಕೇಂದ್ರ ಸರಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ ಮತ್ತು ಕರ್ನಾಟಕ ಸರಕಾರದ ಜೀವನೋಪಾಯ ಮತ್ತು ಉದ್ಯಮಶೀಲತೆ ಇಲಾಖೆ ಜಂಟಿಯಾಗಿ ನೈಸರ್ಗಿಕ ಕೃಷಿ ಕುರಿತ ರಾಷ್ಟ್ರೀಯ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರಕಾರದ ಕೃಷಿ ಇಲಾಖೆಯು ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕನ್ನು ರಾಜ್ಯದ ಪ್ರಥಮ ಸಾವಯವ ತಾಲೂಕೆಂದು ಘೋಷಿಸಿದ್ದು, 2025- 2026 ನೇ ಸಾಲಿನ ಆಯವ್ಯಯದಲ್ಲಿ 1 ಕೋಟಿ ರು. ಅನುದಾನ ಒದಗಿಸಿ ನೈಜ ಕೃಷಿ ಮಾಡುವ ರೈತರಿಗೆ ರಿಯಾಯಿತಿ ದರದಲ್ಲಿ ಪರಿಕರ ಒದಗಿಸಲಾಗುವುದು ಹಾಗೂ ಕೃಷಿ ಪರಿಕರ ಮಾರಾಟಗಾರರು ರಾಸಾಯನಿಕ ಪರಿಕರಗಳ ಬದಲಾಗಿ ಸಾವಯವ ಪರಿಕರಗಳನ್ನು ಮಾರಾಟ ಮಾಡಿದಲ್ಲಿ ಪ್ರೋತ್ಸಾಹ ಧನ ನೀಡಲಾಗುವುದು ಎಂದರು.

ರಾಜ್ಯದಲ್ಲಿ ಈಗಾಗಲೇ 990 ಕ್ಲಸ್ಟರ್‌ಗಳನ್ನು ಗುರುತಿಸಿ ನೈಜ ಕೃಷಿ ಕಾರ್ಯಕ್ರಮ ಅಳವಡಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ, ಹಾಗೂ ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳ ಮೂಲಕ ನೈಜ ಕೃಷಿ ಪ್ರಾತ್ಯಕ್ಷಿಕೆಯನ್ನು ಕೂಡ ಅನುಷ್ಠಾನ ಮಾಡಲಾಗಿದೆ. ಪ್ರಸ್ತುತ ನೈಜ ಕೃಷಿಯನ್ನು ಪ್ರೋತ್ಸಾಹಿಸಲು ಹಾಗೂ ನೈಜ ಕೃಷಿಯನ್ನು ರೈತರು ಅಳವಡಿಸಿಕೊಳ್ಳುವಂತೆ ಮಾಡಲು ಸಾವಯವ ಕ್ಷೇತ್ರಗಳ ಪ್ರಮಾಣೀಕರಣ ಮಾಡುವುದು, ಉತ್ಕೃಷ್ಟ ಬೆಲೆ ನೀಡುವುದು ಹಾಗೂ ಮಾರುಕಟ್ಟೆಯೊಂದಿಗೆ ಜೋಡಿಸುವಲ್ಲಿ ಸೂಕ್ತ ಕ್ರಮ ಕೈಗೊಂಡಲ್ಲಿ ನೈಜ ಕೃಷಿ ಕಾರ್ಯಕ್ರಮವು ಯಶಸ್ವಿಯಾಗಿ, ರೈತರ ಆದಾಯ ಹೆಚ್ಚಿಸುವುದಲ್ಲದೇ ಪರಿಸರ ಸಂರಕ್ಷಣೆ ಸಹ ಆಗುವುದು ಎಂದರು.

ಆರ್‌ಟಿಒ ಅಧಿಕಾರಿಗಳ ಅಮಾನತು | ವಿಜಿಲೆನ್ಸ್ ತನಿಖೆಗೆ ಶಿಫಾರಸು

ಮೈಸೂರು-ಕೇರಳ ನಡುವೆ ನಕಲಿ ಲೈಸೆನ್ಸ್ ಮಾಫಿಯಾ

ತಿರುವನಂತಪುರಂ

ಕರ್ನಾಟಕದ ಮೈಸೂರು ಮತ್ತು ಕೇರಳದ ಮೋಟಾರು ವಾಹನ ಇಲಾಖೆಯ ಅಧಿಕಾರಿಗಳು ಸೇರಿಕೊಂಡು ನಡೆಸುತ್ತಿದ್ದ ಬೃಹತ್ 'ನಕಲಿ ಡ್ರೈವಿಂಗ್ ಲೈಸೆನ್ಸ್' ಹಗರಣ ಬಯಲಾಗಿದೆ. ಈ ಸಂಬಂಧ ಕೇರಳದ ತಿರೂರಂಗಾಡಿ ಆರ್‌ಟಿಒ ಕಚೇರಿಯ ಇಬ್ಬರು ಪ್ರಮುಖ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದ್ದು, ಇಡೀ ಜಾಲದ ವಿರುದ್ಧ ವಿಜಿಲೆನ್ಸ್ ತನಿಖೆಗೆ ಶಿಫಾರಸು ಮಾಡಲಾಗಿದೆ.

ಮೈಸೂರು ನಕಲಿ ಲೈಸೆನ್ಸ್ ಪ್ರಕರಣದಲ್ಲಿ ತಿರೂರಂಗಾಡಿಯ ಆರ್‌ಟಿಒ ಕಚೇರಿಯ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ. ಎಂವಿಐ ಜಾರ್ಜ್ ಮತ್ತು ಕ್ಲರ್ಕ್ ನಜೀಬ್ ಅವರನ್ನು ಅಮಾನತು ಮಾಡಲಾಗಿದೆ. ಅಧಿಕಾರಿಗಳ ವಿರುದ್ಧ ವಿಜಿಲೆನ್ಸ್ ತನಿಖೆಗೂ ಶಿಫಾರಸು ಮಾಡಲಾಗಿದೆ. ರಾಜ್ಯದಲ್ಲಿ ದೊಡ್ಡ ಡ್ರೈವಿಂಗ್ ಲೈಸೆನ್ಸ್ ಹಗರಣ ನಡೆಯುತ್ತಿದೆ ಎಂದು ವರದಿಗಳು ಹೊರಬರುತ್ತಿವೆ. ಡ್ರೈವಿಂಗ್ ಟೆಸ್ಟ್ ಇಲ್ಲದೆ ಏಜೆಂಟರ ಮೂಲಕ ಮೈಸೂರಿನಿಂದ ಲೈಸೆನ್ಸ್ ಕೊಡಿಸುವ ಗ್ಯಾಂಗ್ ಉತ್ತರ ಕೇರಳದಲ್ಲಿ ಸಕ್ರಿಯವಾಗಿದೆ ಎಂದು ವರದಿಯಾಗಿದೆ.

ಡ್ರೈವಿಂಗ್ ಟೆಸ್ಟ್ ಮಾಡದೇ ಲೈಸೆನ್ಸ್:

ಮೈಸೂರಿನಿಂದ ಪಡೆದ ಲೈಸೆನ್ಸ್‌ನಲ್ಲಿ ವಿಳಾಸ, ಸಹಿ ಮತ್ತು ಫೋಟೋ ಬದಲಾಯಿಸಿ ಕೇರಳದ ಲೈಸೆನ್ಸ್ ಆಗಿ ಪರಿವರ್ತಿಸಲು ಮೋಟಾರು ವಾಹನ ಇಲಾಖೆಯ ಅಧಿಕಾರಿಗಳು ಸಹಕರಿಸುತ್ತಿದ್ದಾರೆ. ಈ ವಂಚನೆ ಬಗ್ಗೆ ಮೋಟಾರು ವಾಹನ ಇಲಾಖೆಯ ವಿಜಿಲೆನ್ಸ್ ವಿಭಾಗ ತನಿಖೆ ಆರಂಭಿಸಿದೆ ಎಂದು ಸಾರಿಗೆ ಆಯುಕ್ತರು ತಿಳಿಸಿದ್ದಾರೆ. ಡ್ರೈವಿಂಗ್ ಟೆಸ್ಟ್ ನಿಯಮಗಳನ್ನು ಕಠಿಣಗೊಳಿಸಿದ ನಂತರ, ತಮಿಳುನಾಡು ಮತ್ತು ಕರ್ನಾಟಕಕ್ಕೆ ಏಜೆಂಟರ ಮೂಲಕ ಲೈಸೆನ್ಸ್ ಪಡೆಯುವವರ ಸಂಖ್ಯೆ ಹೆಚ್ಚಾಗಿದೆ. ಆದರೆ, ಡ್ರೈವಿಂಗ್ ಟೆಸ್ಟ್‌ನಲ್ಲಿ ಭಾಗವಹಿಸದೆ, ಕರ್ನಾಟಕಕ್ಕೆ ಹೋಗದೆ ಲೈಸೆನ್ಸ್ ಕೊಡಿಸುವ ಮಾಫಿಯಾ ರಾಜ್ಯದಲ್ಲಿ ಸಕ್ರಿಯವಾಗಿದೆ.

ಮಲಪ್ಪುರಂ ನಿವಾಸಿ ಮೊಹಮ್ಮದ್ ಬಶೀರ್ ಎಂಬುವವರಿಗೆ ಮೈಸೂರು ಪಶ್ಚಿಮ ಆರ್‌ಟಿಒ ನೀಡಿದ ಡ್ರೈವಿಂಗ್ ಲೈಸೆನ್ಸ್ ಇದು. ಕಳೆದ ವರ್ಷ ಡಿಸೆಂಬರ್ 20ರಂದು ಮೈಸೂರಿನ ವಿಳಾಸದಲ್ಲಿ ಲೈಸೆನ್ಸ್ ಸಿಕ್ಕಿದೆ. 1970ರಲ್ಲಿ ಜನಿಸಿದ ದಾಖಲೆಗಳಲ್ಲಿರುವ ಮೊಹಮ್ಮದ್ ಬಶೀರ್ ಅವರ ಡ್ರೈವಿಂಗ್ ಲೈಸೆನ್ಸ್‌ನಲ್ಲಿ ಒಬ್ಬ ಯುವಕನ ಫೋಟೋ ಮಾತ್ರ ಇದೆ. ಇದೇ ಮೊಹಮ್ಮದ್ ಬಶೀರ್ ವಿಳಾಸ ಮತ್ತು ಸಹಿ ಬದಲಾಯಿಸಲು ಕೆಲವೇ ದಿನಗಳಲ್ಲಿ ತಿರೂರಂಗಾಡಿ ಸಬ್ ಆರ್‌ಟಿಒ ಕಚೇರಿಗೆ ಅರ್ಜಿ ಸಲ್ಲಿಸುತ್ತಾರೆ.

ನಂತರ ಡಿಸೆಂಬರ್ 28ರಂದು ತಿರೂರಂಗಾಡಿಯಿಂದ ಮಲಪ್ಪುರಂ ವಿಳಾಸದಲ್ಲಿ ಹೊಸ ಫೋಟೋ ಮತ್ತು ಸಹಿಯೊಂದಿಗೆ ಹೊಸ ಡ್ರೈವಿಂಗ್ ಲೈಸೆನ್ಸ್ ನೀಡಲಾಗುತ್ತದೆ. ಇದೇ ಮೊಹಮ್ಮದ್ ಬಶೀರ್ ಲೈಸೆನ್ಸ್‌ಗಾಗಿ ಸಲ್ಲಿಸಿದ ಆಧಾರ್ ಕಾರ್ಡ್‌ಗಳು ಇವು. ಇಬ್ಬರು ವ್ಯಕ್ತಿಗಳ ಫೋಟೋಗಳಿರುವ ಮೈಸೂರು ಮತ್ತು ಮಲಪ್ಪುರಂ ವಿಳಾಸಗಳ ಆಧಾರ್ ಕಾರ್ಡ್‌ಗು ಪತ್ತೆಯಾಗಿವೆ. ಇದೇ ರೀತಿ ಹಲವು ವಂಚನೆಗಳು ನಡೆದಿವೆ. ಮೈಸೂರು ವಿಳಾಸದಲ್ಲಿ ಬೇರೆ ಫೋಟೋ ಇಟ್ಟು ಡ್ರೈವಿಂಗ್ ಲೈಸೆನ್ಸ್ ಪಡೆಯುತ್ತಾರೆ. ನಂತರ, ತಿರೂರಂಗಾಡಿಯಲ್ಲಿ ವಿಳಾಸ ಬದಲಾವಣೆ ಅರ್ಜಿಯ ನೆಪದಲ್ಲಿ ಫೋಟೋ, ವಿಳಾಸ, ಸಹಿ ಎಲ್ಲವನ್ನೂ ಬದಲಾಯಿಸಿ ಕೇರಳದ ವಿಳಾಸದಲ್ಲಿ ಹೊಸ ಲೈಸೆನ್ಸ್ ನೀಡಲಾಗುತ್ತದೆ.

ಕೇರಳ ಮತ್ತು ಮೈಸೂರು ಅಧಿಕಾರಿಗಳಿಬ್ಬರೂ ಸೇರಿ ವಂಚನೆ: ಕೇರಳ ಮತ್ತು ಮೈಸೂರಿನ ಅಧಿಕಾರಿಗಳು ಹಾಗೂ ಮಧ್ಯವರ್ತಿಗಳು ಸೇರಿ ನಡೆಸುತ್ತಿರುವ ದೊಡ್ಡ ವಂಚನೆ ಇದು. ಡ್ರೈವಿಂಗ್ ಟೆಸ್ಟ್‌ಗೆ ಹಾಜರಾಗದ ವ್ಯಕ್ತಿಯ ಹೆಸರಿನಲ್ಲಿ ಮೈಸೂರಿನಲ್ಲಿ ಹೇಗೆ ಲೈಸೆನ್ಸ್ ನೀಡುತ್ತಾರೆ? ಎರಡು ಬೇರೆ ಬೇರೆ ಫೋಟೋಗಳು ಕಣ್ಣ ಮುಂದಿದ್ದರೂ ತಿರೂರಂಗಾಡಿಯ ಎಂವಿಡಿ ಅಧಿಕಾರಿಗಳು ಹೇಗೆ ಹೊಸ ಲೈಸೆನ್ಸ್ ನೀಡುತ್ತಾರೆ? ಇವು ಮುಖ್ಯವಾಗಿ ಎದ್ದಿರುವ ಪ್ರಶ್ನೆಗಳು. ವಂಚನೆಗಳು ಗಮನಕ್ಕೆ ಬಂದಿದ್ದು, ಆಂತರಿಕ ವಿಜಿಲೆನ್ಸ್ ತನಿಖೆ ಆರಂಭಿಸಲಾಗಿದೆ ಎಂದು ಸಾರಿಗೆ ಆಯುಕ್ತ ವಿ.ಎಚ್.ನಾಗರಾಜು ಹೇಳಿದ್ದಾರೆ.

ಜೂನ್, ಜುಲೈ ತಿಂಗಳ ದಾಖಲೆಗಳನ್ನು ಪರಿಶೀಲಿಸಿದರೆ, ಅಸಹಜ ರೀತಿಯಲ್ಲಿ ವ್ಯಾಪಕವಾಗಿ ವಿಳಾಸ ಬದಲಾವಣೆಯ ಅರ್ಜಿಗಳನ್ನು ಇತ್ಯರ್ಥ ಪಡಿಸಲಾಗಿದೆ. ಅದೂ ಕೆಲವೇ ದಿನಗಳಲ್ಲಿ. ಅಪಘಾತಗಳನ್ನು ಕಡಿಮೆ ಮಾಡಲು ಕಠಿಣಗೊಳಿಸಿದ ಕೇರಳದ ಡ್ರೈವಿಂಗ್ ಪರೀಕ್ಷೆಯನ್ನು ಅಧಿಕಾರಿಗಳು ಮತ್ತು ಏಜೆಂಟರು ಹಣ ಮಾಡುವ ದಾರಿಯನ್ನಾಗಿ ಮಾಡಿಕೊಂಡಿದ್ದಾರೆ. ಸುಲಭವಾಗಿ ಸಿಗುವ ಇಂತಹ ನಕಲಿ ಲೈಸೆನ್ಸ್‌ಗಳೊಂದಿಗೆ ರಸ್ತೆಗಿಳಿಯುವವರು ಮಾಡುವ ಅಪಘಾತಗಳಿಗೆ ಯಾರು ಹೊಣೆ ಎಂಬ ಪ್ರಶ್ನೆ ಉಳಿದಿದೆ.

ಆರಾಮ

ವಿಶ್ವವಾಣಿ
@vishwavaninews
22-01-2026
ಗುರುವಾರ

ಚಿತ್ರವಿಹಾರ

ಶ್ರದ್ಧೆಗೆ ಅನುಗುಣವಾದ ಪರಿಶ್ರಮ

• ಮಾಯಾ ಬಾಲಚಂದ್ರ

ನಮ್ಮ ಪ್ರಯತ್ನದ ಪ್ರತೀ ಕೆಲಸವು ಅದ್ಭುತ ಯಶಸ್ಸನ್ನು ಪಡೆಯಬೇಕೆಂದೇನಿಲ್ಲ. ಪ್ರತಿ ಪ್ರಯತ್ನವೂ ನಮಗೆ ನೀಡುವ ಫಲ ಎಂದರೆ ಅನುಭವವಾತ್ಮಕಫಲ. ಇದು ಶ್ರದ್ಧೆಯ ಬೀಜವನ್ನು ಮೊಳೆಯುವಂತೆ ಮಾಡುತ್ತದೆ. ಮುಂದಿನ ಪ್ರಯತ್ನಕ್ಕೆ ಸಾಮರ್ಥ್ಯವನ್ನು ಹೆಚ್ಚಿಸಿ, ಕಾರ್ಯ ನಿರ್ವಹಣೆಯ ವೇಗವನ್ನು ಹೆಚ್ಚಿಸಿ, ವಿಳಂಬಗಳ ಎಚ್ಚರಿಕೆಯನ್ನು ಮೂಡಿಸಿ, ಇನ್ನಷ್ಟು ಸ್ಪಷ್ಟತೆಯೊಂದಿಗೆ ಮುಂದಿನ ಹೆಜ್ಜೆ ಇಡಲು ಆತ್ಮವಿಶ್ವಾಸವನ್ನು ನೀಡುತ್ತದೆ.

ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಪೆಟ್ರೋಲ್ ಸಾಗಿಸುವ ಹಡಗು ಸಮುದ್ರದಲ್ಲಿ ಮುಳುಗಿದರೆ, ಸಾವಿರಾರು ಚದರ ಕಿಲೋಮೀಟರ್ ಸಾಗರ ಪ್ರದೇಶದ ಮೇಲ್ಮೈಯಲ್ಲಿ ತೈಲ ಹರಡಿ, ಜಲಚರಗಳಿಗೆ ಅಪಾಯಕಾರಿಯಾಗುತ್ತದೆ. ಹಾಗೆ ಹರಡಿದ ದೊಡ್ಡ ಪ್ರಮಾಣದ ತೈಲವನ್ನು ನೀರಿನಿಂದ ಬೇರ್ಪಡಿಸುವುದು ಬಲು ಕಷ್ಟ. ಡಾಕ್ಟರ್ ಆನಂದ್ ಚಕ್ರವರ್ತಿ ಎಂಬ ವಿಜ್ಞಾನಿ, ಕೃತಕ ಜಂತು (ಬಗ್) ಒಂದನ್ನು ಸೃಷ್ಟಿಸಿದರು. ಈ ಜಂತುವಿನ ಕೆಲಸವೆಂದರೆ, ಕಾರ್ಖಾನೆಗಳಲ್ಲಿ, ಚರಂಡಿಗಳಲ್ಲಿ ಅಥವಾ ಪರಿಸರದ ಯಾವುದೇ ಭಾಗದಲ್ಲಿ ಪೆಟ್ರೋಲ್, ಡೀಸೆಲ್, ಕಚ್ಚಾತೈಲದಂತಹ ತೈಲಗಳು ಸೋರಿಕೆಯಾದಾಗ, ಅವುಗಳನ್ನು ಹೀರಿ, ಪರಿಸರವನ್ನು ನಿರ್ಮಲವಾಗಿಸುವುದಾಗಿದೆ. ಸಾವಿರಾರು ಚದರ ಮೈಲು ಸಾಗರದ ಮೇಲ್ಮೈನಲ್ಲಿ ತೈಲ ಹರಡಿದ್ದಾಗ, ಒಂದು ಬಿಂದಿಗೆಯಷ್ಟು ಈ ಬ್ಯಾಕ್ಟೀರಿಯಮ್ ಅನ್ನು ಸುರಿದರೆ, ಅವುಗಳು ಒಂದು ನೂರಾಗಿ, ನೂರು ಸಾವಿರವಾಗಿ ಬೆಳೆಯುತ್ತಾ, ಯಶಸ್ವಿಯಾಗಿ ಶುದ್ಧೀಕರಣದ ಕೆಲಸವನ್ನು ನಿಭಾಯಿಸುತ್ತವೆ. ಈ ಬ್ಯಾಕ್ಟೀರಿಯಮ್ ಸೃಷ್ಟಿಗಾಗಿ ಹಲವು ಬಾರಿ ಪ್ರಯತ್ನಿಸಿ, ಸೋತು ಗೆದ್ದವರು ಡಾಕ್ಟರ್ ಆನಂದ್. ಅಮೆರಿಕದ ಇಲಿನಾಯ್ಸ್ ವಿಶ್ವವಿದ್ಯಾಲಯದಲ್ಲಿ, ಈ ಕೃತಕ ಜಂತುವನ್ನು ಸೃಷ್ಟಿಸಿ, ಪೇಟೆಂಟ್ ಪಡೆಯಲು ಸಲ್ಲಿಸಿದ ಅವರ ಅರ್ಜಿಯನ್ನು ಅಮೆರಿಕ ಸರಕಾರ ತಳ್ಳಿ ಹಾಕಿತು. ಇಲ್ಲಿಯೂ ಅವರಿಗೆ ಕಾನೂನಾತ್ಮಕ ಸಮಸ್ಯೆಗಳು ಎದುರಾದವು. 'ಜೀವಜಂತುಗಳ ಸೃಷ್ಟಿಯು ಪೇಟೆಂಟ್ ಬ್ರಹ್ಮನದ್ದೇ ತಾನೇ? ಹೊಸ ಜೀವಿಯ ಸೃಷ್ಟಿ ಮಾಡಿ ಮನುಷ್ಯ ಹೇಗೆ ಪೇಟೆಂಟ್ ಪಡೆಯಲು ಸಾಧ್ಯ?' ಎನ್ನುವುದು ಸರಕಾರದ ವಾದ. ಅವರ ಹೋರಾಟದಿಂದ, ಆ ಜಂತುವಿನ ಸೃಷ್ಟಿ ತಮ್ಮದೇ ಎಂದು 1980ರಲ್ಲಿ ಪೇಟೆಂಟ್ ಪಡೆದರು ಆ ವಿಜ್ಞಾನಿ. ಆ ಕ್ಷಣದಿಂದಲೇ ಜೀವತಾಂತ್ರಿಕ ಪದಾರ್ಥಗಳನ್ನು ಉತ್ಪಾದಿಸುವ ಹಲವಾರು ಕಂಪನಿಗಳು ತಲೆ ಎತ್ತಿದವು. ಶೇರು ಮಾರುಕಟ್ಟೆಯೂ ಶೀಘ್ರ ಏರುಗತಿಯ ಪ್ರಗತಿಯನ್ನು ಕಂಡಿತು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರಯೋಗ ಶಾಲೆಗಳನ್ನು ನಿರ್ಮಿಸಿ, ಸಂಶೋಧನೆಗೆ ಹೇರಳ ಹಣ ತೊಡಗಿಸಿ, ವಿಜ್ಞಾನಿಗಳಿಗೆ ಆಹ್ವಾನ ನೀಡಲಾಯಿತು. ವಿಜ್ಞಾನಿಗಳು ಸ್ವತಃ ಕಂಪನಿ ಮಾಲೀಕರಾಗತೊಡಗಿದರು. ಇದು ಎರಡನೇ ತಾಂತ್ರಿಕ ಕ್ರಾಂತಿಯ ನಾಂದಿ ಎಂದೇ ಹೇಳಬಹುದು.

'ಸತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ, ಶ್ರದ್ಧಾಮಯೋಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ' -ಯಾರಿಗೆ ಯಾವ ಬಗೆಯಾದ ಶ್ರದ್ಧೆಯಿರುವುದೋ, ಅದಕ್ಕೆ ತಕ್ಕಂತೆ ಅವರ ಪರಿಶ್ರಮವಿರುತ್ತದೆ.

ಮುಗ್ಧತೆಯ ಮುಸುಕು: ನೀವೆಂದೂ ಸರಿಸಲೆತ್ನಿಸದಿರಿ

• ಶ್ರೀಲಕ್ಷ್ಮಿ, ಬೆಂಗಳೂರು

ಮುಗ್ಧತೆ' ಎಂಬ ಪದವನ್ನು ಕೇಳಿಡೊಡನೆ ಥಟ್ ಎಂದು ಮನಸ್ಸು ಊಹಿಸುವ ಮತ್ತೊಂದು ಪದವೇ 'ಮಕ್ಕಳು'. ಈ ಭೂಮಿಯ ಮೇಲೆ ಜನನ-ಮರಣದ ಕ್ರಿಯೆ ನಿರಂತರ. ಅ ನಡುವಿನ ಜೀವನದಲ್ಲಿ ನಮಗೆ ಬೇಕಾದಂತೆ ಎಲ್ಲ ರೀತಿಯಲ್ಲೂ ಬದಲಾವಣೆಗಳನ್ನು ನಾವು ಮಾಡಿಕೊಳ್ಳುತ್ತಾ ಹೋಗುತ್ತಿರುತ್ತೇವೆ. ತಂತ್ರಜ್ಞಾನದ ಸಹಾಯದಿಂದ ಬಹುಶಃ ಎಲ್ಲವನ್ನೂ ಕೈವಶಕ್ಕೆ ಮಾಡಿಕೊಂಡಿದ್ದೇವೆ ಎಂಬ ಭಾವನೆಯಲ್ಲಿ ಬೀಗುತ್ತಿದ್ದೇವೆ. ಆದರೆ ಕೆಲವೊಮ್ಮೆ ಅದು ನಮಗೆ ತಿಳಿದೋ ತಿಳಿಯದೆಯೋ ಒಂದು ರೀತಿಯ ಮುಳುವಾಗುತ್ತಿದೆ ಎಂಬುದು ಅರಿವಾಗುತ್ತಿಲ್ಲವಷ್ಟೆ.

'ರೀ...ನನ್ನ ಮಗುವಿಗೆ ಈಗಿನ್ನು ಹತ್ತು ತಿಂಗ್ಳು.. ಮೊಬೈಲ್ ಎಷ್ಟು ಚೆನ್ನಾಗಿ ಸ್ವಯ್ಪ್ ಮಾಡ್ತಾನೆ ಗೊತ್ತಾ?' ಎಂದು ಜಂಭದಿಂದ ಹೇಳಿಕೊಳ್ಳುವ ತಂದೆ-ತಾಯಿ, ಅಜ್ಜಿ-ತಾತಂದಿರನ್ನು ನೋಡ್ತಿರುತ್ತೇವೆ. ಇದು ಜಾಣತನವಾಗಿ ಕಂಡರೂ ಸಹ, ಆ ಮೃದುವಾದ ಕೈಗಳ, ಮುಗ್ಧವಾದ ಮನಸ್ಸಿನ, ಸೂಕ್ಷ್ಮವಾದ ಕಣ್ಣುಗಳುಳ್ಳ ಮಕ್ಕಳಿಗೆ ಕೊಡುವ ಸಾಧನವಂತೂ ಅಲ್ಲವೇ ಅಲ್ಲ.

ಸುತ್ತಲಿನ ನೈಜ ಪರಿಸರವನ್ನು ಪರಿಚಯಿಸುವ ಮುನ್ನವೇ ತಂತ್ರಜ್ಞಾನದ ಮುಖೇನ ಅವರಿಗೆ ಎಲ್ಲವನ್ನು ಪರಿಚಯಿಸುವ ಕಾರ್ಯಕ್ಕೆ ಇಳಿದುಬಿಡುತ್ತೇವೆ. ಇರುಳಿನ ಚಂದ್ರನೆಡೆಗೆ ಕೈತೋರಿ, 'ಅಗೋ... ಚಂದ್ರ, ನಕ್ಷತ್ರ' ಎನ್ನುವ ಬದಲಿಗೆ 'ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್...' ಎಂಬ ಪದ್ಯವನ್ನು ಮೊಬೈಲ್‌ನಲ್ಲೊ, ಲ್ಯಾಪ್‌ಟಾಪ್‌ನಲ್ಲೊ ಹಾಕಿ ತೋರಿಸಿ, ಅದುವೆ ಚಂದ್ರ ಎಂದು ಪರಿಚಯಿಸಲು ಮುಂದಾಗುತ್ತೇವೆ. ಅಲ್ಲಿಂದಾಚೆಗೆ ಎಲ್ಲವನ್ನು ಮೊಬೈಲ್‌ನಲ್ಲೇ ನೋಡಬೇಕೇನೋ ಅನ್ನುವ ಭಾವನೆಯನ್ನು ನಾವು ಸೃಷ್ಟಿಸಿಬಿಡುತ್ತೇವೆ.

ಬೇಗನೇ ಎಲ್ಲವನ್ನೂ ಕಲಿಸಿಬಿಡಬೇಕೆಂಬ ಆತುರದಿಂದ ಮಕ್ಕಳ ನೈಜ ಬೆಳವಣಿಗೆಯನ್ನು ನಾವೇ ಕುಂಠಿತಗೊಳಿಸುತ್ತೇವೆ. ಸಣ್ಣ ಮೊಗ್ಗನ್ನು ಬಲವಂತವಾಗಿ ಅರಳಿಸುವ ಅಗತ್ಯವಿಲ್ಲ, ಅದು ತಾನಾಗಿಯೇ ಅರಳಿ ಸುಂದರ ಹೂವಾಗುವ ಪರಿಸರ ಕಲ್ಪಿಸಿದರೆ ಸಾಕು. ಈಗಿನ ಸೋಶಿಯಲ್ ಮೀಡಿಯಾ ಯುಗದಲ್ಲಂತೂ ಮಕ್ಕಳನ್ನು ಬಳಸಿಕೊಂಡು ಮಾಡುವ ರೀಲ್ಸ್‌ಗಳು ಒಂದೊಂದಲ್ಲ. ಮಕ್ಕಳು ಇಷ್ಟಪಟ್ಟು ಮಾಡುವುದಕ್ಕೂ, ತಂದೆ-ತಾಯಂದಿರ ಬಲವಂತದಿಂದ ಕಷ್ಟಪಟ್ಟು ಮಾಡುವುದಕ್ಕೂ ಬಹಳಷ್ಟು ವ್ಯತ್ಯಾಸವಿದೆ. ತಮ್ಮ ಪಬ್ಲಿಸಿಟಿಗೆ ಮಕ್ಕಳನ್ನು ಸರಕನ್ನಾಗಿ ಉಪಯೋಗಿಸಿಕೊಳ್ಳುವುದು ಬಹಳ ತಪ್ಪು. ತೊದಲು ಮಾತನಾಡುವ ಮಗುವಿನ ಬಾಯಲ್ಲಿ ಯಾವುದೋ

ವಿಚಿತ್ರ ಡೈಲಾಗ್ ಹೇಳಿಸುವುದು, ಅರ್ಥವಿಲ್ಲದ ಹಾಡನ್ನು ಹಾಡಿಸುವುದು, ಟ್ರೆಂಡ್ ಅಲ್ಲಿದೆ ಎನ್ನುತ್ತಾ ಯಾವುದೋ ಡ್ಯಾನ್ಸ್ ಮಾಡಿಸುವುದು ನಿಜವಾಗಿಯೂ ಅರ್ಥಹೀನ.

ನಮ್ಮ ಒತ್ತಡವನ್ನು ಮಕ್ಕಳ ಮೇಲೆ ಹೇರುವುದು ಬಹಳ ಅಪಾಯಕಾರಿ. ನಮ್ಮ ಅವಸರ, ಆತಂಕಕ್ಕೆ ಮುಗ್ಧ ಮನಸ್ಸುಗಳನ್ನು ಬಲಿ ಕೊಡುವುದು ಎಷ್ಟು ಸರಿ ಹೇಳಿ? ದೊಡ್ಡವರಾದ ನಾವು ಅರ್ಥ ಮಾಡಿಕೊಳ್ಳಬೇಕಾದ ಒಂದು ವಿಷಯವೇನೆಂದರೆ ಮಕ್ಕಳೊಂದಿಗೆ ಕಳೆದ ಸಮಯ ವ್ಯರ್ಥವಲ್ಲ. ಅವರ ಉತ್ತಮ ಬೆಳವಣಿಗೆಯಲ್ಲಿ ನಮ್ಮ ಪಾತ್ರ ಮುಖ್ಯವಾದುದಾಗಿದೆ. ಮಕ್ಕಳು ನಮ್ಮ ಪ್ರತಿಬಿಂಬ ಎಂದ ಮೇಲೆ ನಾವು ಅವರೊಂದಿಗೆ ಹೇಗಿರಬೇಕು ಎಂಬ ಎಚ್ಚರ ನಮಗಿರಬೇಕು. ಚಿಕ್ಕ ವಯಸ್ಸಿನಲ್ಲಿ ಮಕ್ಕಳ ಗ್ರಹಿಕೆ ಅಯಸ್ಕಾಂತವಿದ್ದಂತೆ. ಕಲಿಕೆಯ ಶಕ್ತಿ ಹೆಚ್ಚಿರುವ ಆ ಸಮಯದಲ್ಲಿ, ಅವರ ಗ್ರಹಿಕೆಗೆ ನಾವೇನು ಕೊಡುತ್ತಿದ್ದೇವೆ ಎಂಬುದು ಮುಖ್ಯವಾಗುತ್ತದೆ.

ಮೊಬೈಲ್ ಹಿಡಿದು ಅಥವಾ ಯಾವುದೋ ಬೇಡದಿರುವ ಕಾರ್ಯಕ್ರಮವನ್ನು ನೋಡುತ್ತಾ ಕುಳಿತರೆ, ಅವರು ಅದನ್ನೆ ಅನುಸರಿಸುವರು. ಉದಾಹರಣೆಗೆ ಸಂಗೀತ ಪರಿಸರವಿರುವ ಒಂದು ಕುಟುಂಬದಲ್ಲಿ ಹುಟ್ಟಿದ ಕೂಸಿಗೆ ಸಂಗೀತವು ಹೇಗೆ ತಾನಾಗಿಯೇ ಒಲಿದು ಬರುತ್ತದೆ? ವಂಶವಾಹಿಯಾಗಿ ಬಂದಿರಬಹುದಾದರೂ, ಸ್ವರ-ರಾಗ-ತಾಳಗಳು ಆ ಮಗು ಬೆಳೆಯುವ ವಾತಾವರಣವನ್ನು ಆವರಿಸಿರುವಾಗ, ಮಗುವಿಗೆ ಅದು ಸಹಜವಾಗಿಯೇ ಬಂದುಬಿಡುವುದು. ಆದರಿಂದ ಮಗು ಬೆಳೆಯುವ ಆ ಸುತ್ತಲಿನ ವಾತಾವರಣವನ್ನು ಸುಂದರವಾಗಿಸುವುದು ಬಹಳ ಮುಖ್ಯ.

ಒಂದು ಮಗುವನ್ನು ಮತ್ತೊಂದು ಮಗುವಿನೊಂದಿಗೆ ಹೋಲಿಸುವುದು ಅವರ ಆತ್ಮವಿಶ್ವಾಸವನ್ನು ಕುಗ್ಗಿಸುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಸಂಪಿಗೆಯ ಮರದಲ್ಲಿ ಮಲ್ಲಿಗೆ ಹೂವು ಅರಳಲಿ ಎಂಬ ಆಸೆ ಹೊತ್ತು ಕೂರುವ ಬದಲು ಸಂಪಿಗೆ ಹೂವು ಸಂಪಿಗೆ ಮರದಲ್ಲಿ ಅರಳಲಿ, ಮಲ್ಲಿಗೆಯ ಹೂವು ಮಲ್ಲಿಗೆ ಗಿಡದಲ್ಲಿ ಬೆಳೆದು ಸುಗಂಧ ಬೀರಲಿ ಎಂಬ ಮನೋಭಾವ ಬೆಳೆಸಿಕೊಂಡರೆ ಒಳಿತು. 'ಎಷ್ಟು ಬೇಗ ಬೆಳೆದು ದೊಡ್ಡವರಾಗಿ ಬಿಟ್ಟರು?' ಅಂತ ನೆನೆಸಿಕೊಳ್ಳುವ ಕಾಲ ಬಂದೇ ಬರುತ್ತದೆ, ಹಾಗಿರುವಾಗ ಪುಟ್ಟ ಮಕ್ಕಳ ಆ ಕೆಲವು ವರ್ಷಗಳ ಮುಗ್ಧತೆಯನ್ನು ಸರಿಸುವ ಪ್ರಯತ್ನ ನಮ್ಮಿಂದ ಆಗುವುದು ಬೇಡ. ಮುಗ್ಧ ಮನಸಿನ ಮಕ್ಕಳ ಆಟ ಪಾಠಗಳನ್ನು ನೋಡುತ್ತಾ ನಾವೂ ಖುಷಿಯಿಂದಿರೋಣ..!

ಕ್ರಷ್ ಮನಸ್ಸಿನ ತೊಳಲಾಟ

• ಸಾವಿತ್ರಿ ಸಿದ್ದರಾಮು, ತುಮಕೂರು

ಕೇಳೋಕೆ ಒಂಥರಾ ಇದು ವಿಶೇಷ ಆಕರ್ಷಣಾ ಪದ. ನಿಜಕ್ಕೂ ಇದರ ವ್ಯಾಖ್ಯಾನವೂ ವಿಭಿನ್ನ. ಹಾಗಂತ ಇದೊಂದು ತೀರಾ ಕೆಟ್ಟ ಪದ ಅಂತ ಹೇಳೋದು ಕೂಡಾ ಸರಿಯಲ್ಲ.

ಇದು ತಾತ್ಕಾಲಿಕ ಭಾವನೆಗಳ ಆಕರ್ಷಣೆ, ಹಾಗೆಯೇ ಮನಸ್ಸಿನ ವ್ಯಾಮೋಹವೂ ಕೂಡಾ ಹೌದು. ಕ್ರಷ್ ಎಂಬುದು ಒಬ್ಬ ವ್ಯಕ್ತಿಯ ಬಗ್ಗೆ ಹೊಂದಿರುವ ತೀವ್ರ ಮೆಚ್ಚುಗೆಯ ಭಾವನೆ. ಇದು ಪ್ರೀತಿಯ ಭಾವನೆಯನ್ನೇ ಹೋಲುತ್ತದೆ, ಆದರೆ ಅದಕ್ಕಿಂತ ವಿಭಿನ್ನವಾಗಿದೆ.

ಒಬ್ಬ ವ್ಯಕ್ತಿಯ ನೋಟ, ಗುಣ, ಮಾತುಗಾರಿಕೆ, ವರ್ತನೆ ಅಥವಾ ಸೌಂದರ್ಯ ಇನ್ನು ಮುಂತಾದವುಗಳಿಂದ ಆಕರ್ಷಿತರಾಗುವುದೇ ಕ್ರಷ್. ಆದರೆ ಅದು ಪ್ರೀತಿಯಂತೆ ದೀರ್ಘಕಾಲ ಉಳಿಯದೇ ತಾತ್ಕಾಲಿಕ ಭಾವನೆಯಾಗಿಯೂ ಆಗಿರಬಹುದು. ಆ ಕ್ಷಣದಲ್ಲಿ ಮಾತ್ರ ತುಂಬಾ ಪ್ರಬಲವಾಗಿರಬಹುದು. ಮೆಚ್ಚುಗೆ ಅಥವಾ ಅಭಿಮಾನವೂ ಆಗಿರಬಹುದು.ಇದೊಂದು ತರಹದ ಮನಸ್ಸಿನ ಭಾವನೆಗಳ ಅಮಲು. ಹಿಡಿತಕ್ಕೆ ಸಿಗಂತಹ ಹೃದಯದ ಒದ್ದಾಟ. ಏನೋ ಒಂಥರದ ಸೆಳೆತ, ಭಾವಗಳ ಸೆಣಸಾಟ. ಅಲ್ಲದೇ ಮುಜುಗರ, ಭಯ, ಉತ್ಸಾಹ, ನಾಚಿಕೆ ಹಲವಾರು ಭಾವನೆಗಳೂ ಇದರಲ್ಲಿ ಸೇರಿಬಿಡಬಹುದು.ಕೈಗೆಟುಕದ ನಕ್ಷತ್ರವೆಂದೂ ತಿಳಿದಿದ್ದರೂ ಹಿಡಿಯಲು ಪ್ರಯತ್ನಿಸುವುದೇ ಕ್ರಷ್, ದಕ್ಕದ ವಿಷಯಗಳಾದರೂ ತೀರದ ವ್ಯಾಮೋಹ. ಇದು ಎಲ್ಲಾ ವಯಸ್ಸಿನವರಿಗೂ ಇರುವ ಸಹಜ ಗುಣ. ಪ್ರತಿಯೊಬ್ಬರ ಜೀವನದಲ್ಲೂ ಇದು ಒಮ್ಮೊಮ್ಮೆ ತನ್ನ ಪ್ರಭಾವವನ್ನು ಬೀರಿಯೇ ತೀರುತ್ತದೆ.

ಹೆಣ್ಣು ಮಕ್ಕಳಿಗೆ ಸಿನಿಮಾ ಹೀರೋಗಳು, ಕ್ರಿಕೆಟ್ ಆಟಗಾರರು, ಮುಂತಾದವರ ಮೇಲೆ ಕ್ರಷ್ ಇದ್ದರೆ, ಗಂಡು ಮಕ್ಕಳಿಗೆ ಹೀರೋಯಿನ್‌ಗಳು, ಮಹಿಳಾ ಕ್ರೀಡಾಪಟುಗಳು ಹೀಗೆ ಹಲವರ ಮೇಲೆ ಕ್ರಷ್ ಹುಟ್ಟುವುದು ಸಾಮಾನ್ಯ, ಆದರೆ ಇದು ಹುಚ್ಚು ಅಭಿಮಾನವಷ್ಟೇ.. ಸಿನಿಮಾಕ್ಕೂ ನಿಜ ಜೀವನಕ್ಕೂ ವ್ಯತ್ಯಾಸವಿದೆ, ಅಥವಾ ಕ್ರೀಡಾಪಟುಗಳಿಗೂ ಅವರದ್ದೇ ಆದಂತಹ ಮನೋಭಾವಗಳಿವೆ. ಹಾಗಿರುವಾಗ ಸಾಮಾನ್ಯ ಮನುಷ್ಯನ ಅಭಿಲಾಷೆ ಅವರ ಮನಸ್ಸನ್ನು ಮುಟ್ಟುವುದು ಬಹುದೂರದ ಮಾತು. ಹಾಗಾಗಿ ಅಭಿಮಾನವಿರಬೇಕಷ್ಟೇ, ಅಂಧಾಭಿಮಾನ ಬದುಕಿಗೆ ತರವಲ್ಲ.

ಮನಸ್ಸಿನಲ್ಲಿ ಇಂತಿಂಥವರೇ ನಮ್ಮ ಬಾಳಸಂಗಾತಿಯಾಗಬೇಕೆಂದು ಕಲ್ಪಿಸಿಕೊಂಡಿರುವಾಗ, ಅಂತಹದ್ದೇ ಗುಣಗಳನ್ನು ಅಥವಾ ಸೌಂದರ್ಯವನ್ನು ಹೊಂದಿರುವ ವ್ಯಕ್ತಿಯನ್ನು ಕಂಡಾಗ ಅವರ ಕಡೆಗೆ ನಮ್ಮ ಹೆಚ್ಚು ಗಮನ ಹರಿಯುವುದು ಸಹಜ. ಕೆಲವರು ಲವ್ ಅಟ್ ಫಸ್ಟ್ ಸೈಟ್ ಅಂತಾರೆ, ಅದು ನಿಜವೋ ಸುಳ್ಳೋ ಗೊತ್ತಿಲ್ಲ. ಆದರೆ ಅಲ್ಲಿ ಮೊದಲು ಹುಟ್ಟುವುದು ಕ್ರಷ್, ಆನಂತರ ಪ್ರೀತಿಯಾಗಬಹುದೇನೋ, ಆದರೆ ಎಲ್ಲಾ ಕ್ರಷ್‌ಗಳು ಪ್ರೀತಿಯಾಗುವುದಿಲ್ಲ, ಕ್ರಷ್ ಒಮ್ಮೆ ಮನಸನ್ನು ಆವರಿಸಿದೆ ಸಾಕು, ನಮಗೆ ತಿಳಿಯದಂತೆ ನಮ್ಮ ಮನಸ್ಸು ಮತ್ತು ದೇಹ ವಿಚಿತ್ರವಾಗಿ ವರ್ತಿಸುತ್ತಿರುತ್ತದೆ. ಹೊಟ್ಟೆಯೊಳಗೆ ಚಿಟ್ಟೆ ಬಿಟ್ಟಂತೆ ಅನುಭವ, ಎದೆಯೊಳಗೆ ಕಲರವ,ನವಿರಾದ ಭಾವ ಜಗತ್ತನ್ನೇ ಮರೆಯುವಂತಹ ಖುಷಿ, ಹಾದಿ ತಪ್ಪಿ ನಡೆಯುವ ಹೆಜ್ಜೆಗಳು, ಕಾರಣವಿಲ್ಲದೇ ಮೂಡುವ ಕಿರುನಗೆ, ಇವು ಕ್ರಷ್ ಆದ ವ್ಯಕ್ತಿಯನ್ನು ಕಂಡ ಸಮಯದಲ್ಲಿ ಮೂಡುವ ಭಾವನೆಗಳವು. ಆದರೆ ಅವರನ್ನು ನಾವು ಮಿಸ್ ಮಾಡಿಕೊಳ್ಳುತ್ತೇವೆ ಅಥವಾ ಮತ್ತೆಂದೂ ಸಿಗದಂತೆ ಕಳೆದುಕೊಳ್ಳುತ್ತಿದ್ದೇವೆ ಅನ್ನುವ ಸಂದರ್ಭದಲ್ಲಿ ಅದರ ತದ್ವಿರುದ್ಧವಾದ ಭಾವಗಳೇ ಹೃದಯಕ್ಕೆ ತುಂಬಿಕೊಂಡುಬಿಡುತ್ತವೆ. ಆತಂಕ, ಭಯ, ಅಸಹಾಯಕತೆ,ಬೇಸರ, ಭಾರವಾಗುವ ಮನಸ್ಸು ಒಂದೇ ಎರಡೇ ನಾನಾ ರೀತಿಯ ತುಮುಲಗಳು ಎದೆಯೊಳಗೆ ತಾಂಡವವಾಡುತ್ತಿರುತ್ತವೆ.

ಯುವಪೀಳಿಗೆಯವರೇ ಹೆಚ್ಚಾಗಿ ಕ್ರಷ್ ಎಂಬ ಭಾವನೆಗೆ ಒಳಗಾಗುವವರು, ಹರೆಯದ ವಯಸ್ಸಿನ, ಮನಸ್ಸಿನ ತೊಳಲಾಟಕ್ಕೆ ಬಹುಬೇಗ ಬಂಧಿಯಾಗುವವರು. ಕ್ರಷ್‌ನ್ನು ಪ್ರೀತಿಯಾಗಿ ಪಡೆದವರೂ ಇದ್ದಾರೆ, ಸಿಕ್ಕದೇ ಹುಡುಕಾಡುತ್ತ ನರಳಾಡುವವರೂ ಇದ್ದಾರೆ, ಕೆಲವರಂತೂ ಕ್ರಷ್‌ನ ಕ್ರಾಂತಿಗೆ ಸಾವಿಗೆ ಶರಣಾಗಿ ಕಣ್ಮರೆಯೂ ಆಗಿದ್ದಾರೆ. ಹಾಗಾಗಿ ಯಾವುದೇ ವ್ಯಕ್ತಿಯ ಮೇಲಿನ ನಮ್ಮ ಭಾವನೆ ಆದಷ್ಟು ಹಿಡಿತದಲ್ಲಿದ್ದರಷ್ಟೇ ನಮಗೆ ಒಳಿತು.

ಪ್ರೀತಿಯ ಪಯಣ: 7 ಸಾವಿರ ಕಿಲೋಮೀಟರ್ ಸಾಹಸ

1975ರ ಬೇಸಿಗೆಯ ಒಂದು ದಿನ, ದೆಹಲಿಯ ಜನನಿಬಿಡ ರಸ್ತೆಯ ಬದಿಯಲ್ಲಿ ಯುವ ಕಲಾವಿದ ಪ್ರದ್ಯುಮ್ನ ಕುಮಾರ್ (ಪಿಕೆ) ಕುಳಿತು ಅಪರಿಚಿತರ ಚಿತ್ರಗಳನ್ನು ಬಿಡಿಸುತ್ತಿದ್ದರು. ಅವರ ಕೈಗಳು ಇದ್ದಿಲಿನಿಂದ ಕಪ್ಪಾಗಿದ್ದರೂ, ಅವರ ಕುಂಚದಿಂದ ಮೂಡಿಬರುತ್ತಿದ್ದ ರೇಖೆಗಳು ಜನರ ಆತ್ಮವನ್ನೇ ಹಿಡಿದಿಡುವಂತಿದ್ದವು. ಭಾರತದ ತೀರಾ ಕೆಳವರ್ಗದಲ್ಲಿ ಜನಿಸಿದ್ದ ಪಿಕೆ ಅವರಿಗೆ ಸಮಾಜವು ಅನೇಕ ಬಾರಿ ಅವಮಾನ ಮಾಡಿತ್ತು, ಆದರೆ ಅವರ ಕಲೆಯು ಅವರಿಗೆ ಗೌರವ ಮತ್ತು ಧ್ವನಿಯನ್ನು ನೀಡಿತ್ತು.

ಅದೇ ದಿನ, ಸ್ವೀಡನ್ ದೇಶದ ಶ್ರೀಮಂತ ಮನೆತನಕ್ಕೆ ಸೇರಿದ ಷಾರ್ಲೆಟ್ ಎಂಬ ಯುವತಿ ಅವರ ಮುಂದೆ ಬಂದು ನಿಂತಳು. ಅವಳ ಬಂಗಾರದ ಬಣ್ಣದ ಕೂದಲು ಮತ್ತು ಹೊಳೆಯುವ ಕಣ್ಣುಗಳು ಪಿಕೆಯನ್ನು ಸೆಳೆದವು. ಪಿಕೆ ಅವಳ ಚಿತ್ರವನ್ನು ಬಿಡಿಸಿದಾಗ, ಅವರಿಬ್ಬರ ನಡುವೆ ಮಾತಿಗೂ ಮೀರಿದ ಒಂದು ಅದೃಶ್ಯ ಸಂಬಂಧ ಏರ್ಪಟ್ಟಿತು. ಕೆಲವೇ ವಾರಗಳಲ್ಲಿ ಅವರ ಸ್ನೇಹ ಪ್ರೀತಿಯಾಗಿ ಅರಳಿ, ದೆಹಲಿಯ ಆಕಾಶದ ಕೆಳಗೆ ಸಂಪ್ರದಾಯಬದ್ಧವಾಗಿ ಮದುವೆಯಾದರು.

ಆದರೆ ವಿಧಿ ಅವರನ್ನು ಪರೀಕ್ಷಿಸಿತು. ಷಾರ್ಲೆಟ್ ಸ್ವೀಡನ್‌ಗೆ ಹಿಂತಿರುಗುವ ಸಮಯ ಬಂದಿತು. ಅವಳು ಪಿಕೆಯನ್ನು ತನ್ನೊಂದಿಗೆ ಬರಲು ಕರೆದಳು, ಅಷ್ಟೇ ಅಲ್ಲ ವಿಮಾನದ ಟಿಕೆಟ್ ಕೊಡಿಸುವುದಾಗಿ ಕೂಡ ಹೇಳಿದಳು. ಆದರೆ ಸ್ವಾಭಿಮಾನಿ ಪಿಕೆ ಅದನ್ನು ನಿರಾಕರಿಸಿದರು. 'ನಾನು ನನ್ನ ಸ್ವಂತ ಶಕ್ತಿಯ ಮೇಲೆ ನಿನ್ನ ಬಳಿಗೆ ಬರುತ್ತೇನೆ, ನಿರೀಕ್ಷಿಸು' ಎಂದು ಭಾಷೆ ನೀಡಿದರು.

1978ರ ಆರಂಭದಲ್ಲಿ, ಪಿಕೆ ತಮ್ಮ ಜೀವನದ ಅತ್ಯಂತ ಸಾಹಸಮಯ ನಿರ್ಧಾರ ಕೈಗೊಂಡರು. ಒಂದು ಸಣ್ಣ ಬ್ಯಾಗ್ ಮತ್ತು ಒಂದು ಹಳೆಯ ಸೈಕಲ್ ಹಿಡಿದು ಅವರು ಸ್ವೀಡನ್ ಕಡೆಗೆ ಪ್ರಯಾಣ ಬೆಳೆಸಿದರು. ಅವರ ಬಳಿ ಹಣವಿರಲಿಲ್ಲ, ಕೇವಲ ಪ್ರೀತಿಸಿದ ಜೀವ ಷಾರ್ಲೆಟ್ ವಿಳಾಸವಿತ್ತು. ಪಾಕಿಸ್ತಾನ, ಅಫ್ಘಾನಿಸ್ತಾನ, ಇರಾನ್, ಟರ್ಕಿ, ಯುಗೊಸ್ಲಾವಿಯಾ, ಜರ್ಮನಿ ಮತ್ತು ಡೆನ್ಮಾರ್ಕ್ ದೇಶಗಳ ಮೂಲಕ ಅವರು ಸೈಕಲ್ ತುಳಿಯುತ್ತಾ ಸಾಗಿದರು. ಹಾದಿಯಲ್ಲಿ ಸಿಕ್ಕವರ ಚಿತ್ರ ಬಿಡಿಸಿ ಬಂದ ಅಲ್ಪ ಹಣದಲ್ಲಿ ಊಟ ಮಾಡುತ್ತಾ, ಕಾಲ್ನಡಿಗೆ ಮತ್ತು ಸೈಕಲ್ ಮೂಲಕವೇ ತಿಂಗಳುಗಟ್ಟಲೆ ಸಾಗಿದರು.

ನಾಲ್ಕು ತಿಂಗಳ ಕಠಿಣ ಪರಿಶ್ರಮ ಮತ್ತು 7,000 ಕಿಲೋಮೀಟರ್‌ಗಳಿಗೂ ಹೆಚ್ಚು ದೂರದ ಪ್ರಯಾಣದ ನಂತರ, ಪಿಕೆ ಸ್ವೀಡನ್‌ನಲ್ಲಿರುವ ಷಾರ್ಲೆಟ್ ಮನೆಯಂಗಳ ತಲುಪಿದರು. ಸುಸ್ತಾಗಿದ್ದರೂ ಅವರ ಕಣ್ಣಲ್ಲಿ ಗೆಲುವಿನ ನಗೆಯಿತ್ತು. ಷಾರ್ಲೆಟ್ ಬಾಗಿಲು ತೆರೆದಾಗ ಇಬ್ಬರ ಕಂಗಳಲ್ಲೂ ಆನಂದಭಾಷ್ಪ. ನಂತರ ಅವರು ಅಲ್ಲಿಯೇ ನೆಲೆಸಿ, ಸುಂದರ ಸಂಸಾರವನ್ನು ಕಟ್ಟಿಕೊಂಡರು. ಪಿಕೆ ಸ್ವೀಡನ್‌ನಲ್ಲಿ ಹೆಸರಾಂತ ಕಲಾವಿದರಾಗಿ ಗುರುತಿಸಿಕೊಂಡರು.

ಜಾತಿ, ವರ್ಗ ಮತ್ತು ದೇಶದ ಗಡಿಗಳನ್ನು ಮೀರಿದ ಈ ನಿಜವಾದ ಘಟನೆಯು ಮನಸ್ಸಿದ್ದರೆ ಮಾರ್ಗ, ಅಲ್ಲದೆ ನಿಜವಾದ ಪ್ರೀತಿ ಅಸಾಧ್ಯವಾದುದನ್ನೂ ಸಾಧಿಸಬಲ್ಲದು ಎಂಬುದಕ್ಕೆ ಎಂತಹವರಿಗೂ ಪ್ರೇರಣೆ.

ಇಂದಿನ ದಿನಗಳಲ್ಲಿ ವಿದ್ಯಾವಂತರಾಗಿ, ಒಳ್ಳೆಯ ಉದ್ಯೋಗದಲ್ಲಿದ್ದರೂ ಕೂಡ ಮದುವೆಯಾಗುವಾಗ ನೂರೊಂದು ಗೊಂದಲಗಳು ಕಾಡುತ್ತವೆ. ಬರುವ ಸಂಬಳ ಸಾಕಾಗುತ್ತದೆಯೇ? ಇರುವ ಆಸ್ತಿ ಎಲ್ಲಾ ನಮಗೇ ಸೇರುತ್ತದೆಯೇ? ತಂದೆ-ತಾಯಿ ಜತೆಗಿದ್ದರೆ ಅನಾನುಕೂಲವಲ್ಲವೇ? ಹೀಗೆ ಸಿಕ್ಕಾಪಟ್ಟೆ ಲೆಕ್ಕಾಚಾರಗಳಲ್ಲಿ ಭಾವನಾತ್ಮಕ ಸಂಬಂಧಗಳಲ್ಲಿ ಇರಬೇಕಾದ ಪವಿತ್ರ್ಯತೆ, ಹೊಂದಿಕೊಂಡು ಹೋಗುವ ಸೌಜನ್ಯ, ಜೊತೆಯಾಗಿ ಬಂದದ್ದನ್ನು ಸ್ವೀಕರಿಸಿ ಬದುಕನ್ನು ಕಟ್ಟಿಕೊಳ್ಳುವ ಆತ್ಮಬಲ ಅನೇಕ ಬಾರಿ ಗಂಡು-ಹೆಣ್ಣು ಇಬ್ಬರಲ್ಲೂ ಮರೆಯಾಗುತ್ತಿದೆ. ಮದುವೆಯಾಗಲು ಮೊದಲು ಇಬ್ಬರ ನಡುವೆ ಸ್ನೇಹ, ಪ್ರೀತಿ ಇರಬೇಕು, ಒಳ್ಳೆಯ ಗುಣ, ಕುಟುಂಬದ ಹಿನ್ನೆಲೆ ಇದ್ದಾಗ ಮಿಕ್ಕಿದ್ದೆಲ್ಲವನ್ನೂ ಕೂಡ ಕಾಲಕ್ಕೆ ತಕ್ಕಂತೆ ಹೊಂದಿಸಿಕೊಳ್ಳುತ್ತಾ ಹೋಗಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಏನೇ ಬಂದರೂ ಜೊತೆಯಾಗಿ ಅದನ್ನು ಸರಿಪಡಿಸಿಕೊಂಡು ಬದುಕುತ್ತೇವೆ ಎನ್ನುವ ಮಾಗಿದ ಮನಸ್ಥಿತಿ ಇಬ್ಬರಿಗೂ ಇರುವುದು ಬಹಳ ಮುಖ್ಯ. ಆಗ ಮಾತ್ರ ಜೀವನದುದ್ದಕ್ಕೂ ಅನುರೂಪದ ಬಾಳಸಂಗಾತಿಗಳಾಗಿ ಜತೆಯಾಗಿರಬಹುದು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ನಮ್ಮ ನೆಮ್ಮದಿ ನಮ್ಮ ಜವಾಬ್ದಾರಿ

• ಎಸ್. ಎನ್. ಭಟ್, ಸೈಪಂಗಲ್ಲು

ನಮ್ಮ ಸಾವಿನ ನಂತರ ಈ ಜಗತ್ತು ನಮ್ಮನ್ನು ಅದ್ಭುತವಾಗಿ ಸ್ಮರಿಸುತ್ತದೆ ಅಥವಾ ನಮ್ಮ ಅನುಪಸ್ಥಿತಿಗಾಗಿ ಮರುಗುತ್ತದೆ ಎಂಬ ಭ್ರಮೆಯಲ್ಲಿ ಬದುಕುವುದು ಅತಿದೊಡ್ಡ ವ್ಯರ್ಥ ಪ್ರಯತ್ನ. ಕಟು ಸತ್ಯವೇನೆಂದರೆ, ಉಸಿರು ನಿಂತ ಮೇಲೆ ನೀವು ಈ ಲೋಕಕ್ಕೆ ಒಬ್ಬ ನಾಯಕನಲ್ಲ, ಕೇವಲ ಒಂದು ದೇಹ ಮಾತ್ರ. ನಮ್ಮನ್ನು ಗಾಢವಾಗಿ ಪ್ರೀತಿಸುವವರು ಒಂದು ಅಥವಾ ಎರಡು ದಿನ ಕಣ್ಣೀರಿಡಬಹುದು, ಆದರೆ ತದನಂತರ ವಾಸ್ತವದ ಬದುಕು ಎಲ್ಲವನ್ನೂ ಮರೆಸಿಬಿಡುತ್ತದೆ. ಶಾಸ್ತ್ರಗಳು ಆರಂಭವಾಗುತ್ತವೆ, ಅತಿಥಿಗಳ ಆಗಮನವಾಗುತ್ತದೆ, ಅಂತಿಮವಾಗಿ ಭೋಜನದ ಮೆನು ಚರ್ಚೆಯಾಗಿ ಎಲೆಗಳ ಮೇಲೆ ಊಟ ಬಡಿಸಲ್ಪಡುತ್ತದೆ. ಇದು ಅವರಿಗೆ ಇಷ್ಟವಾದ ಆಹಾರ ಎಂದು ಜನ ಮಾತನಾಡಿಕೊಳ್ಳಬಹುದು.

ಕೇವಲ ಎರಡು ವಾರ ಕಳೆಯುವುದರೊಳಗೆ ಜನರ ದೈನಂದಿನ ಸಂಭಾಷಣೆಯಲ್ಲಿ ನಾವು ಮಾಯವಾಗುತ್ತೇವೆ. ನಾವು ಅಲಂಕರಿಸಿದ್ದ ಸ್ಥಾನಕ್ಕೆ ಮತ್ತೊಬ್ಬರು ಬರುತ್ತಾರೆ, ನಮ್ಮ ಜವಾಬ್ದಾರಿಗಳನ್ನು ಬೇರೆಯವರು ವಹಿಸಿಕೊಳ್ಳುತ್ತಾರೆ. ಈ ಜಗತ್ತು ಎಂದಿಗೂ ಯಾರಿಗಾಗಿಯೂ ನಿಲ್ಲುವುದಿಲ್ಲ, ಅದು ತನ್ನ ಪಾಡಿಗೆ ತಾನು ಚಲಿಸುತ್ತಲೇ ಇರುತ್ತದೆ.

ಸಮಾಜಕ್ಕಾಗಿ ಅಥವಾ ಕುಟುಂಬಕ್ಕಾಗಿ ತನ್ನೆಲ್ಲಾ ಆಸೆಗಳನ್ನು ಬಲಿಗೊಟ್ಟು, ಬೇರೆಯವರು ಏನೆಂದುಕೊಂಡಾರು? ಎಂಬ ಭಯದಿಂದ ಬದುಕುವವರು ಕೊನೆಗೆ ಉಳಿಸಿಕೊಳ್ಳುವುದು ಏನನ್ನೂ ಇಲ್ಲ. ಮರಣದ ನಂತರ ಜನರು ತ್ಯಾಗಕ್ಕಿಂತ ಹೆಚ್ಚಾಗಿ ಅಂದಿನ ಊಟದ ರುಚಿಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುತ್ತಾರೆ. ಹಾಗಾಗಿ, ಕೇವಲ ಇತರರನ್ನು ಮೆಚ್ಚಿಸಲು ಅಮೂಲ್ಯ ಜೀವನವನ್ನು ವ್ಯಯಿಸಬೇಡಿ. ಸುಳ್ಳು ಸಂಬಂಧಗಳು ಅಥವಾ ನಿಷ್ಠೆಯ ಹೆಸರಿನಲ್ಲಿ ಸ್ವಂತ ಸುಖವನ್ನು ಬಲಿಕೊಡಬೇಡಿ. ಒಬ್ಬ ನಿಜವಾದ ಹೋರಾಟಗಾರನಂತೆ ಬದುಕುವುದನ್ನು ಕಲಿಯಿರಿ; ನಿಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿ, ನಿಮ್ಮ ಆಂತರಿಕ ಶಾಂತಿಯನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿ. ನಿಮ್ಮನ್ನು ನೀವು ಗೌರವಿಸಿಕೊಳ್ಳಿ ಮತ್ತು ಪ್ರತಿ ಕ್ಷಣವನ್ನು ಆಸ್ವಾದಿಸಿ. ಉಸಿರಿರುವಾಗಲೇ ಬದುಕನ್ನು ಸಂಭ್ರಮಿಸುವುದು ಮುಖ್ಯವೇ ಹೊರತು, ನಾವು ಹೋದ ಮೇಲೆ ಜಗತ್ತು ಏನು ಹೇಳುತ್ತದೆ ಎಂಬ ಚಿಂತೆಯಲ್ಲ.

ಇಂದಿನಿಂದಲೇ ನಿಮಗಾಗಿ ಬದುಕುವುದನ್ನು ಅಭ್ಯಾಸ ಮಾಡಿ, ಏಕೆಂದರೆ ಈ ಬದುಕು ಕೇವಲ ನಿಮ್ಮದು. ನಮ್ಮದೂ ಅದೇ ದಾರಿ ಅಲ್ಲವೇ? ಇನ್ನೊಬ್ಬರ ಬಗ್ಗೆ ಮಾತನಾಡುವ ಮೊದಲು ನಾವೇ ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳೋಣ. ನಾವೂ ಸಹ ಇದನ್ನೇ ಮಾಡಿಲ್ಲವೇ? ನಮ್ಮನ್ನು ಅಗಲಿದ ಆತ್ಮೀಯರನ್ನು ನಾವು ಎಷ್ಟು ದಿನ ನೆನಪಿಟ್ಟುಕೊಂಡಿದ್ದೇವೆ? ಆರಂಭದ ಕೆಲವು ದಿನಗಳ ಕಣ್ಣೀರು ಹಾರಿದ ನಂತರ, ನಾವೂ ನಮ್ಮ ಕೆಲಸ, ಉದ್ಯೋಗ ಮತ್ತು ಹಬ್ಬ-ಹರಿದಿನಗಳಲ್ಲಿ ಮಗ್ನರಾಗಲಿಲ್ಲವೇ? ನಮಗಾಗಿ ಜೀವನವನ್ನೇ ಸವೆಸಿದ ಹಿರಿಯರ ನೆನಪು ಇಂದು ಕೇವಲ ಗೋಡೆಯ ಮೇಲಿನ ಪಟಕ್ಕೆ ಅಥವಾ ವರ್ಷಕ್ಕೊಮ್ಮೆ ಬರುವ ತಿಥಿಗೆ ಸೀಮಿತವಾಗಿಲ್ಲವೇ? ಪ್ರಕೃತಿಯ ನಿಯಮವೇ ಹಾಗಿದೆ; ಕಾಲ ಕಳೆದಂತೆ ನೋವು ಮರೆಯಾಗುತ್ತದೆ, ನೆನಪುಗಳು ಮಸುಕಾಗುತ್ತವೆ. ನಾವು ಇತರರಿಂದ ಏನನ್ನು ನಿರೀಕ್ಷಿಸುತ್ತಿದ್ದೇವೋ, ಅದನ್ನೇ ನಾವೂ ಮಾಡುತ್ತಿದ್ದೇವೆ ಎಂಬ ಅರಿವು ನಮಗಾದಾಗ, ಈ ಲೋಕದ ಮೇಲೆ ನಮಗಿರುವ ವ್ಯಾಮೋಹ ತಾನಾಗಿಯೇ ಕಡಿಮೆಯಾಗುತ್ತದೆ.

ಜಗತ್ತು ನಮ್ಮನ್ನು ಹೊಗಳಲಿ ಅಥವಾ ತೆಗಳಲಿ, ಅದು ಯಾವುದೂ ಶಾಶ್ವತವಲ್ಲ. ನಾವು ಹೋದ ನಂತರ ನಮ್ಮ ಮನೆಯವರೇ ನಮ್ಮನ್ನು ಮರೆಯುವಾಗ, ಇನ್ನು ಜಗತ್ತಿನ ಕತೆಯನ್ನು ಕೇಳಬೇಕೆ? ಹಾಗಾಗಿ ಬೇರೆಯವರು ಏನಂದು ಕೊಳ್ಳುತ್ತಾರೆ ಎಂಬ ಮಾನಸಿಕ ಸಂಕೋಲೆಯಿಂದ ಹೊರಬನ್ನಿ. ಸಮಾಜದ ಮೆಚ್ಚುಗೆಗಾಗಿ ನಿಮ್ಮ ಇಷ್ಟಗಳನ್ನು ಬಲಿಕೊಡಬೇಡಿ. ಬದುಕು ಇರುವುದು ಪ್ರದರ್ಶನಕ್ಕಲ್ಲ, ಬದಲಾಗಿ ಅನುಭವಿಸುವುದಕ್ಕೆ. ಉಸಿರಿರುವಾಗಲೇ ಮನಸಾರೆ ನಗಿ, ಪ್ರೀತಿ ಹಂಚಿ ಮತ್ತು ಪ್ರತಿಯೊಂದು ಕ್ಷಣವನ್ನೂ ನಿಮಗಾಗಿ ಬದುಕಿ. ಏಕೆಂದರೆ, ಅಂತಿಮವಾಗಿ ಉಳಿಯುವುದು ನೀವು ನಡೆಸಿದ ಸಾರ್ಥಕ ಬದುಕು ಮಾತ್ರವೇ ಹೊರತು, ನೀವು ಸಂಪಾದಿಸಿದ ಜನರ ಪ್ರಶಂಸೆಯಲ್ಲ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	■	■	3		4
	■	5		6			■	
■	■		■		■		■	■
7			■		■	8		9
	■	■	■	■	■	■	■	
10		11	■	12	■	13		
■	■		■		■		■	■
14	■	15					■	16
17			■	■	■	18		

ಎಡದಿಂದ ಬಲಕ್ಕೆ

1. ಗಿಡಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ರಸ ಔಷಧರೂಪ (3)
3. ತಪ್ಪು ಮಾಡಿದವರನ್ನು ಕ್ಷಮಿಸು (3)
5. ದೇಶದ ಪ್ರಜೆಗಳ ಸಂಖ್ಯೆಯನ್ನು ಲೆಕ್ಕ ಹಾಕುವ ಪ್ರಕ್ರಿಯೆ (5)
7. ದಶಾವತಾರಗಳಲ್ಲಿ ಐದನೆಯದು (3)
8. ಕೈಯಲ್ಲಿರುವ ಹಣ ಮತ್ತೊಂದು ಒಡವೆಯೊಂದಿಗೆ ಬಂದಿದೆ (3)
10. ರೇಗಿಸು ಅಥವಾ ಪ್ರಚೋದಿಸು ಎನ್ನುವ ಪದ (3)
13. ಮತ್ತೊಬ್ಬರಿಗೆ ನೀಡುವ ಆಶ್ರಯ (3)
15. ಗಾಳಿಸೇವನೆಗಾಗಿ ನಡೆಸಿದ ತಿರುಗಾಟ (5)
17. ಇನ್ನೊಂದು ಬೆಲೆಯನ್ನು ಕಟ್ಟಿಕೊಂಡಿರುವ ಸ್ತರ (3)
18. ತಿರುಗಿ ನಿಂತಿರುವ ನೀರಿನ ಅಧಿದೇವತೆ (3)

ಮೇಲಿಂದ ಕೆಳಕ್ಕೆ

1. ಶಿಲೆಗೆ ಆಡುಮಾತಿನಲ್ಲಿ ಹೀಗೆನ್ನುವರು (2)
2. ಮನೆಯ ಮುಖ್ಯಸ್ಥ (4)
3. ಬುದ್ಧಿಯಿಲ್ಲದವನು, ದಡ್ಡ (4)
4. ಸರಸರನೆ ಬಂದಿರುವ ದೇವತೆ (2)
6. ಎಲ್ಲೆಯಲ್ಲಿ ಸಿಕ್ಕಿದ ಮಣ್ಣಿನ ಪಾತ್ರೆ (3)
7. ಪದ್ಧತಿ ಅಥವಾ ಸಂಪ್ರದಾಯ (3)
9. ಕೊಡಗಿನಲ್ಲಿರುವ ಆನೆ ಬಿಡಾರ (3)
11. ಸೋಮವಾರದ ನಂತರದ ದಿನಕ್ಕೆ ಇನ್ನೊಂದು ಹೆಸರು (4)
12. ಅಡಗಿಕೊಳ್ಳಲು ಸೂಕ್ತವಾಗಿದೆ ಕಾಡು (3)
13. ಆಹಾ, ಹೊರಡುವ ಭರದಲ್ಲಿರುವ ಹೆಂಗಳೆಯರಿಗೆ ಒಡವೆ ಇಲ್ಲದಿದ್ದರೆ ಆದೀತೇ? (4)
14. ಸಂಕಟವೂ ಆಗಬಲ್ಲ ಉಷ್ಣತೆ (2)
16. ಯಮುನೂ ಆಗಬಲ್ಲ ವೇಗ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ಕಷಾಯ 3. ಮನ್ನಿಸು 5. ಜನಗಣತಿ 7. ವಾಮನ 8. ನಗದು 10. ಕೆಣಕು 13. ಆಸರೆ 15. ವಾಯುವಿಹಾರ 17. ಪದರ 18. ವರುಣ

ಮೇಲಿಂದ ಕೆಳಕ್ಕೆ: 1. ಕಲ್ಲು 2. ಯಜಮಾನ 3. ಮತಿಹೀನ 4. ಸುರ 6. ಗಡಿಗೆ 7. ವಾಡಿಕೆ 9. ದುಬಾರೆ 11. ಕುಜವಾರ 12. ಅಡವಿ 13. ಆಭರಣ 14. ತಾಪ 16. ಜವ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಗೂಗಲ್ ಜೆಮಿನಿ ಜತೆ ಬಿಸಿಸಿಐ 270 ಕೋಟಿ ರು. ಒಪ್ಪಂದ

ಮುಂಬೈ: 2026ರ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ಗೂ ಮುನ್ನ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಗೂಗಲ್‌ನ ಕೃತಕ ಬುದ್ಧಿಮತ್ತೆ ವೇದಿಕೆ ಜೆಮಿನಿ ಜತೆ 270 ಕೋಟಿ ರು. ಮೌಲ್ಯದ ಪ್ರಮುಖ ಪ್ರಾಯೋಜಕತ್ವ ಒಪ್ಪಂದವನ್ನು ಮಾಡಿಕೊಂಡಿದೆ. ಇದು ಐಪಿಎಲ್‌ನ ಮಹತ್ವವನ್ನು ಅರ್ಥ ಮಾಡಿಸಿದೆ. ಜೆಮಿನಿಯ ಪ್ರತಿಸ್ಪರ್ಧಿ ಚಾಟ್ ಜಿಪಿಟಿ ಈಗಾಗಲೇ ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ನೊಂದಿಗೆ ಸಂಬಂಧ ಹೊಂದಿದ್ದು, ಭಾರತೀಯ ಕ್ರಿಕೆಟ್‌ನಲ್ಲಿ ಕೃತಕ ಬುದ್ಧಿಮತ್ತೆ ವೇದಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಹೂಡಿಕೆ ಮಾಡುವ ಗಮನಾರ್ಹ ಪ್ರವೃತ್ತಿಯನ್ನು ಗುರುತಿಸುತ್ತದೆ. ಐಪಿಎಲ್ ಮತ್ತು ಡಬ್ಲ್ಯುಪಿಎಲ್ ನಾದ್ಯಂತ ಸ್ಪರ್ಧಾತ್ಮಕ ಎಐ ಬ್ರ್ಯಾಂಡ್‌ಗಳ ಒಳಗೊಳ್ಳುವಿಕೆ ಸಾಂಪ್ರದಾಯಿಕ ಪ್ರಾಯೋಜಕತ್ವ ವರ್ಗಗಳನ್ನು ಮೀರಿ ಕ್ರೀಡೆಯ ವಿಸ್ತರಿತ ರೂಪವನ್ನು ತೋರಿಸುತ್ತವೆ. ಭಾರತ ಸರ್ಕಾರವು ಬೆಟ್ಟಿಂಗ್ ಕಂಪನಿಗಳನ್ನು ನಿಷೇಧಿಸಿದ ನಂತರ ಬಿಸಿಸಿಐ ಹೊಸ ಜೆರ್ಸಿ ಪ್ರಾಯೋಜಕರನ್ನು ಹುಡುಕುತ್ತಿತ್ತು. ಅಪೊಲೊ ಟೈರ್ಸ್ ಅಂತಿಮವಾಗಿ ಜೆರ್ಸಿ ಪ್ರಾಯೋಜಕತ್ವ ಪಡೆಯಿತು. 579 ಕೋಟಿ ರು. ಮೌಲ್ಯದ ಒಪ್ಪಂದದ ಹಕ್ಕುಗಳನ್ನು ಪಡೆದುಕೊಂಡಿತು. ಏತನ್ಮಧ್ಯೆ, ಟಾಟಾ ಗ್ರೂಪ್, ವಿಶ್ವದ ಅತ್ಯಂತ ಲಾಭದಾಯಕ ಟಿ20 ಲೀಗ್‌ನ ಶೀರ್ಷಿಕೆ ಪ್ರಾಯೋಜಕತ್ವವನ್ನು ಮುಂದುವರಿಸಿದೆ.

ಆಸ್ಟ್ರೇಲಿಯನ್ ಟೆನಿಸ್: ಗಾಫ್ 3ನೇ ಸುತ್ತಿಗೆ

ಮೆಲ್ಬರ್ನ್: ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯನ್ ಗ್ರ್ಯಾನ್‌ಸ್ಲಾಮ್ ಟೆನಿಸ್‌ನ ಬುಧವಾರದ ಪಂದ್ಯಗಳಲ್ಲಿ ಫ್ರಾನ್ಸಿಸ್ ಟಿಯಾಫೋ, ಅಲೆಕ್ಸ್ ಡಿ ಮಿನೌರ್, ಅಲೆಕ್ಸಾಂಡರ್ ಜ್ವರೆವ್, ಅಲೆಕ್ಸಾಂಡರ್ ಬಬ್ಲಿಕ್, ಕ್ಯಾಮೆರಾನ್ ನಾರಿ, ಲರ್ನರ್ ಟಿಯೆನ್ ಗೆದ್ದು 3ನೇ ಸುತ್ತಿಗೇರಿದ್ದಾರೆ. ಈ ದಿನ ಪುರುಷರ ಸಿಂಗಲ್ಸ್‌ನಲ್ಲಿ ಭಾರೀ ಏರುಪೇರಿನ ಫಲಿತಾಂಶವೇನು ದಾಖಲಾಗಲಿಲ್ಲ. ಮಹಿಳಾ ಸಿಂಗಲ್ಸ್‌ನಲ್ಲಿ ಇವಾ ಜೋವಿಕ್, ಜಾಸ್ಮಿನ್ ಪಾವೊಲಿನಿ, ಮಿರಾ ಆಂಡ್ರೀವಾ, ಕೆರೋಲಿನಾ ಮುಚೋವಾ ಗೆದ್ದು 3ನೇ ಸುತ್ತಿಗೆ ಜಿಗಿದರು. ಮ್ಯಾಗ್ಡಾ ಲಿನೆಟ್, ಎಲೆನಾ ರೂಸ್ ಗೆದ್ದ ಇನ್ನಿಬ್ಬರು ಪ್ರಮುಖರು. ವಿಶ್ವವಿಖ್ಯಾತ ತಾರೆ ಕೋಕೋ ಗಾಫ್ ಗೆದ್ದು ಮುಂದಿನ ಸುತ್ತಿಗೆ ನೆಗೆದರು. ಆದರೆ ಎಮ್ಮಾ ರಾಡುಕಾನು ಸೋತು ನಿರಾಶೆಗೊಳಗಾದರು.

ವಿರಾಮ
ಪ್ರತಿ ಭಾನುವಾರ

ಅಭಿಷೇಕ್ ಶರ್ಮಾ ಸ್ಫೋಟಕ ಬ್ಯಾಟಿಂಗ್ | ಸರಣಿಯಲ್ಲಿ ಟೀಮ್ ಇಂಡಿಯಾ 1-0 ಮುನ್ನಡೆ

ಟಿ20ಯಲ್ಲಿ ಭಾರತ ಶುಭಾರಂಭ

ನಾಗ್ಪುರ: ಬುಧವಾರ ಇಲ್ಲಿ ನಡೆದ ಮೊದಲನೇ ಟಿ20 ಪಂದ್ಯದಲ್ಲಿ ಭಾರತವು ನ್ಯೂಜಿಲೆಂಡ್ ಅನ್ನು 48 ರನ್‌ನಿಂದ ಸೋಲಿಸಿ ಶುಭಾರಂಭ ಮಾಡಿದೆ. ಮೊದಲು ಬ್ಯಾಟಿಂಗ್ ಮಾಡಿದ ಟೀಮ್ ಇಂಡಿಯಾ, ಆರಂಭಿಕ ಬ್ಯಾಟರ್ ಅಭಿಷೇಕ್ ವರ್ಮಾ ಅವರ ಸ್ಫೋಟಕ ಬ್ಯಾಟಿಂಗ್ (35 ಬಾಲ್, 84 ರನ್) ನೆರವಿನಿಂದ 7 ವಿಕೆಟ್‌ಗೆ 238 ರನ್ ಗಳಿಸಿತ್ತು. ಆ ಗುರಿಯನ್ನು ಬೆಂಬತ್ತಿದ ನ್ಯೂಜಿಲೆಂಡ್ 7 ವಿಕೆಟ್‌ಗೆ 190 ರನ್ ಗಳಿಸಲಷ್ಟೇ ಶಕ್ತವಾಯಿತು. ಈ ಮೂಲಕ 5 ಪಂದ್ಯಗಳ ಸರಣಿಯಲ್ಲಿ ಭಾರತ 1-0 ಅಂತರದಿಂದ ಮುನ್ನಡೆ ಪಡೆದಿದೆ.

ಟಾಸ್ ಗೆದ್ದ ನ್ಯೂಜಿಲೆಂಡ್ ಫೀಲ್ಡಿಂಗ್ ಆಯ್ದುಕೊಂಡಿತು. ಆದರೆ ಬ್ಯಾಟಿಂಗ್‌ಗೆ ಇಳಿದ ಭಾರತಕ್ಕೆ ಉತ್ತಮ ಆರಂಭ ಸಿಗಲಿಲ್ಲ. ತಂಡದ ಮೊತ್ತ 18 ಆದಾಗ 10 ರನ್ ಗಳಿಸಿದ ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ ಔಟ್ ಆದರು. ಆ ಬಳಿಕ ಕ್ರೀಸ್‌ಗೆ ಬಂದ ಇಶಾನ್ ಕಿಶಾನ್ ಕೂಡಾ ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರುವಲ್ಲಿ ವಿಫಲರಾದರು. ಕೇವಲ 8 ರನ್ ಗಳಿಸಿ ಅವರೂ ವಿಕೆಟ್ ಒಪ್ಪಿಸಿದಾಗ ಭಾರತದ ಸ್ಕೋರ್ ಕೇವಲ 27 ರನ್ ಆಗಿತ್ತು.

ಆದರೆ ಮೂರನೇ ವಿಕೆಟ್‌ಗೆ ಅಭಿಷೇಕ್ ಶರ್ಮಾ ಮತ್ತು ನಾಯಕ ಸೂರ್ಯಕುಮಾರ್ ಯಾದವ್ ಮಧ್ಯೆ ಉತ್ತಮ ಜತೆಯಾಟ ಮೂಡಿ ಬಂತು. 22 ಬಾಲ್‌ಗಳನ್ನು ಎದುರಿಸಿದ್ದ ಸೂರ್ಯಕುಮಾರ್ 32 ರನ್ ಗಳಿಸಿ ಪೆವಿಲಿಯನ್ ತೆರಳಿದರು. ಈ ಮಧ್ಯೆ ಕೇವಲ 35 ಎಸೆತಗಳಲ್ಲಿ 5 ಬೌಂಡರಿ ಮತ್ತು 8 ಸಿಕ್ಸರ್ ನೆರವಿನಿಂದ 35 ಎಸೆತಗಳಲ್ಲಿ 84 ರನ್ ಗಳಿಸಿದ್ದ ಅಭಿಷೇಕ್ ಶರ್ಮಾ ತಮ್ಮ ವಿಕೆಟ್ ಕಳೆದುಕೊಂಡರು.

ಆ ನಂತರ ಬಂದ ಹಾರ್ದಿಕ್ ಪಾಂಡ್ಯ ಅವರು ದುಬೆ ಜೊತೆ ಉತ್ತಮ ಜತೆಯಾಟ ಪ್ರದರ್ಶಿಸುವಲ್ಲಿ ವಿಫಲರಾದರು. ಕೇವಲ 4 ಬಾಲ್‌ಗಳನ್ನು ಎದುರಿಸಿದ ದುಬೆ 8 ರನ್ ಮಾಡಿ ವಿಕೆಟ್ ಕಳೆದುಕೊಂಡರು. ಹಾರ್ದಿಕ್ ಪಾಂಡ್ಯ 16 ಬಾಲ್‌ಗಳನ್ನು ಎದುರಿಸಿ 25 ಕಲೆ ಹಾಕಿ ವಿಕೆಟ್ ಒಪ್ಪಿಸಿದರು. ಆಗ ಭಾರತದ ಸ್ಕೋರ್ 6 ವಿಕೆಟ್‌ಗೆ 185 ರನ್ ಆಗಿತ್ತು.

ಬಳಿಕ ರಿಂಕು ಸಿಂಗ್ ಮತ್ತು ಅಕ್ಷರ್ ಪಟೇಲ್ ಮಧ್ಯೆ ಸ್ವಲ್ಪ ಹೊತ್ತು ಜತೆಯಾಟ ಸಾಗಿತು. 5 ಬಾಲ್ ಎದುರಿಸಿದ 5 ರನ್ ಗಳಿಸಿ ಪೆವಿಲಿಯನ್ ಸೇರಿದರು. ರಿಂಕುಸಿಂಗ್-ಅರ್ಶದೀಪ್ ನಡುವೆ ಸ್ವಲ್ಪ ಹೊತ್ತು ಜತೆಯಾಟ ಸಾಗಿತು. ಕೇವಲ 20 ಬಾಲ್ ಗಳಿಂದ 44 ರನ್ ಗಳಿಸಿದ ರಿಂಕು ಸಿಂಗ್ ಅಜೇಯರಾದರೆ, 6 ಬಾಲ್‌ಗಳಿಂದ 6 ರನ್ ಪಡೆದ ಅರ್ಶದೀಪ್ ಕೂಡಾ ಅಜೇಯರಾಗಿ ಉಳಿದರು.

ಭಾರತವು ನಿಗದಿತ ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 238 ರನ್ ಗಳಿಸುವಲ್ಲಿ ಯಶಸ್ವಿಯಾಯಿತು.

ಟೀಮ್ ಇಂಡಿಯಾ ನೀಡಿದ ಗುರಿಯನ್ನು ಬೆಂಬತ್ತಿದ ನ್ಯೂಜಿಲೆಂಡ್ ಆರಂಭದಲ್ಲೇ ವಿಕೆಟ್ ಕಳೆದುಕೊಂಡಿತು. ಕಾನ್ವೆ ಯಾವುದೇ ರನ್ ಗಳಿಸುವಲ್ಲಿ ವಿಫಲರಾದರು. ಆದರೆ ಇನ್ನೋರ್ವ ಆರಂಭಿಕ ಬ್ಯಾಟರ್ ರಾಬಿನ್‌ಸನ್ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡುವಲ್ಲಿ ಯಶಸ್ವಿಯಾದರು. ಅವರು 15 ಬಾಲ್‌ಗಳನ್ನು ಎದುರಿಸಿ 21 ರನ್ ಗಳಿಸಿದರು.

ರಚಿನ್ ರವೀಂದ್ರ 5 ಬಾಲ್‌ಗಳನ್ನು ಎದುರಿಸಿ ಕೇವಲ 1 ರನ್ ಗಳಿಸಿದರು. ಆದರೆ ಫಿಲಿಪ್ಸ್ 40 ಬಾಲ್‌ಗಳನ್ನು ಎದುರಿಸಿ 78 ರನ್ ಬಾರಿಸಿ ನ್ಯೂಜಿಲೆಂಡ್ ತಂಡವನ್ನು ಆಧರಿಸಿದರು. ಕೊನೆಯಲ್ಲಿ ಸ್ಯಾಂಟ್ನರ್ 13 ಬಾಲ್‌ಗಳನ್ನು ಎದುರಿಸಿ 20 ರನ್ ಗಳಿಸಿ ಅಜೇಯರಾಗಿ ಉಳಿದರು.

ಐಪಿಎಲ್‌ಗೆ ಚಿನ್ನಸ್ವಾಮಿ ಸಿದ್ಧ, ಆರ್‌ಸಿಬಿ ನಿರ್ಧರಿಸಬೇಕು

ಪತ್ರಿಕಾಗೋಷ್ಠಿಯಲ್ಲಿ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್

ಚಿನ್ನಸ್ವಾಮಿಯಲ್ಲಿ ಪರಿಸ್ಥಿತಿ ಇನ್ನೂ ಸುಧಾರಿಸಬೇಕು: ಆರ್‌ಸಿಬಿ

ಬೆಂಗಳೂರು: ಚಿನ್ನಸ್ವಾಮಿಯಲ್ಲಿ ಐಪಿಎಲ್ ನಡೆಸಲು ಮೈದಾನವನ್ನು ಸಿದ್ಧ ಮಾಡಲಾಗುತ್ತಿದೆ, ರಾಜ್ಯ ಸರಕಾರವೂ ನಮ್ಮ ಜೊತೆಗಿದೆ. ಪಂದ್ಯವಾಡುವ ಬಗ್ಗೆ ಆರ್‌ಸಿಬಿ ತನ್ನ ನಿಲುವನ್ನು ಖಚಿತ ಮಾಡಬೇಕು ಎಂದು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹೇಳಿದ್ದಾರೆ.

ಅವರು ಬುಧವಾರ ಪತ್ರಿಕಾಗೋಷ್ಠಿ ನಡೆಸಿ ಮೇಲಿನಂತೆ ಮಾತಾಡಿದರು. ಇದಕ್ಕೆ ಪ್ರತಿಕ್ರಿಯಿಸಿರುವ ಆರ್‌ಸಿಬಿ, ರಾಜ್ಯ ಸರಕಾರ, ಕೆಎಸ್‌ಸಿಎ ಪ್ರಯತ್ನದ ಬಗ್ಗೆ ನಮಗೆ ಸಂತೋಷವಿದೆ. ಆತಿಥೇಯ ನೆಲದಲ್ಲಿ ಆಡುವುದೇ ನಮ್ಮ ಆದ್ಯತೆ. ಅಭಿಮಾನಿಗಳೇ ನಮ್ಮ ಆಸ್ತಿ. ಅವರ ಸುರಕ್ಷತೆಗೆ ನಾವು ಆದ್ಯತೆ ನೀಡುತ್ತೇವೆ. ಸದ್ಯ ಮೈದಾನದಲ್ಲಿ ಇನ್ನೂ ಒಂದಷ್ಟು ಆಗಬೇಕಾದ ಕೆಲಸ ಬಾಕಿಯಿದೆ. ಎಲ್ಲರೂ ಕೂತು ಚರ್ಚಿಸಿ, ಈ ಬಗ್ಗೆ ಅಂತಿಮ ನಿರ್ಧಾರಕ್ಕೆ ಬರುತ್ತೇವೆ ಎಂದು ಹೇಳಿದೆ.

ಕಳೆದ ಐಪಿಎಲ್‌ನಲ್ಲಿ ಆರ್‌ಸಿಬಿ ಪ್ರಶಸ್ತಿ ಗೆದ್ದ ನಂತರ, ಚಿನ್ನಸ್ವಾಮಿಯಲ್ಲಿ ನಡೆದ ಸಂಭ್ರಮಾಚರಣೆ ವೇಳೆ ಭಾರೀ ಸಾವು ನೋವು ಸಂಭವಿಸಿತ್ತು. ಅದಾದ ಮೇಲೆ ಇಲ್ಲಿ ಕ್ರಿಕೆಟ್ ನಿಂತುಹೋಗಿದೆ. ಆದರೆ ವೆಂಕಟೇಶ್ ಪ್ರಸಾದ್ ಕೆಎಸ್‌ಸಿಎ ಅಧ್ಯಕ್ಷ ಸ್ಥಾನಕ್ಕೇರಿದ ಬಳಿಕ ಚಿನ್ನಸ್ವಾಮಿಗೆ ಕ್ರಿಕೆಟ್ ಮರಳಿ ಬರುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ. ಈ ಹಿನ್ನೆಲೆಯಲ್ಲಿ ಮಾತನಾಡಿದ ವೆಂಕಟೇಶ್ ಪ್ರಸಾದ್, ಸರಕಾರ ಕೂಡ ನಮ್ಮ ಜೊತೆಗಿದೆ. ಆದರೆ ಆರ್‌ಸಿಬಿ ಯಾಕೋ ಬೆಂಗಳೂರಿನಲ್ಲಿ ಪಂದ್ಯಗಳನ್ನು ನಡೆಸಲು ಅಷ್ಟು ಒಲವು ತೋರಿಸುತ್ತಿಲ್ಲ ಎಂದಿದ್ದಾರೆ. ಅವರ ಹೇಳಿಕೆ ಗಮನಿಸಿದಾಗ, ಈ ಪಂದ್ಯ ನಡೆಯುತ್ತದೋ, ಇಲ್ಲವೋ ಎಂಬ ಬಗ್ಗೆ ಅನುಮಾನ ಉಂಟಾಗಿದೆ.

ಬೆಂಗಳೂರಿನಲ್ಲಿ ಮತ್ತೆ ಐಪಿಎಲ್ ಪಂದ್ಯ ಆಡಿಸಲು ಸಿದ್ಧರಿದ್ದೇವೆ. ಆದ್ರೆ ಆರ್‌ಸಿಬಿ ಮ್ಯಾನೇಜ್‌ಮೆಂಟ್ ಅಷ್ಟು ಒಲವು ತೋರಿಸುತ್ತಿಲ್ಲ. ಹೀಗಾಗಿ ಇಲ್ಲಿನ ಕ್ರಿಕೆಟ್ ಅಭಿಮಾನಿಗಳಿಗಾಗಿ ನೀವು ಇಲ್ಲಿ ಆಡಬೇಕು ಎಂದು ಆರ್‌ಸಿಬಿ ಬಳಿ ಮನವಿ ಮಾಡಿದ್ದೇವೆ. ಅಲ್ಲದೆ ನಿಮಗೆ ಏನೇ ಸಂಶಯಗಳಿದ್ದರೂ ಸರಕಾರದ ಜೊತೆ ಮಾತನಾಡಿ ಎಂಬ ಸಲಹೆಯನ್ನು ನೀಡಿದ್ದೇವೆ. ಚಿನ್ನಸ್ವಾಮಿ ಮೈದಾನದಲ್ಲಿ ಆರ್‌ಸಿಬಿ ತನ್ನ ಪಂದ್ಯಗಳನ್ನು ಆಡಬೇಕು ಅನ್ನೋದು ನಮ್ಮ ಆಶಯ ಎಂದು ಪ್ರಸಾದ್ ಹೇಳಿದ್ದಾರೆ.

ಆದಷ್ಟು ಬೇಗ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಪಂದ್ಯ ಆಯೋಜಿಸುತ್ತೇವೆ. ಅಂತಾರಾಷ್ಟ್ರೀಯ, ಐಪಿಎಲ್ ಪಂದ್ಯಗಳನ್ನು ಮತ್ತೆ ಬೆಂಗಳೂರಿಗೆ ತರುತ್ತೇವೆ. ಕರ್ನಾಟಕ ಸರಕಾರ ನಮ್ಮ ಜೊತೆಗಿದೆ. ನಾವೂ ಸರಕಾರದ ಇಲಾಖೆಗಳ ಮನವೊಲಿಸುತ್ತೇವೆ. ಜಿಬಿಎ, ಬೆಸ್ಕಾಂ, ಜಲಮಂಡಳಿ, ಪೊಲೀಸ್ ಎಲ್ಲರ ವಿಶ್ವಾಸ ಗಿಟ್ಟಿಸುವ ಭರವಸೆ ಇದೆ. ಎಲ್ಲವನ್ನು ಕೂಡಲೇ ಮಾಡುವುದು ಅಷ್ಟು ಸುಲಭವಲ್ಲ. ಆದ್ರೆ, ನಾವು ನಿಭಾಯಿಸುತ್ತಿದ್ದೇವೆ. ಆ ಕೆಲಸವನ್ನು ನಮ್ಮ ಸಮಿತಿ ಮಾಡಲಿದೆ. ನಾವು ಕ್ರಿಕೆಟ್ ಅಭಿಮಾನಿಗಳಿಗೆ ಮಾತು ಕೊಡುತ್ತಿದ್ದೇವೆ. ಮತ್ತೇ ಚಿನ್ನಸ್ವಾಮಿಯಲ್ಲಿ ಪದ್ಯಗಳನ್ನು ಆದಷ್ಟು ಬೇಗ ಆಯೋಜಿಸುತ್ತೇವೆ ಎಂದಿದ್ದಾರೆ.

ಪಂಚರಾಜ್ಯ ಚುನಾವಣೆ: ಐಪಿಎಲ್ ವೇಳಾಪಟ್ಟಿ ಘೋಷಣೆ ವಿಳಂಬ

ದೆಹಲಿ: ಮುಂಬರುವ ಬಹುನಿರೀಕ್ಷಿತ ಐಪಿಎಲ್ ಕೂಟ ಮಾರ್ಚ್ 26ರಂದು ಆರಂಭವಾಗಿ ಅಂತಿಮ ಪಂದ್ಯ ಮೇ 31ರಂದು ನಡೆಯಲಿದೆ ಎನ್ನಲಾಗಿತ್ತು. ಆದರೆ ಇದೀಗ ಟೂರ್ನಿಯ ಸಂಪೂರ್ಣ ವೇಳಾಪಟ್ಟಿ ಇನ್ನೂ ಅಂತಿಮಗೊಂಡಿಲ್ಲ ಎಂಬ ವರದಿಯೊಂದು ಹೊರಬಿದ್ದಿದೆ.

ಬುಧವಾರ ನಡೆದ ಐಪಿಎಲ್ ಆಡಳಿತ ಮಂಡಳಿಯ ಸಭೆಯಲ್ಲಿ, ಚುನಾವಣಾ ಆಯೋಗವು ಐದು ರಾಜ್ಯಗಳಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳಿಗೆ ಮತದಾನ ದಿನಾಂಕಗಳನ್ನು ಘೋಷಿಸಿದ ನಂತರವೇ ಬಿಸಿಸಿಐ ವೇಳಾಪಟ್ಟಿಯನ್ನು ದೃಢೀಕರಿಸಿ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ ಎಂದು ವರದಿಯಾಗಿದೆ. ಪಶ್ಚಿಮ ಬಂಗಾಳ, ತಮಿಳುನಾಡು, ಅಸ್ಸಾಂ ಮತ್ತು ಕೇರಳ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ಏಪ್ರಿಲ್-ಮೇ ಅವಧಿಯಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿವೆ.

ದೈನಿಕ್ ಜಾಗರಣ್ ವರದಿಯ ಪ್ರಕಾರ, ಬಿಸಿಸಿಐ ಪಂದ್ಯಗಳನ್ನು ಆಯೋಜಿಸಲು ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ಅಸ್ಸಾಂ ಸೇರಿದಂತೆ 18 ಸ್ಥಳಗಳನ್ನು ಪ್ರಸ್ತಾಪಿಸಿದೆ. ಆದಾಗ್ಯೂ, ಚುನಾವಣಾ ಆಯೋಗವು ಇನ್ನೂ ಚುನಾವಣಾ ದಿನಾಂಕಗಳನ್ನು ಘೋಷಿಸದ ಕಾರಣ, ಅಂತಿಮ ವೇಳಾಪಟ್ಟಿಯನ್ನು ತಡೆಹಿಡಿಯಲಾಗಿದೆ.

ಮುಂಬರುವ ಋತುವಿನ ಐಪಿಎಲ್ ಪಂದ್ಯಗಳನ್ನು ಆಯೋಜಿಸಲು 18 ನಗರಗಳು ಪೈಪೋಟಿಯಲ್ಲಿವೆ ಎಂದು ವರದಿಯಾಗಿದೆ. ಇವುಗಳಲ್ಲಿ ದೆಹಲಿ, ಲಕ್ನೋ, ಧರ್ಮಶಾಲಾ, ನವ ಚಂಡೀಗಢ, ಚೆನ್ನೈ, ಮುಂಬೈ, ಕೋಲ್ಕತಾ, ಹೈದರಾಬಾದ್, ಅಹಮದಾಬಾದ್, ತಿರುವನಂತಪುರಂ, ನವೀ ಮುಂಬೈ, ವಿಶಾಖಪಟ್ಟಣಂ, ಗುವಾಹಟಿ, ಜೈಪುರ, ಬೆಂಗಳೂರು, ಪುಣೆ, ರಾಂಚಿ ಮತ್ತು ರಾಯಪುರ ಸೇರಿವೆ.

ಏತನ್ಮಧ್ಯೆ, ಐಪಿಎಲ್ ಆಡಳಿತ ಮಂಡಳಿಯು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ರಾಜಸ್ಥಾನ ರಾಯಲ್ಸ್ ತಮ್ಮ ತವರು ಪಂದ್ಯಗಳನ್ನು ಕ್ರಮವಾಗಿ ಬೆಂಗಳೂರು ಮತ್ತು ಜೈಪುರದಲ್ಲಿ ನಡೆಸಲು ಸಾಧ್ಯವಾಗುತ್ತದೆಯೇ ಎಂದು ಜನವರಿ 27ರೊಳಗೆ ದೃಢೀಕರಿಸುವಂತೆ ಕೇಳಿದೆ. ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಗ್ಗೆ ಅನಿಶ್ಚಿತತೆ ಮುಂದುವರಿದಿದೆ.

ಏಕದಿನ: ವಿಶ್ವ ನಂ.1 ಬ್ಯಾಟರ್ ಪಟ್ಟದಿಂದ ಜಾರಿದ ಕೊಹ್ಲಿ

ದುಬೈ: ನ್ಯೂಜಿಲೆಂಡ್ ವಿರುದ್ಧ ಏಕದಿನ ಸರಣಿಯಲ್ಲಿ ಅತ್ಯುತ್ತಮ ಪ್ರದರ್ಶನದ ಹೊರತಾಗಿಯೂ ಭಾರತದ ತಾರಾ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಐಸಿಸಿ ಏಕದಿನ ರ್‍ಯಾಂಕಿಂಗ್ ಪಟ್ಟಿಯಲ್ಲಿ ತಮ್ಮ ಅಗ್ರಸ್ಥಾನವನ್ನು ಕಳೆದುಕೊಂಡಿದ್ದಾರೆ. ಭಾರತದ ವಿರುದ್ಧ ಸತತ 2 ಶತಕ ಬಾರಿಸಿದ ನ್ಯೂಜಿಲೆಂಡ್‌ನ ಡೆರಿಲ್ ಮಿಚೆಲ್ ಅವರು ವಿರಾಟ್ ಕೊಹ್ಲಿ ಅವರನ್ನು ಹಿಂದಿಕ್ಕಿ ಪ್ರಥಮ ಸ್ಥಾನಕ್ಕೇರಿದ್ದಾರೆ. ಪ್ರವಾಸಿ ನ್ಯೂಜಿಲೆಂಡ್ ವಿರುದ್ಧ ಇತ್ತೀಚೆಗೆ ಮುಗಿದ ಭಾರತ 1-2 ಸರಣಿ ಸೋಲು ಅನುಭವಿಸಿದ ನಂತರ ಈ ಬದಲಾವಣೆ ಆಗಿದೆ. ಕೊಹ್ಲಿ ಸ್ಥಾನವನ್ನು ನ್ಯೂಜಿಲೆಂಡ್‌ನ ಬ್ಯಾಟರ್ ಡೆರಿಲ್ ಮಿಚೆಲ್ ಪಡೆದುಕೊಂಡಿದ್ದಾರೆ. ಭಾರತದಲ್ಲಿ ನ್ಯೂಜಿಲೆಂಡ್ ತಂಡ ತನ್ನ ಮೊದಲ ಏಕದಿನ ಸರಣಿ ಗೆಲುವಿನಲ್ಲಿ ಮಿಚೆಲ್ ಪ್ರಮುಖ ಪಾತ್ರ ವಹಿಸಿದ್ದರು. ಕೊಹ್ಲಿ ಮತ್ತು ಮಿಚೆಲ್ ನಡುವಿನ ರೇಟಿಂಗ್ ಅಂಕಗಳಲ್ಲಿ ಅಗಾಧ ವ್ಯತ್ಯಾಸ ಇರುವುದರಿಂದ ಸ್ವಲ್ಪ ಸಮಯದವರೆಗೆ ಡೆರಿಲ್ ಮಿಚೆಲ್ ಅವರು 1ನೇ ಸ್ಥಾನದಲ್ಲಿ ಮುಂದುವರಿಯುವ ಎಲ್ಲಾ ಲಕ್ಷಣಗಳಿವೆ. ಮಿಚೆಲ್ ಅವರು 845 ರೇಟಿಂಗ್ ಅಂಕಗಳನ್ನು ಹೊಂದಿದ್ದರೆ, ಕೊಹ್ಲಿ ಬಳಿ ಸದ್ಯ 795 ರೇಟಿಂಗ್ ಅಂಕಗಳಿವೆ.

ರಣಜಿ: ಪಂಜಾಬ್ ವಿರುದ್ಧ ಪಂದ್ಯಕ್ಕೆ ರಾಹುಲ್ ಖಚಿತ

ಬೆಂಗಳೂರು: ಭಾರತದ ತಾರಾ ಬ್ಯಾಟರ್ ಕೆ.ಎಲ್.ರಾಹುಲ್ ದೇಶೀಯ ಪ್ರಥಮದರ್ಜೆ ಕ್ರಿಕೆಟ್‌ಗೆ ಮರಳಲಿದ್ದಾರೆ. 2025-26ರ ರಣಜಿ ಟ್ರೋಫಿ ಋತುವಿನಲ್ಲಿ ಕರ್ನಾಟಕ ಪರ ತಮ್ಮ ಲಭ್ಯತೆಯನ್ನು ಖಚಿತಪಡಿಸಿದ್ದಾರೆ. ಬಲಗೈ ಬ್ಯಾಟರ್ ಜನವರಿ 29ರಂದು ಪಂಜಾಬ್‌ನ ಮುಲ್ಲಾನ್ಪುರದಲ್ಲಿ ಪ್ರಾರಂಭವಾಗುವ ಪಂಜಾಬ್ ವಿರುದ್ಧದ ಕರ್ನಾಟಕದ ಡಿ ಗುಂಪಿನ ಪಂದ್ಯದಲ್ಲಿ ಆಡಲಿದ್ದಾರೆ.

ವರದಿಗಳ ಪ್ರಕಾರ, ರಾಹುಲ್ ಜ.22ರಂದು ಆಲೂರಿನಲ್ಲಿ ಮಧ್ಯಪ್ರದೇಶ ವಿರುದ್ಧದ ಕರ್ನಾಟಕದ ಪಂದ್ಯವನ್ನು ಕಳೆದುಕೊಳ್ಳಲಿದ್ದಾರೆ. ಆದರೆ ಪಂಜಾಬ್ ಪಂದ್ಯಕ್ಕೆ ತಂಡವನ್ನು ಸೇರಿಕೊಳ್ಳುವ ನಿರೀಕ್ಷೆಯಿದೆ. ದೇಶೀಯ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಉನ್ನತ ಆಟಗಾರರು, ವಿಶೇಷವಾಗಿ ತಕ್ಷಣದ

ಅಂತಾರಾಷ್ಟ್ರೀಯ ಕರ್ತವ್ಯಗಳಲ್ಲಿ ಭಾಗಿಯಾಗದ ಆಟಗಾರರ ಮೇಲೆ ಬಿಸಿಸಿಐ ಒತ್ತು ನೀಡುವುದರೊಂದಿಗೆ ಈ ನಿರ್ಧಾರ ಹೊಂದುತ್ತದೆ. ಪಂಜಾಬ್-ಕರ್ನಾಟಕ ಪಂದ್ಯವು ಈಗಾಗಲೇ ಆಸಕ್ತಿ ಮೂಡಿಸಿದೆ. ಏಕೆಂದರೆ ಭಾರತದ ಟೆಸ್ಟ್ ತಂಡದ ನಾಯಕ ಶುಭಮನ್ ಗಿಲ್ ಕೂಡ ಅದೇ ಪಂದ್ಯದಲ್ಲಿ ಪಂಜಾಬ್ ಅನ್ನು ಪ್ರತಿನಿಧಿಸುವ ಸಾಧ್ಯತೆಯಿದೆ.

ಜೀರೋ ಟು ಒನ್‌ಗೆ ಮುಹೂರ್ತ

ಜೀರೋ ಟು ಒನ್ ಹೀಗೊಂದು ವಿಭಿನ್ನ ಶೀರ್ಷಿಕೆಯ ಸಿನಿಮಾ ಸೆಟ್ಟೇರಿದೆ. ಬೆಂಗಳೂರಿನ ಈಜಿಪುರದ ಮಹಾವಿಷ್ಣು ದೇವಾಲಯದಲ್ಲಿ ಜ್ಹಿರೋ ಟು ಒನ್ ಸಿನಿಮಾದ ಮುಹೂರ್ತ

ನೆರವೇರಿತು.ಸಾ.ರಾ.ಗೋವಿಂದ್ ಸಿನಿಮಾಗೆ ಕ್ಲಾಪ್ ಮಾಡಿ ಶುಭಕೋರಿದರು. ಅರ್ಜುನ್ ಗುರೂಜಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ನಾಗವೇಣಿ ಸಂತೋಷ್ ಸಿನಿಮಾಗೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಸ್ಫೂರ್ತಿದಾಯಕ ಕಥೆಯ ಈ ಸಿನಿಮಾ ಕನ್ನಡ, ಇಂಗ್ಲೀಷ್, ಹಿಂದಿ, ಸೇರಿದಂತೆ ಐದು ಭಾಷೆಯಲ್ಲಿ ತೆರೆಗೆ ಬರಲಿದೆ.

ನಾಗವೇಣಿ ಸಂತೋಷ್ ಅವರೇ ಚಿತ್ರದ ನಾಯಕನಾಗಿ ನಟಿಸುತ್ತಿದ್ದು, ರಕ್ಷಿತಾ ಗೌಡ, ಮನೀಷಾ ಭಟ್ ನಾಯಕಿಯರಾಗಿ ಬಣ್ಣಹಚ್ಚುತ್ತಿದ್ದಾರೆ. ಸುಮಾ, ನಕ್ಷತ್ರಾ, ರಿತ್ವಿಕಾ ತಾರಾಗಣದಲ್ಲಿದ್ದಾರೆ.

ಈ ಚಿತ್ರ ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆ ಜತೆಗೆ ಭಾರತ್ತಿಯ ಭಾಷೆಯಲ್ಲಿ ನಿರ್ಮಾಣವಾಗಲಿದ್ದು, ಆಗಸ್ಟ್, ಸೆಪ್ಟೆಂಬರ್ ನಲ್ಲಿ ಸಿನಿಮಾ ತೆರೆಗೆ ಬರಲಿದೆ. ನಾನೇ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದೇನೆ ಎಂದು ನಾಗವೇಣಿ ಸಂತೋಷ್ ಹೇಳಿದರು.

ಯಾವುದೇ ವ್ಯಕ್ತಿಗೆ ತಾನು ಹುಟ್ಟಿದ ನೆಲ ಮಣ್ಣು ಇದರ ಮೇಲೆ ಬಹಳ ಅಭಿಮಾನ ಇರುತ್ತದೆ. ನನಗೂ ಕೂಡ ಕನ್ನಡದ ಮೇಲೆ ತುಂಬಾ ಅಭಿಮಾನ. ಹೊಸಬರ ತಂಡ ಒಳ್ಳೆಯ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ , ಒಳ್ಳೆಯ ಸಿನಿಮಾವಾಗಿ ಮೂಡಿಬರಲಿ ಎಂದು ಅರ್ಜುನ್ ಗುರೂಜಿ ಹಾರೈಸಿದರು.

ಸಿನಿಮಾ ಅಂದ ತಕ್ಷಣ ಪಾಸಿಟಿವ್ ವೈಬ್ಸ್ ನಮ್ಮನ್ನು ಆವರಿಸುತ್ತದೆ. ಸಿನಿಮಾದಲ್ಲಿ ಒಳ್ಳೆಯ ಪಾತ್ರವೇ ನನಗೆ ಸಿಕ್ಕಿದೆ ಎಂದು ನಟಿ ಮನಿಷಾ ಭಟ್ ಸಂತಸದಿಂದ ನುಡಿದರು.

ಇದು ನನ್ನ ಮೊದಲ ಸಿನಿಮಾ, ತುಂಬಾ ಖುಷಿ ಇದೆ. ಜೀವನದಲ್ಲಿ ಯಶಸ್ಸನ್ನು ಎಷ್ಟು ಖುಷಿಯಿ ಂದ ಸ್ವಾಗ ತಿಸುತ್ತೇವೆಯೋ ಹಾಗೆಯೇ ಸೋಲುಗಳನ್ನು ಸ್ವಾಗತಿಸಬೇಕು. ಜೀವನದಲ್ಲಿ ಏರಿಳಿತಗಳು ಇದ್ದಾಗಲೇ ಬದುಕು ಏನು ಎಂಬುರು ತಿಳಿಯುತ್ತದೆ ಅಂತಹ ಜೀವನದ ಸಾರ ಈ ಚಿತ್ರದಲ್ಲಿದೆ ಎಂದು ನಟಿ ರಕ್ಷಿತಾ ಗೌಡ ತಿಳಿಸಿದರು.

ಎ.ಯು. ಮೂವೀಸ್ ಬ್ಯಾನರ್ ನಲ್ಲಿ ನಾಗವೇಣಿ ಸಂತೋಷ್ ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ವೆಂಕಟೇಶ ನಾಕಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್ ನಲ್ಲಿ ಚಿತ್ರ ತೆರೆಗೆ ಬರಲಿದೆ.



ಅಮೃತ ಅಂಜನ್‌ನ ಭಾವನಾತ್ಮಕ ಗಾನ

ಈ ಹಿಂದೆ ಅಮೃತಾಂಜನ್ ಎಂಬ ಕಿರುಚಿತ್ರ ಬಿಡುಗಡೆಯಾಗಿತ್ತು. ಈಗ ಅದೇ ತಂಡದಿಂದ ಅಮೃತ ಅಂಜನ್ ಸಿನಿಮಾ ಮೂಡಿಬರುತ್ತಿದೆ. ಶೂಟಿಂಗ್ ಮುಗಿಸಿ ತೆರೆಗೆ ಸಿದ್ಧವಾಗಿರುವ ಈ ಚಿತ್ರದ ಭಾವನಾತ್ಮಕ ಹಾಡು ಬಿಡುಗಡೆಯಾಗಿದೆ.

ಸಿನಿಪ್ರಿಯರ ಮನಗೆದ್ದಿದೆ. ತಾಯಿ ಮಗನ ಬಾಂಧವ್ಯ ಸಾರುವ ಹಾಡು ಇದಾಗಿದ್ದು ವೆಂಕಟೇಶ್ ಕುಲಕರ್ಣಿ ಸಾಹಿತ್ಯ ರಚಿಸಿದ್ದಾರೆ. ಹಿರಿಯ ನಟ ನವೀನ್.ಡಿ.ಪಡೀಲ್ ಹಾಗೂ ಮಧುಮತಿ ಹಾಡಿನಲ್ಲಿ ಕಾಣಿಸಿ ಕೊಂಡಿ ದ್ದಾರೆ. ಜ್ಯೋತಿ ರಾವ್ ಮೋಹಿತ್ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಗೌರವ್ ಶೆಟ್ಟಿ, ಭವ್ಯಾ, ಪಲ್ಲವಿ, ಪರ್ವ ಕಾರ್ತಿಕ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ಈ ಹಿಂದೆ ಸೋಡಾ ಬುಡ್ಡಿ ಎಂಬ ಚಿತ್ರವನ್ನು ನಿರ್ದೇಶನ ಮಾಡಿದ್ದೆ. ಇದು ನನ್ನ ಎರಡನೆ ಚಿತ್ರ. ಈ ಸಿನಿಮಾ ಆರಂಭಿಸುವುದಕ್ಕೆ ನನ್ನ ಅಮೃತಾಂಜನ್ ಕಿರುಚಿತ್ರವೇ ಕಾರಣ. ಈ ಚಿತ್ರದ ಟೈಟಲ್ ವಿಚಾರವಾಗಿ ಬಹಳಷ್ಟು ಸಮಸ್ಯೆಗಳನ್ನು ಎದುರಿಸಿದ್ದೇವೆ. ಹಾಗಾಗಿ ಅಮೃತ ಅಂಜನ್ ಎಂಬ ಹೆಸರಿನೊಂದಿಗೆ ಚಿತ್ರ ನಿರ್ಮಾಣ ಮಾಡಿದೆವು. ಇದೊಂದು ಸಂಪೂರ್ಣ ಕಾಮಿಡಿಯ ಚಿತ್ರವಾಗಿದ್ದು, ಸಿನಿಮಾದಲ್ಲಿ

ಸೆಂಟಿಮೆಂಟ್ ಕೂಡ ಬೆರೆತಿದೆ ಎಂದು ನಿರ್ದೇಶಕ ಜ್ಯೋತಿರಾವ್ ಮೋಹಿತ್ ಹೇಳಿದರು.

ನಾನು ಈ ಚಿತ್ರದಲ್ಲಿ ಕುಡುಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಕುಡಿತದ ಚಟವನ್ನು ಬಿಡಿಸಲು ನನ್ನ ಹೆಂಡತಿ ಏನೆಲ್ಲ ಮಾಡುತ್ತಾಳೆ ಎಂಬುದನ್ನು ಈ ಸಿನಿಮಾದಲ್ಲಿ ಹಾಸ್ಯದ ಮೂಲಕ ಎಲ್ಲರ ಮನಕ್ಕೂ ಮುಟ್ಟುವಂತೆ ಕಟ್ಟಿಕೊಡಲಾಗಿದೆ. ಇಡೀ ಕುಟುಂಬ ಸಮೇತ ಕುಳಿತು ನೋಡುವ ಸಿನಿಮಾವಾಗಿದೆ ಎಂದು ನಟ ಗೌರವ್ ಶೆಟ್ಟಿ ತಿಳಿಸಿದರು.

ನಮ್ಮ ಈ ಹಿಂದಿನ ಕಾಮಿಡಿ ಕಿರುಚಿತ್ರಗಳಿಗಿಂತ ಬಹಳ ವಿಭಿನ್ನವಾದ ಚಿತ್ರವಿದು. ಪ್ರೇಕ್ಷಕರನ್ನು ಹಾಸ್ಯದ

ಹೊನಲಿನಲ್ಲಿ ತೇಲಿಸುತ್ತದೆ. ಜತೆಗೆ ಒಳ್ಳೆಯ ಸಂದೇಶವನ್ನೂ ನೀಡುತ್ತದೆ ಎಂದು ನಟ ಕಾರ್ತಿಕ್ ಹೇಳಿದರು. ಲೋಕೇಶ್ ನಾಗಪ್ಪ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಸುಮಂತ್ ಆಚಾರ್ಯ ಛಾಯಾಗ್ರಹಣ, ಕಿರಣ್ ಕುಮಾರ್ ಸಂಕಲನ ಹಾಗೂ ರೋಹಿತ್ ಶೋವರ್ ಹಿನ್ನೆಲೆ ಸಂಗೀತ ಈ ಚಿತ್ರಕ್ಕಿದೆ. ಇದೇ 30ರಂದು ಅಮೃತ ಅಂಜನ್ ತೆರೆಗೆ ಬರಲಿದೆ.

ಕಿರುತೆರೆಯಲ್ಲಿ ಕಾಂತಾರ

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿದ ಕಾಂತಾರ ಚಾಪ್ಟರ್ 1 ವಿಶ್ವಾದ್ಯಂತ ಭರ್ಜರಿ ಪ್ರದರ್ಶನ ಕಂಡಿದ್ದು, ದಾಖಲೆ ಮಟ್ಟದ ಗಳಿಕೆ ಮಾಡಿದೆ. ಕಳೆದ ವರ್ಷದ ಹಿಟ್ ಸಿನಿಮಾ ಕಾಂತಾರ ಈಗ ಕಿರುತೆರೆಗೂ ಬಂದಿದೆ. ಇದೇ 24 ರಿಂದ ಜೀ ವಾಹಿನಿಯಲ್ಲಿ ಪ್ರಸಾರವಾಗಲಿದೆ. ಕಾಂತಾರ ಚಾಪ್ಟರ್ 1 , ಕದಂಬರ ಕಾಲದ ಕಥೆಯನ್ನು ಒಳಗೊಂಡಿದ್ದು ಕರಾವಳಿಯ ಸೊಗಡಿನ ಸಾಂಸ್ಕೃತಿಕ ಕಥೆಯನ್ನು ಹೊತ್ತುಬಂದಿದೆ. ಕಾಂತಾರ ಎಂಬ ಪ್ರದೇಶದ ನಾಯಕ ಬೆರ್ಮೆ ಮತ್ತು ಬಾಂಗ್ರಾ, ರಾಜ ಮನೆತನದ ನಡುವಿನ ಸಂಘರ್ಷವನ್ನು ಚಿತ್ರದಲ್ಲಿ ರೋಚಕವಾಗಿ ಕಟ್ಟಿಕೊಡಲಾಗಿದೆ. ಅಷ್ಟೇ ಅಲ್ಲದೇ ಕಾಂತಾರ ಎನ್ನುವ ಅದ್ಭುತ ಅರಣ್ಯಭೂಮಿಯ ಹುಟ್ಟಿನ ಕಥೆಯನ್ನು ತೆರೆಯಲ್ಲಿ ಕಟ್ಟಿಕೊಡಲಾಗಿದೆ. ಸಾಂಸ್ಕೃತಿಕ, ಭಾವನಾತ್ಮಕ, ಜಾನಪದ ಅಂಶಗಳಿಂದ ಕೂಡಿರುವ ಕಾಂತಾರ ಚಾಪ್ಟರ್ 1, ಭಾರತ ಚಿತ್ರರಂಗದಲ್ಲಿ ಒಂದು ಮೈಲುಗಲ್ಲನ್ನು ರೂಪಿಸಿದೆ. ರಕ್ಷಿತ್ ಶೆಟ್ಟಿ ಅವರಿಗೆ ನಾಯಕಿಯಾಗಿ ರುಕ್ಮಿಣಿ ವಸಂತ್ ನಟಿಸಿದ್ದಾರೆ. ಗುಲ್ಷನ್ ದೇವಯ್ಯ, ಜಯರಾಮ್, ಪ್ರಮೋದ್ ಶೆಟ್ಟಿ, ನವೀನ್ ಪಡಿಲ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ರಿಷಬ್ ಶೆಟ್ಟಿ ಅವರ ಅದ್ಭುತ ಅಭಿನಯ ಪ್ರೇಕ್ಷಕರನ್ನು ಮತ್ತೊಂದು ಜಗತ್ತಿಗೆ ಕೊಂಡೊಯ್ಯುತ್ತದೆ. ಬೆರ್ಮೆ ಪಾತ್ರದಲ್ಲಿ ಅವರ ಅಭಿನಯ ನೈಜವಾಗಿದ್ದು, ಭಾರೀ ಶಕ್ತಿ ಮತ್ತು ಆಧ್ಯಾತ್ಮಿಕತೆಯಿಂದ ತುಂಬಿದ್ದು, ಸಿನಿಮಾ ನೋಡುವ ಪ್ರೇಕ್ಷಕರಿಗೆ ಉತ್ತಮ ಮನರಂಜನೆ ನೀಡುತ್ತದೆ.

ಅಶೋಕನ ಜನಪದ

ಸತಿಶ್ ನೀನಾಸಂ ನಟನೆಯ ದ ರೈಸ್ ಆಫ್ ಅಶೋಕ ಮುಂದಿನ ತಿಂಗಳು ಅದ್ದೂರಿಯಾಗಿ ತೆರೆಗೆ ಬರಲಿದೆ. ಅಶೋಕ ಹಾಡಿನ ಮೂಲಕವೇ ಸದ್ದು ಮಾಡುತ್ತಿದೆ. ಇತ್ತೀಚೆಗೆ ಮಾದೇವ... ಹಾಗೂ ಯಾಕೋ ಯಾಕೋ... ಹಾಡು ಬಿಡುಗಡೆಯಾಗಿ ಸಿನಿಪ್ರಿಯರ ಮನಗೆದ್ದಿದ್ದವು. ಎಲ್ಲಾ ಭಾಷೆಗಳಲ್ಲೂ ಆ ಹಾಡುಗಳು ಗಮನ ಸೆಳೆದಿದ್ದವು. ಇದೀಗ ಮತ್ತೊಂದು ಹಾಡು ರಿಲೀಸ್ ಆಗಿದೆ.

ಕಲ್ಯಾಣವೇ ಗೌರಿ... ಎಂಬ ಜನಪದ ಸೊಗಡಿನ ಹಾಡು ಇದಾಗಿದ್ದು, ಕನ್ನಡ ಸೇರಿದಂತೆ ತಮಿಳು ಮತ್ತು ತೆಲುಗಿನಲ್ಲೂ ರಿಲೀಸ್ ಆಗಿದೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜಿಸಿರುವ ಈ ಹಾಡಿಗೆ ಕನ್ನಡದಲ್ಲಿ ಪಂಚಮ್ ಜೀವ ಹಾಗೂ ಶ್ವೇತಾ ಹಿರೇಮಠ್ ದನಿಗೂಡಿಸಿದ್ದಾರೆ. ತಮಿಳಿನಲ್ಲಿ ಮೋನಿಶ್ ಕುಮಾರ್ ಸಾಹಿತ್ಯ, ಪಂಚಮ್ ಜೀವ ಹಾಗೂ ಅನಿತಾ ಸಾ. ರಾ.ಮಹೇಶ್ ದನಿಯಾಗಿದ್ದಾರೆ. ತೆಲುಗಿನಲ್ಲಿ ಜಯಚಂದ್ರ ಸಾಹಿತ್ಯ ಬರೆದಿದ್ದು, ಪಂಚಮ್ ಜೀವ ಹಾಗೂ ಸತ್ಯವಾಣಿ ಕಂಠಸಿರಿಯಲ್ಲಿ ಹಾಡು ಮೂಡಿಬಂದಿದೆ.

ಮದುವೆ ಸಂದರ್ಭದಲ್ಲಿ ಮೂಡಿಬರುವ ಈ ಹಾಡನ್ನು ಸಂಪೂರ್ಣವಾಗಿ ದೇಸಿ ಸೊಗಡಿನಲ್ಲಿ ಕಟ್ಟಿಕೊಡಲಾಗಿದೆ. ಅಲ್ಲದೇ ಈ ಹಾಡು ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ

ಲಕ್ಷಕ್ಕೂ ಹೆಚ್ಚು ವೀಕ್ಷಣೆ ಕಂಡಿದೆ.

ನೀನಾಸಂ ಸತೀಶ್ ನಾಯಕನಾಗಿ ನಟಿಸುವ ಜತೆಗೆ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಸಪ್ತಮಿ ಗೌಡ ನಾಯಕಿಯಾಗಿ ಅಭಿನಯಿಸಿದ್ದಾರೆ. ದ ರೈಸ್ ಆಫ್ ಅಶೋಕ ಕ್ರಾಂತಿಕಾರಿ ಯುವಕನ ಹೋರಾಟ ಬದುಕಿನ, ಸಂಘರ್ಷದ ಕಥೆಯನ್ನು ಒಳಗೊಂಡಿದೆ.

ಎಪ್ಪತ್ತರ ಕಾಲಘಟ್ಟದ ಈ ಕಥೆ ರೆಟ್ರೋ ಲುಕ್‌ನಲ್ಲಿ ಸಾಗಲಿದೆ. ಈ ಮೊದಲು ವಿನೋದ್ ವಿ ಧೋಂಡಾಳೆ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದರು. ಅವರ ಅಕಾಲಿಕ ಮರಣದ ನಂತರ ಮನು ಶೇಡ್ಗಾರ್ ದ ರೈಸ್ ಆಫ್ ಅಶೋಕ' ನಿರ್ದೇಶನದ ಹೊಣೆ ಹೊತ್ತಿದ್ದಾರೆ.

ಕೆಂಬರಗಕ್ಕೆ ಮಹೇಂದರ್ ನಿರ್ದೇಶನ

ಕನ್ನಡ ಚಿತ್ರರಂಗದಲ್ಲಿ ಹಲವು ಹಿಟ್ ಸಿನಿಮಾಗಳನ್ನು ನಿರ್ದೇಶಿಸಿ ಚಂದನವನದಲ್ಲಿ ತಮ್ಮದೇಯಾದ ಛಾಪು ಮೂಡಿಸಿರುವ ನಟ ನಿರ್ದೇಶಕ ಎಸ್.ಮಹೇಂದರ್ ಹಾಗೂ ಸೂಪರ್ ಹಿಟ್ ಹಾಡುಗಳಿಗೆ ಸಂಗೀತ ಸಂಯೋಜಿಸಿರುವ ನಾದಬ್ರಹ್ಮ ಹಂಸಲೇಖ ಹೊಸ ಚಿತ್ರಕ್ಕಾಗಿ ಮತ್ತೆ ಒಂದಾಗಿದ್ದಾರೆ. ಕೆಂಬರಗ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ಅರೇ ಏನಿದು ಕೆಂಬರಗ ಪದ ಹೊಸದಾಗಿದೆಯಲ್ಲಾ.. ಏನಿದರ ಅರ್ಥ ಅಂತೀರಾ.. ಅದಕ್ಕೆ ಉತ್ತರವೇ ಈ ಸಿನಿಮಾ... ಅದಕ್ಕಾಗಿ ಕಾಯಬೇಕಿದೆ. ಕನ್ನಡ ಚಿತ್ರರಂಗವನ್ನು ಆಳಿದವರು.... ಆಳುತ್ತಿರುವವರ ಮಧ್ಯೆ, ಏರ್ಪಟ್ಟಿರೋ ಮೂಲ ಸಿನಿಮಾ ತತ್ವ, ಸಿದ್ಧಾಂತ, ಮಾದರಿ, ಹೊಸ ಸೂತ್ರ ಇನ್ನಿತರ ಸ್ಥಿತಿಯಲ್ಲಿ, ಎಸ್.ಮಹೇಂದರ್ ಕೆಂಬರಗ ಮೂಲಕ, ಮೂಲ ಸಿನಿಮಾ ಸಿದ್ಧಾಂತದ ಜತೆಗೆ, ಇಂದಿನ ಸಿನಿಮಾ ಮೇಕಿಂಗ್ ಶೈಲಿಯಲ್ಲಿ ಮೂರು ತಲೆಮಾರಿಗೂ ಹಿಡಿಸುವ, ರುಚಿಸುವ, ನಮ್ಮ ನೆಲದ ಕಥೆಯೊಂದನ್ನು ಹೇಳಲು ಹೊರಟ್ಟಿದ್ದಾರೆ. ಶ್ರೀಗುರುರಾಯರು ಸಿನಿಮಾ ಬ್ಯಾನರ್‌ನಲ್ಲಿ ಕೆಂಬರಗ ಚಿತ್ರ ನಿರ್ಮಾಣವಾಗುತ್ತಿದ್ದು, ಕೆ.ಸಿ.ವಿಜಯ್ ಕುಮಾರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಈ ಸಿನಿಮಾ ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು ಪ್ರಸಿದ್ಧ

ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಲಿದ್ದಾರೆ. ಪ್ರೀ ಪ್ರೊಡಕ್ಷನ್ ಹಂತದಲ್ಲಿರುವ ಕೆಂಬರಗ ಸಿನಿಮಾ ಶೀಘ್ರದಲ್ಲಿಯೇ ಸೆಟ್ಟೇರಲಿದೆ. ನಿರ್ದೇಶಕ ಎಸ್.ಮಹೇಂದರ್ ಸದ್ಯದಲ್ಲೇ ನಾದಬ್ರಹ್ಮ ಹಂಸಲೇಖರೊಂದಿಗೆ ಸಂಗೀತ ಸಂಯೋಜನೆಯಲ್ಲಿ ಸಾಥ್ ಕೊಡಲಿದ್ದಾರೆ. ಅಂತು ಈ ವರ್ಷ ಮತ್ತೊಂದು ಸೂಪರ್ ಹಿಟ್ ಸಿನಿಮಾವನ್ನು ನಿರೀಕ್ಷಿಸಬಹುದಾಗಿದೆ.